# ಕರ್ನಾಟಕ ವಿಧಾನ ಪರಿಷತ್ತು

(159ನೇ ಅಧಿವೇಶನ)

ಶುಕ್ರವಾರ, 14ನೇ ಆಗಸ್ಟ್ 2026

## ವಿಷಯಾನುಕ್ರಮಣಿಕೆ (INDEX)

1. ಕರ್ನಾಟಕ ವಿಧಾನ ಪರಿಷತ್ತಿಗೆ ನೂತನವಾಗಿ ಆಯ್ಕೆಯಾದ ಸದಸ್ಯರುಗಳ ಪರಿಚಯ

2. ನೂತನ ಸಚಿವರ ಪರಿಚಯ

3. ನಿಕಟಪೂರ್ವ ಸಭಾಪತಿಯವರ ರಾಜೀನಾಮೆ ಪ್ರಕ್ರಿಯೆಯ ಕುರಿತು ಮಾಧ್ಯಮಗಳಲ್ಲಿ ವ್ಯಾಪಕವಾದ ವರದಿಗಳು ಹಾಗೂ ಚರ್ಚೆಗಳು ವ್ಯಕ್ತವಾಗುತ್ತಿರುವ ಕುರಿತು ಸರ್ಕಾರ ಸದನಕ್ಕೆ ಸ್ಪಷ್ಟನೆ ನೀಡಬೇಕೆಂದು ವಿರೋಧ ಪಕ್ಷದ ಸದಸ್ಯರಿಂದ ಒತ್ತಾಯ.

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಬಿ.ಕೆ.ಹರಿಪ್ರಸಾದ್
- ಡಾ: ಯತೀಂದ್ರ ಎಸ್. (ಸಭಾನಾಯಕರು)

4. ಸಭಾಪತಿಯವರ ಸ್ಥಾನಕ್ಕೆ ಚುನಾವಣೆ

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಕೇಶವ ಪ್ರಸಾದ್ ಎಸ್.
- ಶ್ರೀ ಸಿ.ಟಿ.ರವಿ
- ಶ್ರೀ ಟಿ.ಎ.ಶರವಣ
- ಶ್ರೀ ಎ.ವಸಂತ ಕುಮಾರ್
- ಶ್ರೀ ಶಿವಕುಮಾರ್ ಕೆ.
- ಶ್ರೀ ಶಶೀಲ್ ಜಿ.ನಮೋಶಿ

5. ಅಭಿನಂದನೆ

""ವಿಧಾನ ಪರಿಷತ್ತಿನ ನೂತನ ಸಭಾಪತಿಗಳಾಗಿ ಶ್ರೀ ಸಲೀಂ ಅಹ್ಮದ್ ಅವರು ಆಯ್ಕೆಯಾಗಿರುವ ಕುರಿತು.

- ಡಾ: ಯತೀಂದ್ರ ಎಸ್. (ಸಭಾನಾಯಕರು)
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಪುಟ್ಟಣ್ಣ

- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು)
- ಶ್ರೀ ಸಿ.ಟಿ.ರವಿ
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಎಸ್.ರವಿ
- ಶ್ರೀ ಟಿ.ಎ.ಶರವಣ
- ಡಾ: ಉಮಾಶ್ರೀ
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಎಂ.ನಾಗರಾಜು
- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಮಂಜುನಾಥ್ ಭಂಡಾರಿ
- ಶ್ರೀ ಶಶಿಲ್ ಜಿ.ನಮೋಶಿ
- ಶ್ರೀ ಐವನ್ ಡಿ’ಸೋಜಾ
- ಶ್ರೀ ಕೆ.ಎಸ್.ನವೀನ್
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಡಿ.ಕೆ.ಶಿವಕುಮಾರ್ (ಮುಖ್ಯಮಂತ್ರಿಗಳು)

**6. ನೂತನ ಸಚಿವರ ಪರಿಚಯ**

**7. ಅಭಿನಂದನೆ ಸ್ವೀಕರಿಸಿದ ನೂತನ ಸಭಾಪತಿಯವರಿಂದ ಧನ್ಯವಾದ ಸಮರ್ಪಣೆ**

- ಶ್ರೀ ಸಲೀಂ ಅಹ್ಮದ್(ನೂತನ ಸಭಾಪತಿಗಳು)

**8. ನಿಕಟಪೂರ್ವ ಸಭಾಪತಿಯವರಿಂದ ಧನ್ಯವಾದ ಸಮರ್ಪಣೆ**

- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

~ ~ ~ ~ ~ ~ ~ ~

(678) 14.08.2026 ವೈಎಲ್-ಎಂಡಿ 11.00

# ಕರ್ನಾಟಕ ವಿಧಾನ ಪರಿಷತ್ತು

ಶುಕ್ರವಾರ, 14ನೇ ಆಗಸ್ಟ್ 2026

ಸದನವು ಬೆಂಗಳೂರಿನ ವಿಧಾನಸೌಧದಲ್ಲಿರುವ
ವಿಧಾನ ಪರಿಷತ್ತಿನ ಸಭಾಂಗಣದಲ್ಲಿ
ಪೂರ್ವಾಹ್ನ 11 ಗಂಟೆ 06 ನಿಮಿಷಕ್ಕೆ ಸಮಾವೇಶಗೊಂಡಿತು.

ಹಂಗಾಮಿ ಸಭಾಪತಿಯವರಾದ ಶ್ರೀ ಪುಟ್ಟಣ್ಣನವರು
ಪೀಠದಲ್ಲಿ ಉಪಸ್ಥಿತರಾದರು.

**1. ಕರ್ನಾಟಕ ವಿಧಾನ ಪರಿಷತ್ತಿಗೆ ನೂತನವಾಗಿ ಆಯ್ಕೆಯಾದ ಸದಸ್ಯರುಗಳ ಪರಿಚಯ**

- - - - -

"ಕರ್ನಾಟಕ ವಿಧಾನ ಪರಿಷತ್ತಿಗೆ ವಿಧಾನಸಭೆಯಿಂದ ಹಾಗೂ ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಹೊಸದಾಗಿ ಆಯ್ಕೆಯಾಗಿರುವ ಮಾನ್ಯ ಸದಸ್ಯರುಗಳನ್ನು ಮಾನ್ಯ ಸಭಾಪತಿಯವರು ಸದನಕ್ಕೆ ಪರಿಚಯಿಸುವುದು ಮತ್ತು ಪ್ರಮಾಣವಚನ ಸ್ವೀಕಾರದ ಕುರಿತು ಸಭೆಗೆ ತಿಳಿಸುವುದು."

**ಡಾ॥ ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ಸಭಾಪತಿಯವರೇ,

1. ಶ್ರೀ ಬಿ.ಕೆ.ಹರಿಪ್ರಸಾದ್
2. ಶ್ರೀ ತಿಪ್ಪಣ್ಣಪ್ಪ ಕಮಕನೂರ
3. ಶ್ರೀಮತಿ ಎ.ವಿ.ಗಾಯತ್ರಿ ಶಾಂತೇಗೌಡ
4. ಶ್ರೀ ವಿನಯ್ ಕಾರ್ತಿಕ್ ಪ್ರಕಾಶ್
5. ಶ್ರೀ ಶಿವಣ್ಣ ಬಿ.ಎಸ್.
6. ಶ್ರೀ ರಘು ಆರ್.
7. ಶ್ರೀ ಪಿ.ವಿ.ಮೋಹನ್
8. ಶ್ರೀ ಲಿಂಗರಾಜ ಪಾಟೀಲ

ಇವರುಗಳು ಕರ್ನಾಟಕ ವಿಧಾನ ಪರಿಷತ್ತಿಗೆ ಹೊಸದಾಗಿ ವಿಧಾನಸಭಾ ಕ್ಷೇತ್ರ ಹಾಗೂ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಗೊಂಡ ಸದಸ್ಯರುಗಳಾಗಿದ್ದಾರೆ.

**2. ನೂತನ ಸಚಿವರ ಪರಿಚಯ**

**ಡಾ॥ ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದ್ಯಕ್ಕೆ ಈ ಸದನದಲ್ಲಿ ಉಪಸ್ಥಿತರಾಗಿರುವ ಮಾನ್ಯ ಸಂತೋಷ್ ಎಸ್. ಲಾಡ್, ಕಾರ್ಮಿಕ ಸಚಿವರನ್ನು ಪರಿಚಯ ಮಾಡಬಯಸುತ್ತೇನೆ.

**೩. ನಿಕಟಪೂರ್ವ ಸಭಾಪತಿಯವರ ರಾಜೀನಾಮೆ ಪ್ರಕ್ರಿಯೆಯ ಕುರಿತು ಮಾಧ್ಯಮಗಳಲ್ಲಿ ವ್ಯಾಪಕವಾದ ವರದಿಗಳು ಹಾಗೂ ಚರ್ಚೆಗಳು ವ್ಯಕ್ತವಾಗುತ್ತಿರುವ ಕುರಿತು ಸರ್ಕಾರ ಸದನಕ್ಕೆ ಸ್ಪಷ್ಟನೆ ನೀಡಬೇಕೆಂದು ವಿರೋಧ ಪಕ್ಷದ ಸದಸ್ಯರಿಂದ ಒತ್ತಾಯ.**

- - - - -

**ಹಂಗಾಮಿ ಸಭಾಪತಿಯವರು:-** ಮೊದಲಿಗೆ ಸಭಾಪತಿ ಸ್ಥಾನಕ್ಕೆ ಚುನಾವಣೆಯನ್ನು ಘೋಷಣೆ ಮಾಡುತ್ತಿದ್ದೇನೆ. ಮೊದಲಿಗೆ ಬಂದಿರುವ ಪ್ರಸ್ತಾವದ ಪಟ್ಟಿಯನ್ನು ಮಂಡಿಸಲಿಚ್ಛಿಸುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ದಿನಪತ್ರಿಕೆಗಳಲ್ಲಿ ಪ್ರಚಾರವಾಗಿರುವಂತಹ ಅನೇಕ ವಿಚಾರಗಳನ್ನು ಗಮನಿಸಿದ್ದೇವೆ.

**ಹಂಗಾಮಿ ಸಭಾಪತಿಯವರು:-** ಈಗ ಅದರ ಬಗ್ಗೆ ಮಾತನಾಡಲು ಅವಕಾಶ ಇರುವುದಿಲ್ಲ. ಇದು ಚುನಾವಣಾ ಸಮಯವಾಗಿದ್ದು, ಪತ್ರಿಕೆಯಲ್ಲಿ ಪ್ರಸ್ತಾಪವಾಗಿರುವ ವಿಚಾರದ ಬಗ್ಗೆ ಏತಕ್ಕೆ ಮಾತನಾಡುತ್ತಿದ್ದೀರಿ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಚುನಾವಣೆಯನ್ನು ಏತಕ್ಕಾಗಿ ನಡೆಸಲಾಗುತ್ತಿದೆ, ಆ ಅನಿವಾರ್ಯತೆ ಏನಿತ್ತು ಎಂಬುದನ್ನು ದಯವಿಟ್ಟು ಈ ರಾಜ್ಯದ ಜನರಿಗೆ ಸದನದ ಮೂಲಕ ತಿಳಿಸಬೇಕು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೊದಲು ಅಜೆಂಡಾದಲ್ಲಿ ಚುನಾವಣೆ ಕುರಿತು ವಿಚಾರವಿದ್ದು, ಚುನಾವಣೆಯಾದ ಮೇಲೆ ಏನೂ ಬೇಕಾದರೂ ಚರ್ಚೆ ಮಾಡಲಿ. **(ಗೊಂದಲ)** ಚರ್ಚೆ ಮಾಡಲಿಕ್ಕೆ ನಾವು ಕೂಡ ಸಿದ್ಧರಾಗಿದ್ದೇವೆ.

**(ಗೊಂದಲ)**

**ಡಾ॥ ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಚುನಾವಣೆ ಬೇಡ ಎಂದರೆ, ನಾಮಿನೇಷನ್ ಆಗಲಿ. **(ಗೊಂದಲ)** ಮೊದಲು ಚುನಾವಣಾ ಪ್ರಕ್ರಿಯೆ ನಡೆಯಲಿ. **(ಗೊಂದಲ)** ಆಮೇಲೆ ಬೇಕಾದರೆ ಚರ್ಚೆ ಮಾಡಲಿ, ಅವರ ಚರ್ಚೆಗೆ ನಾವು ಉತ್ತರ ನೀಡುತ್ತೇವೆ.

**(ಗೊಂದಲ)**

(ಮುಂದು)

(679) 14.08.2026/11.10/ಎಸ್‌ಕೆ-ಎಂಡಿ

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, **(ಗೊಂದಲ)** ಇಡೀ ರಾಜ್ಯದ ಜನರಿಗೆ ಗೊತ್ತಾಗಿದೆ. ಅವರಿಗೆ ಒತ್ತಾಯಪೂರ್ವಕವಾಗಿ ಸಹಿ ಮಾಡಿಸಲಾಗಿದೆ. ಯಾವ

ಕಾರಣಕ್ಕಾಗಿ ಸಹಿ ಮಾಡಿಸಲಾಗಿದೆ ಎಂಬುದನ್ನು ತಾವು ಸದನಕ್ಕೆ ತಿಳಿಸಬೇಕೆಂದು ನಾವು ತಮಗೆ ಮನವಿ ಮಾಡುತ್ತಿದ್ದೇವೆ.

**ಹಂಗಾಮಿ ಸಭಾಪತಿಯವರು:-** ಸಭಾಪತಿಯವರ ಚುನಾವಣೆಗೆ ಏಳು ಪ್ರಸ್ತಾವಗಳು ಸ್ವೀಕೃತಗೊಂಡಿವೆ. ಇವುಗಳಲ್ಲಿ ಐದು ಪ್ರಸ್ತಾವಗಳು ಶ್ರೀ ಸಲೀಂ ಅಹ್ಮದ್ ಅವರ ಹೆಸರನ್ನು ಸೂಚಿಸುತ್ತೇನೆ ಹಾಗೂ 2 ಪ್ರಸ್ತಾವಗಳು ಶ್ರೀ ಪಿ.ಹೆಚ್. ಪೂಜಾರ್ ಅವರ ಹೆಸರನ್ನು ಸೂಚಿಸುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ದಯವಿಟ್ಟು, ಇದರ ಬಗ್ಗೆ ಸದನಕ್ಕೆ ತಿಳಿಸಬೇಕು. ಮಾನ್ಯ ಬಸವರಾಜ ಹೊರಟ್ಟಿಯವರನ್ನು.....ಇದು ಸರಿಯಲ್ಲ. ತಾವು ಮೊದಲು ಸದನಕ್ಕೆ ತಿಳಿಸಬೇಕು.

**ಹಂಗಾಮಿ ಸಭಾಪತಿಯವರು:-**ಶ್ರೀ ಸಲೀಂ ಅಹ್ಮದ್ ಅವರ ಹೆಸರಿನಲ್ಲಿ ಬಂದಿರುವ 5 ಪ್ರಸ್ತಾವಗಳನ್ನು ಮೊದಲಿಗೆ ತೆಗೆದುಕೊಳ್ಳುತ್ತಿದ್ದೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರೇ ರಾಜೀನಾಮೆ ಕೊಟ್ಟಿದ್ದರಾ ಅಥವಾ ಒತ್ತಾಯಪೂರ್ವಕವಾಗಿ ಸಹಿ ತೆಗೆದುಕೊಳ್ಳಾಗಿದೆಯೇ ಎನ್ನುವುದನ್ನು ದಯವಿಟ್ಟು ಈ ಸದನಕ್ಕೆ ತಿಳಿಸಬೇಕು. ಇದು ದುಂಡಾವರ್ತನೆ.

**(ಗೊಂದಲ)**

**ಹಂಗಾಮಿ ಸಭಾಪತಿಯವರು:-**ಮೊದಲಿಗೆ ಶ್ರೀ ಬಿ.ಕೆ. ಹರಿಪ್ರಸಾದ್ ಅವರು ಮೊದಲನೆಯ ಪ್ರಸ್ತಾವಗಳನ್ನು ಮಂಡಿಸಬೇಕು.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ದುಂಡಾವರ್ತನೆ. **(ಗೊಂದಲ)** ಇದು ಕಾನೂನುಬಾಹಿರ.

## 4. ಸಭಾಪತಿಯವರ ಸ್ಥಾನಕ್ಕೆ ಚುನಾವಣೆ

### ಮೊದಲನೇ ಪ್ರಸ್ತಾವ

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶ್ರೀ ಸಲೀಂ ಅಹ್ಮದ್ ಅವರನ್ನು ವಿಧಾನ ಪರಿಷತ್ತಿನ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಡಾ॥ ಯತೀಂದ್ರ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶ್ರೀ ಬಿ.ಕೆ. ಹರಿಪ್ರಸಾದ್‌ರವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

### ಎರಡನೇ ಪ್ರಸ್ತಾವ

**ಶ್ರೀ ಎನ್. ಎಸ್. ಬೋಸರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶ್ರೀ ಸಲೀಂ ಅಹ್ಮದ್ ಅವರನ್ನು ವಿಧಾನ ಪರಿಷತ್ತಿನ ಸಭಾಪತಿಯವರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

**ಶ್ರೀ ವಿನಯ್ ಕಾರ್ತಿಕ್ ಪ್ರಕಾಶ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶ್ರೀ ಎನ್. ಎಸ್. ಬೋಸರಾಜು ಅವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

### ಮೂರನೇ ಪ್ರಸ್ತಾವ

**ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶ್ರೀ ಸಲೀಂ ಅಹ್ಮದ್ ಅವರನ್ನು ವಿಧಾನ ಪರಿಷತ್ತಿನ ಸಭಾಪತಿಯವರನ್ನಾಗಿ ಚುನಾಯಿಸಬೇಕೆನ್ನುವ ಪ್ರಸ್ತಾವವನ್ನು ಸೂಚಿಸುತ್ತೇನೆ.

**ಶ್ರೀ ವಸಂತಕುಮಾರ್ ಎ. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶ್ರೀ ಮಂಜುನಾಥ್ ಭಂಡಾರಿ ಅವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

### ನಾಲ್ಕನೇ ಪ್ರಸ್ತಾವ

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶ್ರೀ ಸಲೀಂ ಅಹ್ಮದ್ ಅವರನ್ನು ವಿಧಾನ ಪರಿಷತ್ತಿನ ಸಭಾಪತಿಯವರನ್ನಾಗಿ ಚುನಾಯಿಸಬೇಕೆನ್ನುವ ಪ್ರಸ್ತಾವವನ್ನು ಸೂಚಿಸುತ್ತೇನೆ.

**ಡಾ॥ ಡಿ. ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶ್ರೀ ಎಂ ನಾಗರಾಜು ಅವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

**ಐದನೇ ಪ್ರಸ್ತಾವ**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶ್ರೀ ಸಲೀಂ ಅಹ್ಮದ್ ಅವರನ್ನು ವಿಧಾನ ಪರಿಷತ್ತಿನ ಸಭಾಪತಿಯವರನ್ನಾಗಿ ಚುನಾಯಿಸಬೇಕೆನ್ನುವ ಪ್ರಸ್ತಾವವನ್ನು ಸೂಚಿಸುತ್ತೇನೆ.

**ಶ್ರೀ ಎಫ್.ಹೆಚ್. ಜಕ್ಕಪ್ಪನವರ್ (ನಾಮನಿರ್ದೇಶನ):-** ಮಾನ್ಯ ಸಭಾಪತಿಯವರೇ, ಶ್ರೀ ಐವನ್ ಡಿ'ಸೋಜಾ ಅವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಸರ್ಕಾರದ ಗೂಂಡಾವರ್ತನೆಗೆ ಧಿಕ್ಕಾರವನ್ನು ಹಾಕುತ್ತಿದ್ದೇನೆ. ಅವರಿಂದ ಒತ್ತಾಯಪೂರ್ವಕವಾಗಿ ಸಹಿ ಮಾಡಿಸಲಾಗಿದೆ. ಇದು....

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**(ಗೊಂದಲ)**

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅವರನ್ನು ಅಗೌರವವಾಗಿ ಕೆಳಗಿಳಿಸಿದ್ದೇಕೆ? ಇದಕ್ಕೆ ಮೊದಲು ಉತ್ತರ ಕೊಡಬೇಕು. ಒಬ್ಬ ಹಿರಿಯ ಸಭಾಪತಿ ಸ್ಥಾನದಿಂದ...

**(ಗೊಂದಲ)**

**ಹಂಗಾಮಿ ಸಭಾಪತಿಯವರು:-**ಐದು ಪ್ರಸ್ತಾವಗಳು ಮಾನ್ಯ ಸಲೀಂ ಅಹ್ಮದ್ ಅವರ ಪರವಾಗಿ ಬಂದಿದೆ. ಈಗ ಶ್ರೀ ಪಿ.ಹೆಚ್. ಪೂಜಾರ್ ಅವರ ಹೆಸರಿನಲ್ಲಿ ಬಂದಿರುವ ಎರಡು ಪ್ರಸ್ತಾವಗಳನ್ನು ಮಂಡಿಸಲು ಸೂಚಿಸುತ್ತೇನೆ. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಪ್ರಸ್ತಾವವನ್ನು ಮಂಡಿಸುವುದಾದರೆ ಮಂಡಿಸಿ. ತಾವು ಮಾನ್ಯ ಪಿ.ಹೆಚ್. ಪೂಜಾರ್‌ರವರ ಪರವಾಗಿ ಪ್ರಸ್ತಾವನ್ನು ಕೊಟ್ಟಿದ್ದೀರಿ. ಇನ್ನುಳಿದ ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,...

**ಹಂಗಾಮಿ ಸಭಾಪತಿಯವರು:-**ಮಾನ್ಯ ರವಿಯವರನ್ನು ತಮ್ಮ ಪರವಾಗಿ ಮಾತನಾಡುವುದಕ್ಕೆ ಹೇಳಿಲ್ಲ. ಚುನಾವಣೆ ಸಮಯದಲ್ಲಿ ಯಾರೂ ಮಾತನಾಡಬಾರದು. ತಾವು ಕುಳಿತುಕೊಳ್ಳಿ.

**ಆರನೇ ಪ್ರಸ್ತಾವ**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)** ಮಾನ್ಯ ಸಭಾಪತಿಯವರೇ, ಶ್ರೀ ಪಿ.ಹೆಚ್. ಪೂಜಾರ್ ಅವರನ್ನು ವಿಧಾನ ಪರಿಷತ್ತಿನ ಸಭಾಪತಿಯವರನ್ನಾಗಿ ಚುನಾಯಿಸಬೇಕೆನ್ನುವ ಪ್ರಸ್ತಾವವನ್ನು ಸೂಚಿಸುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಅವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

**ಏಳನೇ ಪ್ರಸ್ತಾವ**

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶ್ರೀ ಪಿ.ಹೆಚ್. ಪೂಜಾರ್ ಅವರನ್ನು ವಿಧಾನ ಪರಿಷತ್ತಿನ ಸಭಾಪತಿಯವರನ್ನಾಗಿ ಚುನಾಯಿಸಬೇಕೆನ್ನುವ ಪ್ರಸ್ತಾವವನ್ನು ಸೂಚಿಸುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶ್ರೀ ಎಸ್.ವ್ಹಿ. ಸಂಕನೂರ ಅವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

**ಪ್ರಸ್ತಾವಗಳನ್ನು ಮಂಡಿಸಲಾಯಿತು**

**ಹಂಗಾಮಿ ಸಭಾಪತಿಯವರು:-**ಈಗ ಏಳು ಪ್ರಸ್ತಾವಗಳು ಸಭಾಪತಿಯ ಸ್ಥಾನಕ್ಕೆ ಬಂದಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಪ್ರೋಸೆಸ್‌ಅನ್ನು ನಾವು ವಿರೋಧಿಸುವುದಿಲ್ಲ. **(ಗೊಂದಲ)** ತಾವು ಸದನಕ್ಕೆ ಮನವರಿಕೆ ಮಾಡಿಕೊಡಬೇಕು. ಇದರ ಬಗ್ಗೆ ಉತ್ತರ ಕೊಡಬೇಕು. **(ಗೊಂದಲ)** ಈ ರೀತಿ ನುಣುಚಿಕೊಳ್ಳುವ ಸರ್ಕಾರವನ್ನು ನಾವು ವಿರೋಧ ಮಾಡುತ್ತೇವೆ.

**ಶ್ರೀ ಎನ್. ರವಿಕುಮಾರ್ (ವಿರೋಧ ಮುಖ್ಯ ಸಚೇತಕರು):-** **(ಗೊಂದಲ)** ವಿಧಾನ ಪರಿಷತ್ತಿನ ಸಭಾಪತಿಯ ಸ್ಥಾನದಿಂದ ಕೆಳಗಿಳಿಸಿದ್ದೇಕೆ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಇದು ಗೂಂಡಾಗಿರಿ ಸರ್ಕಾರ. ಇದು ಗೂಂಡಾಗಿರಿ ಮಾಡಿದೆ.

**(ಗೊಂದಲ)**

**ಹಂಗಾಮಿ ಸಭಾಪತಿಯವರು:-** ಸಭಾಪತಿಯವರ ಚುನಾವಣೆಗೆ ಒಟ್ಟು ಏಳು ಪ್ರಸ್ತಾವಗಳಲ್ಲಿ ಶ್ರೀ ಸಲೀಂ ಅಹ್ಮದ್ ಅವರ ಹೆಸರಿನಲ್ಲಿರುವ ಮೊದಲನೆಯ ಪ್ರಸ್ತಾವವನ್ನು ಸದನದಲ್ಲಿ ಮತಕ್ಕೆ ಹಾಕುತ್ತಿದ್ದೇನೆ.

**(ಗೊಂದಲ)**

**ಹಂಗಾಮಿ ಸಭಾಪತಿಯವರು:-** ಮಾನ್ಯ ಸಭಾಪತಿಗಳ ಸ್ಥಾನಕ್ಕೆ ಬಂದಿರುವ ಏಳು ಪ್ರಸ್ತಾವಗಳಲ್ಲಿ ಮೊದಲನೆಯ ಪ್ರಸ್ತಾವವನ್ನು ಮತಕ್ಕೆ ಹಾಕುತ್ತಿದ್ದೇನೆ;

**ಪ್ರಸ್ತಾವ ಏನೆಂದರೆ;**

**"ಶ್ರೀ ಸಲೀಂ ಅಹ್ಮದ್ ಇವರನ್ನು ವಿಧಾನ ಪರಿಷತ್ತಿನ ಸಭಾಪತಿಗಳಾಗಿ ಚುನಾಯಿಸುವುದು"**

ಈಗ ಸಭೆಯನ್ನು ವಿಭಜಿಸಲಾಗುತ್ತಿದೆ. ಪ್ರಸ್ತಾವದ ಪರವಾಗಿರುವವರು ಮತ್ತು ಪ್ರಸ್ತಾವದ ವಿರುದ್ಧವಾಗಿರುವವರು ಎದ್ದುನಿಂತು ತಮ್ಮ ಒಪ್ಪಿಗೆಯನ್ನು ಸೂಚಿಸಬೇಕಾಗುತ್ತದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮೊದಲು ಚುನಾವಣೆ ಏತಕ್ಕೆ ಬರುತ್ತದೆ ಎಂಬುದನ್ನು ತಾವು ಸದನಕ್ಕೆ ತಿಳಿಸಬೇಕು. **(ಗೊಂದಲ)** ಮಾನ್ಯ ಸಭಾಪತಿಯವರು ಈ ರೀತಿ ನುಣುಚಿಕೊಳ್ಳುವುದನ್ನು ಮಾಡಬಾರದು.

**ಶ್ರೀ ಎನ್. ರವಿಕುಮಾರ್:-** ಅವರನ್ನು ಒತ್ತಾಯಪೂರ್ವಕಾಗಿ ಸಹಿ ಮಾಡಿಸಿಕೊಂಡಿದ್ದು ಏತಕ್ಕೆ? ದಾದಾಗಿರಿ ಮಾಡಿ ಅವರಿಂದ ಸಹಿ ಮಾಡಿಕೊಂಡಿದ್ದು ಏತಕ್ಕೆ? ಈ ಪರಂಪರೆ ಸರೀನಾ. ಈ ಇತಿಹಾಸ ಸರೀನಾ. ಹೊಸ ಪರಂಪರೆಯನ್ನು ಹುಟ್ಟು ಹಾಕುತ್ತಿದ್ದೀರಾ? ಯಾವ ಸೀಮೆಯ ಚುನಾವಣೆ ಇದು? ಚುನಾವಣೆ ಮಾಡುವುದು ಅವಶ್ಯಕತೆ ಇತ್ತಾ?

**(ಗೊಂದಲ)**

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭಾ ಕ್ಷೇತ್ರ):-** ಚುನಾವಣೆ ಏತಕ್ಕೆ ಮಾಡಬೇಕಾಗಿತ್ತು?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ದುಂಡಾವರ್ತನೆ ಮಾಡಿ ಈ ರೀತಿ ಚುನಾವಣೆ ಮಾಡುವುದು ಅವಶ್ಯಕತೆ ಇಲ್ಲ. ಸರ್ಕಾರ ಹೇಳಬಹುದಾಗಿತ್ತು.

**(ಗೊಂದಲ)**

**ಹಂಗಾಮಿ ಸಭಾಪತಿಯವರು:-**ಸಭಾಪತಿಯವರ ಚುನಾವಣೆಗೆ ಬಂದಿರುವ ಒಟ್ಟು ಏಳು ಪ್ರಸ್ತಾವಗಳಲ್ಲಿ ಶ್ರೀ ಸಲೀಂ ಅಹ್ಮದ್ ಅವರ ಹೆಸರಿನಲ್ಲಿರುವ ಮೊದಲನೆಯ ಪ್ರಸ್ತಾವವನ್ನು ಸದನದಲ್ಲಿ ಮತಕ್ಕೆ ಹಾಕುತ್ತೇನೆ. ಅದಕ್ಕೋಸ್ಕರ ಎರಡು ನಿಮಿಷಗಳ ಕಾಲ ಡೋರ್‌ನ್ನು ಓಪನ್ ಮಾಡಬೇಕು. ಬೆಲ್‌ನ್ನು ಹಾಕಬೇಕು.

**"(ಈ ಹಂತದಲ್ಲಿ ಸದನದ ಕೋರಂ ಬೆಲ್ ಅನ್ನು ಮೊಳಗಿಸಿ ಎರಡು ನಿಮಿಷಗಳ ಕಾಲ ಸದನದ ಬಾಗಿಲುಗಳನ್ನು ತೆರೆಯಲಾಯಿತು. ಎರಡು ನಿಮಿಷಗಳ ತರುವಾಯ ಕೋರಂ ಬೆಲ್ ನಿಲ್ಲಿಸಿ, ಬಾಗಿಲುಗಳನ್ನು ಮುಚ್ಚಲಾಯಿತು.)"**

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ನಮ್ಮ ಮಾತನ್ನು ಕೇಳಬೇಕು.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ತಾವು ನಮ್ಮ ಮಾತನ್ನು ಒಂದು ನಿಮಿಷ ಕೇಳಿ.

**ಹಂಗಾಮಿ ಸಭಾಪತಿಯವರು:-** ಚುನಾವಣೆ ಸಮಯದಲ್ಲಿ ಏನೂ ಕೇಳುವುದಿಲ್ಲ ಮತ್ತು ಹೇಳುವುದಿಲ್ಲ. ಚುನಾವಣೆ ಚುನಾವಣೆ. ಇದು ತಮಗೆ ಗೊತ್ತಿದೆ. **(ಗೊಂದಲ)** ಈ ಸದನದ ಘನತೆ ಗೌರವವನ್ನು ಕಾಪಾಡುವಂತಹದ್ದು ನನ್ನೊಬ್ಬನ ಜವಾಬ್ದಾರಿಯಲ್ಲ. ಇದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಇಲ್ಲಿ ಚುನಾವಣೆ ನಡೆಯುತ್ತಿದೆ. ಚುನಾವಣೆಯ ಸಮಯದಲ್ಲಿ ಮಾತುಕತೆಗೆ ಆಸ್ಪದವಿಲ್ಲ.

**(ಗೊಂದಲ)**

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):-** ರಾಜೀನಾಮೆ ಏತಕ್ಕೆ ಕೊಡಿಸಿದಿರಿ? ಸಂವಿಧಾನವನ್ನು ಕಾಪಾಡಬೇಕು ಮತ್ತು ಅದನ್ನು ಎತ್ತಿ ಹಿಡಿಯಬೇಕಲ್ಲವೇ?

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ತಾವು ನಮ್ಮ ಮಾತನ್ನು ಕೇಳಬೇಕಲ್ಲವೇ?

**ಹಂಗಾಮಿ ಸಭಾಪತಿಯವರು:-** ಚುನಾವಣೆಯಾದ ಮೇಲೆ ತಾವು ಮಾತನಾಡಿ. ಆಗ ಯಾರೂ ಬೇಡ ಎನ್ನುತ್ತಾರೆ. ತಮಗೆ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯಂತಹ ಹಿರಿಯರನ್ನು ಅಗೌರವಯುತವಾಗಿ ಕೆಳಗಿಳಿಸಿದ್ದು ನಿಮಗೆ ಗೌರವವೇ? ಇದು ನಾಚಿಕೆಯಾಗುವುದಿಲ್ಲವೇ?

**ಹಂಗಾಮಿ ಸಭಾಪತಿಯವರು:-** ಈಗ ಅದಕ್ಕೆಲ್ಲಾ ಅಸ್ಪದವಿಲ್ಲ. ಮಾನ್ಯ ರವಿಕುಮಾರ್‌ರವರೇ, ತಾವು ಸುಮ್ಮನೆ ಕುಳಿತುಕೊಳ್ಳಿ. ಚುನಾವಣೆ ನಡೆಯುವ ಸಮಯದಲ್ಲಿ ಮಾತನಾಡುತ್ತಾರೆಯೇ? ಈ ತರಹ ಏತಕ್ಕೆ ಮಾತನಾಡುತ್ತೀರಾ ಕುಳಿತುಕೊಳ್ಳಿ. ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರೇ, ತಾವು ವಿರೋಧ ಪಕ್ಷದ ನಾಯಕರು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಈ ವಿಷಯ ಪತ್ರಿಕೆಗಳಲ್ಲಿ ಬಂದಿದೆ. **(ಗೊಂದಲ)** ನಾನು ಒಪ್ಪುತ್ತೇನೆ.

**ಹಂಗಾಮಿ ಸಭಾಪತಿಯವರು:-** ಈಗ ಚುನಾವಣೆಗೂ ಮತ್ತು ಬೇರೆ ವಿಷಯಕ್ಕೂ ಸಂಬಂಧವಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಪತ್ರಿಕೆಗಳಲ್ಲಿ ಬಂದಿರುವಂತಹದ್ದು, ಅದು ಯಾವ ಪಕ್ಷದ್ದು?

**(ಗೊಂದಲ)**

**ಹಂಗಾಮಿ ಸಭಾಪತಿಯವರು:-** ಈಗ ಚುನಾವಣೆ ವಿಷಯವನ್ನು ಬಿಟ್ಟು ಬೇರೆ ಯಾವುದೇ ಮಾತುಕತೆ ಇಲ್ಲ. ಚುನಾವಣೆ ಚುನಾವಣೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಇಡೀ ರಾಜ್ಯದ ಜನರು ನೋಡುತ್ತಿದ್ದಾರೆ.

**(ಗೊಂದಲ)**

**ಹಂಗಾಮಿ ಸಭಾಪತಿಯವರು:-** ಈಗ ತಾವು ಕುಳಿತುಕೊಳ್ಳಿ. ನೀವೆಲ್ಲರೂ ಹಿರಿಯ ಸದಸ್ಯರಿದ್ದೀರಿ. ಚುನಾವಣೆ ನಡೆಯುವಾಗ ಈ ರೀತಿ ನಡೆದುಕೊಳ್ಳುತ್ತರಾ? ಮಾತನಾಡುವುದಕ್ಕೆ ಎಲ್ಲಿದೆ ಅವಕಾಶ ಹೇಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಗುಂಡಾವರ್ತನೆ ಮಾಡಿ ಸಹಿ ತೆಗೆದುಕೊಳ್ಳಬೇಕಾ.

**ಹಂಗಾಮಿ ಸಭಾಪತಿಯವರು:-** ಅವಕಾಶ ಎಲ್ಲಿದೆ ಹೇಳಿ? ತಾವು ಆಮೇಲೆ ಮಾತನಾಡಿ. ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎ.ವಸಂತಕುಮಾರ್ (ವಿಧಾನಸಭಾ ಕ್ಷೇತ್ರ):-** ಯಾವುದೂ ದುಂಡಾವರ್ತನೆ ಹೇಳಿ.

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರು):-** ದುಂಡಾ ವರ್ತನೆ ಎಂದು ಯಾರು ಹೇಳಿದರು? ಇಲ್ಲದೇ ಇರುವುದನ್ನು ಆಪಾದನೆ ಮಾಡುತ್ತಿದ್ದೀರಾ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ದಾದಾಗಿರಿ ಮಾಡಿಸಿಕೊಂಡು ಸಹಿ ಪಡೆದುಕೊಂಡಿರುವುದು ಸರಿನಾ. ಇಲ್ಲಿ ಇದ್ದರಾ ಕೇಳಿ. ಏತಕ್ಕಾಗಿ ಸಹಿ ಪಡೆದುಕೊಂಡರು?

**(ಗೊಂದಲ)**

**ಹಂಗಾಮಿ ಸಭಾಪತಿಯವರು:-**ದಯವಿಟ್ಟು, ತಾವು ಕುಳಿತುಕೊಳ್ಳಿ. ಈಗ ಚುನಾವಣೆ ಬಿಟ್ಟು, ಬೇರೆ ಯಾವುದೇ ಮಾತುಕತೆ ಇಲ್ಲ. ಎಲ್ಲರೂ ಕುಳಿತುಕೊಳ್ಳಿ. **(ಗೊಂದಲ)** ಯಾರಿಗೆ ಅನ್ಯಾಯವಾಗಿದೆ ಎಂಬ ಬಗ್ಗೆ ಪೊಲೀಸ್‌ನವರಿಗೆ ದೂರು ಕೊಡುತ್ತಾರೆ. ಅದನ್ನು ಲೀಗಲ್ ಆಗಿ ಮಾಡಿಕೊಳ್ಳುತ್ತಾರೆ. ಇಲ್ಲಿ ಮಾತನಾಡುವುದಕ್ಕೆ ಏನಿದೆ? ಇಲ್ಲಿ ಚುನಾವಣೆ ನಡೆಯುತ್ತಿದೆ. ಈಗ ಚುನಾವಣ ಮಾಡೋಣ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಗುಂಡಾವರ್ತನೆಯಿಂದ ಚುನಾವಣೆ ಬಂದಿದ್ದು.

**ಶ್ರೀ ಎನ್. ರವಿಕುಮಾರ್:-** ಸಭಾಪತಿ ಕಛೇರಿಯಲ್ಲಿ ಗೂಂಡಾಗಿರಿ ನಡೆದಿದೆ ಏನು ಅರ್ಥ?

**ಹಂಗಾಮಿ ಸಭಾಪತಿಯವರು:-** ಈಗ ತಾವು ಕುಳಿತುಕೊಳ್ಳಿ.

**ಶ್ರೀ ಎನ್. ರವಿಕುಮಾರ್:-** ಸಭಾಪತಿ ಕಛೇರಿಯಲ್ಲಿ ದಾದಗಿರಿ ನಡೆಯುತ್ತದೆ ಮತ್ತು ಅವರ ಸಹಿಯನ್ನು ಒತ್ತಾಯಪೂರ್ವಕವಾಗಿ ಮಾಡಿಸಿಕೊಂಡಿದ್ದಾರೆ ಎಂದರೆ ಏನು ಅರ್ಥ?

**ಹಂಗಾಮಿ ಸಭಾಪತಿಯವರು:-** ಈಗ ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗಿದೆ. ದಯವಿಟ್ಟು, ತಾವು ಒಬ್ಬ ಹಿರಿಯ ಸದಸ್ಯರಿದ್ದೀರಿ. ತಾವು ಈಗ ಕುಳಿತುಕೊಳ್ಳಿ. ಈಗ ಚುನಾವಣೆ ನಡೆಯುತ್ತಿದೆ. ಚುನಾವಣೆ ನಡೆಯುವಾಗ ಇದೇ ತರಹ ಮಾಡುತ್ತೀರಾ. ಇದು ಚುನಾವಣೆಯಲ್ಲವೇ?

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರ ಕಡೆಯಿಂದ ಒಂದು statement ಮಾಡಿಸಬೇಕು.

(ಗೊಂದಲ)

**ಹಂಗಾಮಿ ಸಭಾಪತಿಯವರು:-** ಮಾನ್ಯ ಶಶೀಲ್ ಜಿ. ನಮೋಶಿಯವರೇ, ಪೀಠಕ್ಕೆ ಗೊತ್ತಿದೆ. ತಾವು ಸುಮ್ಮನೆ ಕುಳಿತುಕೊಳ್ಳಿ. ನಾನ ಮತಕ್ಕೆ ಹಾಕುತ್ತಿದ್ದೇನೆ.

(ಗೊಂದಲ)

**ಹಂಗಾಮಿ ಸಭಾಪತಿಯವರು:-** "ಮೊದಲಿಗೆ ಪ್ರಸ್ತಾವದ ಪರವಾಗಿ ಇರುವವರು ಎದ್ದು ನಿಲ್ಲಬೇಕು, ತದನಂತರ ಪ್ರಸ್ತಾವದ ವಿರುದ್ಧವಾಗಿ ಇರುವವರು ಎದ್ದು ನಿಲ್ಲಬೇಕು. ಮತ ಎಣಿಕೆಯ ನಂತರ ಫಲಿತಾಂಶವನ್ನು ಪ್ರಕಟಿಸಲಾಗುವುದು."

**ಸಭೆಯನ್ನು ವಿಭಜಿಸಲಾಯಿತು**

**ಹಂಗಾಮಿ ಸಭಾಪತಿಯವರು:- ಸಭೆಯನ್ನು ವಿಭಜಿಸಿದಾಗ ಬಂದಂತಹ ಫಲಿತಾಂಶವು ಹೀಗಿದೆ;**

**ಹೌದು (ಪರ) : 38**

**ಇಲ್ಲ (ವಿರುದ್ಧ) : 30**

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 7(5)ರ ಅನ್ವಯ ಶ್ರೀ ಬಿ.ಕೆ. ಹರಿಪ್ರಸಾದ್ ಅವರು ಮಂಡಿಸಿರುವ ಮತ್ತು ಡಾ॥ ಯತೀಂದ್ರ ಎಸ್. ಅವರು ಅನುಮೋದಿಸಿರುವ ಮೊದಲನೆಯ ಪ್ರಸ್ತಾವಕ್ಕೆ ಸದನವು ಅಂಗೀಕಾರ ನೀಡಿರುವುದರಿಂದ ಶ್ರೀ ಸಲೀಂ ಅಹ್ಮದ್ ರವರು ಸಭಾಪತಿಯವರಾಗಿ ಚುನಾಯಿಸಲ್ಪಟ್ಟಿರುತ್ತಾರೆಂದು ಘೋಷಿಸುತ್ತಿದ್ದೇನೆ.

**ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಯಿತು**

**ಶ್ರೀ** ಸಲೀಂ ಅಹ್ಮದ್ **ಅವರನ್ನು ವಿಧಾನ ಪರಿಷತ್ತಿನ ಸಭಾಪತಿಯವರನ್ನಾಗಿ ಚುನಾಯಿಸಲಾಗಿದೆ ಎಂದು ಘೋಷಿಸಲಾಯಿತು.**"

**(ಸದನದ ಎಲ್ಲ ಮಾನ್ಯ ಸದಸ್ಯರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಹಂಗಾಮಿ ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಭಾನಾಯಕರು, ಮಾನ್ಯ ವಿರೋಧ ಪಕ್ಷದ ನಾಯಕರು, ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಹಿರಿಯ ಸದಸ್ಯರುಗಳು ನೂತನ ಸಭಾಪತಿಗಳನ್ನು ಸಭಾಪೀಠಕ್ಕೆ ಕರೆತರಬೇಕು.

(ಮುಂದು)

**(680) 14.08.2026 11.20 ಟಿಸಿಹೆಚ್-ಎಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಲ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇಲ್ಲ.

**ಹಂಗಾಮಿ ಸಭಾಪತಿಯವರು:-** ಇದು ಸಭಾ ನಡವಳಿಕೆ ಎಂಬುದನ್ನು ಅರ್ಥಮಾಡಿಕೊಂಡು ದಯವಿಟ್ಟು ಎಲ್ಲರೂ ಬರಬೇಕು. ನಾನು ಹೇಳುವುದು ಹೇಳಿದ್ದೇನೆ, ಉಳಿದಿದ್ದು ನಿಮ್ಮಿಷ್ಟ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಇದೇ ನಡವಳಿಕೆ ಮಾನ್ಯ ಸಭಾಪತಿಯವರಿಗೆ ಗೌರವ ತೋರಿಸುವಾಗ ಎಲ್ಲಿ ಹೋಗಿತ್ತು? ಇದೇ ನಡವಳಿಕೆ ಆಗ ಏಕೆ ಮಾಡಲಿಲ್ಲ? **(ಗೊಂದಲ)** ಇದೇ ನಡವಳಿಕೆ ಚುನಾವಣೆಗೆ ಮುಂಚೆ ಏಕೆ ಮಾಡಲಿಲ್ಲ?

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಭಾನಾಯಕರು, ಮಾನ್ಯ ವಿರೋಧ ಪಕ್ಷದ ನಾಯಕರು, ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಮಾನ್ಯ ಮುಖ್ಯ ಸಚೇತಕರುಗಳು ಮಾನ್ಯ ಸಭಾಪತಿಗಳ ಸ್ಥಾನಕ್ಕೆ ಆಯ್ಕೆಯಾದಂತಹ ಶ್ರೀ ಸಲೀಂ ಅಹ್ಮದ್ ಅವರನ್ನು ಸಭಾಪೀಠಕ್ಕೆ ಕರೆತಂದರು)**

**ಹಂಗಾಮಿ ಸಭಾಪತಿಯವರು:-** ಮಾನ್ಯ ಸಲೀಂ ಅಹ್ಮದ್‌ರವರೆ, ತಮಗೆ ಅಭಿನಂದನೆಗಳು.

**Sri SALEEM AHMED:** Thank you sir.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಲೀಂ ಅಹ್ಮದ್‌ರವರೇ, ತಮಗೆ ಶುಭವಾಗಲಿ ಹಾಗೂ ಒಳ್ಳೆಯದಾಗಲಿ.

**Sri SALEEM AHMED:** Thank you sir.

**ಹಂಗಾಮಿ ಸಭಾಪತಿಯವರು:-** ಮಾನ್ಯ ಸಲೀಂ ಅಹ್ಮದ್‌ರವರೇ, ಮತ್ತೊಮ್ಮೆ ತಮಗೆ ಅಭಿನಂದನೆಗಳು, ಹಾಗೂ ನಿಮಗೆ ಒಳ್ಳೆಯದಾಗಲಿ.

**Sri SALEEM AHMED:** Thank you sir.

**(ಗೊಂದಲ)**

**ಹಂಗಾಮಿ ಸಭಾಪತಿಯವರು:-** ಒಂದು ನಿಮಿಷ. ಈಗ ನೂತನ ಸಭಾಪತಿಯವರಾಗಿ ಆಯ್ಕೆಯಾಗಿರುವ ಮಾನ್ಯ ಸದಸ್ಯರಾದ ಶ್ರೀ ಸಲೀಂ ಅಹ್ಮದ್‌ರವರು ಪೀಠವನ್ನು ಅಲಂಕರಿಸುತ್ತಿದ್ದಾರೆ. ಅವರನ್ನು ಅಭಿನಂದಿಸತಕ್ಕಂಥ ಮಾನ್ಯ ಸದಸ್ಯರು ದಯಮಾಡಿ ಮಾತನಾಡಬಹುದು.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಲೀಂ ಅಹ್ಮದ್‌ರವರು ಸಭಾಪತಿ ಪೀಠವನ್ನು ಅಲಂಕರಿಸಿದರು)**

**ಸಭಾಪತಿಯವರು:-** ಎಲ್ಲರಿಗೂ ಧನ್ಯವಾದಗಳು.

**ಶ್ರೀ ಡಿ.ಟಿ. ಶ್ರೀನಿವಾಸ್:-** ಇವತ್ತು ಮೊದಲಿಗೆ ನೂತನವಾಗಿ . . .

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಂತ್ರಿಮಂಡಲದಲ್ಲಿ ಅವಕಾಶ ಕೊಟ್ಟಿಲ್ಲ. At least ಇದರಲ್ಲಿ . . .

**(ಗೊಂದಲ)**

**ಡಾ: ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ನಾವು ಯಾರನ್ನೂ ಬಿಟ್ಟಿಲ್ಲ, ಕಾಂಗ್ರೆಸ್ ಸಂಸ್ಕೃತಿಯಲ್ಲಿ 4 ಜನಕ್ಕೆ ಅವಕಾಶ ಕೊಟ್ಟಿದ್ದೇವೆ. ಅವರು ಯಾರಿಗೂ ಕೊಟ್ಟಿಲ್ಲ.

**(ಗೊಂದಲ)**

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಅವರು ಮಾಡಿದಂತಹ ಅಪರಾಧದಿಂದ 4 ಜನರಲ್ಲಿ ಒಬ್ಬರು ಕೋರ್ಟ್‌ಗೆ ಹೋಗಿ ಗೆದ್ದು ಬಂದಿದ್ದಾರೆ.

**ಶ್ರೀ ಎಂ.ಆರ್.ಸೀತಾರಾಂ:-** ಆ ಕಡೆ ಎಷ್ಟು ಜನ ಇದ್ದಾರೆ, ಈ ಕಡೆ ಎಷ್ಟು ಜನ ಇದ್ದಾರೆ, ಸ್ವಲ್ಪ ನೋಡಿ ಮಾತನಾಡಿ.

**ಶ್ರೀ ಡಿ.ಟಿ. ಶ್ರೀನಿವಾಸ್:-** ನೂತನವಾಗಿ ಆಯ್ಕೆಯಾಗಿರುವ ಮಾನ್ಯ ಸಭಾಪತಿಯವರಿಗೆ . . .

**ಸಭಾಪತಿಯವರು:-** ಶ್ರೀ ಡಿ.ಟಿ. ಶ್ರೀನಿವಾಸ್‌ರವರೇ, ಒಂದು ನಿಮಿಷ. ಮೊದಲು ಮಾನ್ಯ ಸಭಾನಾಯಕರು ಮಾತನಾಡುತ್ತಾರೆ.

**೨. ಅಭಿನಂದನೆ**

**""ವಿಧಾನ ಪರಿಷತ್ತಿನ ನೂತನ ಸಭಾಪತಿಗಳಾಗಿ ಶ್ರೀ ಸಲೀಂ ಅಹ್ಮದ್ ಅವರು ಆಯ್ಕೆಯಾಗಿರುವ ಕುರಿತು.**

..........

**ಡಾ: ಯತೀಂದ್ರ ಎಸ್. (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇವತ್ತು ಕರ್ನಾಟಕ ವಿಧಾನ ಪರಿಷತ್‌ಗೆ ನೂತನವಾಗಿ ಮಾನ್ಯ ಸಭಾಪತಿಗಳಾಗಿ ಆಯ್ಕೆಯಾಗಿರುವಂತಹ ಮಾನ್ಯ ಸಲೀಂ ಅಹ್ಮದ್‌ರವರಿಗೆ ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರ ಪರವಾಗಿ ಮತ್ತು ವೈಯಕ್ತಿಕವಾಗಿ ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ. ಮಾನ್ಯ ಸಲೀಂ ಅಹ್ಮದ್‌ರವರು ಅಪಾರ ಅನುಭವ ಮತ್ತು ರಾಜಕೀಯ ಪರಿಣಿತಿ ಹೊಂದಿದ್ದಾರೆ. ಇವತ್ತು ಅವರು ಸಭಾಪತಿಯವರ ಪೀಠವನ್ನು ಅಲಂಕರಿಸಿರುವುದು ನಮಗೆಲ್ಲಾ ಬಹಳ ಸಂತೋಷವಾದ ಸಂಗತಿ. ಮಾನ್ಯ ಸಲೀಂ ಅಹ್ಮದ್‌ರವರ ಅಜ್ಜನವರಾದ ಶ್ರೀ ಮುಸ್ತಫಾ ಅಹಮದ್‌ರವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಹಾಗಾಗಿ ಅವರು ಅಪ್ಪಟ ದೇಶ ಪ್ರೇಮದ ಕುಟುಂಬದಿಂದ ಬಂದಿದ್ದಾರೆ. ರಾಷ್ಟ್ರ ಪ್ರೇಮ ಎನ್ನುವುದು ಅವರಿಗೆ ರಕ್ತಗತವಾಗಿಯೇ ಇದೆ. ಅವರು ಬಹಳ ತಳಮಟ್ಟದಿಂದ ರಾಜಕೀಯವಾಗಿ ಬೆಳೆದುಕೊಂಡು ಬಂದಂಥವರು. ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ 18ನೇ ವಯಸ್ಸಿನಲ್ಲೇ ಅವರು ರಾಜಕೀಯ ಪ್ರವೇಶ ಮಾಡಿದ್ದಾರೆ. ಅವರು ಮೊದಲು ಶೇಷಾದ್ರಿಪುರಂ ಕಾಲೇಜ್‌ನಲ್ಲಿ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ತಮ್ಮ ರಾಜಕೀಯ ಹೆಜ್ಜೆಯನ್ನಿಟ್ಟಿದ್ದರು. ನಂತರ ಅವರು ಕಾಂಗ್ರೆಸ್‌ನ ತತ್ವ ಸಿದ್ಧಾಂತಗಳಿಗೆ ಮಾರುಹೋಗಿ ಕಾಂಗ್ರೆಸ್ ಪಕ್ಷದ ವಿದ್ಯಾರ್ಥಿ ಸಂಘಟನೆಯಾದಂತಹ N.S.U.I. (National Students' Union of India) ಅನ್ನು ಪ್ರವೇಶ ಮಾಡಿದರು. ನಂತರ ಅವರು ನಮ್ಮ ಕರ್ನಾಟಕ ರಾಜ್ಯದ N.S.U.I. ಅಧ್ಯಕ್ಷರ ಹುದ್ದೆಯನ್ನು ಅಲಂಕರಿಸಿದ್ದರು. ನಂತರ ಅಖಿಲ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಸಂಘಟನೆಯ ಅಧ್ಯಕ್ಷರು ಕೂಡ ಆಗಿದ್ದರು. ಅದಲ್ಲದೇ ಕಾಂಗ್ರೆಸ್ ಪಕ್ಷದಲ್ಲಿ ಸಾಕಷ್ಟು ಹುದ್ದೆಗಳನ್ನು ಅಲಂಕರಿಸಿದ್ದರು. ಅವರು ಭಾರತೀಯ ಯುವ ಕಾಂಗ್ರೆಸ್‌ನಲ್ಲಿ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿದ್ದರು. ಕೆ.ಪಿ.ಸಿ.ಸಿ.ಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದಾರೆ. ತೆಲಂಗಾಣ ರಾಜ್ಯದ ಉಸ್ತುವಾರಿಯಾಗಿ ಕೂಡ ಕೆಲಸ ಮಾಡಿದ್ದಾರೆ. ಮತ್ತೆ ಅವರ ಸಂಘಟನಾ ಶಕ್ತಿ ಮತ್ತು ರಾಜಕೀಯ ಪರಿಣಿತಿಯನ್ನು ಗಮನಿಸಿ, ನಮ್ಮ ಪಕ್ಷ ಅವರಿಗೆ ಇಷ್ಟೆಲ್ಲಾ ಹುದ್ದೆಗಳನ್ನು ಕೊಟ್ಟಿತ್ತು. ಕೊಟ್ಟಂತಹ ಎಲ್ಲಾ ಹುದ್ದೆಗಳನ್ನು ಮಾನ್ಯ ಸಲೀಂ ಅಹ್ಮದ್‌ರವರು ಬಹಳ ಜವಾಬ್ದಾರಿಯಿಂದ, ದಕ್ಷತೆಯಿಂದ ನಿರ್ವಹಿಸಿದ್ದಾರೆ. ಕೇಂದ್ರ ಸರ್ಕಾರದ ನೆಹರು ಯುವ ಕೇಂದ್ರ ಸಂಘಟನೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ, ನಮ್ಮ ಗ್ರಾಮೀಣ ಯುವಕರ ಕೌಶಲ್ಯಾಭಿವೃದ್ಧಿಗೆ ತಮ್ಮ ಕೊಡುಗೆಯನ್ನು ಕೊಟ್ಟಿದ್ದಾರೆ. ಅವರು 3 ಬಾರಿ ವಿಧಾನ ಪರಿಷತ್ತಿನಿಂದ ಶಾಸಕರಾಗಿದ್ದಾರೆ. ಮತ್ತೆ 3 ಬಾರಿ ನಮ್ಮ ಸರ್ಕಾರದ ಮುಖ್ಯ ಸಚೇತಕರಾಗಿಯು ಕೂಡ ಕಾರ್ಯ ನಿರ್ವಹಿಸಿದ್ದಾರೆ. ಹಾಗಾಗಿ ವಿಧಾನ ಪರಿಷತ್ತಿನ ಎಲ್ಲಾ ಕಾರ್ಯಕಲಾಪಗಳ ಬಗ್ಗೆ ಅವರಿಗೆ ಆಳವಾದಂತಹ ಜ್ಞಾನ ಮತ್ತು ಅನುಭವ ಇದೆ. ನಮ್ಮ ವಿಧಾನ

ಪರಿಷತ್ತು ಎಂದರೆ 'ಚಿಂತಕರ ಛಾವಡಿ' ಎಂದು ಹೆಸರಾಗಿದೆ. 'ಹಿರಿಯರ ಮನೆ' ಅಥವಾ 'ಮೇಲ್ಮನೆ' ಎಂದು ಹೆಸರು ಪಡೆದುಕೊಂಡಿದೆ. ಈ ಒಂದು ಸದನದಲ್ಲಿ ಯಾವಾಗಲೂ ಕೂಡ ಗುಣಮಟ್ಟದ ಚರ್ಚೆಗಳಾಗಬೇಕು. ಸಾರ್ವಜನಿಕ ಮಹತ್ವದ ಚರ್ಚೆಗಳಾಗಬೇಕು. ಪ್ರಜಾಪ್ರಭುತ್ವವನ್ನು ಉಳಿಸುವಂಥ ಕೆಲಸಗಳಾಗಬೇಕು. ನಮ್ಮ ವಿಧಾನ ಪರಿಷತ್ತಿನ ಸದಸ್ಯರು ಯಾವಾಗಲೂ ಕೂಡ ರಾಜಕೀಯಕ್ಕಿಂತ ಹೆಚ್ಚಾಗಿ ಜನರ ಪರವಾಗಿ ಕಾಳಜಿ ಇಟ್ಟುಕೊಂಡು ಚರ್ಚೆ ಮಾಡುತ್ತಾರೆ. ಅಂತಹ ಒಂದು ಪರಂಪರೆ ಈ ಸದನಕ್ಕೆ ಇದೆ. ಸದನದ ಘನತೆ ಮತ್ತು ಇದರ ಒಂದು ಗೌರವಯುತವಾದಂತಹ ಪರಂಪರೆಯನ್ನು ಬೆಳೆಸಿಕೊಂಡು ಹೋಗಬೇಕಾದಂತಹ ಜವಾಬ್ದಾರಿ ಇವತ್ತಿನ ದಿವಸ ಮಾನ್ಯ ಸಲೀಂ ಅಹ್ಮದ್‌ರವರ ಮೇಲಿದೆ.

(ಮುಂದು)

**(681)14.8.2026/11.30/ಎಂ.ಎಂ-ಎ.ಕೆ (ಸಭಾಪತಿಯವರ ಉಪಸ್ಥಿತಿ)**

**ಡಾ॥ ಯತೀಂದ್ರ ಎಸ್. (ಮುಂದು):**

ಅವರು ಆ ಕೆಲಸವನ್ನು ಖಂಡಿತವಾಗಿಯೂ ಮಾಡುತ್ತಾರೆ. ಈಗಾಗಲೇ ಹೇಳಿದ ಹಾಗೆ ಅವರಿಗೆ ಅಪಾರವಾದಂತಹ ಅನುಭವ ಇರುವುದರಿಂದ ಆ ಪೀಠದ ಘನತೆ ಮತ್ತು ಗೌರವ ಏನು ಎನ್ನುವುದು ಇಲ್ಲಿರುವವರಿಗಿಂತ ಹೆಚ್ಚಾಗಿ ಅವರಿಗೆ ಅರಿವಿದೆ. ಅವರು ಆ ಪೀಠದಲ್ಲಿ ಕುಳಿತುಕೊಂಡು ಎಲ್ಲಾ ಸದಸ್ಯರಿಗೂ ಕೂಡ ನ್ಯಾಯ ಒದಗಿಸುವಂತಹ ಕೆಲಸವನ್ನು ಅವರು ಮಾಡಬೇಕಾಗಿದೆ. ವಿರೋಧಪಕ್ಷ ಇರಲಿ, ಆಡಳಿತ ಪಕ್ಷ ಇರಲಿ ಯಾರ ಮಧ್ಯೆಯೂ ಯಾವುದೇ ಭೇದ-ಭಾವ ಮಾಡದೇ ಎಲ್ಲರಿಗೂ ಮಾರ್ಗದರ್ಶನ ಮಾಡಿ ಕಲಾಪಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗುವಂತಹ ಕೆಲಸವನ್ನು ಅವರು ಮಾಡಬೇಕಾಗಿದೆ. ಖಂಡಿತವಾಗಿಯೂ ಆ ಕೆಲಸವನ್ನು ಅವರು ಬಹಳ ಸಮರ್ಥವಾಗಿ ಮಾಡುತ್ತಾರೆ ಎನ್ನುವ ನಂಬಿಕೆ ನನಗೆ ನೂರಕ್ಕೆ ನೂರರಷ್ಟಿದೆ. ಇವತ್ತು ನಮ್ಮ ಪಕ್ಷದ ಹಿರಿಯ ಮುಖಂಡರು ಮತ್ತು ಇಷ್ಟೆಲ್ಲಾ ಅನುಭವವಿರುವ ಮಾನ್ಯ ಸಲೀಂ ಅಹ್ಮದ್‌ರವರು ಸಭಾಪತಿ ಪೀಠವನ್ನು ಅಲಂಕರಿಸಿರುವುದು ಬಹಳ ಸಂತೋಷವಾದಂತಹ ವಿಚಾರವಾಗಿದೆ. ಅವರು ಈ ಕೆಲಸವನ್ನು ಚೆನ್ನಾಗಿ ಮಾಡಿಕೊಂಡು ಹೋಗಲಿ ಎಂದು ನಾನು ಶುಭ ಹಾರೈಕೆಗಳನ್ನು ತಿಳಿಸುತ್ತೇನೆ. ನಿಮ್ಮ ರಾಜಕೀಯ ಜೀವನದಲ್ಲಿ ಇನ್ನೂ ಎತ್ತರದ ಸ್ಥಾನವನ್ನು ನೀವು ಪಡೆದುಕೊಳ್ಳಲಿ ಎಂದು ಕೂಡ ನಾನು ಆಶಿಸುತ್ತಾ ಇವತ್ತು ನಿಮಗೆ ಶುಭಾಶಯಗಳನ್ನು ತಿಳಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ನಾನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನೂತನವಾಗಿ ಸಭಾಪತಿಗಳಾಗಿ ತಮ್ಮ ಆಯ್ಕೆಯು ನನಗೆ ಸಂತೋಷವನ್ನು ತಂದಿದೆ. ರಾಜಕೀಯಕ್ಕೆ ತಾವೇನು ಹೊಸಬರಲ್ಲ. ಅಥವಾ ನಮ್ಮ ನಿಮ್ಮ ಪರಿಚಯ ಹೊಸದೂ ಅಲ್ಲ. ಸುಮಾರು ನಾಲ್ಕು ದಶಕಗಳ ಕಾಲ ಜೊತೆಯಲ್ಲಿ ಕೆಲಸ ಮಾಡಿದ್ದೇವೆ. ಅನೇಕ ಹೋರಾಟಗಳಿರಬಹುದು, ಜನಸಾಮಾನ್ಯರ ಕೆಲಸಗಳಲ್ಲಿ ಭಾಗಿಯಾಗುವಂತಹ ಕೆಲಸಗಳನ್ನು ನಿಮ್ಮೊಟ್ಟಿಗೆ ಮಾಡಿದ್ದೇನೆ. ವೈಯಕ್ತಿಕವಾಗಿ ನಾವು ಸ್ನೇಹಿತರು. ಆದರೆ ರಾಜಕೀಯವಾಗಿ ನೀತಿ

ಸಿದ್ಧಾಂತಗಳಲ್ಲಿ ಬೇರೆ ಬೇರೆ ಪಕ್ಷಗಳಲ್ಲಿ ಕೆಲಸ ಮಾಡುವಾಗ ಆಯಾ ಪಕ್ಷಗಳ ನೀತಿ ಸಿದ್ಧಾಂತಗಳಿಗೆ ಕಟ್ಟುಬಿದ್ದು ನಾವು ಕೆಲಸ ಮಾಡುತ್ತೇವೆ. ತಾವು ವಿದ್ಯಾರ್ಥಿ ಜೀವನದಿಂದ ಹಿಡಿದು ಇಲ್ಲಿಯವರೆಗೆ ಅನೇಕ ಹುದ್ದೆಗಳನ್ನು ಅಲಂಕರಿಸಿದ್ದೀರಿ, ಜನಸಾಮಾನ್ಯರ ಜೊತೆಯಲ್ಲಿ, ಯುವ ಸಮೂಹದ ಜೊತೆಯಲ್ಲಿ ಬೆರೆತಿದ್ದೀರಿ. ಸಮಾಜಮುಖಿಯಾಗಿ ಕೆಲಸ ಮಾಡಿದ್ದೀರಿ. ಈ ಎಲ್ಲಾ ಕಾರಣಗಳಿಂದ ಒಬ್ಬ ಸ್ನೇಹಿತನೂ ಆಗಿ ತಮಗೆ ಇವತ್ತು ದೊರೆತಿರುವಂತಹ ಈ ಒಂದು ಘನ ಹುದ್ದೆ ಮತ್ತು ಮೇಲ್ಮನೆಯಲ್ಲಿ ಇದು ಚಿಂತಕರ ಚಾವಡಿ ಎನ್ನುವಂತಹ ಸ್ಥಳದಲ್ಲಿ ತಾವು ಜಾತ್ಯಾತೀತ ಮಾತ್ರವಲ್ಲ ಪಕ್ಷತೀತವಾಗಿ ಇಲ್ಲಿ ಕೆಲಸ ಮಾಡಬೇಕಾಗುತ್ತದೆ. ಆ ಕಾರಣದಿಂದ ತಮ್ಮನ್ನು ಇಡೀ ಸದನ ಇವತ್ತು ಗೌರವಿಸುವಂತಹ ಕೆಲಸವನ್ನು ನಾವು ಕೂಡ ಮಾಡಬೇಕಾಗುತ್ತದೆ. ಅಷ್ಟೇ ಗೌರವದಿಂದ ತಾವು ಕೂಡ ಎಲ್ಲರಿಗೂ ನ್ಯಾಯ ಕೊಡಿಸುವ ಕೆಲಸವನ್ನು ಮಾಡಬೇಕಾಗುತ್ತದೆ. ಇಂತಹ ಹುದ್ದೆಗೆ ಇವತ್ತು ತಾವು ನೇಮಕವಾಗಿರುವುದರಿಂದ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಒಂದು ವಿಷಯವನ್ನು ನಾನು ಸದನದಲ್ಲಿ ಮಂಡಿಸಬೇಕು. ತಮ್ಮ ಹೆಸರು ಪ್ರಸ್ತಾಪವಾದಾಗ ಅದು ಒಂದು ಪಕ್ಷದ letterhead ನಲ್ಲಿ ಬರಬಾರದಾಗಿತ್ತು. ಈ ಪದ್ಧತಿ ಯಾವತ್ತೂ ಇರಲಿಲ್ಲ. ಆದರೂ ಕೂಡ ಪಕ್ಷದ ಕಡೆಯಿಂದ ನಾನು ಒಂದು ಮಾತು ಕೇಳಿದೆ. ಅದು ಪಕ್ಷದ ಒಳಗಡೆಯ circulation ಗೆ ಎಂದು ಹೇಳಿದರು. ಆದರೆ ಏ.ಐ.ಸಿ.ಸಿ ಇಂದ ಬಂದ ಈ ವಿಚಾರವನ್ನು ಕೆ.ಪಿ.ಸಿ.ಸಿ. ಅಧ್ಯಕ್ಷರಿಗೆ address ಮಾಡಿದ್ದಿದ್ದರೆ ಇದನ್ನು ನಾವು ಪ್ರಸ್ತಾಪವೇ ಮಾಡುತ್ತಿರಲಿಲ್ಲ. ಏಕೆಂದರೆ ಪಕ್ಷದ ವಿಚಾರ ಅಧ್ಯಕ್ಷರಿಗೆ ಬಂದಾಗ ನಾವು ಕೇಳುವುದಿಲ್ಲ. ಅದು ನಮ್ಮ ಕೆಲಸ ಅಲ್ಲವೇ ಅಲ್ಲ. ಆದರೆ ಗೌರವಾನ್ವಿತ ಮುಖ್ಯಮಂತ್ರಿಗಳಿಗೆ ಬಂದಾಗ ಅದು public document ಆಗುತ್ತದೆ. ಆ ಕಾರಣದಿಂದ ನಾವು ಇದರ ಪ್ರಸ್ತಾಪವನ್ನು ಮಾಡಿದ್ದೇವೆ. ಇದು ಬರಬಾರದಾಗಿತ್ತು. ಇದು ಅಪರಾಧವಾಗಿದೆ. ಇದು ಮೊದಲನೆಯದು. ಎರಡನೆಯದು, ನಾವು ಚುನಾವಣಾ ಪ್ರಕ್ರಿಯೆ ಪ್ರಾರಂಭವಾದಾಗಲೇ ಈ ಚುನಾವಣಾ ಪ್ರಕ್ರಿಯೆ ಪ್ರಾರಂಭವಾಗುವುದಕ್ಕೆ ಕಾರಣ ಏನು ಎಂದು ಒಂದು ಮಾತನ್ನು ಕೇಳಿದ್ದೆವು. ಏಕೆಂದರೆ, ಪತ್ರಿಕೆಗಳಲ್ಲಿ ನಾನಾ ರೀತಿಯ ವಿಚಾರಗಳು ಬಂದಿವೆ. ಜನರಲ್ಲಿ ಗೊಂದಲ ಇದೆ, ಅಷ್ಟು ಮಾತ್ರ ಏಕೆ ಸದಸ್ಯರಲ್ಲೂ ಗೊಂದಲ ಇದೆ. ಇದಕ್ಕೆ ತಾವು ಪೀಠದಿಂದ ಉತ್ತರ ಕೊಡಬೇಕೆಂದು ನಾನು ಕೇಳಿದೆ. ಚುನಾವಣಾ ಪ್ರಕ್ರಿಯೆ ಆದುದರಿಂದ ಈಗ ಅದರ ಬಗ್ಗೆ ಪ್ರಸ್ತಾಪ ಇಲ್ಲ ಎಂದು ಹೇಳಿದರು. ಆಯಿತು ಚಿಂತೆ ಇಲ್ಲ. ಆದರೂ ಕೂಡ ನಾನು ತಮ್ಮ ಪೀಠಕ್ಕೆ ಒಂದು ಪ್ರಶ್ನೆಯನ್ನು ಕೇಳಲೇಬೇಕು. ಏಕೆಂದರೆ, ಮಾನ್ಯ ಬಸವರಾಜ ಹೊರಟ್ಟಿಯವರು ಸಭಾಪತಿಗಳಾಗಿದ್ದರು. ಇವತ್ತು 14ನೇ ತಾರೀಖು ನಾನು ಸದನಕ್ಕೆ ನನ್ನ ಕೃತಜ್ಞತೆಗಳನ್ನು ತಿಳಿಸಿ ನನ್ನ ರಾಜೀನಾಮೆ ಕೊಡುತ್ತೇನೆಂದು ಹೇಳಿಕೆ ಕೊಟ್ಟಿದ್ದೇನೆ ಎಂದು ಅವರು ಹೇಳಿದ್ದರು. ಅದು ಒಪ್ಪಿಗೆಯಾಗಿತ್ತು ಎಂದು ನನಗೆ ಗೊತ್ತಿರುವಂತಹ ವಿಷಯ. ತದನಂತರ ತಕ್ಷಣ 7ನೇ ತಾರೀಖು ನನ್ನ ಕಛೇರಿಗೆ ಸುಮಾರು 30 ಜನರು ಬಂದರು ಅದರಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಕೆ.ಪಿ.ಸಿ.ಸಿ. ಅಧ್ಯಕ್ಷರು ಮತ್ತು ಅನೇಕ ಸದಸ್ಯರಿದ್ದರು. ಅಲ್ಲಿ ನನಗೆ ಒತ್ತಾಯಪೂರ್ವಕವಾಗಿ letterhead ಅನ್ನು ತರಿಸಿ ಅಲ್ಲೇ ಟೈಪ್ ಮಾಡಿಸಿದರು, ಸಹಿ ಮಾಡಲೇಬೇಕು, ಒತ್ತಡವಿದೆ ಎಂದು ನನಗೆ ಒತ್ತಾಯ ಮಾಡಿದರು. ಆ ಕಾರಣದಿಂದ

ನಾನು ಒತ್ತಡದಿಂದ ರಾಜೀನಾಮೆ ಕೊಟ್ಟಿದ್ದೇನೆ, ಇದನ್ನು ನಾನು ಸ್ವಯಿಚ್ಛೆಯಿಂದ ಕೊಟ್ಟಿಲ್ಲ ಎಂದು ಪತ್ರಿಕೆಗಳಲ್ಲಿ ಬಂದಿದ್ದನ್ನು ನಾನು ಗಮನಿಸಿದೆ. ಆ ಕಾರಣದಿಂದ ಇದಕ್ಕೆ ತೆರೆ ಎಳೆಯಬೇಕಾದುದು ಈ ಸದನದ ಕರ್ತವ್ಯ. ಸಭಾಪತಿಗಳ ಪೀಠದಿಂದ ತಾವು ಇದಕ್ಕೆ ಉತ್ತರ ಕೊಡಬೇಕು. ಒಂದು ವೇಳೆ ಆ ರೀತಿ ಏನೂ ಆಗಿಲ್ಲ ಎನ್ನುವುದೇ ಆದರೆ ಹೇಳಿಕೆ ಕೊಟ್ಟವರು ಮಾನ್ಯ ಬಸವರಾಜ ಹೊರಟ್ಟಿ, ಮಾಜಿ ಸಭಾಪತಿಗಳು. ಅವರಿಂದಾದರೂ ತಾವು ಹೇಳಿಸಬೇಕು. ಇಲ್ಲದಿದ್ದರೆ ರಾಜ್ಯಕ್ಕೆ ಒಂದು ತಪ್ಪು ಸಂದೇಶ ಹೋಗುತ್ತದೆ. ಏಕೆಂದರೆ ಇವತ್ತು ಸರ್ಕಾರ ಯಾವುದೇ ಇರಲಿ ಸದನ ಸಭಾಪತಿಗಳ ಸ್ಥಾನ ಯಾವುದೇ ಪಕ್ಷದ್ದಲ್ಲ. ಪಕ್ಷಾತೀತವಾದುದು. ಆ ಕಾರಣದಿಂದ ಹಿಂದಿನಿಂದಲೂ ಕೂಡ ಪದ್ಧತಿಗಳಿದೆ. ಯಾರಿಗೆ ಹೆಚ್ಚು ಸಂಖ್ಯೆ ಇದೆ ಅವರು ಆಗುವುದರಲ್ಲಿ ಏನೂ ತಪ್ಪಿಲ್ಲ. ನಾವು ಅದನ್ನು ವಿರೋಧಿಸುವುದಿಲ್ಲ. ಆದರೆ ಪದ್ಧತಿಗಳು ಹೇಗೆ ನಡೆದುಕೊಂಡು ಬಂದಿದೆ ಬೇರೆ ಬೇರೆ ಸರ್ಕಾರಗಳು ಇರುವಂತಹ ಸಂದರ್ಭದಲ್ಲೂ ಕೂಡ ಕಾಂಗ್ರೆಸ್ ಸರ್ಕಾರ ಇದ್ದರೆ ವಿರೋಧಪಕ್ಷದಲ್ಲಿ ಇದ್ದವರು ಕೂಡ ಸಭಾಪತಿಗಳಾಗಿ ಮುಂದುವರಿದಿರುವಂತಹದ್ದು ಇದೆ. ಅಥವಾ ಅವರ ಅವಧಿ ಮುಗಿದ ಮೇಲೆ ಯಾರಿಗೆ ಸಂಖ್ಯೆ ಹೆಚ್ಚು ಇರುತ್ತದೆ ಅವರು ಆಯ್ಕೆಯಾಗಿರುವಂತಹ ಪದ್ಧತಿಗಳು ನಡೆದುಕೊಂಡು ಬಂದಿರುವಂತಹದ್ದೇ. ಎಷ್ಟೋ ಬಾರಿ ಸರ್ಕಾರ ಇರುವುದಿಲ್ಲ. ಆದರೆ ವಿರೋಧಪಕ್ಷಗಳು ಇದ್ದಾಗಲೂ ಕೂಡ ಸಭಾಪತಿಗಳು ಮುಂದುವರೆದಿದ್ದಾರೆ. ಇಂತಹ ಪದ್ಧತಿಗಳಿದ್ದಾಗ ನಾವು ನಿಮ್ಮನ್ನು ಆಯ್ಕೆ ಮಾಡುವಾಗ ವಿರೋಧವೇ ಇರಬಾರದು. ಏಕೆಂದರೆ ಅದು ಪಕ್ಷಾತೀತವಾದ ಆಯ್ಕೆಯಾಗಿರಬೇಕಾಗಿತ್ತು. ಆದರೆ ಇಲ್ಲಿ ಆಗಿದ್ದೇನೆಂದರೆ, ನಾವು ನಮ್ಮ ಅಭ್ಯರ್ಥಿಯನ್ನು ಹಾಕಬೇಕೆಂದು ಇರಲಿಲ್ಲ. ಸರ್ಕಾರ ಮೊದಲೇ nomination ಹಾಕುವ ಮುಂಚೆಯೇ ಒಂದು ಸಮಯ ನಮ್ಮನ್ನು approach ಮಾಡಿದ್ದರೆ ಬಹುಶಃ ನಾವು ಆ ರೀತಿಯ ತೀರ್ಮಾನ ತೆಗೆದುಕೊಳ್ಳಬಹುದಾಗಿತ್ತು. ಇದಕ್ಕೆ ಪಕ್ಷವನ್ನು ನಾವು ಜಂಟಿ ಮಾಡುವುದು ಬೇಕಾಗಿರಲಿಲ್ಲ. ಆದರೆ ಅದು ಆಗಲಿಲ್ಲ. Nomination ಆದಮೇಲೆ ಕೆ.ಪಿ.ಸಿ.ಸಿ. ಅಧ್ಯಕ್ಷರಾದ ಮಾನ್ಯ ಹರಿಪ್ರಸಾದ್‌ರವರು ನಮ್ಮನ್ನು ಇದು ಪಕ್ಷಾತೀತವಾದ ವಿಷಯ. ಸಭಾಪತಿಯನ್ನಾದರೂ ಆಯ್ಕೆ ಮಾಡುವಾಗ unanimous ಆಗಿ ಮಾಡೋಣ ಎಂದು ಕೇಳಿದರು. ಅಷ್ಟೊತ್ತಿಗೆ nomination ಹಾಕಿಬಿಟ್ಟಿದ್ದೆವು. ಅದಕ್ಕೆ ಮುಂಚೆಯೇ ಏನಾದರೂ ಕೇಳಿದ್ದರೆ ನಮ್ಮ ನಿರ್ಧಾರ ಬದಲಾಗಬಹುದಾಗಿತ್ತು ಅಥವಾ ನಾವು ಕೂಡ ನಮ್ಮ ಸದಸ್ಯರನ್ನೆಲ್ಲಾ ಕೇಳಿ ತೀರ್ಮಾನ ತೆಗೆದುಕೊಳ್ಳುತ್ತಿದ್ದೆವು. ಅದೂ ಆಗಲಿಲ್ಲ. ಈಗ ಏನಾಗಿದೆ ಎಂದರೆ ಸಭಾಪತಿಯವರು ಇದ್ದಾಗ ಮಾನ್ಯ ಬಸವರಾಜ ಹೊರಟ್ಟಿಯವರಿಗೆ ದಬಾವಣೆ ಮಾಡಿ ಸಹಿ ಹಾಕಿಸಲಾಗಿದೆ.

(ಮುಂದು)

(682) 14-08-2026 11-40 **KH/RN** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ಮುಂದು):**

ಆ ರೀತಿ ಅನ್ನುವಂತಹದ್ದು ಬಂದಾಗ ನಾವು ಅದನ್ನು ವಿರೋಧ ಮಾಡುವಂತಹದ್ದು ನಮಗೆ ಅನಿವಾರ್ಯವಾಯಿತು. ಈ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಬಾರದಿತ್ತು. ಆ ಕಾರಣದಿಂದ ನಾನು ತಮ್ಮಲ್ಲಿ ಅಗ್ರಹಪಡಿಸುವುದೇನೆಂದರೆ, ದಯವಿಟ್ಟು ಸರ್ಕಾರ ಇದಕ್ಕೆ ಉತ್ತರ ಕೊಡಬೇಕು. ಎರಡನೆಯದಾಗಿ, ತಾವು ಆ ಸ್ಥಾನದಲ್ಲಿ ಕುಳಿತ ಮೇಲೆ ನಾವು ವಿರೋಧ ಪಕ್ಷದವರಾಗಿರಬಹುದು. ಬೇರೆ ಯಾರೇ ಆಗಿರಬಹುದು. ಈಗ ನಿಮ್ಮನ್ನು ನಾವು ಪಕ್ಷ ಎಂದು ಪರಿಗಣಿಸುವುದಿಲ್ಲ. ಬಹುಶಃ ತಾವು ಕೂಡ ಅದೇ ರೀತಿ ಹಿಂದಿನಿಂದ ಬಂದಿರುವಂತಹ ಪದ್ಧತಿಗಳು ಏನಿವೆ, ಎಲ್ಲರಿಗೂ ಯಾವ ರೀತಿ ಸಮಾಜಾಯಿಷಿ ಮತ್ತು ನ್ಯಾಯ ಕೊಡುವಂತಹ ಕೆಲಸವನ್ನು ಪೀಠದಲ್ಲಿ ಕುಳಿತವರು ಮಾಡಿದ್ದಾರೆ. ಅದನ್ನು ತಾವು ಕೂಡ ಯಾವುದೇ ರೀತಿಯ ಭೇದ-ಭಾವಗಳು ಇಲ್ಲದೇ ಮುಂದುವರೆಸಿಕೊಂಡು ಹೋಗಬೇಕೆಂದು ಹೇಳಿ, ತಮಗೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ. ನಮಸ್ಕಾರಗಳು.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮೊದಲಿಗೆ ತಾವು ಸಭಾಪತಿಯಾಗಿ ಆಯ್ಕೆಯಾಗಿರುವುದಕ್ಕೆ ಹೃತ್ಪೂರ್ವಕವಾದಂತಹ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿ ತಾವು ಏನು ಪೀಠವನ್ನು ಅಲಂಕರಿಸಿದ್ದೀರಿ. ನನಗೆ ನೂರಕ್ಕೆ ನೂರರಷ್ಟು ನಂಬಿಕೆ ಇದೆ. ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಆ ಸ್ಥಾನಕ್ಕೆ ನ್ಯಾಯವನ್ನು ಖಂಡಿತವಾಗಿ ಒದಗಿಸುತ್ತೀರಿ ಎಂದು ನಾವೆಲ್ಲರೂ ಕೂಡ ನಂಬಿಕೆಯನ್ನು ಇಟ್ಟುಕೊಂಡಿದ್ದೇವೆ. ಹಾಗಾಗಿ ನಿಮಗೆ ನಾವೆಲ್ಲರೂ ಕೂಡ ಸಂಪೂರ್ಣವಾದ ಸಹಕಾರ ಕೂಡ ಕೊಡುತ್ತೇವೆ. ಇದರ ಜೊತೆಗೆ ನಾಮಿನೇಷನ್ ಮಾಡುವುದಕ್ಕಿಂತ ಮೊದಲು ಮೊನ್ನೆಯ ದಿವಸ ತಾವು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೂ ಕೂಡ ರಾಜೀನಾಮೆ ಕೊಟ್ಟಿದ್ದೀರಿ. ತಾವು ಪಕ್ಷಾತೀತವಾಗಿ ಆ ಪೀಠವನ್ನು ಅಲಂಕರಿಸಿದ್ದೀರಿ. ಹಿಂದೆ ಸಭಾಪತಿಯಾಗಿದ್ದ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಕೂಡ 5 ದಶಕಗಳ ಕಾಲ ಸಮಾಜಸೇವೆಯಲ್ಲಿ ಮತ್ತು ಈ ಒಂದು ಸದನದಲ್ಲಿ ಸುಮಾರು 46 ವರ್ಷಗಳ ಕಾಲ ಇದ್ದು ಕೆಲಸ ನಿರ್ವಹಣೆ ಮಾಡಿದ್ದಾರೆ. ಅವರಿಗೂ ಕೂಡ ಹೃತ್ಪೂರ್ವಕವಾದಂತಹ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ, ವಿರೋಧ ಪಕ್ಷದ ನಾಯಕರು ಇದನ್ನೆಲ್ಲಾ ಪೋಸ್ಟ್‌ಮಾರ್ಟಂ ಮಾಡುವ ಹಾಗೆ ಮಾತನಾಡುತ್ತಿದ್ದರು. ಪೋಸ್ಟ್‌ಮಾರ್ಟಂ ಮಾಡಬಾರದು. ಏಕೆಂದರೆ, ನನ್ನ ಮೇಲೆ ಅವಿಶ್ವಾಸ ನಿರ್ಣಯ ಮಂಡಿಸಿದರು. ತಾವು ಆಗ ಈ ಸದನದಲ್ಲಿ ಇದ್ದೀರಿ ಎಂದು ನಾನು ಅಂದುಕೊಳ್ಳುತ್ತೇನೆ. ಆಗ ನಾನು ಉಪ ಸಭಾಪತಿಯಾಗಿ ಇದ್ದೆ. ಅದೇ ಸ್ಥಾನದಲ್ಲಿ ಕುಳಿತಿದ್ದೆ. ಪ್ರಸ್ತಾವನೆ ತಂದರು. ಚುನಾವಣೆ ಮಾಡಿಸಿದರು. ಚುನಾವಣೆ ಮಾಡಿಸಿ, ನನಗೆ ಒಂದು 'thanks' ಹೇಳುವುದಕ್ಕೂ ಬಿಡಲಿಲ್ಲ. ನಾನು ಮಾತನಾಡದೇ ಸುಮ್ಮನೆ ಕೈಮುಗಿದು ಆಚೆಗೆ ಹೋದೆ. ಈ ಸದನದಲ್ಲಿ ಅದು ದಾಖಲಾಗಿದೆ. ಅದೇ ರೀತಿ ಮಾನ್ಯ

ವಿಮಲಗೌಡರವರನ್ನು ಇಳಿಸಲಾಯಿತು. ಇದರ ಜೊತೆಗೆ ಮಾನ್ಯ ಪ್ರತಾಪ ಚಂದ್ರ ಶೆಟ್ಟಿಯವರ ಮೇಲೆ ಇದೇ ರೀತಿ ಅವಿಶ್ವಾಸ ನಿರ್ಣಯ ಮಂಡಿಸಿದರು.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**ಶ್ರೀ ಪುಟ್ಟಣ್ಣ:-** ಮಾನ್ಯ ಭೋಜೇಗೌಡರವರೇ, ಸ್ವಲ್ಪ ಕೇಳಿ ಸ್ವಾಮಿ. ಯಾರಾದರೂ ಇರಲಿ. ನಾನು ಪೀಠವನ್ನು ಪಕ್ಷಾತೀತವಾಗಿ ಎಂದು ಹೇಳಿದೆ. ನಾನು ಪಕ್ಷಾತೀತವಾದಂತಹ ಪೀಠ ಎಂದು ಹೇಳಿದ್ದೇನೆ. ನಾನು ಮಾನ್ಯ ವಿಮಲಾಗೌಡರವರನ್ನು ಬಿ.ಜೆ.ಪಿ. ಪಕ್ಷ ಎಂದು ಹೇಳುತ್ತಿದ್ದೇನೆಯೇ, ನಾನು ಜೆ.ಡಿ(ಎಸ್) ಪಕ್ಷದಲ್ಲಿ ಇದ್ದೆ ಎಂದು ಹೇಳಿದ್ದೇನೆಯೇ? ಆ ರೀತಿ ಹೇಳುತ್ತಿಲ್ಲ. ನಾನು ಉಪ ಸಭಾಪತಿಯಾಗಿದ್ದಾಗ ನನ್ನನ್ನು ತೆಗೆದಂತಹ ರೀತಿ ಹೇಳಿದೆ. ಮಾನ್ಯ ವಿಮಲಾಗೌಡರವರನ್ನು ತೆಗೆದರು. ಅದೇ ರೀತಿಯಾಯಿತು. ಜೊತೆಗೆ ಮಾನ್ಯ ಪ್ರತಾಪ ಚಂದ್ರ ಶೆಟ್ಟಿಯವರ ಮೇಲೆ ಇದೇ ರೀತಿ ಅವಿಶ್ವಾಸ ನಿರ್ಣಯ ಮಂಡಿಸಿದರು. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಸಹ ಅವತ್ತಿನ ದಿನ ಒಬ್ಬ signatory ಆಗಿದ್ದರು. ಈಗ ಅರ್ಥವಾಯಿತ್ತಲ್ಲವೇ? ಇದನ್ನು ಏಕೆ ಹೇಳುತ್ತೇನೆಂದರೆ, ಪಕ್ಷಗಳಲ್ಲಿ ಒಂದು ಮೆಜಾರಿಟಿ ಬಂದಾಗ ಅದು ಸರ್ವೆ ಸಾಮಾನ್ಯ. ತಾವು ಪೀಠಕ್ಕೆ ನ್ಯಾಯ ಕೊಡಬೇಕೆಂದು ಕೇಳುತ್ತಿದ್ದೀರಿ. ಮಾನ್ಯ ಬಸವರಾಜ ಎಸ್.ಹೊರಟ್ಟಿಯವರು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ತೀರ್ಮಾನ ಮಾಡಿದ್ದೇನೆ ಎಂದು ಹೇಳಿದರು. ಇದಕ್ಕೆ ಪೀಠ ಏನು ನ್ಯಾಯ ಕೊಡುತ್ತದೆ. ನನ್ನ ಅನಿಸಿಕೆಯೇನೆಂದರೆ, ಎಲ್ಲರೂ ಕೂಡ ಆ ಪೀಠದಲ್ಲಿ ಕುಳಿತಾಗ ಆ ಸಂದರ್ಭದಲ್ಲಿ ನ್ಯಾಯವನ್ನು ಕೊಡುವುದಕ್ಕೆ, ಈ ಸದನದ ಘನತೆ ಮತ್ತು ಗೌರವವನ್ನು ಉಳಿಸುವುದಕ್ಕೆ ಅವರದೇ ಆದಂತಹ ರೀತಿಯಲ್ಲಿ ಪ್ರಾಮಾಣಿಕವಾದ ಸೇವೆಯನ್ನು ಸಲ್ಲಿಸಿದ್ದಾರೆ. ಅದರ ಬಗ್ಗೆ ನಾವು dispute ಮಾಡುವುದು ಬೇಡ.

ಮಾನ್ಯ ಸಭಾಪತಿಗಳು ನನಗೆ 1989-90 ರಿಂದ ಪರಿಚಯ. ಸರ್ಕಾರಿ ಕಲಾ ಕಾಲೇಜಿನಲ್ಲಿ ವಿದ್ಯಾರ್ಥಿ ನಾಯಕನಾಗಿದ್ದಂತಹ ಸಂದರ್ಭದಲ್ಲಿ N.S.U.I (National Students' Union of India) State President ಆಗಿದ್ದಿರಿ. ಆವತ್ತಿನಿಂದ ನಮಗೆ ಅವಿನಾಭಾವ ಸಂಬಂಧ ಇದೆ. ಆವತ್ತಿನಿಂದ ಇವತ್ತಿನವರೆಗೂ ಕೂಡ ಯಾವುದೇ controversy ಗೆ ಹೋಗದೇ ಇರುವಂತಹ ಒಬ್ಬ ರಾಜಕಾರಣಿ. ಪ್ರಭುದ್ಧ ಸಮಾಜಸೇವಕರು. ಅಂತಹವರನ್ನು ಇವತ್ತು ಕಾಂಗ್ರೆಸ್ ಪಕ್ಷ ಸಭಾಪತಿಯವರ ಸ್ಥಾನಕ್ಕೆ ಗುರುತಿಸಿರುವಂತಹದ್ದು ನಮ್ಮೆಲ್ಲರಿಗೂ ಹೆಮ್ಮೆ ಎಂದು ನಾನು ಕೂಡ ಭಾವಿಸುತ್ತೇನೆ. ಇವತ್ತಿನ ಸಂದರ್ಭದಲ್ಲಿ ಇವೆಲ್ಲವನ್ನೂ ರಾಜಕೀಕರಣಗೊಳಿಸದೇ ನಾವೆಲ್ಲರೂ ಕೂಡ ಒಟ್ಟಾಗಿ ಪ್ರತಿಯೊಬ್ಬ ಸದಸ್ಯನ ಹಕ್ಕನ್ನು ಸಂರಕ್ಷಿಸಬೇಕು. ಈ ಸದನದ ಘನತೆ ಗೌರವವನ್ನು ತಾವು ಎತ್ತಿಹಿಡಿಯಬೇಕು.

ಇತ್ತೀಚೆಗೆ ಎಲ್ಲೋ ಒಂದು ಕಡೆ ಈ ಸದನದ ಘನತೆಯನ್ನು ಕುಂದಿಸುವಂತಹ, ಎಂ.ಎಲ್.ಸಿ., ಹಕ್ಕುಗಳನ್ನು ಮೊಟಕುಗೊಳಸುವಂತಹ ಕೆಲಸಗಳು ನಡೆಯುತ್ತಿವೆ. ತಾವು ಕೂಡ ಅದರ ಬಗ್ಗೆ ಮಾತನಾಡಿದ್ದೀರಿ. ನಾವು ಕೂಡ ಮಾತನಾಡಿದ್ದೀವಿ. ನಾವು ಒಟ್ಟಾಗಿ ಎಲ್ಲರೂ ಮಾತನಾಡಿದ್ದೇವೆ. ಇದರ ಬಗ್ಗೆ ಹೆಚ್ಚಿನ ಆದ್ಯತೆ ಮೇಲೆ ಗಮನ ಕೊಟ್ಟು ಸದನದ ಘನತೆಯನ್ನು ಉಳಸುವಂತಹ ರೀತಿಯಲ್ಲಿ, ನಮ್ಮ ಹಕ್ಕುಗಳು ಮೊಟಕುಗೊಳಸದೇ ಇರುವಂತಹ ರೀತಿಯಲ್ಲಿ ನೋಡಿಕೊಳ್ಳಬೇಕು. ಎಂ.ಎಲ್.ಎ., ಗಳಗೆ ಯಾವ ರೀತಿ ಶಿಷ್ಟಾಚಾರದಲ್ಲಿ ಹಕ್ಕುಗಳು ಇದೆಯೋ, ಅದೇ ರೀತಿ ನಮ್ಮ ಎಂ.ಎಲ್.ಸಿ., ಗಳಗೆ ಸಿಗುವ ರೀತಿಯಲ್ಲಿ ತಾವು ಮಾಡಬೇಕೆಂದು ನಾನು ಎಲ್ಲರ ಪರವಾಗಿ ಮನವಿ ಮಾಡುತ್ತೇನೆ. ಮತ್ತೊಮ್ಮೆ ಹಿಂದೆ ಹಾಗಾಯಿತು, ಹೀಗಾಯಿತು. ಅನ್ನುವುದನ್ನು ಬಿಟ್ಟು ಇನ್ನು ಮುಂದೆ ನಾವೆಲ್ಲರೂ ಕೂಡ ಒಗ್ಗಟ್ಟಾಗಿ ನಮ್ಮ ಇಡೀ ಸದನವೇ ಒಂದು ಎನ್ನುವ ರೀತಿಯಲ್ಲಿ ನಾವೆಲ್ಲರೂ ಸಭಾಪತಿಯವರಿಗೆ ಬೆಂಬಲವಾಗಿ ನಿಂತು ಈ ಸದನದ ಘನತೆ, ಗೌರವವನ್ನು ಕಾಪಾಡೋಣ. ನೀವು ಕೂಡ ಅದನ್ನೇ ಮುಂದುವರೆಸಿ ಎಂದು ಹೇಳ, ಮತ್ತೊಮ್ಮೆ ತಮಗೆ ಹೃತ್ಪೂರ್ವಕ ಅಭಿನಂದನೆಯನ್ನು ಸಲ್ಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಸಭಾನಾಯಕರೇ, ವಿರೋಧ ಪಕ್ಷದ ನಾಯಕರೇ, ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಸಚಿವರು, ನನ್ನ ಆತ್ಮೀಯ ಹಿರಿಯ, ಕಿರಿಯ ಗೌರವಾನ್ವಿತ ಸದಸ್ಯರುಗಳೇ, ಮಾನ್ಯ ಸಲೀಂ ಅಹ್ಮದ್ ರವರು ತಮ್ಮ ಸುದೀರ್ಘ ಸುಮಾರು 40 ವರ್ಷಗಳ ಕಾಲ ಕಾಂಗ್ರೆಸ್ ಪಕ್ಷಕ್ಕೆ ಸೇವೆ ಸಲ್ಲಿಸಿದ್ದಾರೆ. ತಮ್ಮ ಸೇವೆಯನ್ನು ರಾಜಕೀಯದಲ್ಲಿ ಕಾಂಗ್ರೆಸ್ ಪಕ್ಷ ಗುರುತು ಮಾಡಿ ಇವತ್ತು ಈ ಸ್ಥಾನವನ್ನು ಅಲಂಕರಿಸುವುದಕ್ಕೆ ಕಾರಣವಾಗಿದೆ. ಈ ಸ್ಥಾನವನ್ನು ಅಲಂಕರಿಸಿರುವಂತಹ ಈ ಶುಭ ಸಂದರ್ಭದಲ್ಲಿ ನನ್ನ ಹೃದಯ ಅಂತರಾಳದಿಂದ ತಮ್ಮನ್ನು ನಾನು ಅಭಿನಂದಿಸುತ್ತೇನೆ ಮತ್ತು ನಮ್ಮ ಈ ಕಾರ್ಯವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ವಿಚಾರಗಳನ್ನು ಸಮತೋಲನವಾಗಿ ತೆಗೆದುಕೊಂಡು ಹೋಗುತ್ತೀರಿ ಎಂದು ಅತ್ಯಂತ ವಿಶ್ವಾಸದಿಂದ ಆ ಭಗವಂತನು ಆ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥನೆ ಮಾಡುತ್ತಾ, ಅಧಿಕಾರ ಯಾರಿಗೂ ಶಾಶ್ವತ ಅಲ್ಲ. ಅಧಿಕಾರ ಬಂದಂತಹ ಸಂದರ್ಭದಲ್ಲಿ ಸಾರ್ವತ್ರಿಕವಾಗಿ ಸಮಾಜದ ಒಳತಿಗಾಗಿ, ಸಮಾಜದ ಮುಖ್ಯವಾಹಿನಿಯಲ್ಲಿ ನಮ್ಮನ್ನು ನಾವು ಯಾವ ರೀತಿ ತೊಡಗಿಸಿಕೊಳ್ಳಬೇಕು ಎನ್ನುವ ವಿಚಾರದಲ್ಲಿ ತಮಗೂ ಕೂಡ ಅಗಾಧವಾದ ಅನುಭವ ಇದೆ. ಆ ರೀತಿ ಅನುಭವ ಇರುವುದರಿಂದ, ನಾನು ಅದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಬಹಳ ಚಿಕ್ಕಂದಿನಿಂದಲೇ ರಾಜಕೀಯದಲ್ಲಿ ತಾವು ಗುರುತಿಸಿಕೊಂಡಿರುವುದನ್ನು ನಾನು ಅತ್ಯಂತ ಹತ್ತಿರದಿಂದ ನೋಡಿದ್ದೇನೆ. ಆದರೆ, ಪಕ್ಷ ನಿಷ್ಠೆಯಲ್ಲಿ ತಮ್ಮ ಸುದೀರ್ಘವಾದ ಈ ರಾಜಕೀಯ ಕ್ಷೇತ್ರದಲ್ಲಿ ಯಾವತ್ತೂ ಕೂಡ ಪಕ್ಷ ನಿಷ್ಠೆಯನ್ನು ಬದಲಾವಣೆ ಮಾಡಿಲ್ಲ. ಇವತ್ತು ಹೈಕಮಾಂಡ್ ಒಟ್ಟಿಗೂ ಕೂಡ ಬಹಳ ನಿಕಟವಾದ ಸಂಪರ್ಕವನ್ನು ಇಟ್ಟುಕೊಂಡಿರುವಂತಹ ಕೆಲವೇ

ರಾಜಕಾರಣಿಗಳಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ತಾವು ಒಬ್ಬರು ಎನ್ನುವ ವಿಚಾರದಲ್ಲಿ ನಾನು ಕೂಡ ಹತ್ತಿರದಿಂದ ನೋಡಿದ್ದೇನೆ. ಇವತ್ತು ಈ ಸ್ಥಾನಕ್ಕೆ ಬರುವಾಗ ಈ ಸದನದಲ್ಲಿ ಮುಖ್ಯ ಸಚೇತಕರಾಗಿ ಕೆಲಸ ಮಾಡಿರುವಂತಹ ಅಗಾಧ ಅನುಭವ ತಮಗೆ ಇದೆ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷವನ್ನು ನೋಡಿರುವಂತಹ ಸಂದರ್ಭದಲ್ಲಿ ತಾವು ಅಲ್ಲಿ ಕುಳಿತು ಮಾತನಾಡುವಂತಹದ್ದಕ್ಕೂ, ಇಲ್ಲಿ ಕುಳಿತು ಮಾತನಾಡುವಂತಹದ್ದಕ್ಕೂ ಬಹಳ ವ್ಯತ್ಯಾಸ ಇದೆ. ಅದನ್ನು ಆಕಾಶ, ಭೂಮಿ ಎಂದು ಹೇಳಬಹುದು.

(ಮುಂದು)

**(683) 14.8.2026 11.50 ಪಿಕೆ:ಆರ್‌ಎನ್ (ಸಭಾಪತಿಗಳ ಉಪಸ್ಥಿತಿ)**

**ಶ್ರೀ ಎಸ್.ಎಲ್.ಭೋಜೇಗೌಡ (ಮುಂದು):**

ಆ ವ್ಯತ್ಯಾಸಗಳ ಅರಿವು ತಮಗೆ ನೂರಕ್ಕೆ ನೂರು ಇದೆ. ಆದರೆ, ಬಹಳ ವರ್ಷಗಳಿಂದ ನಿಮ್ಮನ್ನು ನೋಡಿಕೊಂಡು ಬಂದಿರುವಂತಹ ಸದಸ್ಯರುಗಳಿದ್ದು, ಇವರು ನಮ್ಮ ಪಕ್ಷದವರು ಎಂದು ಹೇಳುವ ಒಂದು ಭಾವನೆ ಅವರ ಹೃದಯಾಂತರಾಳದಲ್ಲಿ ಇರಲಿ, ಬೇಡ ಎಂದು ಹೇಳುವುದಿಲ್ಲ. ಆದರೆ ಈ ಭಾಗದ ಸದಸ್ಯರ ಜೊತೆ ಮಲತಾಯಿ ಧೋರಣೆ ಆಗಬಾರದು. ಎಲ್ಲಾ ಸದಸ್ಯರಿಗೂ ನಾನು ಸಭಾಪತಿಯಾಗಿದ್ದೇನೆ ಎನ್ನುವ ವಿಚಾರ ನಿಮ್ಮ ಮನಸ್ಸಿನಲ್ಲಿ ಖಂಡಿತ ಇರುತ್ತದೆ. ತಾವು ವಿರೋಧ ಪಕ್ಷದ ಸದಸ್ಯರಿಗೆ ಹೆಚ್ಚು ಮಾತನಾಡುವ ಅವಕಾಶವನ್ನು ಕೊಡಬೇಕಾಗುತ್ತದೆ. ಆಡಳಿತ ಪಕ್ಷದವರು ಕೆಲವು ಬಾರಿ ತಪ್ಪು ಮಾಡುವ ಸಂದರ್ಭದಲ್ಲಿ ಆ ಸಭಾಪೀಠದಿಂದ ಚಾಟಿ ಬೀಸದೇ ಇದ್ದರೆ ತಪ್ಪಾಗುತ್ತದೆ. ಅಂತಹ ಸಂದರ್ಭದಲ್ಲಿ ತಾವು ಆಡಳಿತ ಪಕ್ಷದ ಸದಸ್ಯರಿಗೂ ಚಾಟಿ ಬೀಸಬೇಕಾಗುತ್ತದೆ. ವಿರೋಧ ಪಕ್ಷದ ಸದಸ್ಯರು ದಾರಿ ತಪ್ಪಿದರೆ, ಅವರನ್ನೂ ಸಹ ಸರಿದಾರಿಗೆ ತರುವಂತಹ ಅಧಿಕಾರ ತಮಗೆ ಇದೆ. ಆ ಕೆಲಸವನ್ನು ತಾವು ಮಾಡುತ್ತೀರಿ. ತಾವು ಕುಳಿತುಕೊಂಡಿರುವ ಕುರ್ಚಿ ಸಾಮಾನ್ಯ ಕುರ್ಚಿಯಲ್ಲ, ಮುಳ್ಳಿನ ಕುರ್ಚಿಯಾಗಿದೆ. ಆ ಕುರ್ಚಿಯಲ್ಲಿ ಬಹಳ ಹುಷಾರಾಗಿ ಕುಳಿತುಕೊಳ್ಳಬೇಕಾಗುತ್ತದೆ. ಅದು ಆಗಾಗ ಚುಚ್ಚುತ್ತಾ ಇರುತ್ತದೆ. ಆ ಕಡೆಯಿಂದಲೂ ಚುಚ್ಚುತ್ತದೆ, ಈ ಕಡೆಯಿಂದಲೂ ಚುಚ್ಚುತ್ತದೆ. ಕುರ್ಚಿ ಮುಳ್ಳಿನದ್ದಲ್ಲದೇ ಇದ್ದರೂ ಆ ಕುರ್ಚಿ ಮುಳ್ಳಿನದ್ದಾಗಿದೆ ಎಂದು ತಿಳಿದುಕೊಂಡು ಕುಳಿತುಕೊಳ್ಳಬೇಕಾಗುತ್ತದೆ. ಅದು ಒಳ್ಳೆಯ ಲೆದರ್ ಸೀಟ್ ಆಗಿದ್ದರೂ ಕೂಡ, ಅದರ ಒಳಗಡೆ ಮುಳ್ಳು ಇದೆ ಎಂದು ತಿಳಿದುಕೊಂಡರೆ ಎಚ್ಚರಿಕೆ ವಹಿಸುವುದಕ್ಕೆ ಸಹಾಯವಾಗುತ್ತದೆ.

ಮಾನ್ಯ ಬಸವರಾಜ ಹೊರಟ್ಟಿಯವರು ಈ ಸದನದಲ್ಲಿ 50 ವರ್ಷಗಳ ಸುದೀರ್ಘವಾದ ಅನುಭವದಲ್ಲಿ ಸೇವೆ ಸಲ್ಲಿಸುವಾಗ ಊಹಾಪೋಹಗಳಿರಬಹುದು, ಮಾಧ್ಯಮಗಳಲ್ಲಿ ಬಂದಂಥದ್ದು ಇರಬಹುದು, ದೃಶ್ಯ ಮಾಧ್ಯಮದಲ್ಲಿ ಬಂದಿರುವಂಥದ್ದು ಮತ್ತು ಪತ್ರಿಕೆಗಳಲ್ಲಿ ಬಂದಿರುವಂತಹ ವಿಚಾರಗಳಿಗೆ ತೆರೆ ಎಳೆಯಬೇಕು. ಈ ಕುರಿತು ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ,

ಮಾನ್ಯ ಬಸವರಾಜ ಹೊರಟ್ಟಿಯವರೂ ಕೂಡ ಸದನದಲ್ಲಿ ಇದ್ದಾರೆ. ನಾನು ಸ್ವಇಚ್ಛೆಯಿಂದ ರಾಜೀನಾಮೆ ಕೊಟ್ಟಿದ್ದೇನೆ ಎಂದು ಅವರು ಹೇಳಿದ್ದಾರೆ. ಕೆಲವು ಕಡೆ ಆ ವಿಷಯ ಬೇರೆ ಬೇರೆ ರೀತಿಯಲ್ಲಿ ಬಿಂಬಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು, ಹಿರಿಯರಾದ ಮತ್ತು ಕಾಂಗ್ರೆಸ್ ಪಕ್ಷದ ಅಧ್ಯಕ್ಷರೂ ಆದ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಇದ್ದ ಸಂದರ್ಭದಲೇ ಮಾನ್ಯ ಬಸವರಾಜ ಹೊರಟ್ಟಿಯವರು ರಾಜೀನಾಮೆ ಕೊಟ್ಟಿರುವಂಥದ್ದರ ಬಗ್ಗೆ ನಾವು ಟಿ.ವಿ. ಮುಖಾಂತರ ಕೇಳಿ ತಿಳಿದುಕೊಂಡಿದ್ದೇವೆ. ಸಮಾಜಕ್ಕೆ ತಪ್ಪು ಅಭಿಪ್ರಾಯ ಹೋಗಬಾರದು ಎನ್ನುವ ದೃಷ್ಟಿಯಿಂದಲೇ ಆ ಕುರಿತು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ, ಯಾರೂ ಕೂಡ ಇದನ್ನು ಅನ್ಯಥಾ ಭಾವಿಸಬಾರದು. ಮಾನ್ಯ ಮುಖ್ಯಮಂತ್ರಿಗಳ ಸಮಕ್ಷಮದಲ್ಲೇ ಇದು ನಡೆದಿರುವುದರಿಂದ ಅವರು ಇದಕ್ಕೆ ತೆರೆ ಎಳೆಯುತ್ತಾರೆ ಎಂದು ಭಾವಿಸುತ್ತೇನೆ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಸದನದಲ್ಲಿದ್ದಾರೆ, ಅವರು ಮಾತನಾಡುವಾಗ, ಸದನದ ಗೌರವ-ಘನತೆಯನ್ನು ಕಾಪಾಡುವ ದೃಷ್ಟಿಯಿಂದ, ಏನು ನಡೆಯಿತು ಎನ್ನುವ ವಿಚಾರವನ್ನು ಹೇಳುತ್ತಾರೆ. ಇದು ಬಗೆಹರಿಯಬೇಕು. ಈ ನಿಟ್ಟಿನಲ್ಲಿ ತಮ್ಮಿಂದಲೂ ಒಂದು ಉತ್ತರವನ್ನು ಬಯಸುತ್ತೇವೆ ಮತ್ತು ಆವತ್ತು ಯಾರು ಹಿರಿಯರಿದ್ದರೋ, ಅವರಿಂದಲೂ ಉತ್ತರ ಬಯಸುತ್ತೇವೆ. ವಿಶೇಷವಾಗಿ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ಅಭಿಪ್ರಾಯವನ್ನು ಇಡೀ ಸದನ ಒಪ್ಪುತ್ತದೆ ಎಂದು ಭಾವಿಸುತ್ತೇನೆ. ಹಾಗಾಗಿ, ತಾವು ಪೀಠದಲ್ಲಿ ಕುಳಿತುಕೊಂಡಿರುವಂತಹ ಅವಧಿಯಲ್ಲಿ, ಉತ್ತಮವಾದ ಮತ್ತು ಸಮಾಜಮುಖಿ ಕೆಲಸಗಳು ಆಗಲಿ ಎಂದು ಬಯಸುತ್ತೇನೆ. ಎಲ್ಲಾ ಸದಸ್ಯರನ್ನೂ ಒಂದೇ ದೃಷ್ಟಿಯಿಂದ ನೋಡಿ, ಹೊಸದಾಗಿ ಆಯ್ಕೆಯಾಗಿ ಬಂದವರಿಗೆ ಮಾತನಾಡುವ ಅವಕಾಶ ಕೊಡುತ್ತೀರಿ ಎಂದು ಆಶಿಸುತ್ತೇನೆ, ಈ ನಿಟ್ಟಿನಲ್ಲಿ ತಾವು ಎಡವಬಾರದು. ಒಳ್ಳೆಯ ಕೆಲಸ ನಿಮ್ಮಿಂದಾಗಲಿ. ನಮ್ಮೆಲ್ಲರ ಸಹಾಯ-ಸಹಕಾರ ಇದೆ. ಆ ಭಗವಂತ ಕೊಟ್ಟಿರುವಂತಹ ತಮ್ಮ ಅಧಿಕಾರದ ಅವಧಿಯಲ್ಲಿ ಒಳ್ಳೆಯ ಕೆಲಸವಾಗಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಗಳೆ, ಮಾನ್ಯ ಸಭಾನಾಯಕರು ಹೊಸದಾಗಿ ಬಂದಿರುವ ಮಂತ್ರಿಗಳ ಪರಿಚಯವನ್ನು ಮಾಡಿಕೊಡಬೇಕು.

**ಶ್ರೀ ಡಿ.ಕೆ.ಶಿವಕುಮಾರ್ (ಮುಖ್ಯಮಂತ್ರಿಗಳು):-** ಸದನಕ್ಕೆ ಹೊಸ ಮಂತ್ರಿಗಳ ಪರಿಚಯ ಮಾಡಿಕೊಡಿ ಎಂದು ನನ್ನನ್ನು ಕೇಳಿದರು. ನಾನು, ಕೆಳಮನೆಯಲ್ಲಿ ಸಭೆ ನಡೆಯುತ್ತಿದೆ; ಅದು ಮುಗಿದ ಮೇಲೆ ಎಲ್ಲಾ ಮಂತ್ರಿಗಳನ್ನು ಇಲ್ಲಿಗೆ ಬರಲು ಹೇಳಿದ್ದೇನೆ. ಆಗ ಎಲ್ಲರ ಪರಿಚಯವನ್ನು ಮಾಡಿಸುತ್ತೇನೆ. ಅವರ ಆಚಾರ, ನನ್ನ ಆಚಾರ ಮತ್ತು ನಿಮ್ಮ ವಿಚಾರಗಳ ಬಗ್ಗೆ ಚರ್ಚೆ ಮಾಡೋಣ.

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೆ, ತಮಗೆ ಅಭಿನಂದನೆ ಸಲ್ಲಿಸುವಂತಹ ವಿಚಾರವನ್ನು ವ್ಯಕ್ತಪಡಿಸಲು ಅನುವು ಮಾಡಿಕೊಟ್ಟಿದ್ದಕ್ಕೆ ನಾನು ಧನ್ಯವಾದಗಳನ್ನು ತಿಳಿಸುತ್ತೇನೆ. ಇವತ್ತಿನ ಕಾರ್ಯಸೂಚಿಯ ಪ್ರಕಾರ ಸಭಾಪತಿಗಳ ಚುನಾವಣೆ ನಡೆದು, ತಮ್ಮನ್ನು ಸದನ ಬಹುಮತದಿಂದ ಆಯ್ಕೆ

ಮಾಡಿದೆ. ತಮ್ಮನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಈಗಾಗಲೇ ತಮ್ಮನ್ನು ಅಭಿನಂದಿಸಿ ವಿರೋಧ ಪಕ್ಷದ ನಾಯಕರು ಮತ್ತು ನಮ್ಮ ಕಡೆಯ ಸದಸ್ಯರೂ ಕೂಡ ಮಾತನಾಡಿದ್ದಾರೆ. ಮಾನ್ಯ ಸಭಾನಾಯಕರೂ ಕೂಡ ಅಭಿನಂದನೆ ಸಲ್ಲಿಸಿದ್ದಾರೆ. ತಾವು ಈ ಸದನಕ್ಕೆ 32ನೇ ಸಭಾಪತಿಯಾಗಿ ಆಯ್ಕೆಯಾಗಿದ್ದೀರಿ. ವಿಧಾನ ಪರಿಷತ್ತಿಗೆ ದೊಡ್ಡ ಇತಿಹಾಸ ಇದೆ. ಈಗಾಗಲೇ ಮಾತನಾಡಿದ ಸದಸ್ಯರು, ಮೇಲ್ಮನೆ ಎಂದರೇನು ಎಂಬುದರ ಬಗ್ಗೆ ಪ್ರಸ್ತಾಪ ಮಾಡುತ್ತಾ, ಇದೊಂದು ಚಿಂತಕರ ಚಾವಡಿ, ಇದೊಂದು ಶಿಸ್ತಿನ ಸಭೆ, ನಿಯಮಾವಳಿಗಳನ್ನು ಪಾಲಿಸುವಂಥದ್ದು, ಇನ್ನೊಬ್ಬರಿಗೆ ನಾವು ಆದರ್ಶವಾಗಿ, ನೀತಿ ನಿಯಮಗಳ ಪ್ರಕಾರ ಹೇಗೆ ನಡೆದುಕೊಳ್ಳಬೇಕು ಎಂದು ತೋರ್ಪಡಿಸುವ ಮನೆ ಇದಾಗಿದೆ ಎಂಬ ಮಾತುಗಳನ್ನು ಹೇಳಿದರು. ಅನೇಕ ಬಾರಿ ಬಹಳ ಸಂಘರ್ಷಗಳಾಗುತ್ತವೆ, ಆದರೆ ಅದು ಮಿತಿಯಲ್ಲಿ ಇರಬೇಕು. ಈ ಸದನಕ್ಕೆ ಇರುವಂತಹ ದೊಡ್ಡ ಗೌರವವನ್ನು ನಾವೆಲ್ಲರೂ ಉಳಿಸಿಕೊಳ್ಳುತ್ತೇವೆ ಎನ್ನುವ ಭರವಸೆ ನನಗಿದೆ.

17ನೇ ಜೂನ್, 1952ನೇ ಸಾಲಿನಲ್ಲಿ ವಿಧಾನ ಪರಿಷತ್ತಿಗೆ ಮೊದಲನೇ ಬಾರಿ ಮಾನ್ಯ ಕೆ.ಟಿ.ಭಾಷ್ಯಂರವರು ಸಭಾಪತಿಗಳಾಗಿ ಆಯ್ಕೆಯಾದರು. ಅವರು ಆಯ್ಕೆ ಆದಮೇಲೆ ನಿಯಮಾವಳಿಗಳನ್ನು ರಚನೆ ಮಾಡುವಾಗ, ಇನ್ನಿತರ ಸದನಗಳ ಕಾನೂನುಗಳನ್ನು ಅಧ್ಯಯನ ಮಾಡಿ, ಹಲವಾರು ಸದಸ್ಯರ ಜೊತೆಗೂಡಿ ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿದ್ದಾರೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಚಿವರು ಸ್ವಲ್ಪ ಜೋರಾಗಿ ಮಾತನಾಡಿದರೆ ಒಳ್ಳೆಯದು.

**ಶ್ರೀ ಟಿ.ಎ.ಶರವಣ:-** ಬಹುಶಃ ಮೈಕ್ ಸರಿಯಾಗಿಲ್ಲ ಎನಿಸುತ್ತಿದೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮೈಕ್ ಸರಿಯಿದೆ; ಆದರೆ ಇವತ್ತು ನನಗೆ ಜ್ವರ ಬಂದು ಬಿಟ್ಟಿದೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಚಿವರು ಕುಳಿತುಕೊಂಡಿರುವ ಕುರ್ಚಿಯ ಮುಂದೆ "ಉಪ ಮುಖ್ಯಮಂತ್ರಿಗಳು" ಎನ್ನುವ ಫಲಕ ಇದೆ. ಬಹುಶಃ ಉಪ ಮುಖ್ಯಮಂತ್ರಿಗಳ ಜ್ವರ ಇವರಿಗೆ ಬಂದಿರಬಹುದೇ?

**(ಸದನದಲ್ಲಿ ನಗು)**

**ಶ್ರೀ ಬಸವರಾಜ ರಾಯರೆಡ್ಡಿ:-** ಹಾಗೇನಿಲ್ಲ, ನಮ್ಮ ಮಾನ್ಯ ಮುಖ್ಯಮಂತ್ರಿಗಳು, ಇವತ್ತು ನೀವು ಕೆಳಮನೆಯಲ್ಲೇ ಇರಬೇಕು ಎಂದು ಹೇಳಿದ್ದರಿಂದ ನಾನು ಇಲ್ಲಿಗೆ ಬಂದಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಸಲಹೆ ಮೇರೆಗೆ ಈ ಜಾಗದಲ್ಲಿ ಕುಳಿತುಕೊಂಡಿದ್ದೇನೆ.

**ಶ್ರೀ ಎನ್.ರವಿಕುಮಾರ್:-** ಮುಂದೆ ಅವರು ಉಪ ಮುಖ್ಯಮಂತ್ರಿಗಳಾಗಬಹುದೇನೋ? ಅದಕ್ಕೆ ಅವಕಾಶ ಇದೆಯೇ?

**ಶ್ರೀ ಬಸವರಾಜ ರಾಯರೆಡ್ಡಿ:-** ಗೊತ್ತಿಲ್ಲ. ಅದು ಮುಖ್ಯಮಂತ್ರಿಯವರಿಗೆ ಬಿಟ್ಟ ವಿಚಾರವಾಗಿದೆ.

**ಶ್ರೀ ಎನ್.ರವಿಕುಮಾರ್:-** ಅವರಿಗೆ ಆ ಆಸೆ ಇದೆಯೋ ಇಲ್ಲವೋ?

**ಶ್ರೀ ಬಸವರಾಜ ರಾಯರೆಡ್ಡಿ:-** ನನಗೆ ಆಸೆ ಇಲ್ಲ. ಮಾಡಿದರೆ ಯೆಸ್ ಎಂದು ಹೇಳುತ್ತೇನೆ. ಮಾನ್ಯ ಸಭಾಪತಿಗಳೆ, ಈಗಾಗಲೇ ನಾನು ಹೇಳಿದಂತೆ, ಬಹಳಷ್ಟು ಜನ ಈ ಸದನದಲ್ಲಿ ಸಭಾಪತಿಗಳಾಗಿದ್ದಂಥವರು ದೇಶದ ಸ್ವಾತಂತ್ರ್ಯಕ್ಕೆ ಹೋರಾಟ ಮಾಡಿದ್ದಾರೆ, ತ್ಯಾಗ ಮಾಡಿದ್ದಾರೆ. ಜನರ ವಿಚಾರಗಳ ಬಗ್ಗೆ ಚಿಂತನೆ ಮಾಡುತ್ತಿದ್ದವರು ಈ ಸ್ಥಾನವನ್ನು ಅಲಂಕರಿಸಿದ್ದಾರೆ. ಅದೇರೀತಿ ತಮಗೂ ಒಂದು ಇತಿಹಾಸ ಇದೆ. ಈ ಕುರಿತು ಮಾನ್ಯ ಸಭಾನಾಯಕರು ತಮ್ಮ ಪರಿಚಯವನ್ನು ಸಂಕ್ಷಿಪ್ತವಾಗಿ ಮಾಡಿಕೊಟ್ಟಿದ್ದಾರೆ. ವಿದ್ಯಾರ್ಥಿ ಸಂಘಟನೆಯಿಂದ ಬಂದಿರುವ ನೀವು, ಬಡ ಜನರ ಪರವಾಗಿ, ಗ್ರಾಮ ಮಟ್ಟದಲ್ಲಿ ಕೆಲಸ ಮಾಡಿದ್ದನ್ನು ನಾನು ನೋಡಿದ್ದೇನೆ, ತಮಗೆ ಆ ಕಳಕಳ ಇದೆ. ಅದು ಬಹಳ ಮುಖ್ಯವಾದುದು. ಆ ಕಳಕಳ ಇರುವುದರಿಂದ ನೀವು ಆ ಸ್ಥಾನದಲ್ಲಿ ಕುಳಿತುಕೊಂಡಿದ್ದೀರಿ. ಇದರಿಂದ ನನಗೆ ಬಹಳ ಸಂತೋಷವಾಗಿದೆ.

(ಮುಂದು)

**(684) 14-8-2026 12.00 ಡಿಎಸ್-ವಿಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ರಾಯರೆಡ್ಡಿ (ಮುಂದು):**

ನಾನು ಪಕ್ಷಾತೀತವಾಗಿ ಸದನದ ಎಲ್ಲಾ ಸದಸ್ಯರನ್ನು ಸಮಾನತೆಯಿಂದ ನೋಡಿಕೊಂಡು ಹೋಗುತ್ತೇನೆ ಮತ್ತು ಸದನದ ನಿಯಮಾವಳಿಗಳನ್ನು ಪಾಲಿಸುವುದಕ್ಕೆ ಸಹಕಾರ ನೀಡಬೇಕೆಂದು ಈಗಾಗಲೇ ತಾವು ಹೇಳಿದ್ದೀರಿ. ಇದು ಬಹಳ ಸಂತೋಷದ ವಿಚಾರವಾಗಿದೆ.

ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವೊಂದು ವಿಚಾರಗಳನ್ನು ಹೇಳಿದ್ದಾರೆ, ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವಾಗ ಹೇಳಬಹುದು. ಆದರೆ ಅವಶ್ಯಕತೆ ಇರಲಿಲ್ಲ, ಅದನ್ನು ಬೇರೆ ರೂಪದಲ್ಲಿ ಮಾತನಾಡಬಹುದಾಗಿತ್ತು. ಅದೇನಾದರೂ ಇರಲಿ, ಅತೀ ಹೆಚ್ಚು ಕಾಲ ಈ ಸದನದ ಸದಸ್ಯರಾಗಿ ಕೆಲಸ ಮಾಡಿದಂಥವರು, ನಮ್ಮೆಲ್ಲರಿಗೂ ಆತ್ಮೀಯರಾಗಿ ನಮಗೆ ಹಿರಿಯ ಅಣ್ಣನಾಗಿರುವಂಥವರು ಸನ್ಮಾನ್ಯ ಬಸವರಾಜ ಹೊರಟ್ಟಿಯವರು ಎನ್ನುವುದರಲ್ಲಿ ಎರಡು ಮಾತಿಲ್ಲ. ಅವರು ಉತ್ತಮ ಶಿಕ್ಷಕರಾಗಿ ಕೆಲಸ ಮಾಡಿದಂಥವರು. ರೈತರ ಮನೆತನ, ರೈತರಾಗಿ, ಶಿಕ್ಷಕರಾಗಿ ಸಮಾಜವನ್ನು ತಿದ್ದುವಂತಹ ವೃತ್ತಿಯಿಂದ ನಮ್ಮನ್ನು ದೇಶದ ಜನತೆಯನ್ನು ಉತ್ತಮ ನಾಗರಿಕರನ್ನಾಗಿ ರೂಪಿಸುವಂತಹ ವೃತ್ತಿ ಶಿಕ್ಷಕರ ವೃತ್ತಿಯಾಗಿರುವಂಥದ್ದು. ಅಂತಹ ಪವಿತ್ರ ವೃತ್ತಿಯಿಂದ ಬಂದಿರುವಂತಹ ಸನ್ಮಾನ್ಯ ಬಸವರಾಜ ಹೊರಟ್ಟಿಯವರು ಈ ಸದನಕ್ಕೆ 8 ಬಾರಿ ಆಯ್ಕೆಯಾಗಿದ್ದು, ಈಗಾಗಲೇ ಸುಮಾರು 48 ವರ್ಷಗಳ ಕಾಲ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಅವರು ಮಂತ್ರಿಯಾಗಿ ಕೆಲಸ ಮಾಡಿದ್ದಾರೆ, ಅವರಿಗೆ ಹಲವಾರು ವರ್ಷಗಳ ಅನುಭವ ಇದೆ. ಅತೀ ಹೆಚ್ಚು ಕಾಲ ಸದಸ್ಯರಾಗಿ ಸೇವೆ ಮಾಡಿದ್ದಾರೆ. ಇನ್ನು ಎರಡು ವರ್ಷಗಳಾದರೆ 48 ವರ್ಷಗಳು ಮುಗಿಯುತ್ತದೆ. ಅದರ ಜೊತೆಗೆ 3 ಬಾರಿ ಅವರು ಸಭಾಪತಿಗಳಾಗಿ ಆಯ್ಕೆಯಾಗಿ ಕೆಲಸ ನಿರ್ವಹಿಸಿದ್ದಾರೆ. ಅವರು ನೇರವಾಗಿ ಮಾತನಾಡುತ್ತಾರೆ, ಅವರನ್ನು ನಾನು ಅಭಿನಂದಿಸುತ್ತೇನೆ.

ಹೀಗಾಗಿ ಬದಲಾವಣೆ ಸಹಜವಾಗಿ ಆಗಬೇಕಾಗುತ್ತದೆ. ಈಗಾಗಲೇ ನಮ್ಮ ಹಿರಿಯ ಸದಸ್ಯರು ಹೇಳಿದ ಹಾಗೆ ಬೇರೆ ಬೇರೆ ಪಕ್ಷಗಳು ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ಸಹಜವಾಗಿ ಹೆಚ್ಚು ಸದಸ್ಯರುಗಳನ್ನು ಹೊಂದಿರುವಂತಹ ಪಕ್ಷದಲ್ಲಿ ಅನಿವಾರ್ಯವಾಗಿ ಕೆಲವು ಅಧ್ಯಕ್ಷರು, ಸಭಾಧ್ಯಕ್ಷರು, ಉಪ ಸಭಾಪತಿಗಳು ಬದಲಾವಣೆ ಆಗಬೇಕಾದ ಪರಿಸ್ಥಿತಿ ರಾಜಕೀಯ ಒತ್ತಡಗಳಿಂದ, ರಾಜಕೀಯ ವಿಚಾರಗಳಿಂದ ಆಗಿದೆ. ಇದೇನೂ ಯಾವುದೇ ಹೊಸದಲ್ಲ. ಬಿ.ಜೆ.ಪಿ.ಯವರು ಅಧಿಕಾರದಲ್ಲಿದ್ದಾಗ ಇಂತಹ ಸಂದರ್ಭಗಳು ಆಗಿವೆ ಎಂದು ಮಾನ್ಯ ಪುಟ್ಟಣ್ಣರವರು ಹೇಳಿದರು. ಅದಕ್ಕೆ ತಾವು ಯಾರೂ ಇದನ್ನು ಹೆಚ್ಚಿಗೆ ಮನಸ್ಸಿಗೆ ಹಚ್ಚಿಕೊಳ್ಳಬಾರದು. ನಾನು ಸನ್ಮಾನ್ಯ ಬಸವರಾಜ ಹೊರಟ್ಟಿಯವರಿಗೆ ವೈಯಕ್ತಿಕವಾಗಿ ನಾನು ಮನವಿ ಮಾಡುತ್ತೇನೆ. ಅವರು ಇದರ ಬಗ್ಗೆ ಯೋಚನೆ ಮಾಡಬಾರದು. ಸ್ವಾಭಾವಿಕವಾಗಿ ಇಂಥವೆಲ್ಲಾ ಆಗುತ್ತದೆ. ಅವರು ಇದೇನೂ ನೋಡದಿರುವಂಥದ್ದಲ್ಲ. ಅವರು ಸಹಕಾರ ಕೊಟ್ಟಿದ್ದಾರೆ, ಅವರನ್ನು ನಾನು ಅಭಿನಂದಿಸುತ್ತೇನೆ. ಅವರು ಈ ಸದನಕ್ಕೆ ಗೈಡ್ ಮಾಡಬೇಕು.

**ಶ್ರೀ ಟಿ.ಎ.ಶರವಣ:-** ಈ ಸದನಕ್ಕೆ ಅವರು ಹೆಡ್ ಮಾಸ್ಟರ್ ಆಗಬೇಕು.

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, yes definitely, wholeheartedly we have to tell that. ಅದಕ್ಕೆ ಅವರು ಈ ರೀತಿ ಕುಳಿತಿರುವುದು ನನಗೆ ಇಷ್ಟವಾಗುತ್ತಿಲ್ಲ. ಅವರು ನಗಬೇಕು, ಅವರಿಗೆ ನಗುಮುಖ ಇಲ್ಲ. ಏಕೋ ಚಿಂತಿತರಾಗಿ ಬಿಟ್ಟಿದ್ದಾರೆ. ದಯಮಾಡಿ it's my personal request to you. ಆ ರೀತಿಯೆಲ್ಲಾ ನಮ್ಮ ಸದಸ್ಯರು ಮಾತನಾಡುವಾಗ ಅವರು ಗೈಡ್ ಮಾಡಬೇಕು. ಇದು ನಾಳೆ ಇತಿಹಾಸದಲ್ಲಿ ಉಳಿಯುತ್ತದೆ. ಆಯಿತು ಎಂದು ಹೇಳಿದರೆ ಮುಗಿದು ಹೋಯಿತು. ಮಾನ್ಯ ಬಸವರಾಜ ಹೊರಟ್ಟಿಯವರು ಮಾನಸಿಕ ಖಿನ್ನತೆಯಿಂದ ಕೆಳಗೆ ಇಳಿದರು ಎಂದು ಬರುವುದು ಬೇಡ. Yes, you have to take it sportively. ಸದನದಲ್ಲಿ ಬದಲಾವಣೆ ಸಹಜವಾಗಿ ಆಗುತ್ತದೆ. ಅದಕ್ಕೆ ಅವರು ಕೂಡ ಪಕ್ಷಾತೀತವಾಗಿ ಎಲ್ಲಾ ಸದಸ್ಯರುಗಳಿಗೂ ಗೈಡ್ ಮಾಡುತ್ತಾರೆಂದು ನಾನು ಭಾವಿಸುತ್ತೇನೆ. ಇನ್ನು ಕೆಲವು ಹಿರಿಯ ಸದಸ್ಯರುಗಳು ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಹಿಂದೆ ಶ್ರೀ ಬಿ.ಆರ್. ಪಾಟೀಲ್‌ರವರು, ಶ್ರೀ ಬಿ.ಎಲ್. ಶಂಕರ್‌ರವರು, ಶ್ರೀ ವಿ.ಆರ್. ಸುದರ್ಶನ್‌ರವರು, ಹೀಗೆ ಹೇಳುತ್ತಾ ಹೋದರೆ ಬಹಳಷ್ಟು ಹೆಸರುಗಳಾಗುತ್ತವೆ. ಈ ಸದನದಲ್ಲಿ ಬಹಳಷ್ಟು ಒಳ್ಳೆಯವರು ಕೆಲಸ ಮಾಡಿದ್ದಾರೆ. ಅದಕ್ಕೆ ಈ ಸಂದರ್ಭದಲ್ಲಿ ತಮ್ಮ ಬಗ್ಗೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಸದನ ಹಿರಿಯರ ಸದನವಾಗಿದೆ. ಈ ಸದನಕ್ಕೆ ತಮ್ಮ ಮಾರ್ಗದರ್ಶನ ಅವಶ್ಯಕತೆ ಇದೆ. ನೀತಿ, ನಿಯಮಾವಳಿ, ಶಿಸ್ತು, ಸಂಘಟನೆ ಏನೇನು ಆಗಬೇಕಾಗಿದೆ ಅದಕ್ಕೊಂದು ನಿರೂಪಣೆ ತರಲೇಬೇಕು. ಇಲ್ಲಿ ಗಲಾಟೆ ಮಾಡುವ ಅವಶ್ಯಕತೆ ಇಲ್ಲ. ನಾವು ಚರ್ಚೆ ಮುಖಾಂತರ ಮಾತನಾಡೋಣ. ಚರ್ಚೆ ಮುಖಾಂತರ ಸದನವನ್ನು ನಡೆಸೋಣ. ಸರ್ಕಾರದ ತಪ್ಪು ಇದ್ದರೆ ಅವರು ಚರ್ಚೆಯ ಮುಖಾಂತರ ಮಾತನಾಡಲಿ. ಗಲಾಟೆ ಮಾಡುವುದರಿಂದ ಏನು ಪ್ರಯೋಜನವಾಗುವುದಿಲ್ಲ. ತಾವು ಅದಕ್ಕೊಂದು ಶಿಸ್ತು ಸಮಿತಿಯನ್ನು ಮಾಡಿ ಅದರಂತೆ ಮಾನ್ಯ ಸದಸ್ಯರುಗಳು ನಡೆದುಕೊಳ್ಳುತ್ತಾರೆ ಎಂಬ ಮಾತನ್ನು ಹೇಳಬಯಸುತ್ತೇನೆ. ಈ ಸದನ ಮುಂದಿನ

ದಿನಮಾನಗಳಲ್ಲಿ ಇಡೀ ದೇಶಕ್ಕೆ ಮಾರ್ಗದರ್ಶನ ನೀಡುತ್ತದೆ ಎಂಬ ಮಾತನ್ನು ಹೇಳಬಯಸುತ್ತೇನೆ. ನನಗೆ high fever ಇರುವುದರಿಂದ ನನಗೆ ಹೆಚ್ಚು ಮಾತನಾಡುವುದಕ್ಕಾಗುತ್ತಿಲ್ಲ. ನನಗೆ ತಲೆಯೂ ಜಾಸ್ತಿ ಓಡುತ್ತಿಲ್ಲ. ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು, ನಮಸ್ಕಾರ.

**ಸಭಾಪತಿಯವರು:-** ಮಾನ್ಯ ಬಸವರಾಜ ರಾಯರೆಡ್ಡಿಯವರೇ, ಮೊದಲನೇ ಬಾರಿಗೆ ಇವತ್ತು ನಿಮ್ಮದು ಆಕ್ರೋಶದ ಭಾಷಣ ಇಲ್ಲ.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಪ್ರಥಮವಾಗಿ ತಾವು ಸಭಾಪತಿ ಪೀಠವನ್ನು ಅಲಂಕರಿಸಿರುವುದಕ್ಕೆ ತಮಗೆ ಅಭಿನಂದನೆಗಳು. ನಾನು ನಿಮ್ಮ ಪ್ರೊಫೈಲ್ ಓದುತ್ತಿದ್ದೆ. ತಾವು ನಾಲ್ಕೂವರೆ ದಶಕಗಳಿಂದಲೂ ಸಾರ್ವಜನಿಕ ಜೀವನವನ್ನು ನಡೆಸುತ್ತಿದ್ದೀರಿ. ವಿದ್ಯಾರ್ಥಿ ದೆಸೆಯಿಂದಲೇ ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗಿಯಾಗಿ ಅಪಾರ ಅನುಭವದ ಮೂಲಕ ಸಭಾಪತಿ ಸ್ಥಾನಕ್ಕೆ ಏರಿದ್ದೀರಿ, ತಮಗೆ ಅಭಿನಂದನೆಗಳು. ಭಾರತೀಯ ಪರಂಪರೆಯಲ್ಲಿ ಒಂದು ಪದ್ಧತಿ ಇದೆ. ಸನ್ಯಾಸಾಶ್ರಮ ಸ್ವೀಕಾರ ಮಾಡಿದ ಮೇಲೆ ಪೂರ್ವಾಶ್ರಮದ ಎಲ್ಲಾ ಸಂಬಂಧಗಳನ್ನು ಕಳೆದುಕೊಂಡು ಬಿಡುತ್ತಾರಂತೆ. ಆ ಸಭಾಪತಿ ಪೀಠ ಒಂದು ರೀತಿ ಸನ್ಯಾಸಿ ಪೀಠ ಇದ್ದ ಹಾಗೆ. ಪೂರ್ವಾಶ್ರಮದ ವಾಸನೆಗಳು ಆ ಪೀಠವನ್ನು ಆವರಿಸಿಕೊಳ್ಳದ ಹಾಗೆ ನೋಡಿಕೊಳ್ಳಬೇಕಾಗಿರುವ ಜವಾಬ್ದಾರಿ ತಮ್ಮ ಮೇಲೆ ಇದೆ ಎಂದು ನಾನು ಭಾವಿಸುತ್ತೇನೆ. ಕೆಲವೊಮ್ಮೆ ಬಿಟ್ಟುಬಿಡದಂಗೆ ಪೂರ್ವಾಶ್ರಮದ ಸಂಬಂಧಗಳು ಎಳೆದುಕೊಂಡು ಬಂದುಬಿಡುತ್ತವೆ. ಅದು ಹೇಗಿರಬೇಕು ಎಂದರೆ ವಿಕ್ರಮಾದಿತ್ಯನ ಒಂದು ಕಥೆ ಬರುತ್ತದೆ. ದನ ಕಾಯುವ ಹುಡುಗರೆಲ್ಲಾ ಕುಳಿತುಕೊಂಡು ಒಂದು ಆಟ ಆಡುತ್ತಿದ್ದರಂತೆ. ಆ ಆಟ ಏನೆಂದರೆ, ಪಂಚಾಯಿತಿ ಆಟ. ಯಾರಿಗಾದರೂಬ್ಬರಿಗೆ ಅಧ್ಯಕ್ಷರ ಸ್ಥಾನವನ್ನು ವಹಿಸಬೇಕು, ದನ ಕಾಯುವ ಹುಡುಗರಲ್ಲೇ ಒಬ್ಬರನ್ನು ಆರಿಸಿದರು. ಅವನು ಎತ್ತರದ ದಿಬ್ಬದ ಮೇಲೆ ಕುಳಿತುಕೊಂಡ. ಪಂಚಾಯಿತಿಯಲ್ಲಿ ಇವರೆಲ್ಲಾ ಕಷ್ಟ-ಸುಖ ಹೇಳುವುದಕ್ಕೆ ಪ್ರಾರಂಭ ಮಾಡಿದರು. ಆ ದನ ಕಾಯುವ ಹುಡುಗ ಎಷ್ಟು ಗಂಭೀರವಾಗಿ ಆ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದ ಎಂದರೆ ರಾಜ ಗಾಂಭೀರ್ಯದಲ್ಲಿ ಕುಳಿತು ಅವರ ಎಲ್ಲಾ ಅಹವಾಲುಗಳನ್ನು ಕೇಳಿ ನ್ಯಾಯೋಚಿತ ತೀರ್ಮಾನಗಳನ್ನು ಕೊಡುತ್ತಿದ್ದನಂತೆ. ಆ ಜಾಗದಲ್ಲಿ ಕುಳಿತ ತಕ್ಷಣ ಅವನು ಪರಿವರ್ತನೆ ಆಗಿಬಿಟ್ಟ ಹೇಗೆ, ಇಷ್ಟೆಲ್ಲಾ ಪ್ರೌಢಿಮೆ ಹೇಗೆ ಬಂತು ಎಂದು ಆ ದಿಬ್ಬವನ್ನು ಅಗೆದರೆ ಕೆಳಗಡೆ ವಿಕ್ರಮಾದಿತ್ಯನ ಸಿಂಹಾಸನ ಇಂತಂತೆ, 'The Judgment Seat of Vikramaditya.' ಇದು ಹಾಗೆ. ಸಭಾಪತಿ ಸ್ಥಾನ ನ್ಯಾಯ ಕೊಡಬೇಕಾಗಿರುವ ಪೀಠ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಪೂರ್ವಾಶ್ರಮದ ಸಂಬಂಧಗಳು ಆ ಪೀಠವನ್ನು ಆವರಿಸಿಕೊಳ್ಳದೆ ಇರಲಿ. ಈ ಸದನಕ್ಕೆ ಶತಮಾನಗಳ ಇತಿಹಾಸ ಇದೆ. 1907 ರಲ್ಲಿ ಮೊದಲನೇ ಬಾರಿಗೆ ಮೈಸೂರು ಸಂಸ್ಥಾನದಲ್ಲಿ ಮಹಾರಾಜರು ಪ್ರಾರಂಭಿಸಿದರು. ಅದು ರಾಜಪ್ರಭುತ್ವ ಇದ್ದ ಕಾಲ. ಆದರೆ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ಪ್ರಜಾಪ್ರಭುತ್ವದಿಂದ ಪ್ರಭಾವಿತಗೊಂಡಿದ್ದರು. ಅವರು 1902 ರಲ್ಲಿ ಸಿಂಹಾಸನಕ್ಕೇರುತ್ತಾರೆ. ಐದೇ ವರ್ಷಕ್ಕೆ ರಾಜಪ್ರಭುತ್ವದೊಳಗೆ ಪ್ರಜಾಪ್ರಭುತ್ವ ಇರಬೇಕೆಂದು ಅವರು ಯೋಚನೆ

ಮಾಡುತ್ತಾರೆ. ಈಗ ಅದು ಸ್ವಲ್ಪ ಉಲ್ಟಾ ಆಗಿದೆ. ಒಂದು ಸಲ ನಾವು ಅಧಿಕಾರ ಸ್ಥಾನಕ್ಕೆ ಏರಿಬಿಟ್ಟರೆ ನಮ್ಮನ್ನು ಯಾರು ಕೇಳುವವರೇ ಇಲ್ಲ ಎನ್ನುವಂತಹ ಮನೋಭಾವನೆ ಇದೆ. ಆದರೆ ಆಗ ರಾಜಪ್ರಭುತ್ವ ಇತ್ತು. ಪ್ರಜಾಪ್ರಭುತ್ವದ ಆಶಯಕ್ಕೆ ತಕ್ಕಂಥೆ ಕೆಲಸ ಮಾಡುತ್ತಿದ್ದರು. ಪ್ರಜೆಗಳ ಆಶಯಕ್ಕೆ ತಕ್ಕಂಥೆ ಕೆಲಸ ಮಾಡುತ್ತಿದ್ದರು. ಅವರು 1907 ರಲ್ಲಿ 15 ಜನಗಳ ಸದಸ್ಯರೊಂದಿಗೆ ಈ ವಿಧಾನ ಪರಿಷತ್ತನ್ನು ರಚನೆ ಮಾಡುತ್ತಾರೆ. 1923 ರಲ್ಲಿ ಪ್ರಜಾ ಪ್ರತಿನಿಧಿಗಳನ್ನು ಒಳಗೊಂಡ 50 ಜನ ಸದಸ್ಯರ ಒಂದು ಪರಿಷತ್ತು ರಚನೆಯಾಗುತ್ತದೆ. 1956 ರಲ್ಲಿ ಈಗಿನ ಸ್ವರೂಪದ ಮೈಸೂರು ಕೌನ್ಸಿಲ್, ಅಂದರೆ ಆಗ ಮೈಸೂರು ಸ್ಟೇಟ್ ಎಂದು ಇತ್ತು. ಕೊನೆಗೆ 1973 ರಲ್ಲಿ ಕರ್ನಾಟಕ ವಿಧಾನ ಪರಿಷತ್ತು ಎಂದು ಪರಿವರ್ತನೆಯಾಗುತ್ತದೆ. ಈಗ 75 ಸದಸ್ಯರ ಸ್ಥಾನ ಇದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಆ ಪೀಠಕ್ಕೆ ಜವಾಬ್ದಾರಿ, ಗೌರವ ಇದೆ. ಸ್ವತಂತ್ರ ಬಂದ ನಂತರ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಪ್ಪಿಕೊಂಡ ಮೇಲೆ ತಾವು 17ನೇ ಸಭಾಪತಿಗಳಾಗಿ ಆ ಪೀಠವನ್ನು ಅಲಂಕರಿಸುತ್ತಿದ್ದೀರಿ. ತಮಗೆ ಅಭಿನಂದನೆಗಳು.

(ಮುಂದು)

**(685) 14/08/2026 12:10 ಎಸ್‌ಪಿಆರ್/ವಿಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಸಿ.ಟಿ.ರವಿ (ಮುಂದು):**

ಮೊದಲಿಗೆ ಶ್ರೀ ಟಿ.ಸುಬ್ರಹ್ಮಣ್ಯರವರು ಸಭಾಪತಿಗಳಾದರು. ಈಗ ನಿಮಗೂ ಮುಂಚೆ ನಿಕಟಪೂರ್ವವಾಗಿ ಶ್ರೀ ಬಸವರಾಜ ಹೊರಟ್ಟಿರವರು ಸಭಾಪತಿಗಳಾಗಿದ್ದರು. ಕೆಲವು ಸಂಗತಿಗಳನ್ನು ಪ್ರತಿಪಕ್ಷದ ನಾಯಕರು ಪ್ರಸ್ತಾಪಿಸಿದರು. ನಾನು ಈ ಸಂದರ್ಭದಲ್ಲಿ ಹೇಳಲು ಬಯಸುವುದೇನೆಂದರೆ, Presiding Officer ಅಂದರೆ, ಸಭಾಪತಿ ಮತ್ತು ಸಭಾಧ್ಯಕ್ಷ ಇವುಗಳೆಲ್ಲವೂ ಪಕ್ಷಾತೀತವಾಗಿರುವ ಹುದ್ದೆಗಳಾಗಿವೆ. ನಾವುಗಳೆಲ್ಲರೂ ಒಂದೊಂದು ಪಕ್ಷಕ್ಕೆ ಸೇರಿಕೊಂಡಿದ್ದರೂ ಸಹ, ಆ ಸ್ಥಾನಕ್ಕೆ ಬಂದ ನಂತರ, ಪಕ್ಷದ ಸಂಬಂಧವನ್ನು ತಾತ್ಕಾಲಿಕವಾಗಿ ಕಳೆದುಕೊಳ್ಳುತ್ತೇವೆ. ನೀವು ಸಭಾಪತಿ ಸ್ಥಾನಕ್ಕೆ ನಾಮಪತ್ರವನ್ನು ಸಲ್ಲಿಸುವುದಕ್ಕೆ ಮುಂಚೆ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜಿನಾಮೆಯನ್ನು ಸಲ್ಲಿಸಿದ್ದೀರಿ ಎಂದು ನಾನು ಭಾವಿಸುತ್ತೇನೆ.

**ಸಭಾಪತಿಯವರು:-** Already ಆಗಿದೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇದು ಪಕ್ಷಾತೀತವಾಗಿ ಇರುವಂಥಹದ್ದು ಆಗಿದೆ. ನಾನು ನಾಲ್ಕು ರೀತಿಯ ಸುದ್ದಿಗಳನ್ನು ಓದಿದೆ. ಅವುಗಳು ಯಾವುವೆಂದರೆ, ಒಂದನೆಯದು ಶ್ರೀ ಬಸವರಾಜ ಹೊರಟ್ಟಿಯವರ ಸ್ವಯಂಪ್ರೇರಿತ ರಾಜಿನಾಮೆ, ಮತ್ತೊಂದು ಸುದ್ದಿಯಲ್ಲಿ 14 ನೇ ತಾರೀಖಿನಂದು ಕೆಲವು ವಿಷಯಗಳನ್ನು ಹೇಳಿ ಹಾಗೂ ಧನ್ಯವಾದಗಳನ್ನು ತಿಳಿಸಿ, ರಾಜಿನಾಮೆಯನ್ನು ಕೊಡುತ್ತೇನೆ ಎಂದು ಅವರು ತಿಳಿಸಿದ್ದರು ಎಂಬುದಾಗಿ. ಅಂದರೆ, ಇವತ್ತಿನ ದಿವಸ ಅವರು ರಾಜಿನಾಮೆ ಕೊಡುತ್ತೇನೆ ಎಂಬುದಾಗಿ ಅವರು ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಬಂದ ನಂತರ ಹೇಳಿಕೆಯನ್ನು ಕೊಟ್ಟಿದ್ದನ್ನು ನಾನು ಓದಿದೆ. ಇದರ ನಂತರ 'ನನ್ನಿಂದ ಬಲತ್ಕಾರವಾಗಿ ಹಾಗೂ ಒತ್ತಾಯಪೂರ್ವಕವಾಗಿ ರಾಜಿನಾಮೆಯನ್ನು ಪಡೆದರು' ಎಂಬ ಮತ್ತೊಂದು

ಸುದ್ದಿ ಬಂದಿತು. ನಮಗೆ ಸತ್ಯಾಸತ್ಯತೆಯ ಅರಿವು ಇಲ್ಲ. ಮಾಧ್ಯಮಗಳ ಮೂಲಕ ನಾವು ಸುದ್ದಿಯನ್ನು ಗ್ರಹಿಸಿದ್ದೇವೆ. ಆದರೆ, ಈ ಸದನ ಪಕ್ಷಾತೀತವಾಗಿರುವ ಮತ್ತು ಘನತೆ, ಗೌರವಗಳನ್ನು ಎತ್ತಿಹಿಡಿದಿರುವ "ಚಿಂತಕರ ಚಾವಡಿ" ಎಂದು ಕರೆಸಿಕೊಂಡಿರುವ ಪ್ರಬುದ್ಧವಾಗಿರುವ ಚರ್ಚೆಗಳಿಗೆ, ಪಕ್ಷದ ವ್ಯಾಪ್ತಿಯನ್ನೂ ಮೀರಿ, ರಾಜ್ಯದ ಹಿತವನ್ನು ಬಯಸಿ, ಕೆಲಸವನ್ನು ಮಾಡತಕ್ಕ ಸದನವಾಗಿರುವ ಹಿನ್ನೆಲೆಯಲ್ಲಿ ಇದರ ಸತ್ಯಾಸತ್ಯೆಯ ಬಗ್ಗೆ ರಾಜ್ಯಕ್ಕೆ ಮನವರಿಕೆಯಾಗಬೇಕಾದ ಅವಶ್ಯಕತೆ ಇದೆ. *M.N. Kaul and S.L. Shakdher* ರವರ ಪುಸ್ತಕದ ನಿಯಮಾವಳಿಗಳ ಉಲ್ಲಂಘನೆಯಾಗಬಾರದು. Forcibly ರಾಜಿನಾಮೆಯನ್ನು ಪಡೆದಿದ್ದರೆ, ಸಂವಿಧಾನದ 183 ನೇ (ಬಿ) ವಿಧಿಯ ಉಲ್ಲಂಘನೆಯಾಗುತ್ತದೆ. ಆದರೆ, ಇದು ಆಗದ ರೀತಿಯಲ್ಲಿ ನೋಡಿಕೊಳ್ಳಬೇಕಾದ ಅವಶ್ಯಕತೆ ಇದೆ. ಏಕೆಂದರೆ, ಕಾರ್ಯಾಂಗ ಮತ್ತು ಶಾಸಕಾಂಗದಲ್ಲಿ ಕಾರ್ಯವಿಭಜನೆಯನ್ನು ಸಂವಿಧಾನವು ಬಹಳ ಸ್ಪಷ್ಟವಾಗಿ ಮಾಡಿದೆ. ಭಾರತದ ಸಂವಿಧಾನ ಕಾರ್ಯಾಂಗ ಮತ್ತು ಶಾಸಕಾಂಗದ ಸ್ಪಷ್ಟ ಅಧಿಕಾರ ವಿಭಜನೆಯನ್ನು ಮಾಡಿ, ಶಾಸಕಾಂಗದ ಮುಖ್ಯಸ್ಥರು ಕಾರ್ಯಾಂಗಕ್ಕೆ ಅಧೀನರಲ್ಲ. ಈ ಪೀಠ ಶಾಸಕಾಂಗದ ಮುಖ್ಯಸ್ಥ ಸ್ಥಾನದ ಪೀಠವಾಗಿದೆ. ಇದು ಕಾರ್ಯಾಂಗಕ್ಕೆ ಅಧೀನವಾಗಿ ಇರಬೇಕಾಗಿಲ್ಲ. ಕಾರ್ಯಾಂಗದಿಂದ ಹೊರತಾಗಿ ಇರುವ ಸ್ವತಂತ್ರ ಅಧಿಕಾರವನ್ನು ಹೊಂದಿರುವುದಾಗಿದೆ. ಹಾಗಾಗಿ ಕಾರ್ಯಾಂಗದ ಮುಖ್ಯಸ್ಥರು ಮುಖ್ಯಮಂತ್ರಿಗಳು. ಈ ಸದನಕ್ಕೆ ಶಾಸಕಾಂಗದ ಮುಖ್ಯಸ್ಥರು ಸಭಾಪತಿಗಳಾಗಿದ್ದಾರೆ. ಈ ಸಭಾಪತಿಗಳ ಮೇಲೆ, ಕಾರ್ಯಾಂಗದ ಮುಖ್ಯಸ್ಥರು ಒತ್ತಡವನ್ನು ಹೇರಿದ್ದರೆ, ಅದು ಪ್ರಜಾಪ್ರಭುತ್ವದ ಎರಡು ಅಂಗಗಳ ನಡುವಿನ ಸಾಂವಿಧಾನಿಕ ಬಿಕ್ಕಟ್ಟಿಗೂ ಕೂಡ ಕಾರಣವಾಗುತ್ತದೆ. ಹೀಗಾಗಿ, ನನಗೆ ಅನ್ನಿಸುವುದೇನೆಂದರೆ, ಸತ್ಯಾಸತ್ಯೆಯ ಬಗ್ಗೆ ಇನ್ಯಾರೋ ಹೇಳುವುದಕ್ಕಿಂತ, ನಿಕಟಪೂರ್ವ ಸಭಾಪತಿಗಳಾಗಿದ್ದ ಶ್ರೀ ಬಸವರಾಜ ಹೊರಟ್ಟಿಯವರೇ, ಏನು ನಡೆಯಿತು ಎಂಬುದರ ವಿವರವನ್ನು ಹೇಳಿದರೆ, ಸೂಕ್ತವಾಗುತ್ತದೆ. ಇಲ್ಲೇದೇ ಹೋದರೆ, ಜನ ಅವರವರ ಭಾವಕ್ಕೆ ತಕ್ಕಂತೆ ಭಾವಿಸುತ್ತಾರೆ. ಅಂದರೆ, ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಭಾವಿಸುತ್ತಾರೆ. ಆ ಕಹಿಯು ಹಾಗೆಯೇ ಉಳಿಯುತ್ತದೆ. ಕೆಲವರು ಸ್ವ ಇಚ್ಛೆಯಿಂದ ಎಂದು ಭಾವಿಸಬಹುದು; ಮತ್ತೆ ಕೆಲವರು ಒತ್ತಾಯಪೂರ್ವಕವಾಗಿ ಎಂದು ಭಾವಿಸಬಹುದು. ಹಾಗೆ ಆಗದ ರೀತಿಯಲ್ಲಿ ಸದನದ ಹಾಗೂ ಸಭಾಪತಿ ಪೀಠದ ಘನತೆ ಹಾಗೂ ಗೌರವಗಳಿಗೆ ಚ್ಯುತಿ ಬಾರದಂತೆ, ಈ ಪೀಠವು ಕಾರ್ಯನಿರ್ವಹಿಸಬೇಕಾದ ಹಿನ್ನೆಲೆಯಲ್ಲಿ ನಿಕಟಪೂರ್ವ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿರವರು ಈ ವಿಚಾರದ ಬಗ್ಗೆ ಸ್ಪಷ್ಟತೆಯನ್ನು ಕೊಡಬೇಕೆಂದು ಹೇಳುತ್ತೇನೆ.

ವಿಪಕ್ಷರಾದವರು ನಾವು ಯಾವಾಗಲೂ ಪ್ರಶ್ನೆಯನ್ನು ಮಾಡುತ್ತೇವೆ. ಸರ್ಕಾರಕ್ಕೆ ಅರ್ಥವಾಗುವ ಭಾಷೆಯಲ್ಲಿ ಕೆಲವೊಮ್ಮೆ ಕಠಿಣವಾಗಿಯಾದರೂ ಕೂಡ ಸರ್ಕಾರವನ್ನು ಎಚ್ಚರಿಸುವ ಮತ್ತು ತಿವಿಯುವ ಕೆಲಸವನ್ನು ಮಾಡಬೇಕಾಗುತ್ತದೆ. ನಿಷ್ಪಕ್ಷಪಾತವಾಗಿ ವರ್ತಿಸಬೇಕೇನ್ನುವುದು ನಿಜ. ಆದರೆ, ನೀವು ಪಕ್ಷಪಾತಿಯೂ ಆಗಿರಬೇಕು. ಇದು ಯಾವಾಗ ಎಂದು ಹೇಳಿದರೆ, ಪ್ರತಿಪಕ್ಷದ ಪರವಾಗಿರುವಂತಹ ಪಕ್ಷಪಾತೀಯವಾಗಿರಬೇಕು. ಏಕೆಂದರೆ, ಆಡಳಿತ ಪಕ್ಷವು ಸರಿ ದಾರಿಯಲ್ಲಿ ಹೋಗುವುದಕ್ಕೆ ಎಚ್ಚರಿಸುವ ಅವಶ್ಯಕತೆಯು ಕಾಲಕಾಲಕ್ಕೆ ಇರುತ್ತದೆ. ಹಾಗೆ

ಎಚ್ಚರಿಸುವ ಸಂದರ್ಭದಲ್ಲಿ ತಮ್ಮ ದೃಷ್ಟಿ ಸ್ವಲ್ಪ ಈ ಕಡೆಗೆ ಇರಲಿ ಎಂಬ ಅಪೇಕ್ಷೆಯನ್ನು ನಾವು ವ್ಯಕ್ತಪಡಿಸುತ್ತೇವೆ. ತಮಗೆ ಅಭಿನಂದೆಗಳನ್ನು ಸಲ್ಲಿಸಿ, ತಮ್ಮ ಮೂಲಕ ಈ ಸದನವು ಉತ್ತಮ ಚರ್ಚೆಗೆ ಒಂದು ವೇದಿಕೆಯಾಗಲಿ ಎಂದು ಹೇಳಿ, ಶುಭ ಹಾರೈಸುತ್ತೇನೆ. ಮತ್ತೊಮ್ಮೆ ತಮಗೆ ಅಭಿನಂದನೆಗಳು, ಒಳ್ಳೆಯದಾಗಲಿ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಧನ್ಯವಾದಗಳು. ಮೊದಲನೆಯದಾಗಿ ತಾವು ಸಭಾಪತಿಗಳ ಸ್ಥಾನವನ್ನು ಅಲಂಕರಿಸಿದ್ದಕ್ಕಾಗಿ ವೈಯಕ್ತಿಕವಾಗಿ ಮತ್ತು ನನ್ನ ಪಕ್ಷದ ಪರವಾಗಿ ತಮಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದರ ಜೊತೆಗೆ ಕಾಂಗ್ರೆಸ್ ಪಕ್ಷದ ಶ್ರೇಷ್ಠ ನಾಯಕರಾದ ಶ್ರೀಮತಿ ಸೋನಿಯಾ ಗಾಂಧಿ, ಶ್ರೀ ಮಲ್ಲಿಕಾರ್ಜುನ ಖರ್ಗೆ ಅಥವಾ ಶ್ರೀ ರಾಹುಲ್ ಗಾಂಧಿ ರವರುಗಳಿರಬಹುದು, ತಮ್ಮನ್ನು ಈ ಸ್ಥಾನಕ್ಕೆ ಆಯ್ಕೆ ಮಾಡಿರುವುದಕ್ಕೋಸ್ಕರ ಅವರಿಗೂ ಸಹ ಧನ್ಯವಾದಗಳನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ.

ಪ್ರಜಾಪ್ರಭುತ್ವದ ಬಗ್ಗೆ ಈಗಾಗಲೇ ಕೆಲವರು ಮಾತನಾಡಿದರು. ಮುಖ್ಯಮಂತ್ರಿಗಳು ಕೆಳಗಿನ ಮನೆಯಲ್ಲಿ ಮಾಡಿರುವ ಭಾಷಣವನ್ನೂ ಕೇಳಿದೆ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಇವುಗಳ ಕಾರ್ಯಪ್ರವೃತ್ತಿಯಲ್ಲಿ ಏನಾದರೂ ವೈಫಲ್ಯಗಳಾದರೆ, ಇವುಗಳು ಸರಿಯಾಗಿದ್ದರೆ ಮಾತ್ರವೇ ಅಂದರೆ, ಸ್ಥಿರ ಮತ್ತು ಸರಿಯಾಗಿದ್ದರೆ ಮಾತ್ರವೇ ದೇಶವು ಸ್ಥಿರ ಮತ್ತು ಸುಭಿಕ್ಷೆಯಲ್ಲಿರುತ್ತದೆ. ಇದರ ಜೊತೆಗೆ, ತಾವು ಈ ಸ್ಥಾನವನ್ನು ಅಲಂಕರಿಸಿದ್ದೀರಿ, ತಮ್ಮ ಬಯೋ-ಡಾಟಾ ನಮಗೇನೂ ಹೊಸದಲ್ಲ. ನಾನು 1983 ರಲ್ಲಿ ರಾಜಕಾರಣದಲ್ಲಿ ಮೊದಲನೇ ಇನ್ನಿಂಗ್ಸ್ ಅನ್ನು ಮುಗಿಸಿದಾಗ, ನೀವು ನಿಮ್ಮ ಇನ್ನಿಂಗ್ಸ್ ಅನ್ನು ಪ್ರಾರಂಭಿಸಿದಿರಿ. ಎನ್.ಎಸ್.ಯು. ವಿದ್ಯಾರ್ಥಿ ಸಂಘದಿಂದ ಪ್ರಾರಂಭಿಸಿದಿರಿ. ನೀವು ಶೇಷಾದ್ರಿಪುರಂ ಕಾಲೇಜಿನಲ್ಲಿ ಕಾಲೇಜಿನ ಅಧ್ಯಕ್ಷರಾಗಿದ್ದಿರಿ. ಅಲ್ಲಿ ನನ್ನ ಮೇಷ್ಟ್ರು ಆಗಿದ್ದ ಶ್ರೀ ಸೋಮಯಾಜಲುರವರು ಆರ್.ಎಸ್.ಎಸ್.ನ ಪ್ರಮುಖರಾಗಿದ್ದರು. ಇವರು ಸರಸಂಘ ಚಾಲಕರ ಲೆವೆಲ್‌ನಲ್ಲಿ ಇದ್ದವರು. ಇವರು ನಿಮಗೆ ಪ್ರಿನ್ಸಿಪಾಲ್ ಆಗಿದ್ದರೂ ಸಹ ನನಗೆ ಮಾತ್ರವೇ ಮೇಷ್ಟ್ರು ಆಗಿದ್ದರು. ಇವರು ನನಗೆ ಆವಾಗ ಆವಾಗ ಫೋನ್ ಮಾಡುತ್ತಿದ್ದರು. "ಏಯ್ ಏನಪ್ಪಾ! ನಿಮ್ಮ ಸಲೀಂ ಅಹ್ಮದ್‌ರವರು ಇಷ್ಟು ಗಲಾಟೆಯನ್ನು ಮಾಡಿಸುತ್ತಾರೆ" ಎಂದು ಹೇಳುತ್ತಿದ್ದರು. ಆಗ ನಾನು "ಅವರು ಆ ರೀತಿಯ ಮನುಷ್ಯನಲ್ಲ; ಬಹಳ ಸೌಮ್ಯ ಸ್ವಭಾವದವರು, ಕೆಲವು ಪ್ರತಿಭಟನೆಗಳು ಮಾಡಬಹುದು, ಆದರೆ, ಅದನ್ನು ನೀವು ಗಲಾಟೆ ಎಂದು ಹೇಳಬೇಡಿ" ಎಂದು ಹೇಳುತ್ತಿದ್ದೇನೆ. ಆಗ ಅವರು ಅದಕ್ಕೆ "ಇಲ್ಲ, ದಿನಾಲೂ ಯಾವುದಾದರೂ ಒಂದು ಇಶ್ಯೂ ಅನ್ನು ತೆಗೆದುಕೊಂಡು ಬರುತ್ತಾರೆ" ಎಂದು ಹೇಳಿದರು. ಈಗ ನೀವು 45 ವರ್ಷಗಳಷ್ಟು ಸುದೀರ್ಘವಾದ ಅವಧಿಯಲ್ಲಿ ಕಾಂಗ್ರೆಸ್ ಪಕ್ಷದಲ್ಲಿದ್ದು, ನೀವು ನನಗೆ ರಾಜಿನಾಮೆಯನ್ನು ಕಳುಹಿಸಿಬಿಟ್ಟಿರಿ. ಆದರೆ, ನನಗೆ ನಿಮ್ಮ ರಾಜಿನಾಮೆಯನ್ನು ತೆಗೆದುಕೊಳ್ಳುವುದಕ್ಕೆ ಇಷ್ಟವಿರಲಿಲ್ಲ. ಆದರೆ, ವಿಧಿಯಿಲ್ಲ, ಹೈ ಕಮ್ಯಾಂಡ್ ರವರು ತಮ್ಮನ್ನು ಅಲ್ಲಿಗೆ ನೇಮಕ ಮಾಡಿದ ತಕ್ಷಣ ನಿಮ್ಮ ರಾಜಿನಾಮೆಯನ್ನು ನಾನು ಒಪ್ಪಿಕೊಂಡು, ನಾನೂ ಸಹ ಅದಕ್ಕೆ ಸಮ್ಮತಿಯನ್ನು ನೀಡಿದ್ದೇನೆ. ತಾವು ಆ ಸ್ಥಾನದಲ್ಲಿ ಕೂತಾಗ..., ತಮ್ಮನ್ನು ಆ ಸ್ಥಾನಕ್ಕೆ ಆಯ್ಕೆ ಮಾಡುವ ಸಂದರ್ಭದಲ್ಲಿ ತಮ್ಮ ಮೂರು qualities ಗಳು

ಏನಿವೆ, ಒಬ್ಬ ಮನುಷ್ಯನಿಗೆ ಇರಬೇಕಾದ ಗುಣಗಳು ಏನಿವೆ; ಅವುಗಳು ಯಾವುವೆಂದರೆ, ಬುದ್ಧಿ, ಸಾಮರ್ಥ್ಯ ಮತ್ತು ಪ್ರಾಮಾಣಿಕತೆ. ಒಂದು ವೇಳೆ ಅವರು ಪ್ರಾಮಾಣಿಕರಾಗಿಲ್ಲವೆಂದರೆ, ಬುದ್ಧಿ ಮತ್ತು ಸಾಮರ್ಥ್ಯ ಇವುಗಳು ಯಾವುದಕ್ಕೂ ಕೆಲಸಕ್ಕೆ ಬರುವುದಿಲ್ಲ. ನೀವೊಬ್ಬ ಪ್ರಾಮಾಣಿಕ ವ್ಯಕ್ತಿ ಇಷ್ಟು ಸುದೀರ್ಘ ಅವಧಿಯ ಜೀವನದಲ್ಲಿ ಎಲ್ಲಿಯೂ ಸಹ ಕಪ್ಪು ಚುಕ್ಕೆಯಿಲ್ಲದೇ ಬಂದಿರುವ ವ್ಯಕ್ತಿಯನ್ನು ಆಯ್ಕೆ ಮಾಡಿರುವುದಕ್ಕೆ ನನಗೂ ಹೆಮ್ಮೆ, ಪಕ್ಷಕ್ಕೂ ಮತ್ತು ರಾಜ್ಯಕ್ಕೂ ಸಹ ಹೆಮ್ಮೆ ಎಂದು ನನಗನ್ನಿಸುತ್ತದೆ.

ರಾಜಕೀಯದಲ್ಲಿ ಎರಡು ತರಹಗಳಿವೆ. ಒಂದು ಹೋರಾಟದ ರಾಜಕೀಯ ಹಾಗೂ ಮತ್ತೊಂದು ಅಧಿಕಾರದ ರಾಜಕೀಯ. ಹೋರಾಟದ ರಾಜಕೀಯದಲ್ಲಿ ಜನ ಸಾಮಾನ್ಯರ ಅರಿವನ್ನು ಮೇಲ್ದರ್ಜೆಗೆ ತೆಗೆದುಕೊಂಡು ಹೋಗುತ್ತದೆ. ಹೋರಾಟ ಮಾಡಿಕೊಂಡು, ರಾಜಕೀಯವನ್ನು ಮಾಡಿದಾಗ ಜನ ಸಾಮಾನ್ಯರ ಅರಿವು ಮೇಲ್ದರ್ಜೆಗೆ ಹೋಗುತ್ತದೆ. ಅಧಿಕಾರದ ರಾಜಕೀಯವನ್ನು ಮಾಡುವಾಗ ಜನ ಸಾಮಾನ್ಯರ ಅರಿವನ್ನು ಕೆಳದರ್ಜೆಗೆ ತೆಗೆದುಕೊಂಡು ಹೋಗುತ್ತದೆ. ತಾವು ಹೋರಾಟದ ರಾಜಕೀಯ ಮೂಲಕವಾಗಿ ಬಂದರೇ ವಿನಃ ಯಾವುದಾದರೂ ಅಧಿಕಾರದ ರಾಜಕೀಯಕ್ಕೆ ಬರಲಿಲ್ಲ. ತಮ್ಮ ಅನುಭವ ನನ್ನಷ್ಟು ಇಲ್ಲದೇ ಹೋದರೂ ಸಹ ಅಖಿಲ ಭಾರತದ ಮಟ್ಟದಲ್ಲಿ ನೀವು ಯುವ ಕಾಂಗ್ರೆಸ್ಸಿನಲ್ಲಿ..., ಎನ್.ಎಸ್.ಯು.ಐ.ನಲ್ಲಿ ಆಲ್ ಇಂಡಿಯಾ ಅಧ್ಯಕ್ಷರಾಗಿದ್ದಿರಿ. ಅದರ ಜೊತೆಗೆ ಯುವ ಕಾಂಗ್ರೆಸ್ಸಿನಲ್ಲಿ ಆಲ್ ಇಂಡಿಯಾ ಪ್ರಧಾನ ಕಾರ್ಯದರ್ಶಿಗಳಾಗಿಯೂ ಸಹ ಕೆಲಸ ಮಾಡಿದ್ದಿರಿ. ಇವೆಲ್ಲವನ್ನೂ ಸಹ ಸುದೀರ್ಘ ಅವಧಿಯವರೆಗೆ ಮುಗಿಸಿಕೊಂಡು ಬಂದಿದ್ದೀರಿ. ಅದರಲ್ಲೂ, ಕೆಲವು ವಿಚಾರದಲ್ಲಿ..., ಶ್ರೀ ಸಿ.ಟಿ. ರವಿಯವರು ಮಾತನಾಡುತ್ತಾ ವಿಕ್ರಮಾದಿತ್ಯನ ಒಂದು ಕಥೆಯ ಪ್ರಸಂಗವನ್ನು ತಿಳಿಸಿದರು. ನಾವುಗಳು ಚಂದಾಮಾಮಾದಲ್ಲಿ ವಿಕ್ರಮಾದಿತ್ಯನ ಕಥೆಯನ್ನು ಓದಿದ್ದೇವೆ. ವಿಕ್ರಮಾದಿತ್ಯನು ಬೇತಾಳನ ಶವವನ್ನು ಹೆಗಲ ಮೇಲೆ ಹಾಕಿಕೊಂಡು ಹೋಗುತ್ತಿರುವಾಗ ಅದು ಕಥೆಯನ್ನು ಹೇಳುತ್ತದೆ ಎಂಬುದನ್ನು ಈ ಕಥೆ ಶುರುವಾದಾಗಲೇ ಹೇಳುತ್ತದೆ. ಸರ್ವಸಂಗ ಪರಿತ್ಯಾಗಿ ಆದವನೇ ಸನ್ಯಾಸಿಯಾಗುತ್ತಾನೆ; ಇವನು ಜೀವನದಲ್ಲಿ ಎಲ್ಲವನ್ನೂ ಬಿಟ್ಟು, ಈ ಪ್ರಪಂಚದಲ್ಲಿ ಏನೂ ಬೇಡ; ಎಲ್ಲವನ್ನೂ ತ್ಯಾಗ ಮಾಡಿ ಹೋಗುತ್ತಾನೆ. ಆದರೆ, ಇಲ್ಲಿ ಉಲ್ಟಾ ಆಗಿದೆ. ಸನ್ಯಾಸಿಗಳು ರಾಜಕಾರಣದಲ್ಲಿ ಬಂದು ಬಿಟ್ಟಿದ್ದಾರೆ. ಆಗ ನಾವು ಏನು ಮಾಡಬೇಕಾಗುತ್ತದೆ ಎಂದು ನಾನು ಸಿ.ಟಿ.ರವಿಯವರನ್ನು ಕೇಳಬಯಸುತ್ತೇನೆ. ಆ ಕಾಲ ಬೇರೆ; ಈ ಕಾಲ ಬೇರೆಯಾಗಿದೆ. ಬಹಳ ಪರಿವರ್ತನೆಯಾಗಿದೆ. ಆದ್ದರಿಂದ ಈ ವಿಕ್ರಮಾದಿತ್ಯ ಹಾಗೂ ಬೇತಾಳನ ಕಥೆಯನ್ನು ನೋಡಿದಾಗ...

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ತಮ್ಮ ಸ್ಥಾನದಲ್ಲಿ ಕುಳಿತುಕೊಂಡು):-** ಮಾನ್ಯ ಸಭಾಪತಿಯವರೆ, ಅವರು ಸನ್ಯಾಸಿ ತರಹ ಇದ್ದುಬಿಡಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ನಾನು ಜೀವನದಲ್ಲಿ ಯಾವತ್ತಿಗೂ ಸಹ ಸನ್ಯಾಸಿ ಎಂದು ಹೇಳುವುದಿಲ್ಲ; ನೇರವಾಗಿ ಹೇಳುವುದೇನೆಂದರೆ, ಸನ್ಯಾಸಿಯಾಗುವ ಪ್ರಶ್ನೆಯೇ ಇಲ್ಲ. ಆದ್ದರಿಂದ ಕೆಲವು ಸಂದರ್ಭದಲ್ಲಿ...,

**ಶ್ರೀ ಸಿ.ಟಿ.ರವಿ (ತಮ್ಮ ಸ್ಥಾನದಲ್ಲಿ ಕುಳಿತುಕೊಂಡು):-** ಮಾನ್ಯ ಸಭಾಪತಿಯವರೆ, ಅವರು ಶ್ರೀ ಜೆ.ಹೆಚ್.ಪಟೇಲ್ ರವರ ಅನುಯಾಯಿ ಎಂದು ಹೇಳಬಹುದೇ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ಆ ಮಟ್ಟಕ್ಕೂ ನಾನು ಹೋಗಿಲ್ಲ. ಆ ಲೇಪ ಶ್ರೀ ಸಿ.ಟಿ.ರವಿಯವರಿಗೆ ಇದೆ.

(ಮುಂದು)

(686)14-08-2026/12-20/**bkp-bns** (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು):**

ಶ್ರೀ ಸಲೀಂ ಅಹ್ಮದ್‌ರವರು ಕರ್ನಾಟಕ ರಾಜ್ಯ ಪ್ರದೇಶ ಕಾಂಗ್ರೆಸ್ ಕಮಿಟಿಯ ಕಾರ್ಯಾಧ್ಯಕ್ಷರಾಗಿದ್ದರು. ನಮ್ಮಲ್ಲಿ ಶ್ರೀಮಾನ್ ಆಸ್ಕರ್ ಫರ್ನಾಂಡೀಸ್ ರವರನ್ನು ಬಿಟ್ಟರೆ 24 ಗಂಟೆಗಳ ಕಾಲ ಯಾರಾದರೂ ಕೆಲಸ ಮಾಡುತ್ತಾರೆಂದರೆ ಶ್ರೀ ಸಲೀಂ ಅಹಮದ್ ರವರೇ ಆಗಿದ್ದಾರೆ. ಆಗ ನಾನು ಅವರಿಗೆ, "ನೀವು ಏತಕ್ಕೆ ರಾತ್ರಿ 1 ಗಂಟೆ 2 ಗಂಟೆಯವರೆಗೆ ಇದ್ದುಕೊಂಡು ಕೆಲಸ ಮಾಡುತ್ತೀರಿ, ನಿಮಗೆ ಬೇರೆ ಏನೂ ಕೆಲಸ ಇಲ್ಲವೇ?" ನಾನು ಈ ವಿಚಾರವನ್ನು ಈಗ ಸದನದಲ್ಲಿ ಹೇಳಬಾರದು. "ನಿಮಗೆ ಇದೇ ಕೆಲಸವಾ, 12 ಗಂಟೆ, 2 ಗಂಟೆ ಮೇಲೆ ನೀವು ರಸಲ್ ಮಾರುಕಟ್ಟೆಗೆ ಟೀ ಕುಡಿಯಲಿಕ್ಕೆ ಹೋಗುತ್ತೀರಿ, ಇಲ್ಲಿಯೂ ನೀವು ಅದೇ ರೀತಿಯಲ್ಲಿ ಮಾಡುತ್ತಿದ್ದೀರಿ, ರಾತ್ರಿ 12 ಗಂಟೆಗೆಲ್ಲಾ ಆಫೀಸ್ ಮುಚ್ಚಿಕೊಂಡು ಹೋಗಿ" ಎಂದು ನಾನು ಅವರಿಗೆ ಹೇಳಿದರೂ ಸಹ ಅವರು ಒಬ್ಬ ಕಾರ್ಯಾಧ್ಯಕ್ಷರಾಗಿ ರಾತ್ರಿ 2-3 ಗಂಟೆಯವರೆಗೆ ಕೆಲಸ ಮಾಡುತ್ತಿದ್ದರು. ಪಕ್ಷದ ಕೆಲಸವಾದ್ದರಿಂದ, ಅವರು ಆ ರೀತಿಯಲ್ಲಿ ಕೆಲಸ ಮಾಡುತ್ತಿದ್ದರು. ಅದಕ್ಕೆ ನಾನು ಅವರ ಬಗ್ಗೆ ಪ್ರಮಾಣಿಕತೆಯಿಂದ ಕೆಲಸ ಮಾಡುತ್ತಿದ್ದರು ಎಂದು ಹೇಳಿರುವುದಾಗಿದೆ. ಪ್ರಾಮಾಣಿಕತೆ ಇಲ್ಲವೆಂದರೆ ಬುದ್ಧಿ ಮತ್ತು ಸಾಮರ್ಥ್ಯ ಕೆಲಸಕ್ಕೆ ಬರುವುದಿಲ್ಲ. ಪ್ರಾಮಾಣಿಕತೆಯಿಂದ ಕೆಲಸ ಮಾಡಿದ ವ್ಯಕ್ತಿಯನ್ನು ನಾವು ಪಕ್ಷದಲ್ಲಿ ಕಳೆದುಕೊಳ್ಳುತ್ತಿದ್ದೇವೆ.

**ಶ್ರೀ ದಿನೇಶ್ ಗೂಳಿಗೌಡ:-** ಅಂದರೆ ಸದನವನ್ನು ಸಹ ಶ್ರೀಮಾನ್ ಯು.ಟಿ. ಖಾದರ್ ರವರ ರೀತಿಯಲ್ಲಿಯೇ ರಾತ್ರಿ 2 ಗಂಟೆಯವರೆಗೆ ನಡೆಸುತ್ತಾರೆಂದು ಮುನ್ಸೂಚನೆ ಕೊಡುವುದರ ಮೂಲಕ ಹೇಳುತ್ತಿದ್ದಾರೆಯೇ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಅದೊಂದು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಹೀಗಾಗಿ, ಅದರ ಜೊತೆಗೆ... ಶ್ರೀ ಯು.ಟಿ. ಖಾದರ್‌ರವರ ಟ್ರೈನಿಂಗ್ ಬೇರೆ ರೀತಿಯಲ್ಲಿದೆ. ಶ್ರೀ ಯು.ಟಿ. ಖಾದರ್‌ರವರದ್ದು ಸೇವಾದಳದ ಟ್ರೈನಿಂಗ್ ಆಗಿರುತ್ತದೆ. ಇವರದ್ದು ಮಹಿಳಾ ಕಾಂಗ್ರೆಸ್ ಹೊರತುಪಡಿಸಿ ಎನ್.ಎಸ್.ಐ., ಯೂತ್ ಕಾಂಗ್ರೆಸ್ ಸೇರಿದಂತೆ ಉಳಿದೆಲ್ಲಾ ಕಾಂಗ್ರೆಸ್ ಘಟಕಗಳಲ್ಲಿ ಟ್ರೈನಿಂಗ್ ಅನ್ನು ತೆಗೆದುಕೊಂಡಿದ್ದಾರೆ. ಅದರ

ಜೊತೆಗೆ ಇನ್ನೊಂದು ವಿಚಾರವನ್ನು ಹೇಳುತ್ತೇನೆ. ಅವರು ಶೇಷಾದ್ರಿಪುರಂ ಕಾಲೇಜಿನಲ್ಲಿ ವಿದ್ಯಾರ್ಥಿ ನಾಯಕರಾಗಿದ್ದಾಗ ನಮ್ಮ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರು ರೇಣುಕಾಚಾರ್ಯ ಕಾಲೇಜಿನಲ್ಲಿ ವಿದ್ಯಾರ್ಥಿ ನಾಯಕರಾಗಿ ಕೆಲಸ ಮಾಡುತ್ತಿದ್ದರು. ಹೌದು ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಯವರು ತಲೆಯಾಡಿಸುತ್ತಿದ್ದಾರೆ. ಎಲ್ಲಾ ವಿದ್ಯಾರ್ಥಿ ಸಂಘಟನೆಗಳಿಂದ ಬಂದವರು ನಮ್ಮಲ್ಲಿ ಬಹಳ ಪ್ರಮುಖವಾದ ಜಾಗದಲ್ಲಿ ಇರುವುದನ್ನು ನೋಡಿದರೆ ನನಗೂ ಸಮಾಧಾನವಾಗುತ್ತದೆ. ಏಕೆಂದರೆ, ನಾನು ಪಕ್ಷ ಎಂದು ಹೇಳಿಕೊಂಡು ಬಂದಿರುವವನು ಆಗಿರುತ್ತೇನೆ. ಜೊತೆಗೆ ಇವರಿಬ್ಬರು ನನ್ನ ಜೊತೆಯಲ್ಲಿ 1989 ರಲ್ಲಿ ಕೊರಿಯಾಗೆ ಬಂದಿದ್ದರು. ಕೊರಿಯಾಗೆ ಬಂದಿದ್ದಂತಹ ಸಂದರ್ಭದಲ್ಲಿ ನಾವುಗಳು 500-600 ಜನರು ಇದ್ದೆವು. ಅದೇ ಕೊನೆ. ಆಮೇಲೆ ಅಂತರರಾಷ್ಟ್ರೀಯ ಮಟ್ಟದಲ್ಲಿ youth and students programme ಆಗುವುದೇ ನಿಂತು ಹೋಯಿತು. ಅಮೇರಿಕಾದಲ್ಲಿ A.C.Y.P.L. (American Council of Young Political Leaders) ಎಂದು ಒಂದು ಎನ್.ಜಿ.ಓ. ಇದೆ. ಆಗ ಅಮೇರಿಕಾದ ರಾಷ್ಟ್ರೀಯ ಅಧ್ಯಕ್ಷರ ಚುನಾವಣೆಯಾಗುವಾಗ ಇಡೀ ಪ್ರಪಂಚದಲ್ಲಿ ಯಾರು ಯಾರು ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನಿಟ್ಟು ಕೊಂಡಿರುತ್ತಾರೆ, ಅವರೆಲ್ಲರೂ ಈ ಚುನಾವಣೆಯ ಪ್ರಕ್ರಿಯೆಯನ್ನು ನೋಡಿ ಎಂದು ಕರೆಸುತ್ತಾರೆ. ನಾನು 1989 ರಲ್ಲಿ ಅಲ್ಲಿಗೆ ಹೋಗಿದ್ದೆ. ಇವರು 2000ನೇ ಇಸವಿಯಲ್ಲಿ ಹೋಗಿದ್ದಾರೆಂದು ಕಾಣುತ್ತದೆ. ಆ ಒಂದು ಅನುಭವಗಳೆಲ್ಲವೂ ಇರುತ್ತದೆ ನೋಡಿ. ಆ ಒಂದು ಅನುಭವಗಳೆಲ್ಲವನ್ನೂ ಸಹ ಈ ಸದನದಲ್ಲಿ ತಂದು, ಪ್ರಜಾಪ್ರಭುತ್ವವನ್ನು ಯಾವ ರೀತಿಯಲ್ಲಿ ಗಟ್ಟಿಗೊಳಿಸಬಹುದು ಎನ್ನುವುದನ್ನು ತಾವು ತೋರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಜೊತೆಗೆ, ಕೆಲವು ವಿಷಯಗಳು ಪ್ರಸ್ತಾಪ ಆಯಿತು. ವಿರೋಧ ಪಕ್ಷದ ನಾಯಕರ ಹತ್ತಿರ ಸಭಾಪತಿಯವರ ವಿಚಾರವಾಗಿ ಕೇಳಿಕೊಂಡೆ. ನಾಮನಿರ್ದೇಶನ ಆಗಿ ಹೋಗಿತ್ತು. ನೋಡಿ, ಈ ರಾಜ್ಯದಲ್ಲಿ ಒಂದು ಪರಂಪರೆ ಇದೆ. ಇದು ಚಿಂತಕರ ಛಾವಡಿ. ನಾನು ಇಲ್ಲಿ ನೆನಪು ಮಾಡಿಕೊಳ್ಳುವುದು ಶ್ರೀಮಾನ್ ಹೆಚ್. ನರಸಿಂಹಯ್ಯ ಮತ್ತು ಎಂ.ಪಿ.ಎಲ್. ಶಾಸ್ತ್ರಿಗಳನ್ನು ಬಹಳಷ್ಟು ನೆನಪು ಮಾಡಿಕೊಳ್ಳುತ್ತೇನೆ. ಇವರಿಬ್ಬರು ಸಹ ನನ್ನ ಗುರುಗಳೇ ಆಗಿದ್ದರು. ಆಗ ಇದ್ದಂತಹ ಇವರೆಲ್ಲರೂ ಮಹಾನ್ ವ್ಯಕ್ತಿಗಳು. ಇವರುಗಳನ್ನು ತಮ್ಮ ದೊಡ್ಡತನವನ್ನು ತೋರಿಸಿ ಅವಿರೋಧವಾಗಿ ಮಾಡಿ ಎಂದು ಹೇಳಿದೆ. ಆಗ ಪಕ್ಷದ ವಿಚಾರದಲ್ಲಿ ಕೇಳಬೇಕಾಗುತ್ತದೆ ಎಂದು ಹೇಳಿದರು, ಬಹಳ ಸಂತೋಷ. ಶ್ರೀಮಾನ್ ಬಸವರಾಜ ಎಸ್. ಹೊರಟ್ಟಿಯವರ ಮೇಲೆ ನನಗೆ ಅಪಾರವಾದ ಗೌರವ. ಈ ವಿಚಾರದಲ್ಲಿ ನಾನು ಶ್ರೀಮಾನ್ ಡಿ.ಕೆ. ಶಿವಕುಮಾರ್‌ರವರನ್ನು ಕೇಳಬಹುದು ಮತ್ತು ಶ್ರೀಮಾನ್ ಸಿದ್ದರಾಮಯ್ಯನವರನ್ನು ಕೇಳಬಹುದು. ಸ್ವಾಮಿ, ನಮ್ಮಲ್ಲಿ ಲಿಂಗಾಯಿತರಲ್ಲಿ ದೊಡ್ಡ ನಾಯಕರು ಯಾರು ಇರುವುದಿಲ್ಲ. ಅವರನ್ನು ಕರೆಸಿ ಮುಖ್ಯಮಂತ್ರಿಯನ್ನಾಗಿ ಮಾಡಿ ಎಂದು ಹೇಳಿದವನು ನಾನು. ಈ ಸದನದಲ್ಲಿಯೂ ನಾನು ಹೇಳಿದ್ದೇನೆ. ಆ ರೀತಿಯಲ್ಲಿ ನಾನು

ಅವರ ಬಗ್ಗೆ ಗೌರವವನ್ನು ಇಟ್ಟುಕೊಂಡಿದ್ದೆ. ಅವರಿಗೆ ನೋವು ಆಗುವಂತಹ ಕೆಲಸವನ್ನು ನಾವುಗಳು ಯಾರು ಸಹ ಮಾಡಿರುವುದಿಲ್ಲ. ನನ್ನ ಜೀವನದಲ್ಲಿ ಮೊಟ್ಟ- ಮೊದಲಿಗೆ, ಶ್ರೀಮಾನ್ ಡಿ.ಕೆ. ಶಿವಕುಮಾರ್ ರವರು ಅಷ್ಟೊಂದು ಡೀಸೆಂಟ್ ಆಗಿ, ಸಭ್ಯವಾಗಿ ಯಾರ ಹತ್ತಿರವಾದರೂ ಮಾತನಾಡಿದ್ದಾರೆಂದರೆ, ಅದು ಶ್ರೀಮಾನ್ ಬಸವರಾಜ ಎಸ್. ಹೊರಟ್ಟಿಯವರ ಹತ್ತಿರವೇ ಮಾತನಾಡಿರುವುದನ್ನು ನೋಡಿರುವುದಾಗಿದೆ. **(ಗೊಂದಲ)** ಏಕೆಂದರೆ, ಅವರು ಸ್ವಲ್ಪಮಟ್ಟಿಗೆ ಮಂಡ್ಯ ಭಾಗದವರಲ್ಲವೇ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮುಖ್ಯಮಂತ್ರಿಗಳ ಬಗ್ಗೆ ಬಹಳ ಸಭ್ಯವಾಗಿ ನಿಮ್ಮ ಹತ್ತಿರ ಮಾತನಾಡಿದ್ದು ಎಂದರೆ, ಅವರು ಸಭ್ಯವಾಗಿ ಯಾರ ಹತ್ತಿರವೂ ಮಾತನಾಡುವುದಿಲ್ಲವೆಂದು ಅವರ ವಿಚಾರವಾಗಿ ಒಂದು hint ಕೊಟ್ಟಾಂತಾಗುತ್ತದೆ. ಆ ವಿಚಾರ ಬೇಡ.

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):-** ಮಾನ್ಯ ಮುಖ್ಯಮಂತ್ರಿಗಳು ಜನರಲ್ ಆಗಿ ಬಹಳ ರಫ್ ಆಗಿ ಮಾತನಾಡುತ್ತಾರೆಯೇ ಹೊರತು ತಪ್ಪಾಗಿ ಮಾತನಾಡುವುದಿಲ್ಲ ಎಂದು ಹೇಳುತ್ತಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ವಿರೋಧ ಪಕ್ಷದ ನಾಯಕರಿಗೆ ಯಾವಾಗಲೂ ಸಹ ಮೊಸರಿನಲ್ಲಿ ಕಲ್ಲು ಹುಡುಕುವ ಅಭ್ಯಾಸ. ತೊಂದರೆ ಇಲ್ಲ. ಅದನ್ನು ನಾನು ಅನುಭವಿಸಿದ್ದೇನೆ. ಅವರು ಆ ಒಂದು ಮಣ್ಣಿನ ಗುಣಕ್ಕೆ ಸರಿಯಾಗಿದ್ದಾರೆ. ಏಕೆಂದರೆ, ಅವರಿಗೆ ಬೇಕಾಗಿರುವುದು ಅಂತಹವರೇ ಆಗಿರುತ್ತಾರೆ. ಮಾನ್ಯ ಸಭಾಪತಿಯವರಾದ ಶ್ರೀಮಾನ್ ಸಲೀಂ ಅಹಮದ್ರವರ ವಿಚಾರವಾಗಿ ಹೇಳಲೆ? ಅವರು ಮುಸಲ್ಮಾನರಲ್ಲಿ ಬ್ರಾಹ್ಮಣರು ಇದ್ದ ಹಾಗೆ. ಅವರು ಬಹಳ ಮಡಿವಂತರು. ಆದರೆ, ಇವರಿಗೆ ಬೇಕಾಗಿರುವುದು ಶ್ರೀ ಡಿ.ಕೆ. ಶಿವಕುಮಾರ್ ಅಂತಹವರು. ಏಕೆಂದರೆ, ಶ್ರೀ ಡಿ.ಕೆ. ಶಿವಕುಮಾರ್ ರವರಿಗೆ ಬಂಡೆ ಎಂದು, ಬುಲ್ ಎಂದು ಈ ಎಲ್ಲಾ ರೀತಿಯಲ್ಲಿಯೂ ಹೇಳುತ್ತಾರೆ. ಅವರಿಗೆ ಬೇಕಾಗಿರುವುದು ಅದೇ ಆಗಿದೆ. ಏಕೆಂದರೆ, ನಯವಾಗಿ ಹೇಳಿದರೆ ಯಾರಿಗೂ ಗೊತ್ತಾಗುವುದಿಲ್ಲ. ನಾನು ಸಹ ಅವರ ಸಂಬಂಧ ಇರುವುದರಿಂದ, ನಾನು ಸಹ ಈ ಸದನದ ಸದಸ್ಯನಾಗಿರುವುದರಿಂದ ಮಾನ್ಯ ಸಭಾಪತಿಯವರನ್ನು ಎಲ್ಲಿಗೂ ಕರೆಯಬಾರದು ಎಂದು ಹೇಳಿ, ನಾನೇ ಅವರ ಮನೆಗೆ ಹೋಗಿ, ನಮ್ಮ ಮುಂದೆ ಎರಡು ಅವಕಾಶಗಳಿವೆ ಎಂದು ಹೇಳಿದೆ. ನೋಡಿ, ನೀವು ಹಿರಿಯರಿದ್ದೀರಿ, ನಮಗೆ ಅವಿಶ್ವಾಸ ಮಂಡನೆ ಮಾಡಲು ಅವಕಾಶ ಬಹಳ ಕ್ಲಿಯರ್ ಆಗಿದೆ. ಮೊದಲ ಬಾರಿ ಅವಿಶ್ವಾಸ ಮಂಡನೆ ಮಾಡಲಿಕ್ಕೆ ಹೋದಾಗ, ಮಾನ್ಯ ಮುಖ್ಯಮಂತ್ರಿಗಳು "ಬೇಡ, ಅವರು ರಾಜಿನಾಮೆಯನ್ನು ಕೊಡುತ್ತೇನೆಂದು ಹೇಳಿದ್ದಾರೆ. ಆದ್ದರಿಂದ, ಈ ಪ್ರಸ್ತಾವನೆಯನ್ನು ಬಿಟ್ಟು ಬಿಡಿ" ಎಂದು ಹೇಳಿದರು. ಆಯಿತು ಎಂದು ಹೇಳಿ, ಆ ಪ್ರಸ್ತಾವನೆಯನ್ನು ಬಿಟ್ಟೆವು. ನಾನೇ ಅವರ ಹತ್ತಿರ ಹೋಗಿ ಕೇಳಿದೆ. "ನೋಡಿ, ಇಲ್ಲಿ ಎರಡೇ ಅವಕಾಶಗಳಿವೆ, ಒಂದು, ನಾವು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಬೇಕು. ಇಲ್ಲವೆಂದರೆ, ತಾವು ರಾಜಿನಾಮೆಯನ್ನು ಕೊಟ್ಟರೆ ಈ ಒಂದು ಪ್ರಸಂಗ

ಬರುವುದಿಲ್ಲವೆಂದು ಹೇಳಿದೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಒಂದು ವಿಚಾರವನ್ನು ನೆನಪು ಮಾಡುತ್ತೇನೆ. ಕಳೆದ ಅಧಿವೇಶನದ ಅವಧಿಯಲ್ಲಿ ಶ್ರೀಮಾನ್ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ನಿರಂತರವಾಗಿ ವಿಧಾನ ಪರಿಷತ್ತಿನ ಸದಸ್ಯರಾಗಿ 45 ವರ್ಷಗಳು ಕಳೆದಿದ್ದಾರೆಂದು ಹೇಳಿ ಇದೇ ಸದನದಲ್ಲಿ ಬೆಳಗ್ಗೆಯಿಂದ ಸಾಯಂಕಾಲದವರೆಗೂ ಸಹ ಅವರ ಬಗ್ಗೆ ಮಾತನಾಡಿ, ಹೊಗಳಿದ್ದೇವೆ. ಮೊದಲಿಗೆ ಶ್ರೀಮಾನ್ ಮಂಜುನಾಥ್ ಭಂಡಾರಿಯವರು ಮಾತನಾಡಿದರು, ತದನಂತರ, ಸ್ವಲ್ಪ ಲೈನ್ ಹೋಗಲಿ ಎಂದು ಹೇಳಿ ನಾನು ಎರಡನೆಯ ಭಾಷಣ ಮಾಡಿ ಅವರ ಬಗ್ಗೆ ಮಾತನಾಡಿದ್ದೇನೆ. ಒಂದು ದಿವಸ ಪೂರ್ತಿ ಅವರನ್ನು ದೊಡ್ಡ ಮಟ್ಟದಲ್ಲಿ ಹೊಗಳಿದ್ದೇವೆ. ಆದರೆ, ಮಾನ್ಯ ಸದಸ್ಯರಾದ ಶ್ರೀಮಾನ್ ಎಸ್. ಎಲ್. ಭೋಜೇಗೌಡರು ಆ ಸಂದರ್ಭದಲ್ಲಿ ಏನು ಹೇಳಿದರು ಎಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದಾಗ ನಾವು ಹೊಗಳುತ್ತೇವೆಂದು ಅಂದುಕೊಂಡಿದ್ದಾರೆಯೇ? ನಾವು ಒಂದು ರಾಜಕೀಯ ಪಕ್ಷದವರಾಗಿರುತ್ತೇವೆ. ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದಾಗ ಹೊಗಳುವಂತಹ ಪ್ರಶ್ನೆಯೇ ಇರುವುದಿಲ್ಲ. ಅವರು ನಮಗೆ ಶತ್ರುಗಳಲ್ಲ, ನಮ್ಮ ವಿರೋಧಿಗಳು. ಏಕೆಂದರೆ, ಇಂತಹ ವಿಚಾರಗಳನ್ನು ನಾವು ಆಗಾಗ ಹೇಳುತ್ತಿರುತ್ತೇವೆ. ಪಾಕಿಸ್ತಾನದ ವಿಚಾರಗಳು ಬಂದಾಗಲೂ ಸಹ ನಾನು ಹೇಳಿದ್ದೇನೆ. ಅವರು ನಮ್ಮ ಶತ್ರುಗಳಲ್ಲ, ವಿರೋಧಿಗಳು. ರಾಜಕೀಯ ವಿರೋಧಿಗಳು, ನಾವು ಏನೇನು ಹೇಳಬೇಕಾಗಿದೆಯೋ ಅದೆಲ್ಲವನ್ನು ಹೇಳುತ್ತಿದ್ದೆವು. ಕೆಲವು ಸಂದರ್ಭದಲ್ಲಿ ಸದನದ ಗೌರವವೂ ಸಹ ಕಡಿಮೆಯಾಗಬಹುದು. ಅದಕ್ಕೋಸ್ಕರ ನಾನೇ ಅವರ ಹತ್ತಿರ ವಿನಂತಿ ಮಾಡಿಕೊಂಡೆ. ನೀವು ಎಲ್ಲಿದ್ದೀರಿ? ಹಿರಿಯರಿದ್ದೀರಿ, ನಿಮ್ಮಷ್ಟು ಹಿರಿತನ ಹೊಂದಿದವರು ಈ ಸದನದಲ್ಲಿ, ರಾಜಕಾರಣದಲ್ಲಿ ಯಾರು ಸಹ ಇರುವುದಿಲ್ಲ. ನೀವು ಆದಷ್ಟು ಮಟ್ಟಿಗೆ ದೊಡ್ಡ ಮನಸ್ಸು ಮಾಡಿ ಬಿಟ್ಟುಕೊಡಿ ಎಂದು ನಾನು ಅವರಿಗೆ ಹೇಳಿದೆ. ಹೀಗಾಗಿ, ಅವರು ಒಪ್ಪಿಕೊಂಡರು. ಮುಖ್ಯಮಂತ್ರಿಗಳು ಸಹ ಅವರ ಮನೆಗೆ ಹೋಗಿ ಮಾತನಾಡಿದಾಗ, ನಾನು ರಾಜೀನಾಮೆ ಕೊಡುತ್ತೇನೆಂದು ಮುಖ್ಯಮಂತ್ರಿಗಳಿಗೆ ಹೇಳಿದ್ದರಿಂದ, ಅಲ್ಲಿಗೆ ನಾವು ಈ ವಿಷಯವನ್ನು ಬಿಟ್ಟೆವು. ಮತ್ತೆ, 6ನೇ ತಾರೀಖಿನಂದು ನನಗೆ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಫೋನ್ ಮಾಡಿದರು. "ನೋಡಿ, ಸ್ನೇಹಿತರು ಮತ್ತು ಸಂಬಂಧಿಕರಿಂದ ಬಹಳ ಒತ್ತಡ ಇದೆ, ನಾನು ರಾಜೀನಾಮೆ ಕೊಡುವುದಿಲ್ಲ" ಎಂದು ಹೇಳಿದರು. ನಾನು ಈ ಬಗ್ಗೆ ಮಾತನಾಡಿ ಬೆಳಗ್ಗೆ ಹೇಳುತ್ತೇನೆಂದು ಹೇಳಿದೆ. ಜೊತೆಗೆ ನನಗೆ 7ನೇ ತಾರೀಖು ಬೇರೆ ಒಂದು ಕಾರ್ಯಕ್ರಮ ಇತ್ತು. ಅಂದರೆ, All India O.B.C. ಸಂಸ್ಥೆಯವರೆಲ್ಲರೂ ಪಕ್ಷಾತೀತವಾಗಿ ಬಂದಿದ್ದರು. ಅದನ್ನು ಮುಗಿಸಿಕೊಂಡು ಬಂದಾಗ ಮುಖ್ಯಮಂತ್ರಿಗಳು ಮತ್ತು ನಮ್ಮ ಪಕ್ಷದ ಎಲ್ಲಾ ಸದಸ್ಯಸರುಗಳು, ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಯಾದಂತಹ ಶ್ರೀಮತಿ ಎ.ವಿ. ಗಾಯಿತ್ರಿ ಶಾಂತೇಗೌಡರವರ ಪ್ರಮಾಣ ವಚನ ಕಾರ್ಯಕ್ರಮಕ್ಕೆ ಬಂದಿದ್ದರು. ಹೀಗಾಗಿ, ನಾನು ಸಹ ಅಲ್ಲಿಗೆ ಬೇಗ ಬಂದೆ. ಮುಖ್ಯಮಂತ್ರಿಗಳು ಇನ್ನು ರಾಜಿನಾಮೆ ಎಂದು ಹೇಳಿರಲಿಲ್ಲ. ಇನ್ನು ಸಹ ಮಾತನಾಡುತ್ತಿದ್ದರು. ಆ

ಸಂದರ್ಭದಲ್ಲಿ ನಾನು ಹೇಳಿದ್ದು ಏನೆಂದರೆ, ನೋಡಿ, ಹೈಕಮಾಂಡ್‌ನೊಂದಿಗೆ ನಾನು ಮಾತನಾಡಿದ್ದೇನೆ. ಅವರು ರಾಜೀನಾಮೆ ಕೊಡಲಿಕ್ಕೆ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ಆದರೆ, ನಿಮ್ಮಲ್ಲಿ ನಂಬರ್ಸ್ ಇದೆ, ನೀವು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿ ಎಂದು ಹೇಳುತ್ತಿದ್ದಾರೆ. ಬಹಳ ಬೇಗ ಎಲ್ಲರನ್ನೂ ಕರೆಸಿ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದೆವು. ಆಗ ಮುಖ್ಯಮಂತ್ರಿಗಳು ಸಹ ಅಲ್ಲಿ ಬಹಳ ಸೌಜನ್ಯವಾಗಿ ಹೊರಟ್ಟಿ ಸಾಹೇಬರಿಗೆ ಹೇಳಿದರು. "ನೋಡಿ, ನಮ್ಮ ಹತ್ತಿರ ಇವು ಎರಡೇ ಅವಕಾಶಗಳು ಇರುವುದಾಗಿದೆ. ಒಂದು ರಾಜೀನಾಮೆ ಕೊಡುವುದು, ಇಲ್ಲವೇ ಅವಿಶ್ವಾಸ ನಿರ್ಣಯ ಮಂಡಿಸುವುದು." 11-00 ಗಂಟೆಗೆ ಅವಿಶ್ವಾಸ ನಿರ್ಣಯ ಮಂಡನೆಗೆ ನಾವು ಫೈಲ್ ಮಾಡಿ ಬಿಟ್ಟಿದ್ದೆವು. ನಾವು 1-00 ಗಂಟೆಗೆ ಇವರ ಹತ್ತಿರ ಹೋಗಿ ಕೇಳಿಕೊಂಡೆವು. ಅಷ್ಟೊತ್ತಿಗೆ ನಾನು ರಾಜೀನಾಮೆಯನ್ನು ಕೊಡುತ್ತೇನೆಂದು ಅವರೇ ಹೇಳಿದರು. ನಾನು ಯಾವುದರ ಮೇಲಾದರೂ ಪ್ರಮಾಣ ಮಾಡಲಿಕ್ಕೆ ಸಿದ್ಧನಿದ್ದೇನೆ. 1-00 ಗಂಟೆಗೆ ರಾಜೀನಾಮೆಯನ್ನು ಕೊಡುತ್ತೇನೆಂದು ಹೇಳಿದಾಗ ಅಲ್ಲಿ ಒಂದು ಗುಂಪು ಏನಿತ್ತು, ಮುಖ್ಯಮಂತ್ರಿಗಳು ಸಹ ಅವರ ಆಪ್ತ ಕಾರ್ಯದರ್ಶಿಯವರನ್ನು ಕರೆದು ಅವರ ಹತ್ತಿರ ಮಾತನಾಡಲಿಕ್ಕೆ ಹೇಳಿದರು. ಯಾರಿಗೂ ಸಹ ಫೋರ್ಸ್ ಮಾಡಲಿಲ್ಲ. ಶ್ರೀಮಾನ್ ಬಸವರಾಜ ಹೊರಟ್ಟಿಯವರಿಗೆ ೮೦ ವರ್ಷಗಳಾಗಿದೆ. ಹೀಗಿರುವಾಗ ನಾವು ಯಾರಾದರೂ ಅವರನ್ನು ಫೋರ್ಸ್ ಮಾಡಲಿಕ್ಕೆ ಆಗುತ್ತದೆಯೇ? ಇನ್ನು ಆಪಾದನೆಗಳು ಬಂದಾಗ, ನಾವೇನು ಮಕ್ಕಳಿದ್ದೇವೆಯೆ? ನಾನು ಹೇಳುತ್ತೇನೆ ಕೇಳಿ. ಈ ವಿಚಾರ ಟೈಮ್ಸ್ ಆಫ್ ಇಂಡಿಯಾದಲ್ಲಿ ಏನು ಹೇಳಲಾಗಿದೆ ಎಂದರೆ, ಅವರೇ ಏನು ಹೇಳಿದ್ದಾರೆ ಎಂದರೆ, "... *was not forced to quit. C.M. did not pressure me.*" says Horatti. ಅದರ ಜೊತೆಗೆ, "ಹುದ್ದೆಯಿಂದ ಹೊರ ನಡೆದ ಹೊರಟ್ಟಿ, ಗೌರವವನ್ನು ಉಳಿಸಿಕೊಳ್ಳುವ ನಡೆ " ಎಂದು ಹೇಳಿ ಪ್ರಜಾವಾಣಿ ದಿನ ಪತ್ರಿಕೆಯ ಸಂಪಾದಕೀಯ ವಿಭಾಗದಲ್ಲಿ ಬಂದಿದೆ. "ರಾಜೀನಾಮೆಗೆ ಬಸವರಾಜ ಹೊರಟ್ಟಿಯವರ ಒಪ್ಪಿಗೆ" ಎಂದೆಲ್ಲಾ ಬಂದಿದ್ದು, ಆಮೇಲೆ ಅವರು ಸೇರಿದಂತೆ ಅವರ ಪಕ್ಷದವರೆಲ್ಲರೂ "ಬೆದರಿಕೆ ಹಾಕಿ ರಾಜೀನಾಮೆ." ಎಂದು ಹೇಳಿದ್ದಾರೆ. ನಮ್ಮ ಹತ್ತಿರ ಏನಾದರೂ ಇ.ಡಿ., ಇದೆಯೇ , ಸಿ.ಬಿ.ಐ. ಇದೆಯೇ, ಐ.ಟಿ. ಇದೆಯೇ, ಅವರ ಮೂಲಕ ಬೆದರಿಸಿ ರಾಜಿನಾಮೆಯನ್ನು ತೆಗೆದುಕೊಳ್ಳಲಿಕ್ಕೆ? ಪ್ರಜಾಪ್ರಭುತ್ವದಲ್ಲಿ ನಮ್ಮ ಸಂಖ್ಯಾಬಲ ಇದೆ, ಅದರ ಆಧಾರದ ಮೇಲೆ ಚುನಾವಣೆಯಾಗಲಿ ಎಂದು ಹೇಳಿದೆವು. ಸದನದ ಚಿಂತಕರ ಛಾವಡಿಯ ಒಂದು ಘನತೆ-ಗೌರವವನ್ನು ಕಾಪಾಡಬೇಕೆನ್ನುವ ಒಂದೇ ಒಂದು ವಿಚಾರದಲ್ಲಿ ನಾವು ಇಷ್ಟೊಂದು ನಿಧಾನವಾಗಿ ಹೋಗಿರುವಂತಹದ್ದಾಗಿರುತ್ತದೆ. ಅವರು ಮೊದಲೇ ರಾಜಿನಾಮೆಯನ್ನು ಕೊಟ್ಟಿದ್ದರೆ ಪ್ರಶ್ನೆಯೇ ಬರುತ್ತಿರಲಿಲ್ಲ. ಅವರು ಹೇಳಿರುವುದಕ್ಕೋಸ್ಕರ ನಾವೆಲ್ಲರೂ ಹೋಗಿ ಅವರ ಮೇಲಿರುವ ಅಪಾರ ಗೌರವದಿಂದ ಹೇಳಿದ್ದೇವೆಯೇ ವಿನಃ ಅವರ ಸ್ಥಾನಕ್ಕಾಗಲಿ, ಅವರ ವಯಸ್ಸಿಗಾಗಲಿ, ಯಾವುದೇ ರೀತಿಯ ಅಗೌರವವನ್ನು,

ಯಾರೂ ಸಹ ತೋರಿಸಿರುವುದಿಲ್ಲ. ಹಾಗೇನಾದರೂ ಇದ್ದರೆ, ನಾವು ನೇರವಾಗಿ ಮಾತನಾಡುವ ಜನ ಇದ್ದೇವೆ. ಬೇರೆಯವರು ಮಾತನಾಡುತ್ತಾರೋ ಇಲ್ಲವೋ ಗೊತ್ತಿಲ್ಲ. ನಾನಂತೂ ನೇರವಾಗಿ ಮಾತನಾಡುವವನಿದ್ದೇನೆ. ನೇರವಾಗಿ ನಾವು ಹೇಳುತ್ತಿದ್ದೆವು. ಆದ್ದರಿಂದ, ಇದಕ್ಕೆ ದಯವಿಟ್ಟು ತೆರೆ ಎಳೆಯಬೇಕು.

(ಮುಂದು)

**(687) 14.08.2026 12.30 ಎಸ್‌ವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ. ಕೆ. ಹರಿಪ್ರಸಾದ್ (ಮುಂದು):**

ನಿಮಗೆ ಅದೊಂದು test ಬಂದುಬಿಟ್ಟಿದೆ. ಗೂಂಡಾಗಿರಿ, ದಾದಾಗಿರಿ.... ಏನಿವೆಲ್ಲಾ? ಈ ಒಂದು ಸ್ಥಾನದಲ್ಲಿ ಕುಳಿತಾಗ ನಾವು ಮಾಡುವುದಕ್ಕಾಗುತ್ತದೆಯೇ?

ಮಾನ್ಯ ಸಿ.ಟಿ.ರವಿಯವರು ನೂತನ ಸಭಾಪತಿಯವರಿಗೆ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ವಿರೋಧ ಪಕ್ಷದವರಿಗೆ ಜಾಸ್ತಿ ಅವಕಾಶಗಳನ್ನು ಕೊಡಿ ಎಂದು ಹೇಳಿದ್ದಾರೆ. ಮಾನ್ಯ ಸಭಾಪತಿಯವರೆ, ನಾನೂ ಸಹ ಸಂಪೂರ್ಣವಾಗಿ ಸಹಮತವನ್ನು ವ್ಯಕ್ತಪಡಿಸುತ್ತೇನೆ. ವಿರೋಧ ಪಕ್ಷದವರು ನಮ್ಮ ತಪ್ಪು-ಒಪ್ಪುಗಳನ್ನು ಬಹಳ ಸ್ಪಷ್ಟವಾಗಿ ಹೇಳಲಿಕ್ಕೆ ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಆಗಿನಿಂದ ನಾನು ಆ ಕಡೆಯೇ ನೋಡುತ್ತಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ನೀವು ಈಗಲೇ ನಮ್ಮ ಕಡೆ ನೋಡುವುದನ್ನು ಬಿಟ್ಟಿರುವಿರಿ. ಇನ್ನೂ ಎರಡು ಗಂಟೆಗಳಾಗಿಲ್ಲ. ಆಗಲೇ ನೀವು ನಮ್ಮನ್ನು ಮರೆತುಬಿಟ್ಟಿರಿ. ಅಧಿಕಾರ ಎನ್ನುವುದು ಏನೇನು ಮಾಡುತ್ತದೆ ನೋಡಿ. ನಮ್ಮವರನ್ನೇ ಮರೆತುಬಿಡುತ್ತೀರಿ. ಮಾನ್ಯ ಸಿ.ಟಿ.ರವಿಯವರು ಬಹಳ ಸಾಂದರ್ಭಿಕವಾಗಿ ಮಾತನಾಡುತ್ತಾರೆ. ವಿರೋಧ ಪಕ್ಷದವರಿಗೆ ಸಂಪೂರ್ಣವಾಗಿ ಅವಕಾಶ ಕೊಡಿ. ಲೋಕಸಭೆಯಲ್ಲಿ ಆಗುತ್ತಿರುವಂತೆ ವಿರೋಧ ಪಕ್ಷದವರು ಮಾತನಾಡುವಾಗ ಮೈಕ್ ಆಫ್ ಮಾತ್ರ ಮಾಡಿಸಬೇಡಿ. ಯಾವತ್ತೂ ಮಾಡಬೇಡಿ. ಮೈಕ್ ಆಫ್ ಮಾಡುವ ಕೆಲಸ ಮಾಡಬೇಡಿ. ಚರ್ಚೆ ಬಂದಾಗ...

**(ಗೊಂದಲ)**

**ಶ್ರೀ ಚಿದಾನಂದ ಎಂ. ಗೌಡ:-** ನಿಮ್ಮ ನಾಯಕರಿಗೆ ಮೈಕ್ ಆನ್ ಇದೆಯೋ ಆಫ್ ಆಗಿದೆಯೋ ಎನ್ನುವುದು ಕೂಡ ಗೊತ್ತಾಗಲಿಲ್ಲ.

**ಶ್ರೀ ಬಿ. ಕೆ. ಹರಿಪ್ರಸಾದ್:-** ನಾನು ಪಾರ್ಲಿಮೆಂಟ್‌ನಲ್ಲಿ 19 ವರ್ಷ ಇದ್ದವನು.

**ಶ್ರೀ ಕಿಶೋರ್ ಕುಮಾರ್ ಪುತ್ತೂರ್:-** ನೀವು ತರಬೇತಿಯನ್ನು ಕೊಡಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್:-** ನಾವು ಅಂಥ ತರಬೇತಿಯನ್ನು ಕೊಡುವುದಿಲ್ಲ. ನಾನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮತ್ತು ಫುಟ್‌ಪಾತ್‌ನಲ್ಲಿ ತರಬೇತಿಯನ್ನು ಪಡೆದವನು, ನಾಗ್ಪುರ ಯೂನಿವರ್ಸಿಟಿಯಲ್ಲಲ್ಲ.

**ಶ್ರೀ ಎನ್. ರವಿಕುಮಾರ್:-** ಮೈಕ್ ಆನ್ ಇದ್ದಾಗಲೂ, ಮೈಕ್ ಆಫ್ ಇದೆ ಎಂದು ಹೇಳಿದ ರಾಹುಲ್ ಗಾಂಧಿಯವರ ಬಗ್ಗೆ ಹೇಳಿ.

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):-** ನಾವು teleprompter ತರಬೇತಿಯನ್ನು ಪಡೆದಿಲ್ಲ.

**ಶ್ರೀ ಬಿ. ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ಈಗ ಜೆನ್‌ಜೀ, ನಮ್ಮದೆಲ್ಲಾ ಆಗಿ ಹೋಯಿತು. ಮುಂದಿನ ಜನರೇಷನ್ ಬರುತ್ತಿದೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಹರಿಪ್ರಸಾದ್ ಅವರೇ, ತಾವು ನಾಗ್ಪುರ ಎಂದು ಹೇಳಿದಿರಿ. ನಾಗ್ಪುರದಿಂದ ತರಬೇತಿಯಾದ ಇಬ್ಬರು ಪ್ರಧಾನಮಂತ್ರಿಗಳು ಜಗತ್ತಿನಲ್ಲಿಯೇ ಭಾರತಕ್ಕೆ ಕೀರ್ತಿಯನ್ನು ತಂದಿದ್ದಾರೆ. ಇಡೀ ಜಗತ್ತೇ ಕೊಂಡಾಡುತ್ತಿದೆ. ನಾಗ್ಪುರದಲ್ಲಿ ತರಬೇತಿ ಹೊಂದಿದ ಇಬ್ಬರು ಪ್ರಧಾನ ಮಂತ್ರಿಗಳಾದ ದಿವಂಗತ ಅಟಲ್ ಬಿಹಾರಿ ವಾಜಪೇಯಿ ಮತ್ತು ಮಾನ್ಯ ನರೇಂದ್ರ ಮೋದಿಯವರು ದೇಶಕ್ಕೆ ಕೀರ್ತಿಯನ್ನು ತಂದಿದ್ದಾರೆ.

**ಶ್ರೀ ರಿಜ್ವಾನ್ ಅರ್ಷದ್ (ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಸಚಿವರು):-** ಜಂತರ್ ಮಂತರ್‌ನಲ್ಲಿ ನೋಡಿದ್ದೇವೆ ಬಿಡಿ. ಲಕ್ಷಾಂತರ, ಕೋಟ್ಯಾಂತರ ಯುವಕರು ಪ್ರಧಾನ ಮಂತ್ರಿಯವರನ್ನು ಹೊಗಳುತ್ತಿದ್ದಾರೆ. ಯುವಕರಿಗೆ ಉದ್ಯೋಗ ಕೊಡುವುದಕ್ಕಾಗಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ನಾನು ಉತ್ತರ ಕೊಡುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಅವರು ಯಾರು? ಯಾರೋ ಹೊಸಬರು ಮಾತನಾಡುತ್ತಿದ್ದಾರೆ.

**ಸಭಾಪತಿಯವರು:-** ನೂತನ ಸಚಿವರು, ಅವರ ಪರಿಚಯವನ್ನು ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಮಾಡಿಸುತ್ತಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾಡಿಸಿಬಿಡಿ. ಅವರು ಯಾರೆಂಬುದು ಸದನಕ್ಕೆ ಗೊತ್ತಾಗಿಬಿಡಲಿ.

**ಶ್ರೀ ಬಿ. ಕೆ. ಹರಿಪ್ರಸಾದ್:-** ಮಾನ್ಯ ರವಿಕುಮಾರ್ ಅವರೇ, ನಾಗ್ಪುರ ಯೂನಿವರ್ಸಿಟಿಯಿಂದ ಎರಡು ಒಳ್ಳೆಯ ಪ್ರಧಾನ ಮಂತ್ರಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಲ್ಲ.. ಕೀರ್ತಿ ಮತ್ತು ಅಪಕೀರ್ತಿ ಎಂಬುದು ಎರಡೂ ಇರುತ್ತದೆ. Epstein files ನಲ್ಲಿ ದೇಶದ ಮಾನ, ಮರ್ಯಾದೆ ಎಲ್ಲಾ ಹರಾಜಾಗಿ ಬಿಟ್ಟಿದೆ. ಎಷ್ಟು ಕೀರ್ತಿ ಇದೆ ಎಂಬುದನ್ನು ಪ್ರಪಂಚ ನೋಡಿದೆ.

**ಶ್ರೀ ಎನ್. ರವಿಕುಮಾರ್:-** ಅವರು ನಿಮ್ಮೆಲ್ಲರಿಗೂ ಪ್ರಧಾನಮಂತ್ರಿಗಳು.

**ಶ್ರೀ ಬಿ. ಕೆ. ಹರಿಪ್ರಸಾದ್:-** ದೇಶದ ಪ್ರಧಾನಿಯನ್ನು ಡ್ಯಾನ್ಸ್ ಮಾಡಿಸುತ್ತೇನೆ ಎಂದು ಡೊನಾಲ್ಡ್ ಟ್ರಂಪ್ ಹೇಳುತ್ತಾರೆ, ಇದೇನು ಕೀರ್ತಿಯೇ?

**ಶ್ರೀ ಎನ್. ರವಿಕುಮಾರ್:-** ನೀವು ನಮ್ಮ ದೇಶದ ಪ್ರಧಾನಿಯವರನ್ನು ನಂಬುವುದಿಲ್ಲ. ಬೇರೆ ದೇಶದವರನ್ನು ನಂಬುತ್ತೀರಿ.

**ಶ್ರೀ ಬಿ. ಕೆ. ಹರಿಪ್ರಸಾದ್:-** ಇಸ್ರೇಲ್ ಪ್ರಧಾನಿಗಳಾದ ಬೆಂಜಮಿನ್ ನೆತಾನ್ಯಾಹು ಏನು ಹೇಳುತ್ತಾರೆಂಬುದನ್ನು ಕೇಳಿ. ಇಷ್ಟೆಲ್ಲಾ ಕೀರ್ತಿ ಇರುವ ಇವರು….. ನನ್ನ ಮಾತು ಎಲ್ಲೆಲ್ಲಿಗೋ ಹೊರಟು ಹೋಗುತ್ತದೆ.

**(ಗೊಂದಲ)**

**ಸಭಾಪತಿಯವರು:-** ಅವರು ಮಾತನಾಡಿ ಮುಗಿಸಲಿ. ನಂತರ ಎಲ್ಲರಿಗೂ ಅವಕಾಶ ಸಿಗುತ್ತದೆ. ಆಗ ಮಾತನಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಬಹಳ ಅದ್ಭುತವಾದ ಪ್ರಧಾನ ಮಂತ್ರಿಗಳೆಂದು ಹೇಳುತ್ತಾರೆ. 12 ವರ್ಷಗಳಾದವು.

**(ಗೊಂದಲ)**

**ಶ್ರೀ ಡಿ.ಎಸ್. ಅರುಣ್:-** ಮಾನ್ಯ ಸಭಾಪತಿಯವರೆ, ವಿಷಯಾಂತರ ಆಗುತ್ತಿದೆ. ಮಾನ್ಯ ಸಭಾಪತಿಯವರನ್ನು ಅಭಿನಂದಿಸಲು ಎಲ್ಲರಿಗೂ ಅವಕಾಶ ಕೊಟ್ಟಿದ್ದು…..

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೆ, ಅವರು ಎಲ್ಲಾ ವಿಷಯಗಳನ್ನು ತೆಗೆದುಕೊಂಡು ಮಾತನಾಡುವುದಾದರೆ ನಾವು ಸಿದ್ಧರಿದ್ದೇವೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** 12 ವರ್ಷಗಳಾಯಿತು, ಈ ದೇಶದ ಪ್ರಧಾನ ಮಂತ್ರಿಗಳು ಒಂದೇ ಒಂದು ಪತ್ರಿಕಾ ಗೋಷ್ಠಿಯನ್ನು ಮಾಡಿರುವುದಿಲ್ಲ. ಅದು ಯಾವ ಕೀರ್ತಿ, ಹೇಳಿ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಇದನ್ನೆಲ್ಲಾ ಚರ್ಚೆ ಮಾಡೋಣವೆಂದರೆ ಈಗಲೇ ಮಾಡೋಣ. ಇದು ಅಭಿನಂದನೆಯಾಗುತ್ತಿಲ್ಲ. ಚರ್ಚೆ ಮಾಡೋಣ ಎಂದರೆ ನಮಗೂ ಮಾತನಾಡಲಿಕ್ಕೆ ಬಹಳಷ್ಟು ಇದೆ. ಆಡಳಿತಾತ್ಮಕ ವಿಚಾರಗಳನ್ನು ಚರ್ಚೆ ಮಾಡೋಣ ಎಂದರೆ ಬೇಕಾದಷ್ಟಿದೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ನಾರಾಯಣಸ್ವಾಮಿಯವರೆ, ಅವರು ಯಾರ ಹೆಸರನ್ನೂ ಹೇಳಿಲ್ಲ. ಅವರು ಹೇಳಿದ್ದು ನಾಗ್ಪುರದ ಹೆಸರನ್ನು ಮಾತ್ರ.

**(ಗೊಂದಲ)**

**ಡಾ: ಯತೀಂದ್ರ ಎಸ್:-** ಮಾನ್ಯ ಹರಿಪ್ರಸಾದ್ ಅವರು ಮಾತನಾಡಬೇಕಾದರೆ ಮಧ್ಯದಲ್ಲಿ ನೀವೇ ಎದ್ದು ಪ್ರಾರಂಭ ಮಾಡಿದ್ದು. ಅವರು ವಿಷಯದ ಮೇಲೆಯೇ ಮಾತನಾಡುತ್ತಿದ್ದರು.

**ಶ್ರೀ ಬಸವರಾಜ ರಾಯರೆಡ್ಡಿ:-** ಆಯಿತು, ನಾಗ್ಪುರ ವಿಶ್ವವಿದ್ಯಾಲಯ ಎಂದರೆ ನಿಮಗೇನು ತೊಂದರೆಯಾಯಿತು?

**ಶ್ರೀ ಎನ್. ರವಿಕುಮಾರ್:-** ಒಬ್ಬ ವ್ಯಕ್ತಿಯ ಸಾಮರ್ಥ್ಯವನ್ನು ಅಳೆಯುವುದು ಎಷ್ಟು ಪತ್ರಿಕಾ ಗೋಷ್ಠಿಗಳನ್ನು ಮಾಡಿದ್ದಾರೆ ಎಂದೋ ಅಥವಾ ದೇಶಕ್ಕೆ ಎಷ್ಟು ಕೊಡುಗೆಯನ್ನು ನೀಡಿದ್ದಾರೆ ಎಂದೋ? ಎಷ್ಟು ಪತ್ರಿಕಾ ಗೋಷ್ಠಿ ಮಾಡಿದ್ದಾರೆ ಎನ್ನುವುದರ ಮೇಲೆ ಅವರ ಸಾಧನೆಯನ್ನು ನೀವು ಅಳೆಯುವಿರಾ? ಪ್ರಧಾನ ಮಂತ್ರಿಯವರ ಸಾಧನೆಯನ್ನು ಇಡೀ ಜಗತ್ತೇ ಕೊಂಡಾಡುತ್ತಿದೆ. ಪತ್ರಿಕಾ ಗೋಷ್ಠಿ ಮಾಡುವುದಲ್ಲ. ಪತ್ರಿಕಾ ಗೋಷ್ಠಿ ಮಾಡುವುದು ನಿಮಗೆ ಸಾಧನೆ. ದೇಶದ ಪ್ರಧಾನ ಮಂತ್ರಿಗಳ ಸಾಧನೆಗಳನ್ನು ಪತ್ರಿಕೆಗಳಲ್ಲಿ ಬರೆದಿದ್ದಾರೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಅದಾನಿಯವರ ಮೇಲೆ ಅಮೇರಿಕಾ ಕೋರ್ಟ್ ಕೇಸ್ ಹಾಕಿದೆ.

**(ಗೊಂದಲ)**

**ಸಭಾಪತಿಯವರು:-** ಎಲ್ಲರಿಗೂ ಅವಕಾಶವನ್ನು ಮಾಡಿಕೊಡಲಾಗುವುದು. ಅವರು ಮಾತನಾಡುವಾಗ ಏನು ಹೇಳಬೇಕೋ ಹೇಳುವುದಕ್ಕೆ ಬಿಡಿ. ನಾನು ಸಮಯವನ್ನು ನಿಗದಿ ಪಡಿಸಿದ್ದೇನೆ. ಆದರೆ ನೀವು disturb ಮಾಡುತ್ತಿರುವುದರಿಂದ ಸಮಯ ವ್ಯರ್ಥವಾಗುತ್ತಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ನಾನು divert ಮಾಡುವವನಲ್ಲ. ಅವರೇನಾದರೂ ಕೇಳಿದ್ದಕ್ಕೆ ಉತ್ತರ ಕೊಡಬೇಕಲ್ಲವೆ? ಟ್ರೈನಿಂಗ್ ಎಂದೇನೋ ಹೇಳಿದರು. ಅದಕ್ಕೆ ಉತ್ತರ ಕೊಟ್ಟಿದ್ದೇನೆ.

ಆದ್ದರಿಂದ ಈ ಚಿಂತಕರ ಚಾವಡಿಯಲ್ಲಿ ತಾವು ಸಭಾಪತಿಯವರ ಸ್ಥಾನವನ್ನು ಅಲಂಕರಿಸಿದ್ದೀರಿ. ಪ್ರಜಾಪ್ರಭುತ್ವ, ಸಂವಿಧಾನ ಮತ್ತು ಜಾತ್ಯಾತೀತ ತತ್ವವನ್ನು ಕಾಪಾಡುವಂಥ ಕೆಲಸವನ್ನು ಮುಂದುವರೆಸಿಕೊಂಡು ಸಂವಿಧಾನದ ಚೌಕಟ್ಟಿನಲ್ಲಿ ಮತ್ತು ಈ ಸದನದ ನಿಯಮಾವಳಿಗಳ ಚೌಕಟ್ಟಿನಲ್ಲಿ ಸದನವನ್ನು ನಡೆಸಿ, ಸದನಕ್ಕೆ ಮತ್ತು ಕರ್ನಾಟಕ ರಾಜ್ಯಕ್ಕೆ ಒಳ್ಳೆಯ ಕೀರ್ತಿಯನ್ನು ತನ್ನಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

**ಶ್ರೀ ಎಸ್.ಎಲ್. ಭೋಜೇಗೌಡ:-** ಸಚಿವರನ್ನು ಸದನಕ್ಕೆ ಪರಿಚಯಿಸುವುದಕ್ಕೆ ಏನಾದರೂ ಸಮಸ್ಯೆ ಇದೆಯೇ?

**ಸಭಾಪತಿಯವರು:-** ನಂತರ ಮುಖ್ಯಮಂತ್ರಿಯವರು ಮಾತನಾಡುತ್ತಾರೆ. ಈಗ ಮಾನ್ಯ ಎಸ್. ವ್ಹಿ. ಸಂಕನೂರ ಅವರು.

**ಶ್ರೀ ಎಸ್. ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೆ, ಈಗ ನೂತನ ಮಂತ್ರಿಗಳು ಬಂದಿದ್ದಾರೆ. ಮಧ್ಯೆ ಮಧ್ಯೆ ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ....

**ಶ್ರೀ ಡಿ.ಕೆ. ಶಿವಕುಮಾರ್ (ಮುಖ್ಯಮಂತ್ರಿಗಳು):-** ಇಲ್ಲ, ಇಲ್ಲ. ಮಾನ್ಯ ಭೋಜೇಗೌಡರೆ, ನಾನು ಮಂತ್ರಿಗಳಿಗೆ request ಮಾಡುತ್ತೇನೆ. ಯಾವ ಮಂತ್ರಿಗಳೂ ಮಾತನಾಡಬೇಡಿ. ಇದು first day of the House. ಯಾರೂ ಮಾತನಾಡುವುದು ಬೇಡ. ನಾನು ನಿಮ್ಮನ್ನು introduce ಮಾಡಿದ ಮೇಲೆ ನೀವು ಮಾತನಾಡಿ. Don't get tempted. ಇದು tempt ಆಗುವಂಥ ಸ್ಥಾನವಲ್ಲ.

**ಶ್ರೀ ಎಸ್.ಎಲ್. ಭೋಜೇಗೌಡ:-** ಹಾಗಾದರೆ ಈಗ ಏನು ಬೇಕಾದರೂ tempt ಮಾಡಿ.

**ಶ್ರೀ ಡಿ.ಕೆ. ಶಿವಕುಮಾರ್:-** ಈಗ ಅವರು ಯಾರೂ ಮಾತನಾಡುವುದಿಲ್ಲ. ನೀವು ತಲೆ ಕೆಡಿಸಿಕೊಳ್ಳಬೇಡಿ. ಮಾನ್ಯ ಹರಿಪ್ರಸಾದ್ ಅವರು ಪಕ್ಷದ ಅಧ್ಯಕ್ಷರು, ಅವರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಈಗ ನೀವೇನು ಮಾಡಿದರೂ ಅವರು tempt ಆಗುವುದಿಲ್ಲ. ತಲೆ ಕೆಡಿಸಿಕೊಳ್ಳಬೇಡಿ. ದಯವಿಟ್ಟು ತಾವೆಲ್ಲಾ ಮಾತನಾಡಿ. ಅವರೆಲ್ಲರೂ ಮಾತನಾಡಿದ ನಂತರ ನಾನು ನೂತನ ಮಂತ್ರಿಗಳನ್ನು ಸದನಕ್ಕೆ ಪರಿಚಯ ಮಾಡಿಸಿ, ತಾವೆಲ್ಲಾ ಪರ್ಮಿಷನ್ ಕೊಟ್ಟರೆ ನಾನೊಂದು ನಾಲ್ಕು ಮಾತುಗಳನ್ನಾಡುತ್ತೇನೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೆ, ತಾವು ಸಂವಿಧಾನಾತ್ಮಕವಾಗಿ ಉನ್ನತವಾದ ಈ ಸ್ಥಾನವನ್ನು ಅಲಂಕರಿಸಿರುವುದಕ್ಕೆ ನನಗೆ ಬಹಳ ವಿಶೇಷವಾದಂಥ ಸಂತೋಷವಾಗಿದೆ. ಏಕೆಂದರೆ, ನೀವು ನನ್ನ ಮತಕ್ಷೇತ್ರದಿಂದ ಬಂದವರು. ಎರಡನೆಯದಾಗಿ, ಆ ಸ್ಥಾನ ಪುನಃ ಕಿತ್ತೂರು ಕರ್ನಾಟಕ ಭಾಗಕ್ಕೆ ದೊರೆತಿದೆ ಎನ್ನುವುದು ನನಗೆ ಬಹಳ ಹೆಮ್ಮೆಯ ಸಂಗತಿ. ಹಾಗಾಗಿ ಮೊದಲು ನಿಮಗೆ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಮಾನ್ಯ ಸಭಾಪತಿಯವರೆ, ನಿನ್ನೆ ತಾವು ಸಂಯುಕ್ತ ಕರ್ನಾಟಕಕ್ಕೆ ಮುಖಾಮುಖಿ ಸಂದರ್ಶನ ಕೊಟ್ಟಿದ್ದೀರಿ. ಅದನ್ನು ಓದಿ ನನಗೆ ಬಹಳ ಸಂತೋಷವಾಯಿತು. ಅದರಲ್ಲಿ "ನಾನು ಪಕ್ಷಾತೀತವಾಗಿ, ನ್ಯಾಯಯುತವಾಗಿ ಕಾರ್ಯ ನಿರ್ವಹಿಸುತ್ತೇನೆ" ಎಂದು ತಾವು ಹೇಳಿದ್ದೀರಿ. ಸದನ ನಡೆಯುವ ಸಂದರ್ಭದಲ್ಲಿ, ಬೇರೆ ಬೇರೆ ಸನ್ನಿವೇಶಗಳಲ್ಲಿ ಒತ್ತಡಗಳು ಬರುತ್ತಿರುತ್ತವೆ. ಏನೇ ಒತ್ತಡ ಬಂದರೂ ಕೂಡ, ತಾವು ಇಂದು ನುಡಿದಿರುವಂತೆ ನಡೆಯಬೇಕೆಂದು ವಿನಂತಿ ಮಾಡುತ್ತೇನೆ. ಸಭಾಪತಿ ಸ್ಥಾನಕ್ಕೆ ಬಹಳ ಮುಖ್ಯವಾದ ಗುಣವೆಂದರೆ ಶಾಂತಿ, ಸಮಾಧಾನ ಮತ್ತು ತಾಳ್ಮೆ ಬೇಕು. ಅದೇ ರೀತಿ ಅನುಭವವೂ ಬೇಕು. ಇವೆಲ್ಲವೂ ಗುಣಗಳು ನಿಮ್ಮಲ್ಲಿರುವುದರಿಂದ ಖಂಡಿತವಾಗಿ ಈ ಸದನವನ್ನು ಯಶಸ್ವಿ ರೀತಿಯಲ್ಲಿ ಮುನ್ನಡೆಸಿಕೊಂಡು ಹೋಗುತ್ತೀರೆನ್ನುವ ವಿಶ್ವಾಸ ನಮಗಿದೆ.

ಆಗಲೇ ನಮ್ಮ ಸ್ನೇಹಿತರು ಹೇಳಿದರು. ಮನುಷ್ಯನಿಗೆ ಅಧಿಕಾರ ಎನ್ನುವುದು ಶಾಶ್ವತವಲ್ಲ ಎಂಬುದು ನಮಗೆಲ್ಲಾ ತಿಳಿದಿದೆ. ಆದರೆ ನಾವು ಮಾಡಿದಂಥ ಕೆಲಸಗಳು ಶಾಶ್ವತವಾಗಿ ಉಳಿಯುತ್ತವೆ.

(ಮುಂದು)

**(688) 14-08-2026 (12.40) ಕೆಜಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ವ್ಹಿ.ಸಂಕನೂರ (ಮುಂದು):**

ನಾನು ತಮ್ಮ ಅವಧಿಯೊಳಗೆ ಆ ರೀತಿಯಲ್ಲಿ ಒಳ್ಳೆಯ ಕೆಲಸಗಳು ಆಗಲಿ ಎಂದು ಹಾರೈಸುತ್ತೇನೆ. ಸದನದೊಳಗೆ ರೈತರ ಬಗ್ಗೆ ಇರಬಹುದು, ಕಾರ್ಮಿಕರ ಬಗ್ಗೆ ಇರಬಹುದು, ಮಹಿಳೆಯರ ಬಗ್ಗೆ ಇರಬಹುದು, ರಾಜ್ಯ ಎಲ್ಲಾ ನೌಕರರ ಬಗ್ಗೆ ಇರಬಹುದು, ಅದರಲ್ಲೂ ವಿಶೇಷವಾಗಿ ಶಿಕ್ಷಕರ ಬಗ್ಗೆ ಇರಬಹುದು, ಹಿಂದುಳಿದವರ ಬಗ್ಗೆ ಇರಬಹುದು,

S.C.(Scheduled Castes)/S.T.(Scheduled Tribes) ಸಮುದಾಯದವರ ಬಗ್ಗೆ ಇರಬಹುದು ಈ ಎಲ್ಲರ ಸಮಸ್ಯೆಗಳು ಇಲ್ಲಿ ಚರ್ಚೆಗೆ ಬಂದಾಗ ಇದಕ್ಕೆ ವಿಶೇಷವಾದಂತಹ ಕಾಲವಕಾಶವನ್ನು ತಾವು ಕೊಡಬೇಕೆಂದು ಈ ಸಂದರ್ಭದಲ್ಲಿ ನನ್ನ ಮತ್ತೊಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ವಿರೋಧ ಪಕ್ಷಕ್ಕೂ ಸಹ ಹೆಚ್ಚಿನ ಸಮಯವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಈ ಹಿಂದೆ ಈ ಪೀಠದಲ್ಲಿ ಬಹಳ ಯಶ್ವಸಿಯಾಗಿ, ಪ್ರಮಾಣಿಕವಾಗಿ ಸಭಾಪತಿಯಾಗಿ ಕೆಲಸ ಮಾಡಿದ್ದಾರೆ. ನಾನು ಅವರಿಗೆ ಈ ಸಂದರ್ಭದಲ್ಲಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ದಿನ ಪತ್ರಿಕೆಗಳನ್ನು ಓದಿದಾಗ ನಮ್ಮ ಮನಸ್ಸಿಗೆ ಬಹಳ ನೋವಾಗಿದೆ. ಇದು ಬಹಳ ನೋವಿನ ಸಂಗತಿಯಾಗಿದೆ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಸುಧೀರ್ಘವಾಗಿ 45 ವರ್ಷಗಳ ಕಾಲ ಉತ್ತಮವಾಗಿ ಕೆಲಸ ಮಾಡಿದಂತಹ ವ್ಯಕ್ತಿಯನ್ನು ಪೀಠದಿಂದ ಕೆಳಗಿಳಸಿದ ರೀತಿಯಿಂದ ನಮ್ಮ ಮನಸ್ಸಿಗೆ ಬಹಳ ನೋವಾಗಿವೆ. ಈ ಸಂದರ್ಭದಲ್ಲಿ ನಾನು ಅವರನ್ನು ಪೀಠದಿಂದ ಕೆಳಗಿಳಸಿದ ರೀತಿಯನ್ನು ಖಂಡಿಸುತ್ತೇನೆ. ಅಲ್ಲದೇ, ಮುಂದೆ ಈ ರೀತಿ ಯಾರಿಗೂ ಆಗಬಾರದೆಂದು ಆ ಭಗವಂತನಲ್ಲಿ ಪ್ರಾರ್ಥನೆ ಮಾಡಿ ಮತ್ತೊಮ್ಮೆ ತಮಗೆ ಶುಭಾಶಯಗಳನ್ನು ಸಲ್ಲಿಸಿ ನನ್ನ ಮಾತಿಗೆ ವಿರಾಮ ಇಡುತ್ತೇನೆ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ವಿಚಾರ ನನಗೆ ವೈಯಕ್ತಿಕವಾಗಿ ಬಹಳ ಸಂತೋಷ ತರುವಂತಹದ್ದಾಗಿದೆ. ಏಕೆಂದರೆ, N.S.U.I. (National Students' Union of India) ನಲ್ಲಿ ತಾವು ರಾಜ್ಯಾಧ್ಯಕ್ಷರಾಗಿದ್ದಾಗ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹಾಗೂ ನಮ್ಮ ನಾಯಕರಾದಂತಹ ಶ್ರೀ ಡಿ.ಕೆ.ಶಿವಕುಮಾರ್‌ರವರು ನನ್ನನ್ನು ತಮಗೆ ಪರಿಚಯಿಸಿದರು. ಆಗ ನಾನು ತಮ್ಮ ಜೊತೆಗೆ ಪದಾಧಿಕಾರಿಯಾಗಿ ಆ ತಂಡದಲ್ಲಿದ್ದೆ. ನಾನು ಆ ತಂಡದಲ್ಲಿ ಇದ್ದಾಗಿನಿಂದಲೂ ತಮ್ಮನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. 1987-88 ರಿಂದಲೇ ತಮ್ಮ ಜೊತೆಗೆ ಕೆಲಸ ಮಾಡಿಕೊಂಡು ನಾನು N.S.U.I. ನ Office Bearer ಆದಾಗಿನಿಂದಲೂ ತಮ್ಮ ವ್ಯಕ್ತಿತ್ವವನ್ನು ನೋಡಿಕೊಂಡು ಬೆಳೆದಿರುತ್ತೇನೆ. ನಾನು ರಾಜಕೀಯವಾಗಿ ತಮ್ಮ ಜೊತೆಗೆ ಬೆಳೆದಂತಹವನಾಗಿದ್ದೇನೆ. ನಾನು ಅವತ್ತಿನಿಂದಲೇ ತಮ್ಮನ್ನು ನೋಡಿದ್ದೇನೆ. ತಮ್ಮಲಿರುವಂತಹ ಒಂದು ಜಾತ್ಯಾತೀತ ಮನೋಭಾವ, ವಿಶೇಷವಾಗಿ ತಮಗೆ ಪಕ್ಷದ ಮೇಲಿನ ಪ್ರೀತಿ ಮತ್ತು ಬದ್ಧತೆ ಒಬ್ಬ ಪಕ್ಷದ ನಾಯಕತ್ವ ಎನ್ನುವುದಕ್ಕಿಂತ ಪಕ್ಷ ಕೊಟ್ಟಂತಹ ಕಾರ್ಯಕ್ರಮವನ್ನು ಯಾವ ರೀತಿ ಅನುಷ್ಠಾನಗೊಳಿಸಬೇಕು ಮತ್ತು ಯಾವ ರೀತಿ ಪ್ರಮಾಣಿಕವಾಗಿ

ದುಡಿಯಬೇಕು ಎನ್ನುವುದನ್ನು ಎಲ್ಲೋ ಒಂದು ಕಡೆ ನಾನು ತಮ್ಮಿಂದ ನೋಡಿ ಕಲಿತ್ತಿದ್ದೇನೆ. ತಾವು ಹಗಲು-ರಾತ್ರಿ ಪಕ್ಷಕ್ಕಾಗಿ ದುಡಿಯುವಂತಹದ್ದು, ತಮಗೆ ವಹಿಸಿದಂತಹ ಜವಾಬ್ದಾರಿಯನ್ನು ನಾನು ನೋಡುತ್ತಾ ಬೆಳೆದಿದ್ದೇನೆ. ಇದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ತಾವು ಒಬ್ಬ ಸುಶಿಕ್ಷಿತ ವ್ಯಕ್ತಿಯಾಗಿದ್ದು, ಎಂ.ಎ., ಶಿಕ್ಷಣವಂತರಾಗಿದ್ದೀರಿ. ತಾವು ಒಬ್ಬ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಿಂದ ಬಂದಂತಹವರಾಗಿದ್ದೀರಿ. ಈ ದೇಶಕ್ಕೆ ಪರಕೀಯರಿಂದ ಸ್ವಾತಂತ್ರ್ಯವನ್ನು ಕೊಡಿಸುವುದಕ್ಕೆ ಹೋರಾಡಿದಂತಹ ತಮ್ಮ ತಂದೆಯವರ ಕುಟುಂಬದ ಹಿನ್ನೆಲೆ ತಮಗೆ ಇದೆ. ತಾವು ಆ ಸ್ಥಾನಕ್ಕೆ ನಿಜವಾಗಲೂ ಬಹಳ ಯೋಗ್ಯರಿದ್ದೀರಿ. ನಮ್ಮ ಪಕ್ಷದ ಹೈಕಮಾಂಡ್ ಇರಬಹುದು, ನಮ್ಮ ಮುಖ್ಯಮಂತ್ರಿಯವರು ಇರಬಹುದು, ನಮ್ಮ ಎಲ್ಲಾ ವರಿಷ್ಠರಿಗೆ ಮತ್ತು ಎಲ್ಲರಿಗೂ ತಮ್ಮಂತಹವರನ್ನು ಈ ಸ್ಥಾನಕ್ಕೆ ಗುರುತಿಸಿ ಗೌರವಿಸಿದಕ್ಕೆ ನಾನು ನಿಜಕ್ಕೂ ಪಕ್ಷಕ್ಕೂ ಮತ್ತು ನಾಯಕತ್ವಕ್ಕೂ ಕೂಡ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮಾನ್ಯ ಸಭಾಪತಿಯವರೇ, ತಮ್ಮಲ್ಲಿರುವಂತಹ ಜಾತ್ಯಾತೀತ ಮನೋಭಾವ ನಮ್ಮಲ್ಲೆರಿಗೂ ಸಹ ಮಾದರಿಯಾಗಿದೆ. ತಾವು ನಮ್ಮ ಪಕ್ಷದ ಮೂಲ ಸಿದ್ಧಾಂತವಾಗಿರುವಂತಹ "ಸರ್ವರಿಗೂ ಸಮ ಬಾಳು, ಸರ್ವರಿಗೂ ಸಮಪಾಲು" ಎನ್ನುವಂತಹ ತತ್ವದಡಿಯಲ್ಲಿ ಇವತ್ತಿನ ದಿವಸಗಳಲ್ಲಿ ಇರುವಂತಹ ಹಲವಾರು ವಿಚಾರ ಭೇದಗಳ ಮಧ್ಯೆ ನಮ್ಮ ಪಕ್ಷದ ತತ್ವ ಸಿದ್ಧಾಂತಗಳನ್ನು ಆ ಸ್ಥಾನದಲ್ಲಿಟ್ಟುಕೊಂಡು ಎಲ್ಲರಿಗೂ ಮನವರಿಕೆ ಮಾಡಿಕೊಟ್ಟು ಎಲ್ಲರಿಗೂ ಸಹ ಸಮಾನವಾದಂತಹ ಅವಕಾಶವನ್ನು ನೀಡುತ್ತೀರಿ ಎನ್ನುವಂತಹ ಬದ್ಧತೆ ತಮ್ಮಲ್ಲಿದೆ. ನಾನು ಅದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಈ ವಿಧಾನ ಪರಿಷತ್ತು ಹಿರಿಯರ ಮನೆಯಾಗಿದೆ. ಇದು 'ಚಿಂತಕರ ಛಾವಡಿ'. ಇದು ಮೈಸೂರು ಮಹಾರಾಜರ ಕಾಲದಿಂದಲೇ ಪ್ರಾರಂಭವಾಗಿದೆ. ಭಾರತದ ಇತಿಹಾಸದಲ್ಲಿಯೇ ಶತಮಾನಕ್ಕೂ ಹೆಚ್ಚು ಸ್ವಾತಂತ್ರ್ಯ ಪೂರ್ವದಲ್ಲಿಯೇ ಸ್ಥಾಪಿತವಾಗಿರುವಂತಹದ್ದಾಗಿದೆ. ಈ ಪರಿಷತ್ತಿಗೆ ಅದರದ್ದೇ ಆದಂತಹ ಕಾರ್ಯವಿಧಾನ ಇದೆ. ಇಲ್ಲಿಗೆ ಸಮಾಜದ ವಿವಿಧ ವರ್ಗಗಳಿಂದ ಬಂದಂತಹವರು ಈ ನಾಡಿನ ಅಭಿವೃದ್ಧಿಗೆ ತಮ್ಮದೇ ಆದಂತಹ ರೀತಿಯಲ್ಲಿ ಸೇವೆಯನ್ನು ಮಾಡುವುದಕ್ಕೆ ರೂಪಿತವಾಗಿರುವಂತಹ ಸಂಸ್ಥೆಯಾಗಿದೆ. ಈ ಒಂದು ಪರಿಷತ್ತು ನಿಜಕ್ಕೂ ಬೇರೆ ರಾಷ್ಟ್ರದ ಇನ್ನಿತರ ಎಲ್ಲಾ ನಮ್ಮ ಸಂವಿಧಾನಿಕ ಸಂಸ್ಥೆಗಳಿಗೆ ಮಾದರಿಯಾಗಿದೆ. ಆದರೆ, ನಾವೆಲ್ಲರೂ ಇಲ್ಲಿಗೆ ಸದಸ್ಯರಾಗಿ ಹಲವಾರು ವರ್ಷಗಳ ಕಾಲ ಕಳೆದಂತಹ ಸಂದರ್ಭದಲ್ಲಿ ನಾನು ಮೊದಲ ಬಾರಿಗೆ ಸದಸ್ಯನಾಗಿ ಬಂದಂತಹ ಸಂದರ್ಭಕ್ಕೂ ಮತ್ತು ಇವತ್ತಿನ ಸಂದರ್ಭಕ್ಕೂ ಎಲ್ಲೋ ಒಂದು ಕಡೆ ನಮ್ಮ ಮನಸ್ಸಿಗೆ ನೋವಾಗುತ್ತದೆ. ಏಕೆಂದರೆ, ಇವತ್ತು ಆ ಒಂದು ಗುಣಮಟ್ಟ ಇಲ್ಲ. ಆ ಗುಣಮಟ್ಟ ಏಕೆ ಇಲ್ಲವೋ ಏನೋ, ಎಲ್ಲೋ ಒಂದು ಕಡೆ ಚರ್ಚೆಗಳು ಇರಬಹುದು, ಅದು ಆ ಭಾಗದಲ್ಲಿ ಇರಬಹುದು, ಈ ಭಾಗದಲ್ಲಿ ಇರಬಹುದು,

ನಾನು ಕೇವಲ ಒಂದು ಭಾಗವನ್ನು ಮಾತ್ರ ಟೀಕೆ ಮಾಡುವಂತಹದ್ದಲ್ಲ. ಇವತ್ತು ಆ ಗುಣಮಟ್ಟದ ಚರ್ಚೆ ಇಲ್ಲವೇನೋ, ಎಲ್ಲೋ ಒಂದು ಕಡೆ ನೈತಿಕತೆಯ ಸ್ವಲ್ಪ ಗುಣಮಟ್ಟ ಕುಸಿಯುತ್ತಿದೆಯೋ ಎನೋ ಎನ್ನುವಂತಹ ಭಾವನೆ ಇದ್ದು, ಇದು ನಮ್ಮ ಜೊತೆಗೆ ಸಮಾಜದಲ್ಲಿಯೂ ಸಹ ಮೂಡುತ್ತಿರುವಂತಹದ್ದಾಗಿದೆ. ನಮ್ಮ ಪರಿಷತ್ತಿನ ಬಗ್ಗೆ ಇರುವಂತಹ ಗೌರವ ಮತ್ತು ಗುಣಮಟ್ಟ ಎಲ್ಲೋ ಒಂದು ಕಡೆ ಕುಸಿಯುತ್ತಿರುವಂತಹದ್ದನ್ನು ಕಾಣುತ್ತಿದ್ದೇವೆ. ಇದಕ್ಕೆ ನಾವೆಲ್ಲರೂ ಸಹ ಹೊಣೆಗಾರರಾಗಿದ್ದೇವೆ. ನಾವೆಲ್ಲಾ ಸದಸ್ಯರುಗಳು ಆ ಗುಣಮಟ್ಟವನ್ನು ಮತ್ತೇ ಮೇಲಕ್ಕೆ ಎತ್ತಿಹಿಡಿಯುವಂತಹ ಪರಂಪರೆಯನ್ನು ನಾವು ಸ್ಥಾಪನೆ ಮಾಡಬೇಕಾಗಿರುವಂತಹದ್ದು ನಮ್ಮೆಲ್ಲೆರ ಜವಾಬ್ದಾರಿಯಾಗಿದೆ. ಅದು ಒಂದು ಗುಣಮಟ್ಟದ ಚರ್ಚೆ ಇರಬಹುದು, ಕೆಳಮನೆಯಲ್ಲಿ ಆತುರ ಆತುರವಾಗಿಯೋ ಅಥವಾ ಸಮಯದ ಅಭಾವದಿಂದಲೋ ಚರ್ಚೆಯಾಗದೆ ಬರುವಂತಹ ವಿಧೇಯಕಗಳನ್ನು ಸುಧೀರ್ಘವಾಗಿ ಚರ್ಚೆ ಮಾಡಿ ನಮ್ಮ ಸಮಾಜವನ್ನು ಒಂದು ಸುಸ್ತಿರ, ಒಂದು ಪ್ರಜಾಪ್ರಭುತ್ವದಲ್ಲಿ ಒಂದು ಉತ್ತಮವಾದಂತಹ ವ್ಯವಸ್ಥೆಯನ್ನು ತರಲು ಸ್ಥಾಪಿತವಾದಂತಹ ಈ ಸಂಸ್ಥೆಯ ಗೌರವ ತಮ್ಮ ಒಂದು ನೇತೃತ್ವದಲ್ಲಿ ಎತ್ತರಕ್ಕೆ ಬೆಳೆಯಲಿ ಎಂದು ಹಾಗೂ ಎಲ್ಲರಿಗೂ ಸಹ ಸಮಾನವಾದಂತಹ ಅವಕಾಶ ಕೊಡಿ ಎಂದು ಹೇಳವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ತಮ್ಮ ಆಯ್ಕೆಯ ಸಂದರ್ಭದಲ್ಲಿ ವಿರೋಧ ಪಕ್ಷದ ಮಿತ್ರರರು ಏಕೋ ಏನೋ ಗೊತ್ತಾಗಲಿಲ್ಲ., ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ಹಿರಿಯತನಕ್ಕೆ ಮತ್ತು ಅವರ ಹಿರಿಯ ಸದಸ್ಯತ್ವಕ್ಕೆ ನಾನು ಅಪಾರವಾದಂತಹ ಗೌರವವನ್ನು ಇಟ್ಟುಕೊಂಡಿದ್ದೇನೆ. ನಾವು ಅವರಿಗೆ ಯಾವ ರೀತಿ ಗೌರವಯುತವಾಗಿ ಆ ಸ್ಥಾನಕ್ಕೆ ಸರ್ವಾನುಮತದಿಂದ, ನಮ್ಮಲ್ಲಿ ಯಾವುದೇ ವಿಚಾರ ಬೇದಗಳು ಇರಲಿ. ಪಕ್ಷ ಬೇರೆ ಬೇರೆ ಇರಲಿ, ಏನೇ ಇರಲಿ. ನಾವೆಲ್ಲರೂ ಸೇರಿ ಅವರನ್ನು ಆ ಒಂದು ಸ್ಥಾನಕ್ಕೆ ಗೌರವಯುತವಾಗಿ ಅವರ ಹಿರಿತನಕ್ಕೆ ಗೌರವಿಸಿ ಆ ಸ್ಥಾನಕ್ಕೆ ಸ್ಥಾಪನೆಯಾದರು. ಇವತ್ತು ತಮಗೂ ಸಹ ಅದೇ ಮಟ್ಟದಲ್ಲಿ ಆಗಬೇಕಾಗಿತ್ತು. ನಮ್ಮ ಪಕ್ಷಕ್ಕೆ majority ಬಂದಿತ್ತು. ಅದು ನೈಸರ್ಗಿಕವಾದಂತಹ ಕ್ರಿಯೆ. ಅವತ್ತಿನ ದಿವಸ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿಯವರು ಸಭಾಪತಿಯಾಗಿದ್ದರು. ನಮಗೆ ಅಂದು ಆ ಭಾಗದಲ್ಲಿ majority ಇತ್ತು. ನಮಗೆ ನಂತರ majority ಕಡಿಮೆ ಆಯಿತು. ಆ ಭಾಗಕ್ಕೆ majority ಜಾಸ್ತಿ ಆಯಿತು. ಅಂದು ಆವಿಶ್ವಾಸ ಮಂಡಿಸಲಿಕ್ಕೆ ಯಾರು ಯಾರು ಸಹಿ ಹಾಕಿದ್ದರು? ಅವತ್ತು ಮಾತ್ರ ನೈತಿಕತೆ ಇರಲಿಲ್ಲ. ಇವತ್ತು ಮಾತ್ರ ನೈತಿಕತೆ ಪ್ರಶ್ನೆ ಕಾಡುತ್ತಿದೆಯೇ? ನಾವು ಯಾರನ್ನಾದರೂ ಪ್ರಶ್ನೆ ಮಾಡಬೇಕಾದರೆ. ನಾವು ನಮ್ಮ ಬೆನ್ನಿನ ಹಿಂದೆ ಒಮ್ಮೆ ತಿರುಗಿ ನೋಡಬೇಕಲ್ಲವೇ; ನಾವು ಹಿಂದೆ ಏನು ಮಾಡಿದ್ದೇವು, ಈಗ ಏನು ಮಾಡುತ್ತಿದ್ದೇವೆಂದು ಸ್ವಲ್ಪ ಆತ್ಮವಲೋಕನ ಮಾಡಿಕೊಳ್ಳಬೇಕಲ್ಲವೇ; ನಾವು

ಆತ್ಮವಲೋಕನ ಮಾಡಿಕೊಳ್ಳದೇ ಬರಿ ರಾಜಕೀಯಕೋಸ್ಕರ, ರಾಜಕೀಯ ಮಾಡುವುದು, ಟೀಕೆ ಮಾಡುವುದು, ಇದಕ್ಕಾಗಿಯೇ ಈ ಸಂದರ್ಭವನ್ನು ಉಪಯೋಗಿಸಿಕೊಂಡರೆ ಮಾತ್ರ ನಾವು ವಿರೋಧ ಪಕ್ಷದವರು ಎನ್ನುವಂತಹ ಭಾವನೆ ಬರುತ್ತದೆ ಎನ್ನುವುದನ್ನು ನೋಡಿ ಎಲ್ಲೋ ಒಂದು ಕಡೆ ಬಹಳ ನೋವು ಆಗುತ್ತದೆ. ಇವತ್ತು ಅವರು ನಡೆದುಕೊಂಡಂತಹ ವರ್ತನೆ ಪ್ರಜಾಪ್ರಭುತ್ವಕ್ಕೆ ಕರ್ನಾಟಕ ರಾಜ್ಯದಲ್ಲಿ ಶತಮಾನಕ್ಕೂ ಹೆಚ್ಚು ಇತಿಹಾಸ ಇರುವಂತಹ ಈ ವಿಧಾನ ಪರಿಷತ್ತಿಗೆ ಗೌರವ ತರುವಂತಹ ಕೆಲಸವನ್ನು ನನ್ನ ಮಿತ್ರರು ಮಾಡಿಲ್ಲವೇನೋ ಎನ್ನುವಂತಹ ಭಾವನೆ ನನ್ನಲ್ಲಿ ಕಾಡುತ್ತಿದೆ. ಅದು ತಮ್ಮಂತಹ ವ್ಯಕ್ತಿತ್ವವನ್ನು ಹೊಂದಿರುವಂತಹವರಿಗೆ, ಎಲ್ಲರನ್ನು ಒಟ್ಟಾಗಿ ತೆಗೆದುಕೊಂಡು ಹೋಗುವಂತಹ ಜಾತ್ಯಾತೀತ ಮನೋಭಾವದ ವ್ಯಕ್ತಿಗೆ, ಆ ವ್ಯಕ್ತಿತ್ವಕ್ಕೆ ಅವರು ಕೊಟ್ಟಿದ್ದು ಆಗೌರವ ಅನ್ನಿಸುತ್ತದೆ. ತಾವು ಪೀಠದಲ್ಲಿ ಆಸೀನರಾಗುವಂತಹ ಸಂದರ್ಭದಲ್ಲಿ ಸಂವಿಧಾನವನ್ನು ಎತ್ತಿಹಿಡಿದ್ದೀರಿ. ನಮಗೆ ನಿಜಕ್ಕೂ ಅದು ಮಾದರಿಯಾಗಿದೆ. ಆ ಸಂವಿಧಾನವೇ ನಮ್ಮ ಮೂಲ ಗ್ರಂಥ. ಆ ಸಂವಿಧಾನವೇ ನಮ್ಮ ಮೂಲ ದೈವ. ಅದನ್ನು ಕಾಪಾಡುವಂತಹ ಕೆಲಸ ತಮ್ಮಿಂದ ಆಗಲಿ ಮತ್ತು ಅದಕ್ಕೆ ಎಲ್ಲರೂ ಸಹಕಾರ ಕೊಡುತ್ತಾರೆ ಎಂಬುದನ್ನು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಇವತ್ತಿನ ದಿವಸ ಆ ಪೀಠವನ್ನು ಅಲಂಕರಿಸಿರುವಂತಹ ಈ ಶುಭ ಸಂದರ್ಭದಲ್ಲಿ ತಮಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಾವು ಸುಧೀರ್ಘವಾಗಿ ಸುಮಾರು 4 ದಶಕಗಳ ಕಾಲ ಈ ರಾಜಕೀಯ ಜೀವನದಲ್ಲಿ ವಿದ್ಯಾರ್ಥಿ ಸಂಘಟನೆಯಲ್ಲಿ ತೊಡಗಿಸಿಕೊಂಡು ಸಾಕಷ್ಟು ಜನಪರವಾದ ಕೆಲಸಗಳನ್ನು ಮಾಡಿದ್ದೀರಿ. ತಾವು ಮೂರು ಬಾರಿ ಈ ಸದನದ ಶಾಸಕರಾಗಿ ಹಲವಾರು ವಿಚಾರಗಳನ್ನು ತಿಳುವಳಿಕೆ ಮೂಡಿಸುವ ಕೆಲಸವನ್ನು ಮಾಡುತ್ತಾ ಬಂದಿದ್ದೀರಿ. ಅಧಿಕಾರ ಶಾಶ್ವತ ಅಲ್ಲ ಎನ್ನುವುದನ್ನು ತಾವು ಬಹಳಷ್ಟು ಬಾರಿ ನೋಡಿದ್ದೀರಿ. ಆದರೆ, ಇವತ್ತು ಪ್ರಜಾಪ್ರಭುತ್ವ ಉಳಿಯಬೇಕು. ಈ ಸಂವಿಧಾನದ ಅಡಿಯಲ್ಲಿ ಬಹಳಷ್ಟು ಚರ್ಚೆಗಳು ಆಗುತ್ತವೆ. ವಿರೋಧ ಪಕ್ಷಗಳು ಟೀಕೆ ಮಾಡುತ್ತೇವೆ. ಆ ಟೀಕೆಗಳನ್ನು ಸಹ ಆಶೀರ್ವಾದದ ರೀತಿಯಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ವಿರೋಧ ಪಕ್ಷಗಳು ಬರಿ ವಿರೋಧ ಮಾಡುವುದು ಅಷ್ಟೇ ಅಲ್ಲ. ಆಡಳಿತ ಪಕ್ಷದವರು ಮಾಡುವಂತಹ ಒಳ್ಳೆಯ ಕೆಲಸಗಳಿಗೆ ನಾವು ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಇಲ್ಲವೆಂದು ಅಲ್ಲ. ಆದರೆ, ವಿರೋಧ ಪಕ್ಷಗಳು ಸಂವಿಧಾನದ ಜೀವಾಳ ಎಂದು ಕರೆಯುತ್ತೇವೆ. ಆ ಸಂವಿಧಾನದ ಜೀವಾಳ ಇಲ್ಲಿ ಹೆಚ್ಚು-ಹೆಚ್ಚು ನಮಗೆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶಗಳನ್ನು ಕೊಡಬೇಕೆಂದು ಹೇಳಿ ತಮ್ಮಲ್ಲಿ ಮನವಿ ಮಾಡುತ್ತೇನೆ.

(ಮುಂದು)

**(689) 14.08.2026/12.50/ಎಂವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಟಿ.ಎ. ಶರವಣ (ಮುಂದು):**

ಕಾಂಗ್ರೆಸ್ ಪಕ್ಷದ ಶ್ರೀ ಬಿ.ಕೆ. ಹರಿಪ್ರಸಾದ್‌ರವರು ಮಾತನಾಡುತ್ತಾ ಹೇಳಿದ್ದಾರೆ. ಇದರಿಂದ ನನಗೆ ಬಹಳ ಖುಷಿಯಾಯಿತು. ಅದಕ್ಕೆ ಅವರು ಸದನದಲ್ಲಿಯೇ ಇರಬೇಕು. ಅವರು ಭಾಷಣ ಮಾಡಿ ಹೊರಗಡೆಗೆ ಹೋಗುವಂತಿಲ್ಲ. ಮತ್ತೆ ಸದನ ಯಾವಾಗ ಯಾವಾಗ ನಡೆಯುತ್ತದೆ, ಆಗ ಅವರು ಇಲ್ಲಿದ್ದು, ಮಾನ್ಯ ಸಭಾಪತಿಯವರು ನಮ್ಮ ಕಡೆ ನೋಡುವಂತೆ ನೋಡಿಕೊಳ್ಳಬೇಕು. ಪೀಠದಲ್ಲಿ ಏನಾಗುತ್ತಿದೆ ಎಂದು ಸಹ ನೋಡುತ್ತಿರಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಟಿ.ಎ. ಶರವಣರವರಿಗೆ ನನ್ನ ಮೇಲೆ ಬಹಳ ಪ್ರೀತಿ ಇದೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಬಿ.ಕೆ. ಹರಿಪ್ರಸಾದ್‌ರವರಿಗೆ ನನ್ನ ಮೇಲೆ ಜಾಸ್ತಿ ಪ್ರೀತಿ ಇರುವುದು ನನಗೆ ಗೊತ್ತಿದೆ. ಮಾನ್ಯ ಸದಸ್ಯರಾದ ಬಿ.ಕೆ. ಹರಿಪ್ರಸಾದ್ ಸಾಹೇಬರಿಗೆ ನನ್ನ ಮೇಲೆ ಬಹಳ ಪ್ರೀತಿ ಇದೆ. ಅದು ಹಾಗೆಯೇ ಇರಲಿ. ಈಗ ನಾನು ಹೇಳುತ್ತಿರುವಂಥದ್ದು ಬಹುಶಃ ತಮ್ಮಿಂದ ನಮಗೆ ಎಲ್ಲಾ ರೀತಿಯಲ್ಲಿ ಸಹಕಾರ ಸಿಗುತ್ತದೆಂದು ಭಾವಿಸಿದ್ದೇನೆ. ತಮಗೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಈ ಒಂದು ಸಣ್ಣ ಘಟನೆಯ ಬಗ್ಗೆ ಆಗಲೇ ಮಾನ್ಯ ಸದಸ್ಯರಾದ ಬಿ.ಕೆ. ಹರಿಪ್ರಸಾದ್ ಸಾಹೇಬರು ಹೇಳುತ್ತಿದ್ದರು. ಅಂದರೆ, ಯಾವುದೇ ರೀತಿಯ ಅವಿಶ್ವಾಸ ನಿರ್ಣಯ ಮಂಡನೆ ಮಾಡುವುದಕ್ಕೆ ಹೋಗದೇ, ಅವರ ರಾಜೀನಾಮೆ ಕೇಳುವುದಕ್ಕೋಸ್ಕರ ಹೋಗಿದ್ದೆವು ಎಂದು ಹೇಳುತ್ತಿದ್ದರು. ಆ ರೀತಿಯ ಘಟನೆ ಹೊರಗಡೆ ಬೇರೆ ರೀತಿಯಲ್ಲಿ ಬಂದಿದೆ ಎಂದು ಹೇಳಿದರು. ಈಗ ನಾನು ಕೇಳುತ್ತಿರುವುದು ಏನೆಂದರೆ,...

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಪ್ಪು ದಾರಿಗೆ ಎಳೆಯಬಾರದು. ಈಗ ಎರಡೇ option ಇರುವುದು.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಇವರು ಅವರಿಗೆ option ಕೊಟ್ಟರು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈಗ ಒಂದು ಅವರು ರಾಜೀನಾಮೆ ಕೊಡುವುದು, ಮತ್ತೊಂದು ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ ಮಾಡುವುದು ಎಂದಿದ್ದರು. ನಾವು ಅವರ ಬಳಿ ರಾಜೀನಾಮೆ ಕೇಳುವುದಕ್ಕೆ ಹೋಗಿರಲಿಲ್ಲ.

**ಡಾ: ಉಮಾಶ್ರೀ:-** ಮಾನ್ಯ ಸಭಾಪತಿಯವರೇ, ಅದು ನಿಯಮಾವಳಿಯಲ್ಲಿ ಇರುವುದು. ಅದನ್ನು ನಿಯಮಾವಳಿಯಲ್ಲಿ ಕೊಟ್ಟಿರುತ್ತಾರೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಅವರು ಏನಾಗಬೇಕೆಂದು ಅವರಿಗೆ ಮನವರಿಕೆ ಮಾಡಿದ್ದಾರೆ. ನಾನು ಅದನ್ನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಮಾನ್ಯ ಸದಸ್ಯರಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಸಾಹೇಬರು 14ನೇ ತಾರೀಖಿನಂದು ನಾನೇ ರಾಜೀನಾಮೆ ಕೊಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಕೆ.ಪಿ.ಸಿ.ಸಿ ಮಾನ್ಯ ಅಧ್ಯಕ್ಷರಿಗೆ ಹೇಳಿದ್ದಾರೆ. ಅದು ಪತ್ರಿಕೆಯಲ್ಲಿ ಬಂದಿರುವಂಥದ್ದನ್ನು ನಾವು ಗಮನಿಸಿದ್ದೇವೆ. ಆದರೆ, ತರಾತುರಿಯಲ್ಲಿ 7ನೇ ತಾರೀಖಿಗೆ ಅವರ ಛೇಂಬರ್‌ಗೆ ಹೋಗಿದ್ದಾರೆ. ಎಂಟು ಬಾರಿ ಶಾಸಕರಾಗಿ ಈ ಸದನದ ಗೌರವವನ್ನು ಎತ್ತಿ ಹಿಡಿದಿದಂತಹ ಶಾಸಕರು ಮತ್ತು ಅವರು ಹಿರಿಯ ಸಭಾಪತಿಗಳು, ಅವರು ಮೂರು ಬಾರಿ ಸಭಾಪತಿಗಳಾಗಿದ್ದಾರೆ. ಇದು ಒಂದು ಇತಿಹಾಸ. ಇದು ರೆಕಾರ್ಡ್ ಆಗಿರುವಂಥದ್ದು. ಅವರು 3ನೇ ಬಾರಿ ಸಭಾಪತಿಯಾಗಿ, 45 ವರ್ಷ ಸಾಧನೆ ಮಾಡಿರತಕ್ಕಂಥದ್ದನ್ನು ಬೆಳಗ್ಗೆಯಿಂದ ಸಾಯಂಕಾಲದವರೆಗೂ ಇಡೀ ಸದನ ಪಕ್ಷಾತೀತವಾಗಿ ಯಾವ ರೀತಿ ಕೊಂಡಾಡಿದೆ ಎಂಬುದನ್ನು ಮಾನ್ಯ ಸದಸ್ಯರು ಹೇಳಿದರು. ಅದರ ಬಗ್ಗೆ ನನಗೆ ಬಹಳ ಕಳಕಳಿ ಇದೆ. ಆದರೆ, ಅವರ ರಾಜೀನಾಮೆಯನ್ನು 7ನೇ ತಾರೀಖಿಗೆ ಏಕೆ ಪಡೆದುಕೊಂಡರು? ಅಂದರೆ 13ನೇ ತಾರೀಖಿಗೆ ಸದನವನ್ನು ಕರೆದಿದ್ದೇವೆ, ಅವರು 14ನೇ ತಾರೀಖಿನಂದು ಸದನಕ್ಕೆ ಬಂದು ಎಲ್ಲರಿಗೂ ಒಂದು ಧನ್ಯವಾದವನ್ನು ಹೇಳಿ, ರಾಜೀನಾಮೆಯನ್ನು ನೀಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಕೆ.ಪಿ.ಸಿ.ಸಿ. ಮಾನ್ಯ ಅಧ್ಯಕ್ಷರಿಗೂ ಸಹ ಹೇಳಿದ್ದಾರೆ. ಈ ರೀತಿ ಇದ್ದಾಗ ಅವರ ಕಡೆಯಿಂದ ಸಹ ಒಂದು ಪ್ರತಿಕ್ರಿಯೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಅವರು ಒಂದು ಸ್ಪಷ್ಟನೆ ನೀಡಲಿ. ಏಕೆಂದರೆ, ಹೊರಗಡೆ ಬೇರೆ ರೀತಿಯಲ್ಲಿ ಚರ್ಚೆಯಾಗುತ್ತಿದೆ. ಹೊರಗಡೆ ಬೇರೆಯವರು ಬೇರೆ ರೀತಿಯಲ್ಲಿ ಮಾತನಾಡುವುದಕ್ಕೆ ಅವಕಾಶವಾಗಬಾರದು. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಸಹ ಸದನದಲ್ಲಿಯೇ ಕುಳಿತುಕೊಂಡಿದ್ದಾರೆ. ಅವರು ಆಗಲೇ ವಿನಯದಿಂದ, ಬಹಳ ಸೊಗಸಾಗಿ ಮಾತನಾಡಿದರು. ನಾನು ಅದನ್ನು ಸಹ ಗಮನಿಸಿದ್ದೇನೆ. ಏನು conversation ಆಯಿತು ಮತ್ತು ಏನಾಗಿದೆ ಎನ್ನುವುದನ್ನು ಕೆ.ಪಿ.ಸಿ.ಸಿ. ಅಧ್ಯಕ್ಷರು ಹೇಳಿದ ಹಾಗೆ ಮಾನ್ಯ ಮುಖ್ಯಮಂತ್ರಿಗಳಿಂದ ಕೂಡ ಕೇಳ ಬಯಸುತ್ತೇವೆ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಸಾಹೇಬರು ಸದನದಲ್ಲಿಯೇ ಕುಳಿತುಕೊಂಡಿದ್ದಾರೆ. ಅವರು ಏನು ನಡೆಯಿತು ಎಂದು ಇಡೀ ಸದನಕ್ಕೆ ಹೇಳಲಿ ಎಂದು ತಮ್ಮ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ದಯಮಾಡಿ ಆ ಕಡೆಯಾಗಲಿ, ಈ ಕಡೆಯಾಗಲಿ ಸರಿಯಾದ ರೀತಿಯಲ್ಲಿ ಸದನ ನಡೆಯುವುದಕ್ಕೆ ನಮ್ಮೆಲ್ಲರ ಸಹಕಾರ ಇದೆ. ನಿಮ್ಮ ನೇತೃತ್ವದಲ್ಲಿ ಇನ್ನಷ್ಟು ಒಳ್ಳೊಳ್ಳೆಯ ಚರ್ಚೆಗಳು ಆಗಲಿ. ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆಯಾಗಿ ಅದಕ್ಕೊಂದು ಪರಿಹಾರ ಕಂಡುಕೊಳ್ಳುವ ರೀತಿಯಲ್ಲಿ ನಾವೆಲ್ಲರೂ ಕೂಡ ತಮ್ಮ ಜೊತೆಯಲ್ಲಿ ಇದ್ದೇವೆಂದು ಮತ್ತೊಮ್ಮೆ ಈ ಶುಭ ಶುಕ್ರವಾರ ಮತ್ತು ಶ್ರಾವಣ ಮಾಸದಂದು ತಾವು ಪೀಠವನ್ನು ಅಲಂಕರಿಸಿದ್ದೀರಿ, ತಮಗೆ ಅತ್ಯಂತ ಹೃದಯಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. Thank you.

**ಸಭಾಪತಿಯವರು:-** ಈಗ ಡಾ: ಉಮಾಶ್ರೀಯವರು ಮಾತನಾಡಿ, ತಮಗೆ ಸಮಯದ ಪ್ರಜ್ಞೆ ಇರಲಿ. ಏಕೆಂದರೆ, ಮಾತನಾಡುವುದಕ್ಕೆ ಇನ್ನೂ ಹೆಚ್ಚಿನ ಜನ ಮಾನ್ಯ ಸದಸ್ಯರಿದ್ದಾರೆ.

**ಡಾ: ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ತಾವು ಈ ಪೀಠವನ್ನು ಅಲಂಕರಿಸಿ ಸಭಾಪತಿಗಳಾಗಿರುವಂಥದ್ದು ನಮ್ಮೆಲ್ಲರಿಗೂ ಕೂಡ ಸಂತೋಷದ ಸಂಗತಿಯಾಗಿದೆ. ಮಾನ್ಯ ಸಭಾಪತಿಗಳಾದ ಶ್ರೀ ಸಲೀಂ ಅಹ್ಮದ್ ಜೀ ರವರು ನಮ್ಮ ಕಾಂಗ್ರೆಸ್ ಪಕ್ಷದಲ್ಲಿ ಅನೇಕ ಹುದ್ದೆಗಳನ್ನು ಅಲಂಕರಿಸಿ, ಜಾತ್ಯತೀತ ಸಿದ್ಧಾತವನ್ನು ಮೈಗೂಡಿಸಿಕೊಂಡಿರತಕ್ಕಂತಹ ಸಜ್ಜನ ರಾಜಕಾರಣಿಗಳು. ನಾವು ಕಂಡ ಹಾಗೆ ತಮ್ಮ ರಾಜಕೀಯ ಜೀವನದಲ್ಲಿ ನಿರಂತರವಾಗಿ, ಅವಿಶ್ರಾಂತವಾಗಿ ಜನರ ಪರವಾಗಿ ದುಡಿದಿರುತ್ತೀರಿ. ನಾನು ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ. 1992ರಲ್ಲಿ ಶ್ರೀಯುತ ಬಂಗಾರಪ್ಪನವರು ರಾಜಕೀಯ ಜೀವನದ 'ಓಂ' ಮಂತ್ರವನ್ನು ನಮಗೆ ಶಿಕ್ಷಣವಾಗಿ ಕೊಟ್ಟಂತಹವರು. 2000 ದಿಂದ 2006 ರವರೆಗೆ ಮಾನ್ಯ ಎಸ್.ಎಂ. ಕೃಷ್ಣರವರು ನನ್ನ ರಾಜಕೀಯ ಜೀವನದ ಬೆಳವಣಿಗೆಗೆ ಪೂರಕವಾಗಿ ಮೆಟ್ಟಿಲುಗಳನ್ನು ಹಾಕಿಕೊಟ್ಟರು. ನಾನು ಒಂದು ಸರ್ಕಾರದ ಭಾಗವಾಗಿ ಕೆಲಸವನ್ನು ನಿರ್ವಹಿಸುತ್ತಾ, ವಿಧಾನ ಪರಿಷತ್ತಿನ ಸದಸ್ಯೆಯಾಗಿ ಕೆಲಸವನ್ನು ನಿರ್ವಹಿಸುವಂತಹ ಸಂದರ್ಭದಲ್ಲಿ, ಹಿರಿಯರ ಈ ಸದನಕ್ಕೆ ಬಂದಾಗ ಅನೇಕ ಹಿರಿಯ ಮುತ್ಸದಿ ರಾಜಕಾರಣಿಗಳು ಇಲ್ಲಿದ್ದರು. ಆ ಹಿರಿಯ ಮುತ್ಸದಿ ರಾಜಕಾರಣಿಗಳ ಮಧ್ಯೆ ಒಬ್ಬ ಯುವಕ ಇದ್ದರು. ಅವರ ಜೊತೆ ಇನ್ನೊಂದಷ್ಟು ಜನ ಯುವಕರ ಮಧ್ಯೆ ತಾವು ಕೂಡ ಯುವಕರಾಗಿದ್ದಂತಹವರು. ಅಂದರೆ, ಆಗ ತಾವು ನವ ಯುವಕ. ತಾವು ಅತ್ಯಂತ ಸಂತೋಷದಿಂದ ನಮ್ಮನ್ನು ಬರಮಾಡಿಕೊಂಡಿದ್ದನ್ನು ನಾನು ಬಹಳ ಹೆಮ್ಮೆಯಿಂದ ಮತ್ತು ಸಂತೋಷದಿಂದ ಅದನ್ನು ಇವತ್ತು ನೆನಪು ಮಾಡಿಕೊಳ್ಳುತ್ತೇನೆ. ನಾನು ಚಿತ್ರ ಕಲಾವಿದೆ ಮತ್ತು ನಟಿಯಾಗಿ ಬಂದು ಆಗತಾನೇ ನೇಮಕಗೊಂಡಂತಹವಳು. ಆಗ ತಾವು ನನ್ನನ್ನು ಆಗಾಗ ಕೇಳುತ್ತಿದ್ದೀರಿ ಮತ್ತು ತಮಾಷೆಯಾಗಿ ಛೇಡಿಸುತ್ತಿದ್ದೀರಿ. ಅವರು ತುಂಬಾ ಕನ್ನಡ ಸಿನಿಮಾಗಳನ್ನು ನೋಡುತ್ತಾರೆ. ಆದರೆ, ಅದು ನನಗೆ ಗೊತ್ತಿರಲಿಲ್ಲ. ಅವರ ಮಾತೃಭಾಷೆ ಹಿಂದಿ ಎಂದು ತಿಳಿದುಕೊಂಡು, ಕೇವಲ ಹಿಂದಿ ಸಿನಿಮಾಗಳನ್ನು ಮಾತ್ರ ನೋಡುತ್ತಾರೆಂದು ತಿಳಿದುಕೊಂಡಿದ್ದೆ. ಆದರೆ, ಅವರು ಬಹಳಷ್ಟು ಕನ್ನಡ ಚಿತ್ರಗಳನ್ನು ನೋಡುತ್ತಾರೆಂದು ನನಗೆ ಆಮೇಲೆ ಗೊತ್ತಾಯಿತು. ಅದರ ಜೊತೆಗೆ ಅವರು ಚಿತ್ರ ನಟರಾದ ಡಾ:ವಿಷ್ಣುವರ್ಧನ್ ಮತ್ತು ಡಾ:ಅಂಬರೀಶ್ ರವರ ಅಭಿಮಾನಿಗಳು.

**ಸಭಾಪತಿಯವರು:-** ಒಂದು ನಿಮಿಷ. ನಾನು ಮೊದಲು ಡಾ: ರಾಜ್‌ಕುಮಾರ್ ರವರ ಅಭಿಮಾನಿ.

**ಡಾ: ಉಮಾಶ್ರೀ:-** ಮಾನ್ಯ ಸಭಾಪತಿಯವರೇ, ತಾವು ಡಾ: ರಾಜ್‌ಕುಮಾರ್ ರವರ ಅಭಿಮಾನಿ ಕೂಡ ಆಗಿದ್ದೀರಿ. ಅವರು ನನಗೆ ರೀ... ಉಮಾಶ್ರೀ ಯವರೆ ನಾಗರಹಾವು ಸಿನಿಮಾದಲ್ಲಿ ಒಂದು dialogue ಇದೆಯಲ್ಲ, ಅದು ಏನ್ರಿ ಎಂದು ಕೇಳುತ್ತಿದ್ದರು. ಅದು ಅವರಿಗೆ ತುಂಬಾ ಖುಷಿ ಮತ್ತು ಅದು ಇಷ್ಟವಾದ dialogue. ಅದಕ್ಕೆ ನಾನು ಯಾರು ಹೇಳಿದ್ದು ಸರ್ ಎಂದು ಕೇಳಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ತಾವು ಡಾ: ಉಮಾಶ್ರೀಯವರ ಅಭಿಮಾನಿ ಆಗಲಿಲ್ಲ ಅಲ್ಲವೇ?

**ಡಾ: ಉಮಾಶ್ರೀ:-** ಮಾನ್ಯ ಸಭಾಪತಿಯವರೇ, ಈಗ ನಾನು ಹೇಳುತ್ತಿದ್ದೇನೆ ನೋಡಿ. ಅವರು ನನ್ನ ಅಭಿಮಾನಿಯಾಗಿಯೂ ಸಹ ಕೇಳಿದ್ದರು. ಅದು ಏನು dialogue ಅದನ್ನು ಸ್ವಲ್ಪ ಹೇಳಿ ಎಂದು ಕೇಳಿದರು. ಅದು ಯಾವುದು ಸರ್ ಎಂದು ಕೇಳಿದೆ. ಆಗ ಅದಕ್ಕೆ ಅವರು ಅದೇ ರೀ... ನಾಗರಹಾವು ಸಿನಿಮಾದಲ್ಲಿ ಅಂಬರೀಶ್‌ರವರು ಆರತಿಯವರಿಗೆ ಹೇಳುತ್ತಾರಲ್ಲ ಅದು ಎಂದರು. ಆಗ ನನಗೆ ಬಹಳ ಸಂಕೋಚ, ಆ ಸಂದರ್ಭದಲ್ಲಿ ತಾವೂ ಸಹ ಇದ್ದೀರಿ. ನಾನು ಬಹಳ ಸಂಕೋಚದ ಮುಗ್ದೆಯಾಗಿರುತ್ತಿದ್ದೆ. ನಾನು ಎಲ್ಲರ ಜೊತೆ ಬೆರೆಯುವುದು ಬಹಳ ಮುಜುಗರದ ಸಂಗತಿಯಾಗಿತ್ತು. ಇದು ಹೊಸ ಜಾಗ ಮತ್ತು ಹೊಸ ಜಗತ್ತು. ನಾನು ಏನಾದರೂ ಹೇಳಿದರೆ ತಪ್ಪಾಗುತ್ತದೆಯೋ ಎಂಬ ಭಯ ಇರುತ್ತಿತ್ತು. ಆಗ ಅವರಿಗೆ ಬಹಳ ಸಂಕೋಚದಿಂದ ಏಕೆ ಸರ್ ಎಂದು ಹೇಳಿದೆ. ಅದಕ್ಕೆ ಅವರು ಧೈರ್ಯವಾಗಿ ಹೇಳಿ, ಪರವಾಗಿಲ್ಲ ಎಂದು ಹೇಳಿದರು. ಆಗ ನಾನು "ಏನ್ ಬುಲ್ ಬುಲ್ ಮಾತಾಡಕ್ಕಿಲ್ವಾ" ಎಂದು ಹೇಳಿದ ಡೈಲಾಗ್ ಅವರಿಗೆ ತುಂಬಾ ಇಷ್ಟವಾದ dialogue. ಈಗ ಸಜ್ಜನ ರಾಜಕಾರಣಿಗಳು ನೇರವಾಗಿ ತಮ್ಮ ಬಾಯಿಯಿಂದ ಹೇಳುವುದಿಲ್ಲ, ಅವರು ಬೇರೆಯವರ ಬಾಯಿಯಿಂದಲೇ ಹೇಳಿಸುತ್ತಾರೆ. ಈಗಲೂ ಅವರಿಗೆ ಏನಾದರೂ ಹೇಳಿದರೆ, ಅದು ಏನ್ರಿ dialogue ಎಂದು ಹೇಳಿ ಖುಷಿಪಡುತ್ತಾರೆ. ಅಂದರೆ, "ಏನ್ ಬುಲ್ ಬುಲ್ ಮಾತಾಡಕ್ಕಿಲ್ವಾ" ಎಂಬುದು ಅವರಿಗೆ ನೆನಪು ಇರಬಹುದು ಎಂದುಕೊಳ್ಳುತ್ತೇನೆ. ಹಾಗೆ ಅವರು ಸಜ್ಜನ ರಾಜಕಾರಣಿಯಾಗಿ, ಹೊಸಬರು ರಾಜಕಾರಣಿಯಾಗಿ ಬಂದಾಗ ಅವರನ್ನು ಹೇಗೆ ಖುಷಿಯಾಗಿಟ್ಟುಕೊಳ್ಳಬೇಕು, ಅವರನ್ನು ಹೇಗೆ ಸ್ನೇಹಭಾವದಿಂದ ಇಟ್ಟುಕೊಳ್ಳಬೇಕು ಮತ್ತೆ ಹೇಗೆ ಸ್ನೇಹಪರವಾಗಿ ವಿಶ್ವಾಸವನ್ನು ಗಳಿಸಿ, ಅ ಮುಜುಗರ ಮತ್ತು ಸಂಕೋಚಗಳನ್ನು ಹೊಸಬರಲ್ಲಿ ಇಲ್ಲದಂತೆ ಮಾಡಿರುವುದಕ್ಕೆ ಬಹಳಷ್ಟು ಉದಾಹರಣೆಗಳಿವೆ. ನಮ್ಮ ಹಿರಿಯರು ಮತ್ತು ಮಾನ್ಯ ಸಭಾಪತಿಗಳಾದ ಸಲೀಂ ಅಹ್ಮದ್‌ರವರು ಅವತ್ತಿನ ದಿವಸ ಮಾಡಿದ್ದು, ನನಗೆ ಇವತ್ತಿಗೂ ಕೂಡ ನೆನಪಿನಲ್ಲಿರತಕ್ಕಂಥದ್ದು. ಹಾಗಾಗಿ, ನಾನು ಇದನ್ನು ನೆನಪು ಮಾಡಿಕೊಳ್ಳುತ್ತೇನೆ. ಇದೆಲ್ಲವೂ ಕೂಡ ನಮಗೆ ಮಾರ್ಗದರ್ಶನ. ನಮಗೆ ತಮ್ಮ ನಡವಳಿಕೆ ಒಂದು ಪ್ರೋತ್ಸಾಹದಾಯಕವಾದುದು ಮತ್ತು ನಾವು ಹೇಗೆ ನಡೆದುಕೊಳ್ಳಬೇಕು ಎಂಬುದಕ್ಕೆ ಒಂದು ಮಾರ್ಗದರ್ಶನ ಸಿಗುತ್ತಾ ಹೋಗಿರುವಂಥದ್ದು. ಅಂದಿನಿಂದ ಇಂದಿನವರೆಗೂ ತಾವು ಅನೇಕ ಬಾರಿ ಮುಖ್ಯ ಸಚೇತಕರಾಗಿ ಸೇವೆ ಸಲ್ಲಿಸಿದ್ದೀರಿ. ತಾವು ಅಗಾಧವಾದ ಅನುಭವವನ್ನು ಹೊಂದಿದ್ದೀರಿ. ತಾವು ಕಾಂಗ್ರೆಸ್ ಪಕ್ಷದ ಅನೇಕ ಹುದ್ದೆಗಳನ್ನು ಅಲಂಕರಿಸಿ ಜನಪರವಾದ ಕೆಲಸ ಮಾಡಿದ್ದೀರಿ. ತಾವು ಈ ಎತ್ತರವಾದ ಸಾಂವಿಧಾನಿಕ ಹುದ್ದೆಯನ್ನು ಅಲಂಕರಿಸಿರುವುದಕ್ಕೆ ಸಾಧ್ಯವಾಗಿರುವಂಥದ್ದು ನಿಮ್ಮ ನಡೆ, ನುಡಿ ಮತ್ತು ನಿಮ್ಮ ಗೌರವಾನ್ವಿತವಾದಂತಹ ಬದ್ಧತೆ, ತಾಳ್ಮೆ ಮತ್ತು ಸಹನೆ ಮತ್ತು ಜಾತ್ಯತೀತ ವ್ಯವಸ್ಥೆಯ ತತ್ವದಲ್ಲಿ ತಾವು ಇಟ್ಟುಕೊಂಡಿರುವಂತಹ ನಂಬಿಕೆ ತಮ್ಮನ್ನು ಇಲ್ಲಿಯವರೆಗೂ ಕರೆದುಕೊಂಡು ಬಂದಿದೆ ಎಂಬುದು ನನ್ನ ಬಲವಾದ ನಂಬಿಕೆ. ತಮ್ಮ ಏಳಿಗೆಯನ್ನು ಬಯಸುವವರಲ್ಲಿ ನಾವು ಸಹ ಇದ್ದೇವೆ. ಕಾಂಗ್ರೆಸ್ ಪಕ್ಷ ತಮಗೆ ನೀಡಿರುವಂತಹ ಈ ಅವಕಾಶ ಒಂದು ಸಮಾನವಾದ ಸಮಪಾಲಿನ ಮತ್ತು ಸಮಬಾಳಿನ ಜಾತ್ಯತೀತ ಸಿದ್ಧಾಂತವನ್ನು ಎತ್ತಿ ಹಿಡಿದಿದೆ. ಇದಕ್ಕಾಗಿ ನಾನು ಈ ಸಂದರ್ಭದಲ್ಲಿ ಡಾ: ಬಿ.ಆರ್. ಅಂಬೇಡ್ಕರ್‌ರವರನ್ನು ನೆನಪು

ಮಾಡಿಕೊಳ್ಳುತ್ತೇನೆ. ಇದೇ ಪೀಠದಲ್ಲಿ ಶ್ರೀಯುತ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಸಾಹೇಬರು ಬಹಳ ಹಿರಿಯ ಮುತ್ಸದಿ ರಾಜಕಾರಣಿಗಳು, ಅವರು ಕೂಡ ಸಭಾಪತಿಗಳಾಗಿ ಕಾರ್ಯವನ್ನು ನಿರ್ವಹಿಸಿದ್ದಾರೆ, ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅಂದಿನಿಂದ ಇಂದಿನವರೆಗೆ ಅನೇಕ ಮಹನೀಯರು ಈ ಒಂದು ಪೀಠದಲ್ಲಿ ಕುಳಿತುಕೊಂಡು ಕೆಲಸವನ್ನು ಮಾಡಿದ್ದಾರೆ. ಮತ್ತೆ ಅವರು ಸದನದ ಕಲಾಪವನ್ನು ನಡೆಸಿದ್ದಾರೆ.

(ಮುಂದು)

**(690) 14.08.2026 ವೈಎಲ್-ಎಂಡಿ 1.00 (ಸಭಾಪತಿಯವರ ಉಪಸ್ಥಿತಿ)**

**ಡಾ॥ ಉಮಾಶ್ರೀ (ಮುಂದು):**

ಸದನದ ಗೌರವ-ಘನತೆಯನ್ನು ಸಂವಿಧಾನಾತ್ಮಕ ಚೌಕಟ್ಟಿನಲ್ಲಿ ಆ ಕಾರ್ಯವನ್ನು ಎತ್ತಿಹಿಡಿದಿದ್ದಾರೆ. ಅದೇ ರೀತಿ ತಾವು ಕೂಡ ಪಕ್ಷಾತೀತವಾಗಿ ಆ ಕಾರ್ಯವನ್ನು ಸಮರ್ಥವಾಗಿ ನೇರವೇರಿಸುತ್ತೀರಿ ಎನ್ನುವ ನಂಬಿಕೆ ನಮ್ಮೆಲ್ಲರಿಗೂ ಇದೆ. ಅದಕ್ಕೆ ಭಗವಂತ ಎಲ್ಲಾ ರೀತಿಯ ಶಕ್ತಿಯನ್ನು ತಮಗೆ ನೀಡಲಿ ಎಂದು ಹಾರೈಸಿ, ನನಗೆ ಮಾತನಾಡಲು ಅವಕಾಶಕೊಟ್ಟ ತಮಗೆ ವಂದಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ಧನ್ಯವಾದಗಳು. ಮೊದಲನೆಯದಾಗಿ, ನೂತನ ಸಭಾಪತಿಯಾಗಿ ಆಯ್ಕೆಗೊಂಡ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸುದೀರ್ಘವಾದ ಇತಿಹಾಸ ವಿಧಾನ ಪರಿಷತ್ತಿಗೆ ಇದೆ. ನಾನು ತಮ್ಮ ಬಗ್ಗೆ ಏನು ಮಾತನಾಡಬೇಕೆಂದು ಯೋಚಿಸುತ್ತಿದ್ದಾಗ, ತಮ್ಮ ತಲೆಯ ಮೇಲೆ ಎರಡು ತಲೆಯ ಗಂಡಬೇರುಂಡ ಪಕ್ಷಿ ಇರುವುದನ್ನು ನೋಡಿ, ಏತಕ್ಕಾಗಿ ಆ ರೀತಿ ಎರಡು ತಲೆಯ ಸಿಂಬಲ್ ಇದೆ, ಏನರ್ಥ ಕೊಡುತ್ತದೆ ಮತ್ತು ಸಭಾಪತಿಯವರ ಪೀಠದ ತಲೆಯ ಭಾಗದ ಮೇಲೆಯೇ ಏತಕ್ಕಾಗಿ ಚಿತ್ರೀಕರಿಸಿದ್ದಾರೆ ಎಂದು ಯೋಚಿಸುತ್ತಿದ್ದೆನು. ಅದನ್ನು ನೋಡುತ್ತಿದ್ದಾಗ ನನಗೆ ಅರ್ಥವಾಗಿದ್ದು ಏನೆಂದರೆ, ಸಭಾಪತಿಯವರು ಎರಡು ತಲೆಯ ಪಕ್ಷಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಏಕೆಂದರೆ, ಸಮಾಜ ಎನ್ನುವಂಥ ಒಂದು ಪಕ್ಷಿಗೆ ಎರಡು ತಲೆ ಇದ್ದು, ಯಾವುದೇ ಒಂದು ಪಕ್ಷಿಯ ತಲೆಗೆ ಕಹಿ ಹಣ್ಣು ಸಿಕ್ಕಿದರೆ ಆ ಪಕ್ಷಿ ಸತ್ತುಹೋಗುತ್ತದೆ.

**ಸಭಾಪತಿಯವರು:-** ಅದಕ್ಕಾಗಿಯೇ ನಾನು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಇಬ್ಬರ ಮಧ್ಯೆ ಕೂರಿಸಿರುವುದು.

**ಶ್ರೀ ಎನ್. ರವಿಕುಮಾರ್:-** ಎರಡು ತಲೆಯ ಪಕ್ಷಿಗೆ ಎರಡು ಕಡೆ ನ್ಯಾಯ ಸಿಗಬೇಕು. ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷ ಎರಡೂ ಕಡೆ ನ್ಯಾಯ ಸಿಗಬೇಕು. ಆ ಅರ್ಥದಲ್ಲಿ ಎರಡು ತಲೆಯ ಪಕ್ಷಿಯನ್ನು ಚಿತ್ರೀಕರಿಸಿದ್ದಾರೆ. ಆ ರೀತಿಯ ನ್ಯಾಯವನ್ನು ಎರಡು ಕಡೆ ಕೊಡುತ್ತೀರಿ ಎನ್ನುವ ಆಶಾಭಾವನೆಯನ್ನು ವ್ಯಕ್ತಪಡಿಸುತ್ತೇನೆ. ನಾನು ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನಲ್ಲಿ ಒಬ್ಬ ಯುವ ಸನ್ಯಾಸಿಯ ಸುಮಾರು ಸಮಯವರೆಗೂ ಪೀಠಾರೋಹಣ ಕಾರ್ಯಕ್ರಮ ನಡೆಯುತ್ತಿದ್ದು, ಆ ಪೀಠಾರೋಹಣಾ ಕಾರ್ಯಕ್ರಮಕ್ಕೆ ತಾವು

ಬರಬೇಕೆಂದು ನನ್ನನ್ನು ಆಹ್ವಾನಿಸಿದ ಪ್ರಯುಕ್ತ ಅಲ್ಲಿಗೆ ಹೋಗಿದ್ದೆನು. ಆ ಸನ್ಯಾಸಿಯ ಎದುರುಗಡೆ ಅವರ ತಾಯಿಯವರು ಕುಳಿತ್ತಿದ್ದರು. ಆ ಸನ್ಯಾಸಿಯು 'ಇವತ್ತಿನಿಂದ ನಾನು ಮನೆಗೆ ಹೋಗುವುದಿಲ್ಲ; ನಮ್ಮ ಸಂಬಂಧಿಕರ ಮನೆಗೆ ಹೋಗುವುದಿಲ್ಲ; ನಾನು ಮಠದಲ್ಲಿರುತ್ತೇನೆ, ನನಗೆ ಆಸೆಗಳಿಲ್ಲ; ಎನ್ನುವ ಮಾತನ್ನು ಹೇಳುತ್ತಿದ್ದಾಗ, ಆ ತಾಯಿ ತನ್ನ ಮಗನನ್ನೇ ನೋಡುತ್ತಿದ್ದರು. ಸನ್ಯಾಸಿಗಳು ಯಾವ ರೀತಿ ವಾಸಿಸುತ್ತಾರೆ ಎಂದರೆ, ಅವರ ಮುಖವನ್ನು ಸಹ ಕನ್ನಡಿಯಲ್ಲಿ ನೋಡಿಕೊಳ್ಳುವ ಹಾಗಿಲ್ಲ, ಅಷ್ಟು ಮಹತ್ವವಾದ ವಿಚಾರಗಳಿವೆ. ಅದರ ಬಗ್ಗೆ ಮತ್ತೊಂದು ದಿವಸ ಚರ್ಚೆ ಮಾಡೋಣ. ಆ ಸ್ವಾಮಿಗಳು ನಾನು ಮನೆಗೆ ಬರುವುದಿಲ್ಲ; ಇನ್ನೂ ಮುಂದೆ ಮನೆಯ ಸಂಬಂಧವೆಲ್ಲವನ್ನೂ ಕಳಚಿಕೊಳ್ಳುತ್ತೇನೆ ಎಂದು ಭಾಷಣ ಮಾಡುವುದನ್ನು ಬಹಳ ಏಕಾಗ್ರತೆಯಿಂದ ಕೇಳಿಸಿಕೊಳ್ಳುತ್ತಿದ್ದೆನು. ಆ ರೀತಿಯಾಗಿ ತಾವು ಕೂಡ ತಮ್ಮ ಮನೆಯಾಗ ಕಾಂಗ್ರೆಸ್ ಪಕ್ಷವನ್ನು ಬಿಟ್ಟಿದ್ದೀರಿ. ಹಾಗಾಗಿ, ಎರಡು ಮನೆಗೆ ನ್ಯಾಯವನ್ನು ಕೊಡುತ್ತೀರಿ ಎಂದು ಆಶಾಭಾವನೆಯನ್ನು ವ್ಯಕ್ತಪಡಿಸುತ್ತೇನೆ. ಹಾಗೆಯೇ ಮಾನ್ಯ ಬಸವರಾಜ ಹೊರಟ್ಟಿರವರು 5 ವರ್ಷಗಳು 6 ತಿಂಗಳು ಅಂದರೆ ಸುಮಾರು ಎರಡು ಸಾವಿರಕ್ಕಿಂತ ಹೆಚ್ಚು ದಿನಗಳವರೆಗೂ ಸಭಾಪತಿಯಾಗಿ ಕಾರ್ಯನಿರ್ವಹಿಸಿದ್ದಾರೆ. 46 ವರ್ಷಗಳಿಂದ ಎಂ.ಎಲ್.ಸಿ.ಯಾಗಿ, ಮೂರು ಬಾರಿ ಸಭಾಪತಿಯಾಗಿ, ನಿರಂತರವಾಗಿ ಗೆಲುತ್ತಾ ಬಂದಿದ್ದು, ರಾಜ್ಯಾದಾದ್ಯಂತ ಜನರು ಅವರನ್ನು ಗುರುತಿಸಿದ್ದಾರೆ, ಅವರದೇ ಆದ ದೊಡ್ಡ ವಲಯ ರಾಜ್ಯದಲ್ಲಿದೆ. ಒಂದು ವಿಚಾರವೇನೆಂದರೆ, ಈಗಾಗಲೇ ನಾವೆಲ್ಲರೂ 'ಈಗ ಕಾಂಗ್ರೆಸ್ ಪಕ್ಷದ ಕಡೆ ಬಹುಮತ ಇರುವುದರಿಂದ ಅಲ್ಲಿನವರೇ ಸಭಾಪತಿಯಾಗಿ ಆಯ್ಕೆಯಾಗುತ್ತಾರೆ' ಎಂದು ಚರ್ಚೆ ಮಾಡಿದ್ದೆವು. ಅದಕ್ಕಾಗಿ ಅದೇನು ದೊಡ್ಡ ವಿಚಾರ ಎಂದು ಅನಿಸಲಿಲ್ಲ. ಆದರೆ, ಬೇಸರದ ಸಂಗತಿಯೇನೆಂದರೆ, ಸಭಾಪತಿಯವರಿಗೆ ಯಾವ ರೀತಿ ಗೌರವಯುತವಾಗಿ ನಿರ್ಗಮನ ಕೊಡಬೇಕಾಗಿತ್ತು ಆ ರೀತಿ ಕೊಡಲಿಲ್ಲ. 'ದಿ ಹಿಂದೂ' ದಿನ ಪತ್ರಿಕೆಯಲ್ಲಿ ಭಾವಚಿತ್ರ ಒಳಗೊಂಡ ಹಾಗೆ ಸುಮಾರು 20 ರಿಂದ 25 ಮಂದಿ ಸಭಾಪತಿಯವರ ಕಛೇರಿಗೆ ಹೋಗಿ ಕುಳಿತುಕೊಂಡು, ಸಭಾಪತಿ ಸ್ಥಾನಕ್ಕೆ ರಾಜೀನಾಮೆ ಕುರಿತು ಲೇಟರ್ ಹೆಡ್‌ನಲ್ಲಿ ಬೆರಳಚ್ಚುಗೊಳಿಸಿ, ಅಲ್ಲಿಯೇ ಸಹಿ ಸಹ ಪಡೆದುಕೊಂಡಿರುವುದು ಪ್ರಕಟವಾಗಿದೆ. ಸಭಾಪತಿಯವರಿಗೆ ಅಷ್ಟು ಆತುರವಾಗಿ ಲೇಟರ್ ಹೆಡ್ ತರಿಸಿ, ಸಹಿ ಪಡೆಯುವಂಥ ಅವಶ್ಯಕತೆ ಏನಿತ್ತು? ಅದು ಸರಿಯಾದ ನಿಯಮವಾಗಿಲ್ಲ ಎಂಬುದು ನನ್ನ ಭಾವನೆಯಾಗಿದೆ. ಎರಡನೆಯದಾಗಿ, ಮಾಧ್ಯಮದವರು ಸಭಾಪತಿಯವರೇ ಏತಕ್ಕಾಗಿ ಬೇಜಾರಿನಲ್ಲಿದ್ದೀರಿ ಎಂದು ಕೇಳಿದಾಗ, *"Speaking to press persons at his home office in Hubballi on Tuesday, August 11, 2026, Mr. Horatti said that it was the first time since 1956 that such a development regarding a resignation had taken place."*

Recalling the developments of the day, Mr. Horatti said:

*"After the Chief Minister asked for my resignation, I had conveyed to him during my meeting that I would resign on August 14th, the day the House commences its proceedings after the condolence motion on August 13th. However, on August 7…"*
ಪತ್ರಿಕೆಗೆ ಈ ರೀತಿಯ ಹೇಳಿಕೆ ಕೊಟ್ಟಿದ್ದಾರೆ. ಇವತ್ತು ರಾಜೀನಾಮೆ ಕೊಡುತ್ತಿದ್ದರು. ಎಲ್ಲರೂ ಕೂಡ ನನಗೆ ಇಷ್ಟೊಂದು ಸಹಕರಿಸಿದ್ದು, ಸಹಕರಿಸಿದಂಥ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಅಭಿನಂದನೆಯನ್ನು ತಿಳಿಸಿ, ಗೌರವಯುತವಾಗಿ ಸಭಾಪತಿ ಸ್ಥಾನದಿಂದ ನಿರ್ಗಮನವನ್ನು ಮಾಡುತ್ತೇನೆ ಎಂದು ಹೇಳಿದ್ದು, ಅದಕ್ಕೆ ಕಾಂಗ್ರೆಸ್ ಪಕ್ಷದವರು ಅವಕಾಶವೇ ಕೊಡಲಿಲ್ಲ. ಜೆ.ಡಿ.ಎಸ್., ಬಿ.ಜೆ.ಪಿ. ಸೇರಿಕೊಂಡರೆ ನಾವು 30 ಮಂದಿ ಇದ್ದೇವೆ, ಹಾಗೆಯೇ ಕಾಂಗ್ರೆಸ್ ಪಕ್ಷದಲ್ಲಿ 38, 39 ಮಂದಿ ಇದ್ದೀರಿ. ಇದು quite natural. ಯಾವುದೇ ಪಕ್ಷದಲ್ಲಿ ಬಹುಮತ ಇದ್ದಾಗ ಆ ಪಕ್ಷದವರನ್ನೇ ಸಭಾಪತಿಯಾಗಿ ಆಯ್ಕೆ ಮಾಡಲಾಗುತ್ತದೆ ಎಂದು ನಾವೆಲ್ಲರೂ ಕೂಡ ಭಾವಿಸಿದ್ದೆವು. ಆದರೆ, ಹಿರಿಯ ಶಾಸಕರು, ಹಿರಿಯ ಮುತ್ಸದ್ದಿಯಾಗಿರುವವರಿಗೆ ಯಾವ ರೀತಿ ಗೌರವಯುತವಾಗಿ ಸಭಾಪತಿ ಪೀಠದಿಂದ ನಿರ್ಗಮನ ಮಾಡಬೇಕಾಗಿತ್ತು, ಆ ರೀತಿ ಮಾಡಲಿಲ್ಲ ಎಂಬ ನೋವು ಮಾನ್ಯ ಬಸವರಾಜ ಹೊರಟ್ಟಿಯವರಿಗೆ ಇದ್ದು, ಅವರು ಈ ಸದನದಲ್ಲಿಯೇ ಇದ್ದಾರೆ. ಸದರಿ ವಿಚಾರವಾಗಿ ನಾವು ಸುಮ್ಮನೆ ಎಳೆಯುತ್ತಿಲ್ಲ. ಆದರೆ, ಇದಕ್ಕಿದ್ದ ಹಾಗೆ ರಾಜೀನಾಮೆ ಪಡೆದಿದ್ದು, ಏಕೆ, ಏನಾಯಿತು! ಎಂದು ಸಾಕಷ್ಟು ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಆದ್ದರಿಂದ ಮಾನ್ಯ ಬಸವರಾಜ ಹೊರಟ್ಟಿರವರು ಅದರ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕು.

ಇನ್ನೂ ಮುಂದೆ ಆರೋಗ್ಯಕರವಾದ ವಿಷಯಗಳು ಸದನದೊಳಗೆ ಚರ್ಚೆಯಾಗಬೇಕು. ಮಾನ್ಯ ಎಸ್. ರವಿರವರು quality decrease ಆಗುತ್ತಿದೆ ಎಂದು ಬಹಳ ಚೆನ್ನಾಗಿ ಹೇಳಿದ್ದು, ಅದರ ಬಗ್ಗೆ ನಾವೆಲ್ಲರೂ ಯೋಚನೆ ಮಾಡಬೇಕು. ಸದನದೊಳಗೆ ಆ ರೀತಿಯಾಗಿ ಗುಣಮಟ್ಟದ ಚರ್ಚೆಯಾಗಬೇಕು. ಅದರಿಂದ ಯಾರಿಗೆ ಲಾಭವೆಂದರೆ, ಸಮಾಜಕ್ಕೆ ಲಾಭ. ಸಮಾಜಕ್ಕೆ ನ್ಯಾಯವನ್ನು ಕೊಡುವಂಥ ಕೆಲಸ ಮಾಡಬೇಕಾಗಿದೆ. ನಾವು ಸರ್ಕಾರದ ತೆರಿಗೆ ಹಣವನ್ನು ತಿನ್ನುತ್ತಿದ್ದು, ಮನಸ್ಸಿಗೆ ನೋವಾಗುತ್ತದೆ. ಬರಗಾಲದಿಂದ ರೈತರ ಪರಿಸ್ಥಿತಿ ಏನಾಗಿದೆ ಎಂಬುದನ್ನು ನೋಡಿ. ಪೌರಕಾರ್ಮಿಕರು, ರೈತರು, ಪಿಂಚಣಿದಾರರೆಲ್ಲರೂ ಒಳಗೊಂಡ ಹಾಗೆ ಸಂಕಷ್ಟದಲ್ಲಿದ್ದಾರೆ. ಇಂತಹ ವಿಚಾರಗಳ ಬಗ್ಗೆ ಚರ್ಚೆಯಾಗಬೇಕಾಗಿದೆ. ಆದ್ದರಿಂದ ಅಂದಿನ ದಿವಸ ಸಭಾಪತಿಯವರ ವಿಚಾರವಾಗಿ ಏನು development ಆಗಿದೆ, ಅದರಿಂದ ಖಂಡಿತ ನಮ್ಮ ವಿಧಾನ ಪರಿಷತ್ತಿಗೆ ಒಳ್ಳೆಯ ಹೆಸರು ಬರಲಿಲ್ಲ. ಈ ರೀತಿ ಬೆಳವಣಿಗೆ ಆಗಬಾರದಾಗಿತ್ತು ಎಂದು ಹೇಳಿ, ಧನ್ಯವಾದಗಳೊಂದಿಗೆ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ನಮ್ಮ ಪಕ್ಷದಿಂದ ಆಯ್ಕೆಯಾಗಿರುವಂಥ, ನಿಷ್ಠವಂಥ, ಪ್ರಾಮಾಣಿಕ ಮತ್ತು ದಕ್ಷತೆಯಿಂದ ಕೆಲಸ ಮಾಡಿದಂಥ, ಜನಾನುರಾಗಿಯಾಗಿ ಕೆಲಸ ಮಾಡಿದಂಥ, ಸಾಮಾಜಿಕ ನ್ಯಾಯದಲ್ಲಿ ನಂಬಿಕೆಯನ್ನಿಟ್ಟುಕೊಂಡ, ಅಪ್ಪಟ ಕಾಂಗ್ರೆಸ್ ಪಕ್ಷದಿಂದ ಸಭಾಪತಿಯಾಗಿ ಆಯ್ಕೆಗೊಂಡಿದ್ದು, ಪಕ್ಷಾತೀತವಾಗಿ ನಡೆದುಕೊಳ್ಳುತ್ತೀರಿ ಎಂಬುದರಲ್ಲಿ ಎರಡು ಮಾತಿಲ್ಲ.

(ಮುಂದು)

**(691) 14.08.2026/1.10/ಎಸ್‌ಕೆ-ಎಂಡಿ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ. ನಾಗರಾಜು (ಮುಂದು):**

ನಮಗೆ ಆಗಿರುವ ಹೆಮ್ಮೆ ಏನೆಂದರೆ, ನಮಗೆಲ್ಲರಿಗೂ ಆದರ್ಶ, ಮನುಷ್ಯತ್ವ ಇಟ್ಟುಕೊಂಡಿರುವಂತಹ ಹಾಗೂ ಎಲ್ಲಾ ವರ್ಗಗಳನ್ನು ಪ್ರೀತಿಯಿಂದ ಕಾಣುವಂತಹವರು. ಕಾರ್ಯಕರ್ತರಿಗೂ ಅದೇ ಭಾವನೆಯನ್ನು ಇಲ್ಲಿಯವರೆವಿಗೂ ಛಾಪು ಮೂಡಿಸಿರುವಂತಹ ಒಬ್ಬ ಉತ್ತಮವಾದ ನಾಯಕನನ್ನು ಸಭಾಪತಿಯಾಗಿ ಆಯ್ಕೆ ಮಾಡಿರುವಂತಹ ಶ್ರೀ ರಾಹುಲ್ ಗಾಂಧಿಯವರಿಂದ ಹಿಡಿದು ವರಿಷ್ಠರೆಲ್ಲರಿಗೂ ಮತ್ತು ವಿಶೇಷವಾಗಿ ನಮ್ಮ ಪಕ್ಷದ ಅಧ್ಯಕ್ಷರು ಹಾಗೂ ಮಾನ್ಯ ಮುಖ್ಯಮಂತ್ರಿಗಳಿಗೂ ನಾನು ಅಭಿನಂದನೆಯನ್ನು ಸಲ್ಲಿಸಬಯಸುತ್ತೇನೆ. ಮಾನ್ಯ ಸಲೀಂ ಅಹ್ಮದ್‌ರವರು ಸಭಾಪತಿಯಾಗಿ ಆಯ್ಕೆಯಾಗಿಗೊಂಡಿರುವುದಕ್ಕೆ ನಾನು ನನ್ನ ಅಭಿನಂದನೆಯನ್ನು ಸಲ್ಲಿಸಬಯಸುತ್ತೇನೆ.

ವಿಶೇಷವಾಗಿ ಇವರ ಬಗ್ಗೆ ಬಹಳಷ್ಟು ಜನರು ಮಾತನಾಡುತ್ತಿದ್ದರು. ನಾನು ಒಂದು ಮಾತನ್ನು ಹೇಳಿದೆ. ಎಲ್ಲರೂ ಕೂಡ ಮರೆತಿದ್ದರು. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ಸಾಹೇಬರು ಆಗಿನ ಕೆ.ಪಿ.ಸಿ.ಸಿ., ಅಧ್ಯಕ್ಷರಾಗಿದ್ದಂತಹ ಸಂದರ್ಭದಲ್ಲಿ ಇವರು ಕಾರ್ಯಾಧ್ಯಕ್ಷರಾಗಿ ಕೆಲಸ ಮಾಡಿದ್ದರು. ಕೋವಿಡ್ ಸಂದರ್ಭ ಬಂದಾಗ ಯಾವ ರೀತಿ handle ಮಾಡಿದ್ದಾರೆ ಎಂಬುದನ್ನು ನೋಡಿದಾಗ ಕೆ.ಪಿ.ಸಿ.ಸಿ., ಅಧ್ಯಕ್ಷರ ಹೆಗಲಿಗೆ ಹೆಗಲನ್ನು ಕೊಟ್ಟು ಕೆಲಸ ಮಾಡಿದಂತಹ ಯಾರಾದರೂ ಕಾರ್ಯಾಧ್ಯಕ್ಷರಾಗಿದ್ದರೆ, ಅವರೇ ಮಾನ್ಯ ಸಲೀಂ ಅಹ್ಮದ್ ಸಾಹೇಬರು ಎಂದು ನಾನು ಹೇಳಬಯಸುತ್ತೇನೆ. ಅವರು ನನಗಿಂತ ಹಿರಿಯರಾಗಿದ್ದರೂ ಕೋವಿಡ್ ಸಂದರ್ಭದಲ್ಲಿ ರಾತ್ರಿ 1 ಗಂಟೆ ಸಮಯದವರೆಗೆ ಕೆಲಸ ಮಾಡುತ್ತಿದ್ದೀರಾ, ನಿಮಗೇನೂ ಜೀವದ ಭಯವಿಲ್ಲವೇ ಎಂದು ನಾನು ಅವರಿಗೆ strict ಆಗಿ ಕೇಳಿದೆ. ಅವರಿಗೆ atleast mask ಆದರೂ ಹಾಕಿಕೊಳ್ಳಿ ಎಂದು ಹೇಳಿದಾಗ, ಇರಲಿ, ಜನರಿಗೋಸ್ಕರ ಕೆಲಸ ಮಾಡುವುದಕ್ಕೆ ನನಗೊಂದು ಅವಕಾಶ ಸಿಕ್ಕಿದೆ ಎಂದು ಹೇಳಿದರು. ಆಗ ನನ್ನನ್ನು ಕೂರಿಸಿಕೊಂಡು ಅರ್ಧ ಗಂಟೆ ಮಾತನಾಡಿ ಕೆಲಸ ಹಚ್ಚಿದಂತಹ ವ್ಯಕ್ತಿ ಯಾರಾದರೂ ಇದ್ದರೆ ಮಾನ್ಯ ಸಲೀಂ ಅಹ್ಮದ್ ಸಾಹೇಬರು ಎಂಬ ಮಾತನ್ನು ಹೇಳುತ್ತೇನೆ. ಕೋವಿಡ್ ಸಮಯದಲ್ಲಿ ವಲಸಿಗರು, ಹಳ್ಳಿಗಾಡಿನವರಿಗೆ ಬಹಳಷ್ಟು ಆಹಾರ ಸಾಮಾಗ್ರಿಗಳ ಕಿಟ್‌ಗಳನ್ನು ಮಾನ್ಯ ಅಧ್ಯಕ್ಷರು ಕೊಡಬೇಕೆಂದು ಇವರಿಗೆ ಹೇಳಿದಾಗ, ಇವರು ಬಹಳ ಮುತುವರ್ಜಿಯಿಂದ ಕೆಲಸ ಮಾಡಿದರು. ಅವರಲ್ಲಿ ಇರುವಂತಹ ವಿಶೇಷವಾದಂತಹ ಗುಣವೇನೆಂದರೆ ಮನುಷ್ಯತ್ವ ಪ್ರತಿಪಾದನೆ ಮಾಡಿದ ಒಬ್ಬ ಉತ್ತಮವಾದಂತಹ ಸರಳ ಸಜ್ಜನಿಕೆಯ ವ್ಯಕ್ತಿಯನ್ನು ನೋಡಿದಂತಾಯಿತು ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಈ ಒಂದು ವಿಧಾನ ಪರಿಷತ್ತಿನಲ್ಲಿ ಗುಣಮಟ್ಟದ ಚರ್ಚೆಯಾಗಬೇಕೆಂಬ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಹೇಳಿದರು. ಆದರೆ ಒಂದು ಪಕ್ಷದ ಕಡೆಯಿಂದ ಚರ್ಚೆ ಮಾಡಿದರೆ ಸಾಲದು. ಆಡಳಿತ ಪಕ್ಷ ಅಥವಾ ವಿರೋಧ ಪಕ್ಷ ಯಾವುದಾದರೂ ಇರಲಿ. ಎರಡು ಪಕ್ಷಗಳು ಸೇರಿ ಸಾಮಾಜಿಕವಾಗಿರುವಂತಹ ಸಮಸ್ಯೆಗಳನ್ನು ರಾಜಕೀಯರಹಿತವಾಗಿ ಚರ್ಚೆ ಮಾಡುವಂತಹದ್ದಕ್ಕೆ ಅವಕಾಶ ಮಾಡಿಕೊಡುತ್ತಾರೆ ಎಂಬ ನಂಬಿಕೆ

ಇದೆ ಎನ್ನುವ ಮಾತನ್ನು ಹೇಳುತ್ತೇನೆ. ವಿಧಾನ ಪರಿಷತ್ತನ್ನು ಮೇಲ್ಮನೆ, ಚಿಂತಕರ ಛಾವಡಿ ಎನ್ನುತ್ತಾರೆ. ಯಾವ ಸಮುದಾಯಗಳಿಗೆ ಅಸೆಂಬ್ಲಿಯಲ್ಲಿ ಆಯ್ಕೆಯಾಗಿ ಬರುವುದಕ್ಕಾಗುವುದಿಲ್ಲವೋ, ಅಂತಹ ಸಮುದಾಯಗಳಿಗೆ ಧ್ವನಿ ಕೊಡುವಂತಹ ಬಹಳ ದೊಡ್ಡ ವೇದಿಕೆ ಮತ್ತು ರಾಜಕೀಯ ವ್ಯಕ್ತಿಯಲ್ಲದ್ದಾಗಿರುವಂತಹ ಯಾವುದಾದರೂ ಸಭೆ ಇದ್ದರೆ, ಅದು ವಿಧಾನ ಪರಿಷತ್ತು ಎನ್ನುವ ಮಾತನ್ನು ಹೇಳಬಯಸುತ್ತೇನೆ. ಬಹಳ ದೊಡ್ಡ ಇತಿಹಾಸ ಇರುವಂತಹ ವಿಧಾನ ಪರಿಷತ್ತಿನಲ್ಲಿ ನಮಗೆಲ್ಲರಿಗೂ ಕೂಡ ಇಲ್ಲಿ ಅವಕಾಶ ಕೊಟ್ಟಿದೆ. ಇಲ್ಲಿ ಉತ್ತಮವಾದಂತಹ ಚರ್ಚೆಗಳ ಜೊತೆಗೆ ಸಂವಿಧಾನದ ಆಶಯಗಳೊಂದಿಗೆ ಕೆಲಸ ಮಾಡುವಂತಹದ್ದು. ಧ್ವನಿ ಇಲ್ಲದಿರುವವರ ಪರವಾಗಿ ಧ್ವನಿಯಾಗಿ ಕೆಲಸ ಮಾಡುವಂತಹ ಉತ್ತಮವಾದ ಯಾವುದಾದರೂ ವೇದಿಕೆಯಿದ್ದರೆ, ದೇಶದಲ್ಲಿ ಅತಿ ಹಳೆಯದಾದ ಯಾವುದಾದರೂ ಪರಿಷತ್ತಿ ಇದ್ದರೆ ಅದು ಕರ್ನಾಟಕದ ವಿಧಾನ ಪರಿಷತ್ತು ಎನ್ನುವ ಮಾತನ್ನು ಹೇಳುತ್ತೇನೆ. ಇಡೀ ದೇಶದಲ್ಲಿ ಬಹಳ ಹಳೆಯದಾಗಿರುವಂತಹ ಕರ್ನಾಟಕ ರಾಜ್ಯದ ವಿಧಾನ ಪರಿಷತ್ತು. ಇಲ್ಲಿ ಇರುವ ಮಾನ್ಯ ಸದಸ್ಯರೆಲ್ಲರೂ ಗೌರವಾನ್ವಿತ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿರುವಂತಹವರು. ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿರುವಂತಹವರು ಇರಬಹುದು. ರಾಜ್ಯಪಾಲರಿಂದ ನಾಮ ನಿರ್ದೇಶನವನ್ನು ಹೊಂದಿದಂತಹವರು ಇರಬಹುದು, ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಆಯ್ಕೆಯಾಗಿ ಬಂದಿರುವಂತಹವರು ಇರಬಹುದು, ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿರುವಂತಹವರು ಇರಬಹುದು. ವಿರೋಧ ಪಕ್ಷದ ಕಡೆಯಲ್ಲಿ ಕುಳಿತಿರುವ ಮಾನ್ಯ ಬಸವರಾಜ ಹೊರಟ್ಟಿಯವರು ಶಿಕ್ಷಕರ ಕ್ಷೇತ್ರದಿಂದ ಎಂಟು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ ಎಂದರೆ, we are all proud of this Legislative Council ಎಂಬ ಮಾತನ್ನು ಹೇಳಬಯಸುತ್ತೇನೆ. ರಾಜಕೀಯ ಮಾಡುವಂತಹ ಸಂದರ್ಭದಲ್ಲಿ ಚುನಾವಣೆ ಬಂದಾಗ ರಾಜಕೀಯ ಮಾಡುತ್ತೇವೆ.

ಮಾನ್ಯ ಸಭಾಪತಿಯವರಲ್ಲಿ ಮನವಿ ಮಾಡುವುದೇನೆಂದರೆ, ಇವತ್ತಿನವರೆಗೂ ಎರಡು ಗಂಟೆಗಳ ಹಿಂದಿನವರೆಗೂ ಕಾಂಗ್ರೆಸ್ ನಾಯಕರಾಗಿ ಕೆಲಸ ಮಾಡಿದ್ದೀರಿ. ಈಗ ಸಭಾಪತಿಯವರಾಗಿ ಕೆಲಸ ಮಾಡಬೇಕಾದರೆ ಎರಡು ಪಕ್ಷಗಳಿಗೂ equal opportunities ಕೊಡುವಂತಹ ಕೆಲಸವನ್ನು ಮಾಡಬೇಕು. ಅದು ರಾತ್ರಿ ಎಷ್ಟು ಹೊತ್ತಿನವರೆಗೂ ಆಗುತ್ತದೆ ಎಂಬ ಪ್ರಶ್ನೆಯಲ್ಲ. ಆದರೆ ಯಾವ ವಿಚಾರಗಳು ಚರ್ಚೆಯಾಗುತ್ತದೆ, ಯಾವ ವಿಚಾರಗಳು ರಾಜಕೀಯರಹಿತವಾಗಿ ಚರ್ಚೆಯಾಗುತ್ತದೆ ಎನ್ನುವುದು ಬಹಳ ಮುಖ್ಯವಾಗುತ್ತದೆ. ಬರಗಾಲ ವಿಚಾರ ಬಂದಾಗ ಸಲಹೆ ಸೂಚನೆಗಳನ್ನು ರಾಜ್ಯ ಸರ್ಕಾರಕ್ಕೆ ಕೊಡುವಂತಹ ಕೆಲಸವಾಗಬೇಕು ಹೊರತು, ಅದನ್ನು ರಾಜಕೀಯಕ್ಕೆ ಉಪಯೋಗಿಸುವಂತಹ ಸರಿಯಾದ ವಿಧವಲ್ಲ ಎಂದು ನಾನು ಭಾವಿಸಿದ್ದೇನೆ. ಅದೇ ರೀತಿ ನೆರೆ ಹಾವಳಿ ಬಂದಂತಹ ಸಂದರ್ಭದಲ್ಲಿ ಅದನ್ನು ರಾಜಕೀಯವಾಗಿ ಉಪಯೋಗಿಸಿಕೊಳ್ಳುವಂತಹ ಕೆಲಸ ಮಾಡಿದರೆ, ನಾವು ಎಲ್ಲೋ ಒಂದು ಕಡೆ ರೈತರಿಗೂ ಅನ್ಯಾಯ ಮಾಡಿದಂತಾಗುತ್ತದೆ. ಹಾಗಾಗಿ ಯುವಕರು, ಮಹಿಳೆಯರು, ರೈತರು ಮತ್ತು ಇನ್ನೂ ಯಾರದಾದರೂ ಇರಬಹುದು, ಅದು ಶಿಕ್ಷಣ, ಸಹಕಾರ ಕ್ಷೇತ್ರ ಇರಬಹುದು. ಅದು ಕಟ್ಟಕಡೆಯ ನಾಗರೀಕರಿಗೆ ನ್ಯಾಯ ಕೊಡಿಸುವಂತಹ ಕೆಲಸದಲ್ಲಿ ರಾಜಕೀಯ ರಹಿತವಾಗಿ ಚರ್ಚೆಯಾಗವಂತಹದ್ದಕ್ಕೆ ಅವಕಾಶ ಕೊಡಬೇಕೇ

ಹೊರತು ಅದು ರಾಜಕೀಯ ಪ್ರೇರಿತವಾಗಿ election agenda ಮಾಡಿಕೊಂಡು ಹೋಗುವಂತಹದ್ದಕ್ಕೆ ಅವಕಾಶಗಳು ಕೊಡಬಾರದು ಎಂಬ ವಿಚಾರಗಳ ಬಗ್ಗೆ ನಾನು ತಮಗೆ ವಿನಮ್ರವಾಗಿ ಮನವಿಯನ್ನು ಮಾಡುತ್ತಿದ್ದೇನೆ. ಹಾಗಾಗಿ ಇಂತಹ ವಿಚಾರಗಳನ್ನು ಹೇಳುತ್ತಿದ್ದೇನೆ. ತಾವು ಉನ್ನತ ಸ್ಥಾನಕ್ಕೆ ಅಲಂಕರಿಸಬೇಕಾದರೆ, ತಮ್ಮದೇ ಹೋರಾಟದ ದಾರಿಯನ್ನು ನೋಡಿದಾಗ, ನಿಜವಾಗಿಯೂ ಒಬ್ಬ ವಿದ್ಯಾರ್ಥಿ ನಾಯಕನಾಗಿ ಯುವ ನೇತಾರರಾಗಿ, ರಾಜ್ಯ ಮಟ್ಟದಿಂದ ರಾಷ್ಟ್ರ ಮಟ್ಟದವರೆಗೂ; ನನಗೆ ಮಾತನಾಡಲು ಒಂದೆರಡು ನಿಮಿಷ ಸಮಯ ಕೊಡಬೇಕು.

ಮಾನ್ಯ ಸಭಾಪತಿಯವರೇ. ತಾವು ಅಷ್ಟು ಬೇಗ ಬೆಲ್ ಮೇಲೆ ಕೈ ಇಟ್ಟಿರಿ. ತಾವು ಒಬ್ಬ ಯುವ ನೇತಾರರಾಗಿ, N.S.U.I. (National Students' Union of India) ನ ಅಧ್ಯಕ್ಷರಾಗಿ ರಾಷ್ಟ್ರ ಮಟ್ಟದಲ್ಲಿ ಕೆಲಸ ಮಾಡಿದ್ದೀರಿ. ಅದು ಕೂಡ ಜಾತ್ಯಾತೀತ ಪಕ್ಷದಲ್ಲಿ ಈ ರಾಷ್ಟ್ರದ ಸಂವಿಧಾನದ ಬಗ್ಗೆ ನಂಬಿಕೆಯನ್ನಿಟ್ಟುಕೊಂಡು ಬಂದು ತಾವು ಪೀಠದಲ್ಲಿ ಕುಳಿತುಕೊಳ್ಳಬೇಕಾದರೆ, ಸಂವಿಧಾನದ ಪುಸ್ತಕವನ್ನು ಇಟ್ಟುಕೊಂಡು ಬಂದು ಕುಳಿತರಲ್ಲ. ಆಗ ನಾವು ಅದನ್ನು ನೋಡಿ ನಿಜವಾಗಿಯೂ ನಮಗೆ ಹೆಮ್ಮೆ ಎನ್ನಿಸಿತು ಎಂಬ ಮಾತನ್ನು ಹೇಳಬಯಸುತ್ತೇನೆ. ತಾವು ಅಲ್ಪಸಂಖ್ಯಾತ ವರ್ಗದಿಂದ ಬಂದಂತಹವರು ಇರಬಹುದು. ಆದರೆ ಮನುಷ್ಯತ್ವ ಇರುವಂತಹ ಒಬ್ಬ ನೇತಾರರನ್ನು ಕೇಂದ್ರದ ವರಿಷ್ಠರು ಸಭಾಪತಿ ಸ್ಥಾನಕ್ಕೆ ಆಯ್ಕೆ ಮಾಡಿರುವಂತಹದ್ದು ಬಹಳ ಮುಖ್ಯ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಇವತ್ತಿನ ದಿವಸ ನಮ್ಮ ದೇಶದಲ್ಲಿ ಅಲ್ಪಸಂಖ್ಯಾತರು ಶೋಷಿತರು ಭಯದ ವಾತಾರಣದಲ್ಲಿ ಬದುಕುತ್ತಿದ್ದಾರೆ ಎನ್ನುವಂತಹ ಸಂದರ್ಭದಲ್ಲಿ ನಮ್ಮ ಕಾಂಗ್ರೆಸ್ ಪಕ್ಷ ಅಲ್ಪಸಂಖ್ಯಾತರಿಗೆ ಸಭಾಪತಿ ಸ್ಥಾನಕ್ಕೆ ಕೂರಿಸಿ ನ್ಯಾಯ ಸಮ್ಮತ ಮತ್ತು ಸಾಮಾಜಿಕ ಪರಿಕಲ್ಪನೆಯ ಸಂವಿಧಾನ ಆಶಯಗಳಲ್ಲಿ ನ್ಯಾಯ ಕೊಡಿಸುವಂತಹ ಸ್ಥಾನದಲ್ಲಿ ತಮ್ಮನ್ನು ಕೂರಿಸಿದ್ದಾರೆ. ಅದಕ್ಕಾಗಿ ನಾವು ಸಂತೋಷಪಡಬೇಕು ಎನ್ನುವ ಮಾತನ್ನು ಹೇಳಬಯಸುತ್ತೇನೆ.

ತಾವು ಒಳ್ಳೆಯ ಶಿಕ್ಷಣವನ್ನು ಪಡೆದುಕೊಂಡಿದ್ದೀರಿ. ಒಳ್ಳೆಯ ಹೋರಾಟಗಳನ್ನು ಮಾಡಿಕೊಂಡು ಬಂದಿದ್ದೀರಿ. ಭಾಷೆ, ಗಡಿ ನಾಡು ಹಾಗೂ ಎಲ್ಲಾ ವಿಚಾರಗಳ ಬಗ್ಗೆ ಹೆಚ್ಚಿನದಾಗಿ ತಿಳಿದುಕೊಂಡು ಬಂದಿದ್ದೀರಿ. ಹಾಗೆಯೇ ಮಾನ್ಯ ಬಸವರಾಜ ಹೊರಟ್ಟಿಯವರ ಬಗ್ಗೆ ಅನೇಕ ಜನ ಸದಸ್ಯರು ಹೇಳುತ್ತಿದ್ದರು. ನನಗೆ ಗೊತ್ತಿರುವ ಪ್ರಕಾರ ಅವೊತ್ತಿನ ದಿವಸ ನಾನು ಬೆಂಗಳೂರಿನಲ್ಲಿ ಇರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಕೆ.ಪಿ.ಸಿ.ಸಿ., ಅಧ್ಯಕ್ಷರು ಸಭಾಪತಿಯವರ ಹತ್ತಿರ ಅತ್ಯಂತ ಗೌರವಯುತವಾಗಿ ನಡೆದುಕೊಂಡರು. ಅವರು ಸ್ವಇಚ್ಛೆಯಿಂದ ರಾಜೀನಾಮೆ ಕೊಟ್ಟಿರುವಂತಹದ್ದನ್ನು ದಿನಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಓದಿದ್ದೇನೆ. ನಮ್ಮ ಪಕ್ಷದಲ್ಲಿರುವವರೆಲ್ಲರೂ ಕೂಡ ಮಾನ್ಯ ಬಸವರಾಜ ಹೊರಟ್ಟಿ ಗೌರವಯುತವಾಗಿ ನಡೆದುಕೊಂಡಿದ್ದಾರೆ. ಆದರೆ ಟೀಕೆ ಟಿಪ್ಪಣಿಗಳು ಇರಬಹುದು. ವಿಚಾರದ ಬಗ್ಗೆ ಭೇದಭಾವಗಳು ಇರಬಹುದು. ಆದರೆ ಆಕ್ಷೇಪಗಳು ವ್ಯಕ್ತಪಡಿಸುವಂತಹದ್ದು, ಟೀಕೆ ಟಿಪ್ಪಣಿಗಳು ಇರಬಾರದೇ ಹೊರತು ವ್ಯಕ್ತಿಗತವಾಗಿ ಗೌರವ ಕೊಡುವಂತಹದ್ದನ್ನು ನಾವೆಲ್ಲರೂ ಕಲಿತುಕೊಂಡಿದ್ದೇವೆ. ಅದನ್ನೇ ನಮ್ಮ ಮುಖ್ಯಮಂತ್ರಿಗಳು ಮತ್ತು ಕೆ.ಪಿ.ಸಿ.ಸಿ., ಅಧ್ಯಕ್ಷರು ಹೇಳಿಕೊಟ್ಟಿರುವಂತಹ ಮಾತನ್ನು ನಾನು ಹೇಳುತ್ತಿದ್ದೇನೆ.

ಒಟ್ಟಾರೆಯಾಗಿ, ಅವರು ಮಾಡಿರುವಂತಹ ಕೆಲಸಗಳ ಬಗ್ಗೆ ಗೌರವವನ್ನು ಕೊಡುತ್ತೇವೆ. ಈ ಸದನಕ್ಕೆ ಗೌರವ ಬರುವ ರೀತಿಯಲ್ಲಿ ಮುಂದಿನ ದಿನಗಳಲ್ಲಿ ತಾವು ಎಲ್ಲರನ್ನು ಒಟ್ಟಾಗಿ ತೆಗೆದುಕೊಂಡು ಹೋಗುವಂತಹದ್ದು. ಈ ಸದನದಲ್ಲಿ ಎಷ್ಟು ಸಮಯದವರೆಗೂ ಚರ್ಚೆ ಮಾಡಿದ್ದೇವೆ ಎಂಬ ಪ್ರಶ್ನೆಯಲ್ಲ. ಗುಣ ಮಟ್ಟದ ಚರ್ಚೆಗಳನ್ನು ಮಾಡುವುದಕ್ಕೆ ನಮಗೆಲ್ಲರಿಗೂ ಅವಕಾಶವನ್ನು ಕೊಡುತ್ತೀರಿ ಎನ್ನುವ ನಂಬಿಕೆಯೊಂದಿಗೆ ತಮಗೆ ಮೊಟ್ಟಮೊದಲನೆಯದಾಗಿ ಅಭಿನಂದನೆಯನ್ನು ಸಲ್ಲಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಪೂಜಾರ್‌ರವರೇ, ತಾವು ಮಾತನಾಡಿ. ಮಾನ್ಯ ಮುಖ್ಯಮಂತ್ರಿಗಳಿದ್ದಾರೆ. ಎಲ್ಲಾ ಮಂತ್ರಿಮಂಡಲದ ಸದಸ್ಯರಿದ್ದಾರೆ. ದಯವಿಟ್ಟು, ತಮ್ಮ ಆದಷ್ಟು ಬೇಗ ಮುಗಿಸಿ.

**ಶ್ರೀ ಡಿ.ಕೆ. ಶಿವಕುಮಾರ್ (ಮುಖ್ಯಮಂತ್ರಿಗಳು):-** ಮಾನ್ಯ ಸದಸ್ಯರೆಲ್ಲರೂ ಊರಿಗೆ ಹೋಗಬೇಕಾಗಿದೆ.

**ಸಭಾಪತಿಯವರು:-** ನಾಳೆ Independence Day flag hoisting programme ಇರುವುದರಿಂದ ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಊರುಗಳಿಗೆ ವಾಪಸ್ಸು ಹೋಗಬೇಕಾಗಿದೆ. ದಯವಿಟ್ಟು, ತಮ್ಮ ಮಾತನ್ನು ಎರಡು ನಿಮಿಷದಲ್ಲಿ ಮುಗಿಸಿ.

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ತಾವು ಹೊಸದಾಗಿ ಸಭಾಪತಿ ಸ್ಥಾನವನ್ನು ಅಲಂಕರಿಸಿದ್ದೀರಿ ಎಂಬ ಬಗ್ಗೆ ನಮಗೆಲ್ಲರಿಗೂ ಸಂತೋಷದ ವಿಷಯವಾಗಿದೆ. ನಾನು ತುಂಬ ಹೃದಯದಿಂದ ತಮಗೆ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ತಮ್ಮ Bio-data ಅನ್ನು ಈಗ ನೋಡುತ್ತಿದ್ದೇನೆ. ತಮ್ಮ ಪ್ರೌಢಾವಸ್ಥೆಯಿಂದ ಹಿಡಿದು ವಿದ್ಯಾರ್ಥಿಗಳ ಸಂಘಟನೆಯ ಮುಖಾಂತರ ರಾಜಕೀಯ ಪಕ್ಷದ ಕಾರ್ಯಕರ್ತರಾಗಿ ಅನೇಕ ಪದವಿಗಳನ್ನು ಅಲಂಕರಿಸಿದ್ದು, ಆ ಸ್ಥಾನದ್ದವರು ಜವಾಬ್ದಾರಿಯಾಗಿ ನಡೆದುಕೊಂಡಂತಹ ರೀತಿಯ ಬಗ್ಗೆ ಆಡಳಿತ ಪಕ್ಷದವರು ಬಹಳಷ್ಟು ವರ್ಣನೆ ಮಾಡಿ ಹೇಳಿದ್ದಾರೆ. ಇದು ಬಹಳ ಸಂತೋಷ ತರುವಂತಹ ವಿಷಯವಾಗಿದೆ. ಸಮಾಜದ ಒಬ್ಬ ಕಾರ್ಯಕರ್ತನಾಗಿ ಮತ್ತು ರಾಜಕೀಯ ಪಕ್ಷದ ಮುಖಂಡನಾಗಿ ಕೊಟ್ಟಂತಹ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿದಂತಹ ಹೆಗ್ಗಳಿಕೆ ತಮ್ಮದಾಗಿದೆ ಎನ್ನುವಂತಹದ್ದು ನನಗೂ ಸಂತೋಷವನ್ನು ಉಂಟು ಮಾಡಿದೆ. ನಾನು ಈ ಸದನಕ್ಕೆ ಪ್ರಥಮ ಬಾರಿ ಬಂದಂತಹವನು. ಈಗ ನಾಲ್ಕೂವರೆ ವರ್ಷವಾಗಿದೆ. ಈ ಸದನದ ಮೂರು ಅವಧಿಯಲ್ಲಿ ತಾವು ಒಬ್ಬ ಶಾಸಕರಾಗಿ ಕೆಲಸ ಮಾಡಿದಂತಹ ಅನುಭವದಲ್ಲಿ ಮಿಂದಿದ್ದೀರಿ ಎನ್ನುವಂತಹದ್ದು ಕೂಡ ಸಾಕ್ಷಿಯಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶ್ರೀ ಬಸವರಾಜ ಹೊರಟ್ಟಿಯವರು ನಮ್ಮ ಜಿಲ್ಲೆಯವರು. ನಾನು ಅವರನ್ನು ಬಹಳಷ್ಟು ಸಮೀಪದಿಂದ ಬಲ್ಲವನಾಗಿದ್ದೇನೆ. ಕಳೆದ ಹದಿನೈದು ದಿವಸಗಳ ವರದಿಗಳನ್ನು ಮತ್ತು ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದಾಗ ಬಹಳಷ್ಟು ನನ್ನ ಮನಸ್ಸಿಗೆ ನೋವುಂಟು ಮಾಡಿತ್ತು. "ಸರ್ ನಮ್ಮ ಪಕ್ಷ majority ಇಲ್ಲ. ರಾಜೀನಾಮೆ ಕೊಡಬೇಕಾಗುತ್ತದೆ" ಎಂದು ನಾನು ಅವರ ಜೊತೆ ಮಾತನಾಡಿದೆ. ರಾಜಕೀಯ ಪರಂಪರೆಯನ್ನು ಅನೇಕ ರೀತಿಯಲ್ಲಿ ನೋಡಿದ್ದೇವೆ. 1980 ರಿಂದ ಆ ಸ್ಥಾನ

ಅಲಂಕರಿಸಿದಂತಹ ರಾಜಕೀಯ ಪಕ್ಷದ ಮುಖಂಡರ ಬಗ್ಗೆ ಹೇಳುವುದಾದರೆ ಆಡಳಿತ ಪಕ್ಷದ ಸರ್ಕಾರವಿದ್ದಾಗ, ವಿರೋಧ ಪಕ್ಷದ ಉಪ ಸಭಾಪತಿಯಾಗಿ ಆ ಸ್ಥಾನವನ್ನು ಅಲಂಕರಿಸಿ ಕೆಲಸ ಮಾಡಿರುವಂತಹದ್ದು ಕೂಡ ಬಹಳಷ್ಟು ಗೌರವ ತರುವಂತಹ ಕೆಲಸ. ಅದೆಲ್ಲ ಇತಿಹಾಸವನ್ನು ನೋಡಿ ಬಂದಂತಹ ಸಂದರ್ಭದಲ್ಲಿ ಇತ್ತೀಚಿನ ವರ್ಷಗಳಲ್ಲಿ ಆ ಪರಂಪರೆ ಏತಕ್ಕೆ ದೂರವಾಗುತ್ತಾ ಬಂದಿದೆ ಎನ್ನುವಂತಹ ಖೇದದ ಭಾವನೆ ಕೂಡ ನನ್ನಲ್ಲಿ ಮೂಡಿತ್ತು.

(ಮುಂದು)

(692) 14.08.2026 1.20 TCH-AK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ.ಹೆಚ್.ಪೂಜಾರ್ (ಮುಂದು):**

ಮಾನ್ಯ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ಜೊತೆ ನಾನು ಮಾತನಾಡಿದಾಗ "ಇಲ್ಲಾ, ಮಾನ್ಯ ಪೂಜಾರ್‌ರವರೇ, ದಿನಾಂಕ 14.08.2026 ರಂದು ನಾನು ರಾಜೀನಾಮೆ ಕೊಡುತ್ತೇನೆ. ಸುದೀರ್ಘ ಅನುಭವ ಈ ಸದನದಲ್ಲಿ ನನ್ನದಾಗಿದೆ, ನಾನು ಅನೇಕ ಜವಾಬ್ದಾರಿಗಳನ್ನು ಕೂಡ ನಿರ್ವಹಿಸಿದ್ದೇನೆ. ಸದನಕ್ಕೆ ಕೃತಜ್ಞತೆ ಹೇಳಬೇಕು. ಈ ನಾಡಿಗೆ ನನ್ನ ಸಮರ್ಪಿತ ಜೀವನದ ಕೆಲವು ಅಂಶಗಳನ್ನು ವಿವರಿಸಬೇಕು ಎನ್ನುವಂಥ ಉದ್ದೇಶ ಇಟ್ಟುಕೊಂಡು ದಿನಾಂಕ 14.08.2026 ರಂದು ರಾಜೀನಾಮೆ ಕೊಡುತ್ತೇನೆ" ಎನ್ನುವಂಥ ವಿಚಾರವನ್ನು ಕೂಡ ವ್ಯಕ್ತ ಮಾಡಿದ್ದರು. ಪತ್ರಿಕೆಗಳಲ್ಲಿ ಬಂದಂತಹ ವರದಿ, ಮಾಧ್ಯಮಗಳಲ್ಲಿ ನೋಡಿದಂತಹ ಆ ದೃಶ್ಯಗಳಿಂದ ಅದೇಕೋ ಏನೋ ನನ್ನ ಮನಸ್ಸಿನಲ್ಲಿ ಬಹಳಷ್ಟು ಖೇದ ವ್ಯಕ್ತವಾಯಿತು. ಈ ಚುನಾವಣೆಯಲ್ಲಿ ನಾನು ಕೂಡ ಸ್ಪರ್ಧೆಗೆ ಇಳಿದಿದ್ದೆ. ಒಂದು ರಾಜಕೀಯ ಪಾರ್ಟಿಯ ಕಾರ್ಯಕರ್ತನಾದ ನನಗೆ N.D.A. ಮುಖಂಡರೆಲ್ಲರೂ ಸೇರಿಕೊಂಡು ಚುನಾವಣೆಗೆ ಸ್ಪರ್ಧೆ ಮಾಡುವಂಥ ಆದೇಶವನ್ನು ಕೊಟ್ಟಿದ್ದರು. ಅದಕ್ಕೆ ಕಾರಣ ಏನೆಂದು ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್‌ರವರು ವಿಶೇಷವಾಗಿ ವಿವರಣೆಯನ್ನು ಕೊಟ್ಟರು. ರೂಲಿಂಗ್ ಪಾರ್ಟಿಯ ಮಾನ್ಯ ಸದಸ್ಯರು ಮತ್ತು ವಿರೋಧ ಪಕ್ಷದ ಮಾನ್ಯ ಸದಸ್ಯರೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರನ್ನು ಕೂಡ ವಿಶ್ವಾಸಕ್ಕೆ ತೆಗೆದುಕೊಳ್ಳುವಂತಹ ಒಂದು ವಾತಾವರಣ ಸೃಷ್ಟಿಸಿ, ಈ ಚುನಾವಣೆ ನಡೆಯುವುದನ್ನು ತಪ್ಪಿಸಬಹುದಿತ್ತೇನೋ ಎನ್ನುವಂಥ ಕೊರಗು ನನ್ನಲ್ಲಿ ಕೂಡ ಉಳಿದಿದೆ; ಅದು ಆಗಬಾರದಿತ್ತು. ಪಕ್ಷಾತೀತವಾಗಿ ಆ ಸ್ಥಾನ ಅಲಂಕರಿಸಬೇಕೆಂದಾಗ ಮಾತ್ರ ಮೇಲ್ಮನೆಗೆ ಒಂದು ಗೌರವ ಮತ್ತು ಮರ್ಯಾದೆ ಸಿಗುವಂಥದ್ದು. ಆ ದೆಸೆಯಲ್ಲಿ ನಾನು ವಿಷಾದ ವ್ಯಕ್ತ ಮಾಡುತ್ತೇನೆ. ಇಂಥದ್ದು ಆಗಬಾರದು ಇನ್ನು ಮುಂದೆ ಕೂಡ ಈ ರೀತಿ ಆಗಬಾರದು ಎನ್ನುವಂಥ ಒಂದು ವಿಚಾರವನ್ನು ಹೇಳುತ್ತಾ, ತಾವು ಒಬ್ಬರು ಸಜ್ಜನ ರಾಜಕಾರಣಿ ಕೂಡ ಆಗಿದ್ದೀರಿ. ನಿಗರ್ವಿ ಕೂಡ ಆಗಿದ್ದೀರಿ. ಸರಳತೆಯ ವ್ಯವಹಾರವನ್ನು ಸುಮಾರು ನಾಲ್ಕೂವರೆ ವರ್ಷಗಳಿಂದ ನಾವು ತಮ್ಮಲ್ಲಿ ಕಂಡಾಗ, ಯಾವುದೇ ಲವಲೇಶವೂ ಕೂಡ ನಾನು ಈ ವಿಚಾರ ಹೇಳುವುದಕ್ಕೆ ಇಲ್ಲವೇ ಇಲ್ಲ. ಅದರಂತೆ ತಾವು ನಡೆದುಕೊಂಡಿದ್ದೀರಿ. ಆದರೆ ರಾಜಕೀಯ ಪಾರ್ಟಿ ಇದ್ದಾಗ ಒಂದು ಕಡೆ ಇರುವಂಥ ಭಾವನೆ ಇರುವಂಥದ್ದೆ.

ಮಾನ್ಯ ಸದಸ್ಯರಾದ ಶ್ರೀ ಸಿ.ಟಿ.ರವಿಯವರು ಮಾತನಾಡತಕ್ಕಂಥ ಸಂದರ್ಭದಲ್ಲಿ 'ಸನ್ಯಾಸಿ ಸ್ಥಾನಮಾನ' ಎಂದು ಹೇಳಿದರು. ಅದಕ್ಕೆ ಆಡಳಿತ ಪಕ್ಷದ ಸದಸ್ಯರು ಟೀಕೆ-ಟಿಪ್ಪಣಿ ಕೂಡ ಮಾಡಿದರು. ತಾವು ಸನ್ಯಾಸಿಯಾಗಿ ನಡೆದುಕೊಳ್ಳಬೇಕು ಎಂದು ಹೇಳಿದರು. ಯಾರು ಕೂಡ ಅಪೇಕ್ಷೆ ಮಾಡುವುದಿಲ್ಲ. ಆದರೆ ಸರ್ಕಾರದ ಕಡೆ ಯಾವಾಗಲೂ ಬಲ ಇರುತ್ತದೆ. ಸರ್ಕಾರ ಅತ್ಯಂತ ಬಲಶಾಲಿ, ಅದರಲ್ಲಿ ಎರಡು ಮಾತಿಲ್ಲ. ಅದರಲ್ಲೂ ವಿಶೇಷವಾಗಿ ಆ ಕಡೆ ಮಾನ್ಯ ಡಿ.ಕೆ.ಶಿವಕುಮಾರ್‌ರವರಂತಹ ಒಬ್ಬರು ಮೇಧಾವಿ ಸಶಕ್ತ ರಾಜಕಾರಣಿ ಇದ್ದಾಗ ಇನ್ನೂ ಹೆಚ್ಚಿನ ಬಲ ಕಾಂಗ್ರೆಸ್ ಸರ್ಕಾರಕ್ಕೆ ಇದೆಯೆಂದು ನಾನು ಒಪ್ಪಿಕೊಳ್ಳುತ್ತೇನೆ. ಕಾನೂನಿನಲ್ಲಿ ಒಂದು ವ್ಯವಸ್ಥೆ ಇದೆ. 'Infant' ಎಂದು ಹೇಳುತ್ತಾರೆ. ಸರ್ಕಾರ ಕೂಡ infant. ಪಿ.ಡಬ್ಲ್ಯೂ.ಡಿಯ ಅಥವಾ ಯಾವುದಾದರೂ ಜಾಗವನ್ನು ಅತಿಕ್ರಮಣ ಮಾಡಿಕೊಂಡು ಮನೆ ಕಟ್ಟಿಕೊಂಡಿದ್ದರೆ, ಅದು ಕೂಸಿನ ಮನೆ, ಅದನ್ನು ಖಾಲಿ ಮಾಡಬೇಕು ಎಂದು 12 ವರ್ಷಗಳ ನಂತರ ಅದು ನನ್ನ ಮನೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಅದೇರೀತಿ ಮಹಿಳೆ ಬಗ್ಗೆಯೂ ಇದೆ. ಈ ಕಡೆ ಇರುವಂಥ ಭಾವನೆ infant ಎನ್ನುವ ರೀತಿ ನೀವು ಟ್ರೀಟ್‌ಮೆಂಟ್ ಕೊಡಬೇಕು. ಆ ಕಡೆಗೆ ಅಧಿಕಾರ ಇದೆ, ಶಕ್ತಿ ಮತ್ತು ಸಾಮರ್ಥ್ಯ ಇದೆ ಎನ್ನುವಂಥ ವಿಚಾರವನ್ನು ಮರೆಸುವ ಹಾಗೆ ನಮ್ಮ ಕಡೆ ನೋಡುವಂಥ ಔದಾರ್ಯ ಅವರು ಆಗಬೇಕು ಎನ್ನುವಂಥ ಅಪೇಕ್ಷೆ ನಾನಾದರೂ ಮಾಡುತ್ತಿದ್ದೇನೆ. ಅದನ್ನು ಮಾಡುತ್ತಾರೆ ಎನ್ನುವಂಥ ಭರವಸೆ ಕೂಡ ನಾನು ಇಟ್ಟುಕೊಂಡಿದ್ದೇನೆ. ಸಾಂದರ್ಭಿಕವಾಗಿ ಕೇಳುತ್ತಿದ್ದೇನೆ, ನಮ್ಮ ಬಾಗಲಕೋಟೆಯಲ್ಲಿ ಸುಮಾರು 50 ವರ್ಷಗಳ ಹಿಂದೆ ಒಬ್ಬರು ನ್ಯಾಯಾಧೀಶರು ಇದ್ದರು. ಈ ಕಥೆಯನ್ನು ನಮ್ಮ ಸೀನಿಯರ್ ಹೇಳುತ್ತಿದ್ದರು. ಅದು ವಾಸ್ತವಿಕ ಸಂಗತಿ. ಯಾವಾಗಲೂ ನ್ಯಾಯ ನಿರ್ಣಯವನ್ನು ತಮ್ಮದೇ ಆದ ರೀತಿಯಲ್ಲಿ ಕೊಡುತ್ತಿದ್ದರು. ಮೇಲಿಂದ ಮೇಲೆ one-side ನಿರ್ಣಯ ಆಗುತ್ತಾ ಬರುತ್ತಿತ್ತು. ಈ ಕಡೆ ವಕೀಲರು ವಾದ ಮಂಡನೆಯ ಸಂದರ್ಭದಲ್ಲಿ ಹೇಳುತ್ತಾ, ಹೇಳುತ್ತಾ, "Your honour is biased", 'ನೀವು ಪಕ್ಷಪಾತಿ ಇದ್ದೀರಿ' ಎನ್ನುವಂಥ ಶಬ್ದವನ್ನು ಉಪಯೋಗ ಮಾಡಿದ್ದರು. ಅದು ಆಗಿನ ಸಂದರ್ಭ. ಅವರು ತಕ್ಷಣವೇ ಅವರ ಕೈಯಲ್ಲಿದ್ದಂತಹ ಪೆನ್ನು ಅಲ್ಲಿಯೇ ಬಿಸಾಕಿ ಅವರು ತಮ್ಮ ಚೇಂಬರ್‌ಗೆ ಹೋಗಿ ಕುಳಿತುಕೊಂಡರು. ಇಡೀ ವಕೀಲರ ಸಮೂಹವೇ ಗಾಬರಿಯಾಯಿತು. 'ಏನಾಯಿತು, ಎಂಥದ್ದು ಆಯಿತು! ನೀವು ಆ ರೀತಿ ಮಾತನಾಡಬಾರದಿತ್ತು, ನೀವು ಆ ರೀತಿ ಹೇಳಬಾರದಿತ್ತು' ಎಂದು ಹೇಳಿದರು. ಆ ಕಡೆಯ ವಕೀಲರು ಮತ್ತು ಈ ಕಡೆಯ ವಕೀಲರೆಲ್ಲರೂ ಸೇರಿ ಚೇಂಬರ್‌ಗೆ ಹೋದಾಗ, ಅವರು ತಪ್ಪಾಯಿತು ಎಂದು ಗಳಗಳನೆ ಅಳುತ್ತಿದ್ದರು, ಕಣ್ಣೀರು ಹಾಕುತ್ತಿದ್ದರು. ಅವರು ಒಂದೇ ಮಾತು ಹೇಳಿದರು. "ನೀವು ನನ್ನನ್ನು ದಡ್ಡ ಎಂದು ಹೇಳಿ, ಹೇಡಿ ಎಂದು ಹೇಳಿ, ಬುದ್ಧಿ ಇಲ್ಲದವನು ಎಂದು ಹೇಳಿ, ನಾನು ಎಲ್ಲವನ್ನೂ ಸಹಿಸಿಕೊಳ್ಳುತ್ತೇನೆ. ಆದರೆ ನನ್ನನ್ನು 'ಪಕ್ಷಪಾತಿ' ಎಂದು ಹೇಳಿದಂತಹ ಶಬ್ಧ ಏನಿದೆ ಅದು ನನಗೆ ಹೃದಯ ಚುಚ್ಚಿದಂತಾಗಿದೆ. ನಾನು ಅದನ್ನು ಸಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ" ಎಂದು ಹೇಳಿದರು. ಆಮೇಲೆ ಆ ವಕೀಲರು ಅವರ ಹತ್ತಿರ ಕ್ಷಮೆ ಕೇಳಿದ್ದಾರೆ. ಅಂತಹ ಸಂದರ್ಭ ಈ ಸದನದಲ್ಲಿ ಯಾವ ಕಾಲಕ್ಕೂ ಬರದಂತೆ ತಾವು ನಡೆದುಕೊಳ್ಳಬೇಕು ಎಂದು ವಿಶ್ವಾಸದಿಂದ ನಾನು ತಮ್ಮಲ್ಲಿ ಮಾತನಾಡಿದ್ದೇನೆ. 'ಪಕ್ಷಪಾತಿ' ಯಾವತ್ತೂ ಕೂಡ ತಾವು ಆಗಬಾರದು. ಪಾರ್ಟಿ

ಎಂದು ತಾವು ಬಂದಿದ್ದೀರಿ. Partisan ಆಗುವಂಥದ್ದೆ. ನ್ಯಾಯ ಕೊಡುವಾಗ ವಿಶೇಷವಾಗಿ ನಮ್ಮ ಪರವಾಗಿ ಕೊಡುವಂಥದ್ದು ಆಗಬೇಕು. ಕಾರಣ ಇಷ್ಟೇ 'infant' ಎಂದು ಹೇಳಿದನಲ್ಲಾ. ಏಕೆಂದರೆ ನಾವು ಅಳುತ್ತಿರುವಾಗ ಅವರು ಏಕೆ ಅಳುತ್ತಿದ್ದಾರೆ? ಅದಕ್ಕೆ ಪರಿಹಾರ ಯಾವ ರೀತಿ ಕಂಡುಕೊಳ್ಳಬೇಕು. ಎಲ್ಲಿ ಹೆಚ್ಚಿನ ಅವಕಾಶಗಳನ್ನು ಕೊಡಬೇಕು. ವಿಚಾರ-ವಿನಿಮಯ ಮಾಡಿಕೊಳ್ಳುವುದಕ್ಕೆ, ನಮ್ಮ ದುಃಖ-ದುಮ್ಮಾನಗಳನ್ನು ತೋಡಿಕೊಳ್ಳುವುದಕ್ಕೆ, ಸಮಸ್ಯೆಗಳನ್ನು ನಿವೇದಿಸಿಕೊಳ್ಳುವುದಕ್ಕೆ, ಹೆಚ್ಚಿನ ಅವಕಾಶಗಳನ್ನು ವಿರೋಧ ಪಕ್ಷದವರಿಗೆ ಕೊಡಬೇಕು. ಏಕೆಂದರೆ ಆಡಳಿತ ಪಕ್ಷ ಅಧಿಕಾರ ಚಲಾವಣೆ ಮಾಡುವಂಥದ್ದು. ಆ ರೀತಿ ನಡೆದುಕೊಳ್ಳುತ್ತಾರೆ ಎನ್ನುವಂಥ ಒಂದು ವಿಶೇಷ ಭರವಸೆಯನ್ನು ಅವರ ಬಗ್ಗೆ ಇಟ್ಟುಕೊಳ್ಳುತ್ತಾ, ಇನ್ನೊಮ್ಮೆ ಚುನಾವಣೆ ನಡೆಯದಂತೆ ಈ ಸದನದಲ್ಲಿ ಒಂದು ಒಳ್ಳೆಯ ಸಂಪ್ರದಾಯ ಹಿಂದಿನಂತೆ ನಡೆದುಕೊಂಡು ಹೋಗಲಿ ಎನ್ನುವಂಥ ವಿಚಾರವನ್ನು ವ್ಯಕ್ತಮಾಡುತ್ತಾ, ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆ ಸಲ್ಲಿಸಿ, ನನ್ನ ಮಾತು ಮುಗಿಸುತ್ತೇನೆ. ನಮಸ್ಕಾರ.

**ಸಭಾಪತಿಯವರು:-** ಶ್ರೀ ಮಂಜುನಾಥ್ ಭಂಡಾರಿಯವರು ಮಾತನಾಡಿ. ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಎಲ್ಲಾ ಮಾನ್ಯ ಸಚಿವರು District Flag Hoistingಗೆ ಹೋಗಬೇಕಿದೆ. ದಯವಿಟ್ಟು ಎರಡೆರಡು ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು. ಆಮೇಲೆ ನಾನು ಬೆಲ್ ಮಾಡಿದ ತಕ್ಷಣ ದಯವಿಟ್ಟು ಆಗಲೇ ನಿಲ್ಲಿಸಬೇಕು. ಎರಡನೆಯ ಬೆಲ್‌ಗೆ ಕಾಯಬಾರದು. ಏಕೆಂದರೆ ಒಂದು ಬಾರಿ ಹೇಳಿದ ಕೂಡಲೇ receive ಮಾಡಬೇಕು.

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಹಳಷ್ಟು ಜನ ಮಾನ್ಯ ಸದಸ್ಯರುಗಳು ತಮ್ಮ ಬಗ್ಗೆ ಮಾತನಾಡಿದ್ದಾರೆ. ಸುಮಾರು 1982 ರಿಂದ ನಾವು ಜೊತೆ ಜೊತೆಯಾಗಿ ಕಾಂಗ್ರೆಸ್ ಪಕ್ಷದಿಂದ ಬಂದಂತಹವರು. ಮಾನ್ಯ ಮುಖ್ಯಮಂತ್ರಿಯವರು ಕೂಡ ಇದ್ದಾರೆ. ನಾವೆಲ್ಲರೂ ಈ ಪಕ್ಷಕ್ಕಾಗಿ ದುಡಿದಂತವರು. ಮಾನ್ಯ ಬಿ.ಕೆ.ಹರಿಪ್ರಸಾದ್ ಸಾಹೇಬರು ನಮ್ಮೆಲ್ಲರ ನಾಯಕರಾಗಿ ದೆಹಲಿಯಲ್ಲಿ ಇದ್ದಂಥವರು. ನಾನು ಚಿಕ್ಕಮಗಳೂರಿನಲ್ಲಿ ಇಂಜಿನಿಯರಿಂಗ್ ಓದುತ್ತಿದ್ದೆ. ಆಗ ತಾವು ಬೆಂಗಳೂರಿನಲ್ಲಿ ಇದ್ದಿರಿ. ನಾವೆಲ್ಲಾ ವಿದ್ಯಾರ್ಥಿ ನಾಯಕರಾಗಿ ಬಂದಂಥವರು. ಚಿಕ್ಕಮಗಳೂರಿನಿಂದ ಈ ಸಭೆಗಳಿಗೆ ಬಂದಂತಹ ಸಂದರ್ಭದಲ್ಲಿ ನಾವು ಹೆಚ್ಚಾಗಿ ನಿಮ್ಮ ಮನೆಗೆ ಹೋಗುತ್ತಿದ್ದೆವು. ಬಹುಶಃ ಇವತ್ತು ನಾವು ನಿಮ್ಮ ತಾಯಿಯವರನ್ನು ನೆನಪಿಸಿಕೊಳ್ಳಬೇಕು. ಆ ಮಹಾತಾಯಿ ನಿಮ್ಮನ್ನು ಯಾವರೀತಿ ನೋಡುತ್ತಿದ್ದರೋ, ಅದೇರೀತಿ ನಮ್ಮನ್ನು ಕೂಡ ನೋಡುತ್ತಿದ್ದರು. ನಾವು ಊಟ-ಉಪಚಾರಗಳನ್ನು ನಿಮ್ಮ ಮನೆಯಲ್ಲೇ ಮಾಡುತ್ತಿದ್ದೆವು. ಎಷ್ಟೋ ದಿವಸ ನಾವು ನಿಮ್ಮ ಮನೆಯಲ್ಲೇ ಮಲಗಿ, ಈ ಪಕ್ಷಕ್ಕೋಸ್ಕರ ಇರುತ್ತಿದ್ದೆವು. ನಂತರದ ದಿನಗಳಲ್ಲಿ ಬಹುಶಃ ನಮಗೆಲ್ಲರಿಗೂ ತಾವೊಬ್ಬ ಒಳ್ಳೆಯ ನಾಯಕರಾಗಬೇಕೆಂದು ಆಸೆ ಇತ್ತು. ಆಗ ನಮಗೆಲ್ಲಾ ಒಳ್ಳೆಯ ನಾಯಕರಾಗಬೇಕೆಂಬ ಕನಸಿರಲಿಲ್ಲ. ನಮ್ಮ ಜೊತೆಯಲ್ಲಿದ್ದಂಥವರು ನಾಯಕನಾಗಬೇಕೆಂದು ತಮಗೆ ಎಂ.ಎಲ್.ಎ ಸೀಟ್‌ಗಳನ್ನು ಕೊಡಬೇಕು, ತಾವು ಶಾಸಕರಾಗಬೇಕೆಂದು ನಾವು ದೆಹಲಿ ಮಟ್ಟದಲ್ಲೆಲ್ಲಾ ಹೋಗುತ್ತಿದ್ದೆವು. ಕೊನೆಕೊನೆಗೆ ನಾನು ಮತ್ತು ನೀವು ಇಬ್ಬರೂ

contenders ಆಗುತ್ತಾ ಬರುತ್ತಿದ್ದೆವು. ಯಾವುದೇ ಒಂದು position ಗೆ ಬಂದಾಗ ನೀವು ಕೇಳುತ್ತಿದ್ದೀರಿ, ನಾನು ಕೂಡ ಕೇಳುತ್ತಿದ್ದೆನು. ಆದರೆ ನಮ್ಮಿಬ್ಬರ ನಡುವೆ ಮಹಮೊದ್ ಬದ್ರುದ್ದೀದ್ ಎಂಬ ನಮ್ಮ ಸ್ನೇಹಿತರೊಬ್ಬರು ಇದ್ದರು. ನಮ್ಮಿಬ್ಬರ ಮಧ್ಯೆ ಯಾವುದಾದರೂ ವೈಮನಸ್ಸು ಬಂದಾಗ ಅವರು ನನ್ನನ್ನು ಮತ್ತು ನಿಮ್ಮನ್ನು ರಾಜಿ ಮಾಡುತ್ತಿದ್ದರು. ನೀವು ಅಖಿಲ ಭಾರತ ಯುವ ಕಾಂಗ್ರೆಸ್‌ಗೆ ದೆಹಲಿಗೆ ಹೋಗುತ್ತಿದ್ದೀರಿ, ನಂತರದ ದಿನಗಳಲ್ಲಿ ನಾನು ಕೂಡ ಅಖಿಲ ಭಾರತ ಕಾಂಗ್ರೆಸ್‌ನ ನಾಯಕನಾಗಿ ಅಲ್ಲಿಗೂ ಬಂದಿದ್ದೇನೆ. ನಾವಿಬ್ಬರೂ ಜೊತೆಜೊತೆಯಾಗಿದ್ದೆವು. ಆದರೆ 2001ರಲ್ಲಿ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಹೇಳಿದಂತೆ, A.C.Y.P.L. (American Council of Young Political Leaders) Exchange Programme ನಲ್ಲಿ ನಾವಿಬ್ಬರೂ ಜೊತೆಯಾಗಿ ಅಮೇರಿಕಾಗೆ ಹೋಗಿದ್ದೆವು. ಡಾ.ಆರತಿ ಕೃಷ್ಣಾರವರು ಇಲ್ಲೇ ಇದ್ದಾರೆ. 9/11 attack ಆದಂತಹ ಸಂದರ್ಭದಲ್ಲಿ ಏನಪ್ಪಾ, ಬಹುಶಃ ನಮ್ಮ ಜೀವನ ಇಲ್ಲಿಗೇ ಮುಗಿದು ಹೋಯಿತೇ, ನಾವು ಹೇಗೆ ನಮ್ಮ ದೇಶಕ್ಕೆ ವಾಪಸ್ಸು ಹೋಗುವುದು ಎಂದು ನಾವೆಲ್ಲರೂ ಕೂಡ panic ಆದೆವು. ಆಗ ಡಾ: ಆರತಿ ಕೃಷ್ಣಾ ರವರು ನಮ್ಮನ್ನು ಅವರ ಮನೆಗೆ ಕರೆದುಕೊಂಡು ಹೋಗಿ ನಮಗೆ ಊಟ-ಉಪಚಾರ ಮಾಡಿದ ದಿನಗಳನ್ನು ತಾವು ನೆನಪು ಮಾಡಿಕೊಳ್ಳಬಹುದು. ನಂತರ ತಾವು ಶಾಸಕರಾಗಿದ್ದೀರಿ. ನಾನು ಕೂಡ ಶಾಸಕರಾಗಿ ಇಲ್ಲಿಗೆ ಬಂದಿದ್ದೇನೆ. ತಾವು ಮಂತ್ರಿಗಳಾಗಬೇಕೆಂದು ನಮ್ಮೆಲ್ಲರ ಆಸೆಯಿತ್ತು. ಕಾರಣ ತಾವು ಅಖಿಲ ಮಟ್ಟದ ನಾಯಕರಾದಂತಹ ಸಂದರ್ಭದಲ್ಲಿ ತಮ್ಮ ಜೊತೆ ಕಾಂಗ್ರೆಸ್ ಪಕ್ಷದಲ್ಲಿ N.S.U.I. ವಿದ್ಯಾರ್ಥಿ ಸಂಘಟನೆ ಮತ್ತು ಯುವಕ ಕಾಂಗ್ರೆಸ್‌ನಲ್ಲಿ ಕೆಲಸ ಮಾಡಿದಂಥವರು ಇವತ್ತಿನ ದಿವಸ 2 ಜನ ಮುಖ್ಯಮಂತ್ರಿಗಳಾಗಿದ್ದಾರೆ.

(ಮುಂದು)

**(693) 14.8.2026/1.30/ಎಂ.ಎಂ-ಎ.ಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಮಂಜುನಾಥ್ ಭಂಡಾರಿ (ಮುಂದು):**

ಒಬ್ಬರು ಹಿಮಾಚಲ ಪ್ರದೇಶದಲ್ಲಿದ್ದಾರೆ ಇನ್ನೊಬ್ಬರು ಕೇರಳದಲ್ಲಿದ್ದಾರೆ. ನಾವೆಲ್ಲರೂ ಈ ಪಕ್ಷಕ್ಕೋಸ್ಕರ ದುಡಿದುದ್ದರಿಂದ ಇಂತಹ ಸ್ಥಾನಮಾನಗಳು ಸಿಕ್ಕಿವೆ. ತಾವು ಈ ಒಂದು ಸ್ಥಾನವನ್ನು ಉತ್ತಮ ರೀತಿಯಲ್ಲಿ ನಡೆಸಿಕೊಳ್ಳುತ್ತೀರಿ, ಹಾಗೆಯೇ ತಮಗೆ ಒಳ್ಳೆಯದಾಗಲಿ, ತಾವು ಯಾವಾಗಿನಿಂದ ರಾಜಕಾರಣವನ್ನು ಮಾಡಿಕೊಂಡು ಬಂದಿದ್ದೀರಿ ಅದು ಆಗಬೇಕು. ಏಕೆಂದರೆ 2014ರಲ್ಲಿ ತಾವು ಪಾರ್ಲಿಮೆಂಟ್ ಚುನಾವಣೆಗೆ ನಿಂತಿದ್ದಿರಿ, ನಾನು ಸಹ ಪಾರ್ಲಿಮೆಂಟ್ ಚುನಾವಣೆಗೆ ನಿಂತಿದ್ದೆ. ನಾವು ಇವೆಲ್ಲಾ ಮಾಡಿಕೊಂಡು ಬಂದಿದ್ದೇವೆ. ತಮಗೆ ಶುಭವಾಗಲಿ ಎಂದು ಹೇಳುತ್ತಾ ಕೊನೆಯದಾಗಿ, ಮಾನ್ಯ ಬಸವರಾಜ ಹೊರಟ್ಟಿಯವರ ಬಗ್ಗೆ ಹೇಳುವುದಾದರೆ ಅವರು ನಮಗೆಲ್ಲಾ ಮಾರ್ಗದರ್ಶನವನ್ನು ಮಾಡುತ್ತಾ ಬಂದಿದ್ದರು. ಇವತ್ತು ಅವರ ಸ್ಥಿತಿ ಏನಾಗಿದೆ ಎಂದು ಹೇಳಿದರೆ **[XXX]** ಹಾಗೆ ಕೇಳಿದ್ದನ್ನೇ ಕೇಳಿ, ಹೇಳಿದ್ದನ್ನೇ ಹೇಳಿ ಅವರ ಮನಸ್ಸಿಗೆ ನೋವು ಮಾಡುತ್ತಿದ್ದೇವೆ. ಅವರ ನಿರ್ಧಾರ; ಸುಮಾರು ಐವತ್ತು ವರ್ಷಗಳ ಕಾಲ ಅವರು ರಾಜಕಾರಣದಲ್ಲಿ ಇದ್ದಂಥವರು. ರಾಜಕೀಯ ನಿರ್ಧಾರಗಳನ್ನು

ತೆಗೆದುಕೊಳ್ಳಬೇಕಾದರೆ ಅವರೇ ನನಗೊಂದು ಸಲ ಒಂದು ಮಾತನ್ನು ಹೇಳಿದ್ದರು. 'ನೋಡಪ್ಪಾ ನೀವೆಲ್ಲಾ ನನ್ನ ಜೊತೆಗೆ ಒಳ್ಳೆಯ ರೀತಿಯಲ್ಲಿದ್ದೀರಿ. ಆದರೆ ನಿಮ್ಮ ಪಕ್ಷಗಳು ಯಾವ ನಿರ್ಧಾರವನ್ನು ತೆಗೆದುಕೊಳ್ಳುತ್ತದೆ ಅದಕ್ಕೆ ಬದ್ಧರಾಗಬೇಕಾಗುತ್ತದೆ' ಎಂಬ ಮಾತನ್ನು ಹೇಳಿದ್ದರು. ತಮಗೆ ಶುಭವಾಗಲಿ. ತಮ್ಮ ಸಮಯದಲ್ಲಿ ಬಹಳಷ್ಟು ಜನ ಯಾರು ಚರ್ಚೆಗಳನ್ನು ಮಾಡುತ್ತಿದ್ದರು ಅಂತಹ ಚರ್ಚೆಗಳು ಆಗಬೇಕೆನ್ನುವ ಅಭಿಪ್ರಾಯವನ್ನಿಟ್ಟುಕೊಂಡು ನಾವು ಇಲ್ಲಿಗೆ ಬಂದಂಥವರು. ಅದು ತಮ್ಮ ಸಮಯದಲ್ಲಿ ಆಗಿ ಒಳ್ಳೆಯ ಹೆಸರಾಗಲಿ ಎಂದು ಹೇಳುತ್ತೇನೆ. ನನಗೆ ಸಂತೋಷವೇನೆಂದರೆ, ಕಳೆದ ಸಲ ನಮ್ಮ ಶ್ರೀ ಯು.ಟಿ. ಖಾದರ್ ಅವರು ವಿಧಾನಸಭೆಯಲ್ಲಿ ಅಧ್ಯಕ್ಷರಾಗಿದ್ದರು, ಈಗ ನೀವು ಇಲ್ಲಿದ್ದೀರಿ. ನಾವಿಬ್ಬರೂ ಮಂಗಳೂರಿನ ಮೂಲದವರು. ಹಾಗಾಗಿ ಈ ಸಭೆ ಮಂಗಳೂರಿನ ಮೂಲವನ್ನು ಮತ್ತೊಮ್ಮೆ ನೆನಪು ಮಾಡಿಕೊಂಡು ನನ್ನೆರಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮಂಜುನಾಥ್ ಭಂಡಾರಿಯವರು ಹೇಳಿದ **[XXX]** ಎನ್ನುವ ಪದ ಸರಿಯಿಲ್ಲ. ಅದಕ್ಕೂ ಇದಕ್ಕೂ ಮಾಡಿದ comparison ಸಾಂದರ್ಭಿಕವಾಗಿಲ್ಲ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ಹೇಳಿದ್ದನ್ನೇ ನಾವು ವಾಪಸ್ ಹೇಳುತ್ತಿದ್ದೇವೆ ಎಂಬ ಉಪಮೆ ಅಷ್ಟೇ.

**ಶ್ರೀ ಚಿದಾನಂದ್ ಎಂ.ಗೌಡ:-** ಆದ್ದರಿಂದ ದಯವಿಟ್ಟು ಆ ಪದವನ್ನು ಕಡತದಿಂದ ತೆಗೆಸಿ.

**ಸಭಾಪತಿಯವರು:-** ಅದನ್ನು ಕಡತದಿಂದ ತೆಗೆಯಿರಿ. ಮಾಧ್ಯಮದವರು ಸಹ ಆ ಪದವನ್ನು ಕಡತದಿಂದ ತೆಗೆಯಬೇಕು.

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅತ್ಯಂತ ಹೆಚ್ಚಿನ ಇತಿಹಾಸವುಳ್ಳ, 1907ರಲ್ಲಿ ಪ್ರಾರಂಭವಾದಂತಹ ಈ ವಿಧಾನ ಪರಿಷತ್ತಿಗೆ ತಾವು ಸಭಾಪತಿಯಾಗಿ ಈ ಮನೆಗೆ ಆಯ್ಕೆಯಾಗಿರುವುದಕ್ಕೆ ತಮಗೆ ಅಭಿನಂದನೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. 1996ರಲ್ಲಿ ತಾವು ಈ ಮನೆಯನ್ನು ಪ್ರವೇಶ ಮಾಡಿದಿರಿ. ನಾನು ಕೂಡ 1996ರಲ್ಲಿಯೇ ಈ ಮನೆಗೆ ಪ್ರವೇಶ ಮಾಡಿದ್ದೆ. ತಾವು ವಿದ್ಯಾರ್ಥಿ ಜೀವನದಲ್ಲಿ ಮಾಡಿದಂತಹ ನಾಯಕತ್ವ, ತಮ್ಮ ಪಕ್ಷದಲ್ಲಿ ಯುವ ಮೋರ್ಚದಲ್ಲಿ ಕೂಡ ಸೇವೆ ಸಲ್ಲಿಸಿದಂತಹದ್ದು ಅಪಾರವಾದ ಅನುಭವವುಳ್ಳಂತಹ ತಾವು ಬಹುಶಃ ಒಂದು ಮಾತನ್ನು ಹೇಳಬೇಕಾಗುತ್ತದೆ, ತಾವು ಎಂ.ಎಲ್.ಎ. ಆಗಬೇಕೆನ್ನುವ ಆಸೆಯನ್ನು ಇಟ್ಟುಕೊಂಡಿದ್ದಿರಿ. ಮಂತ್ರಿಯಾಗಬೇಕು, ಎಂ.ಪಿ. ಆಗಬೇಕೆಂದು ಸಹ ಆಸೆ ಇಟ್ಟುಕೊಂಡಿದ್ದರು. ಅದಾಗಿದ್ದರೆ ಅವರು ಇಲ್ಲಿಗೆ ಬರುತ್ತಿರಲಿಲ್ಲ. ನನಗನ್ನಿಸುತ್ತದೆ ಭಗವಂತ ಮತ್ತು ನಿಮ್ಮ ಪಕ್ಷ ನಮ್ಮೆಲ್ಲರಿಗೂ ಸಂತೋಷ ತಂದುಕೊಡುವಂತೆ ತಮಗೆ ಈ ಸ್ಥಾನ ಕೊಟ್ಟಿದ್ದು ನಮಗೆ ಸಂತೋಷವಾಗಿದೆ. ಒಳ್ಳೆಯ ರೀತಿಯಿಂದ ಈ ಜವಾಬ್ದಾರಿಯನ್ನು ನಿಭಾಯಿಸುತ್ತೀರಿ ಎಂದು ನಮಗೆ ಅತ್ಯಂತ ವಿಶ್ವಾಸವಿದೆ. ಹಾಗೂ ಒಂದು ಮಾತನ್ನು ಹೇಳಬೇಕಾಗುತ್ತದೆ, ಯಾವುದೇ ಪ್ರಜಾತಂತ್ರ ವ್ಯವಸ್ಥೆಯಲ್ಲಿ the ruling party will always have their way. There is a saying, "The

opposition party will have their say and the ruling party will have their way." ಆದರೆ ನಾನು ತಮ್ಮಲ್ಲಿ ವಿನಂತಿ ಮಾಡುವುದು please ensure that the opposition or we will have a say. ನಮಗೆ ನೀವು ಅವಕಾಶ ಮಾಡಿಕೊಟ್ಟಿಲ್ಲ ಎಂದರೆ ನಮಗೆ ಬಹಳ ನೋವುಂಟಾತ್ತದೆ.

**Mr. CHAIRMAN:** Definitely, the opposition will have a say.

**Sri SHASHIL G. NAMOSHI**: 'The opposition will have a say' ಅಷ್ಟೇ ಅಲ್ಲ, we should have more say. Because, the ruling party will have their way; we know that. ನಿಮಗೆ ಏನು ಬೇಕೋ ಅದನ್ನು ಮಾಡಿಯೇ ಮಾಡುತ್ತೀರಿ ಅಂದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಧಿಕಾರ ಇದ್ದಂತಹವರು ಮಾಡಿಯೇ ಮಾಡುತ್ತಾರೆ. ಆದರೆ ನಮಗೆ ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲವೆಂದರೆ ನಮಗೆ ನಿಜವಾದ ನೋವು ತಂದುಕೊಡುತ್ತದೆ. ಆ ಪ್ರಮಾಣದಲ್ಲಿ ತಾವು ನಮ್ಮನ್ನು ನೋಡಿಕೊಳ್ಳುತ್ತೀರಿ ಎಂಬ ವಿಶ್ವಾಸವಿದೆ. ದಯವಿಟ್ಟು ಒಂದು ಮಾತ್ರ ಹೇಳುತ್ತೇನೆ, ಎಲ್ಲೋ ಒಂದು ಕಡೆ ಶ್ರೀ ಬಸವರಾಜ ಹೊರಟ್ಟಿಯವರ ಜೊತೆಗೆ ನಡೆದುಕೊಂಡಂತಹ ರೀತಿ ನಮಗೆ ನಿಜವಾಗಲೂ ನೋವು ತಂದುಕೊಟ್ಟಿದೆ. ಈ ರೀತಿ ಆಗಬಾರದಾಗಿತ್ತು. ಅದರಲ್ಲೂ ಅತ್ಯಂತ ಹೆಚ್ಚಿನ ಕಾಲ ಈ ಮನೆಯಲ್ಲಿ ಸೇವೆ ಸಲ್ಲಿಸಿದಂತಹ ವ್ಯಕ್ತಿಗೆ ಈ ರೀತಿ ಆಗಬಾರದಾಗಿತ್ತು. ನನ್ನ ಒಂದು ವಿನಂತಿಯೇನೆಂದರೆ, ಬಹುಶಃ ಮಾನ್ಯ ಬಸವರಾಜ ಹೊರಟ್ಟಿಯವರು ಬಯಸುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ, ಆದರೆ ಅವರಿಗೂ ಒಂದು ಅವಕಾಶ ಮಾಡಿಕೊಟ್ಟು ಇದರ ಬಗ್ಗೆ ಸ್ವಲ್ಪ ಸ್ಪಷ್ಟತೆಯನ್ನು ಈ ಮನೆಗೆ ಕೊಡಬೇಕು, ಎಲ್ಲರಿಗೂ ಸಮಾಧಾನ ತಂದುಕೊಡುವ ಒಂದು ಕಾರ್ಯ ತಮ್ಮಿಂದ ಆಗಬೇಕೆಂದು ಹೇಳಿ ಮತ್ತೊಮ್ಮೆ ತಮಗೆ ಅಭಿನಂದನೆಗಳನ್ನು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಮಗೆ ಅಭಿನಂದನೆಗಳು. ನಾನು ಮಾತನಾಡಲು ನಿಲ್ಲಬೇಕಾದರೆ ಸಮಯದ ಒತ್ತಡ ನಿಮ್ಮ ಮೇಲಿದೆ. ಹಾಗಾಗಿ ನೀವು ಒತ್ತಡದ ಮಧ್ಯೆ ನಮ್ಮನ್ನು ಕರೆದಿದ್ದೀರಿ. ನಮಗೂ ಕೂಡ mood of the House ಗೊತ್ತಾಗುತ್ತದೆ. ಆದರೆ ನಿಮ್ಮ ಬಗ್ಗೆ ನಾವು ತುಂಬಾ ವಿಶ್ವಾಸ, ಪ್ರೀತಿಯನ್ನಿಟ್ಟುಕೊಂಡಿದ್ದೇವೆ. ನೀವು ಇವತ್ತಿನ ಪ್ರಸ್ತುತ ರಾಜಕೀಯ ವ್ಯವಸ್ಥೆಯಲ್ಲಿ ಜಾತಿ, ಧರ್ಮಗಳ ಮಾತುಕತೆಗಳಾಗುವ ಮಧ್ಯದಲ್ಲಿಯೂ ನೀವು ಈ ಒಂದು ಅತ್ಯಂತ ಗೌರವಯುತವಾದಂತಹ ಮತ್ತು ಸಾಮಾಜಿಕ ಬದ್ಧತೆ ಮತ್ತು ಜವಾಬ್ದಾರಿಯುಳ್ಳಂತಹ ಈ ಹುದ್ದೆಗೆ ಬಂದು ಸಭಾಪತಿ ಸ್ಥಾನವನ್ನು ಅಲಂಕರಿಸಿರುವುದು ನನಗಂತೂ ಬಹಳ ಸಂತೋಷ ತಂದಿದೆ. ಇತ್ತೀಚಿಗೆ ವಿಧಾನಸಭೆಯಲ್ಲಿ ಕೂಡ ಶ್ರೀ ಯು.ಟಿ. ಖಾದರ್ ಅವರು ಸಭಾಧ್ಯಕ್ಷರಾಗಿದ್ದರು. ಈಗ ಅವರು ಅದನ್ನು ಬಿಟ್ಟು ಮಂತ್ರಿಗಳಾದರು. ಮಂತ್ರಿಗಳಾದರೂ ಅವರಿಗೆ ಏನೂ ಡಬಲ್ ಧಮಾಕಾ ಇರುವುದಿಲ್ಲ.

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾ ಅವರೆ, ಒಂದು ನಿಮಿಷ. ನಾವು ಕೂಡ ಅದೇ ರೀತಿ follow ಮಾಡುವುದೇ? ನೀವು ಹೇಳುತ್ತಿರುವುದು ಹಾಗಿದೆ. ರಾತ್ರಿ 11, 12 ಅಥವಾ 1 ಗಂಟೆಯವರೆಗೂ ಚರ್ಚೆ ಮಾಡೋಣವೇ?

**ಶ್ರೀ ಐವನ್ ಡಿ'ಸೋಜಾ:-** ಮಾಡಿ, ನಾವು ನಿಮ್ಮ ಜೊತೆಗಿರುತ್ತೇವೆ. ಮಾನ್ಯ ಯು.ಟಿ. ಖಾದರ್ ಅವರಿಗೆ ಸಭಾಧ್ಯಕ್ಷ ಸ್ಥಾನ ಬಿಟ್ಟ ಮೇಲೆ ಡಬಲ್ ಧಮಾಕಾ ಆಗಿದೆ. 3-4 ಖಾತೆಗಳು ಸಿಕ್ಕಿವೆ. ಈ ಹುದ್ದೆಗೆ ನೀವು ಬಂದಾಗ ಪ್ರಸ್ತುತ ನಿಮ್ಮ ಜೀವನಶೈಲಿಯನ್ನು, style of functioning ಬದಲಾವಣೆ ಮಾಡಬೇಕಾಗುತ್ತದೆ. ಇದುವರೆಗೆ ನಿಮಗೆ ಕಾಂಗ್ರೆಸ್, ಕಾಂಗ್ರೆಸ್, ಕಾಂಗ್ರೆಸ್ ಎಂದಿತ್ತು. ಈಗ ಈ ಸ್ಥಾನದಲ್ಲಿ ಕುಳಿತ ಮೇಲೆ ಎಲ್ಲರನ್ನೂ ಒಂದೇ ರೀತಿ ನೋಡುವಂತಹದ್ದು. ಹಾಗಾಗಿ ನಿಮ್ಮ ಜೀವನಶೈಲಿಯನ್ನು ನೀವು ಬದಲಾವಣೆ ಮಾಡಿಕೊಳ್ಳಬೇಕು. 'ಸಂವಿಧಾನ' ಎಂದು ಹೇಳಿಕೊಳ್ಳಬೇಕಾಗುತ್ತದೆ. ನೀವು ಹಾಗೆ ಹೇಳಿದ್ದೀರಿ. ಸಂವಿಧಾನದ ಪ್ರತಿಯನ್ನು ತೋರಿಸಿ ಅಧಿಕಾರದಲ್ಲಿ ಕುಳಿತುಕೊಂಡಿರಿ. ಆ ಸಂವಿಧಾನದ ಪ್ರತಿಯ ಫಲವಾಗಿಯೇ ಡಾ॥ ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನದ ಫಲವಾಗಿಯೇ ನಿಮಗೆ ಈ ಉನ್ನತ ಹುದ್ದೆ ಸಿಗುವುದಕ್ಕೆ ಸಾಧ್ಯವಾಯಿತು ಎಂದು ನಾನು ನಂಬಿಕೊಂಡಿದ್ದೇನೆ. ಇದುವರೆಗೆ ನೀವು 20-20 ಮ್ಯಾಚ್ ಆಡುತ್ತಿದ್ದಿರಿ, one-day match ಆಡುತ್ತಿದ್ದಿರಿ ಆದರೆ ಈ ದಿನದಿಂದ ನಿಮಗೆ ಸಿಗುವುದು ಇನ್ನು ಟೆಸ್ಟ್ ಮ್ಯಾಚೇ. ಎಷ್ಟು ಕುಳಿತುಕೊಳ್ಳುತ್ತೀರೋ ಅಷ್ಟು, ಎಷ್ಟು ನಿಮ್ಮ ಹತ್ತಿರ ಸಮಾಧಾನ ಇರುತ್ತದೋ ಅಷ್ಟು. ಏಕೆಂದರೆ ಸಚೇತಕರಾಗಿ ನೀವು ಮೂರು ಬಾರಿ ಹುದ್ದೆ ನಿರ್ವಹಣೆ ಮಾಡಿದ್ದೀರಿ. ನಾನು ನಿಮ್ಮ ಹಿಂದೆ ಕುಳಿತಿದ್ದೆ. ಯಾರು ಸಚೇತಕರಾಗಿರುತ್ತಾರೋ ಅವರಿಗೆ ತಾಳ್ಮೆ ಜಾಸ್ತಿ ಇರುತ್ತದೆ. ಏಕೆಂದರೆ ಮೊದಲು ಅವರು ಬರುವುದು, ಅವರೇ ಕೊನೆಗೆ ಹೋಗುವುದು. ಹಾಗಾಗಿ ನಿಮಗೆ ಈ ಹುದ್ದೆಯಲ್ಲಿ ತಾಳ್ಮೆ ಹೆಚ್ಚು ಬೇಕಾಗುತ್ತದೆ. ಮತ್ತು ಎಲ್ಲರಿಗೂ ಗೌರವ ಕೊಟ್ಟು ಈ ಹುದ್ದೆಯನ್ನು ನಡೆಸಬೇಕಾಗುತ್ತದೆ. ಈ ಹುದ್ದೆ ನಿಜವಾಗಿಯೂ bed of roses ಅಲ್ಲ ಸ್ವಲ್ಪ ಮುಳ್ಳುಗಳು ಕೂಡ ಇರುವಂತಹದ್ದು. ಮುಳ್ಳೂ ತಾಗಬಾರದು, ಮಲಗುವುದಕ್ಕೂ ಸಮಾಧಾನವಾಗಬೇಕು. ಆ ದೃಷ್ಟಿಯಲ್ಲಿ ನೀವು ಈ ಸದನವನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ. ಒಂದು ಮಾತನ್ನು ನಾನು ಹೇಳಲೇಬೇಕು. ಎಲ್ಲರೂ ಅದನ್ನು ಹೇಳಿದರು. ಏನೆಂದರೆ, ವಿರೋಧ ಪಕ್ಷದ ಕಡೆ ಹೆಚ್ಚು ಅವಕಾಶ ಕೊಡಬೇಕು ಅದು ನಿಜ. ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷದ ಕಡೆ ಹೆಚ್ಚು ಅವಕಾಶ ಕೊಡುವಂತಹದ್ದು ಕೂಡ ಇದೆ. ಮಾನ್ಯ ಬಸವರಾಜ ಹೊರಟ್ಟಿಯವರು ಹಿಂದಿನ ಸಭಾಪತಿಗಳಾಗಿ ಒಳ್ಳೆಯ ಕೆಲಸ ಮಾಡಿದ್ದಾರೆ. ನಮ್ಮನ್ನೆಲ್ಲಾ ಗೌರವಯುತವಾಗಿ ನೋಡಿಕೊಂಡಿದ್ದಾರೆ. ಇಡೀ ಸದನವನ್ನು ಚೆನ್ನಾಗಿ maintain ಮಾಡಿದ್ದಾರೆ. ಇದು ಅವರಿಗೂ ಗೊತ್ತಿದೆ, ನಮಗೂ ಗೊತ್ತಿದೆ, ಪ್ರಜಾಪ್ರಭುತ್ವದಲ್ಲಿ ಸಂಖ್ಯಾಬಲ ಜಾಸ್ತಿಯಾದ ಕೂಡಲೇ ಆ ಸ್ಥಾನವನ್ನು ಬಿಟ್ಟುಕೊಡಬೇಕಾದುದು ಪ್ರಜಾಪ್ರಭುತ್ವದಲ್ಲಿ ನಡೆದುಕೊಂಡು ಬಂದಿರುವಂತಹದ್ದು. ಅದು ಒಂದು ದಿನ ಮುಂದೆ, ಒಂದು ದಿನ ಹಿಂದೆ. It doesn't make any difference. He has to follow and honour the Constitution. ಮೆಜಾರಿಟಿ ಬಂದಿದೆ, ಬಿಟ್ಟು ಕೊಟ್ಟಿದ್ದಾರೆ. ಹಿಂದೆ ನನ್ನ ಹತ್ತಿರ, "ಜೂನ್ 2026ಕ್ಕೆ ಮೆಜಾರಿಟಿ

ಬರುತ್ತದೆ, ಅಲ್ಲಿಯವರೆಗೆ ಬರುವುದಿಲ್ಲ. ಅಲ್ಲಿಯವರೆಗೆ ನಾನು ಸದನವನ್ನು ನಡೆಸುತ್ತೇನೆ, ಅದು ಬಂದ ಮೇಲೆ I will quit my post" ಎಂದು ಹೇಳಿದ್ದರು. ಆ ತರಹ ಅವರು ಮಾಡಿದ್ದಾರೆ, ಅವರನ್ನು ನಾನು ಅಭಿನಂದಿಸುತ್ತೇನೆ ಮತ್ತು ತಮಗೂ ಶುಭವನ್ನು ಕೋರುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ನಡೆದಂತಹ ಸಭಾಪತಿಗಳ ಚುನಾವಣೆಯಲ್ಲಿ ತಾವು ಯಶಸ್ವಿಯಾಗಿ ನೂತನವಾಗಿ ಮೇಲ್ಮನೆಯ ಸಭಾಪತಿಯಾಗಿ ಆಯ್ಕೆಯಾಗಿರುವುದಕ್ಕೆ ತಮಗೆ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸುತ್ತೇನೆ. ಈ ದೇಶದ ಅತ್ಯಂತ ದೀರ್ಘ ಕಾಲದ ಇತಿಹಾಸ ಹೊಂದಿರುವಂತಹ ಒಂದು ಶಾಸನಸಭೆ ಎಂಬ ಕೀರ್ತಿಯನ್ನು ಪಡೆದಂತಹ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಒಂದು ಒಳ್ಳೆಯ ರೀತಿಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಮೇಲ್ಮನೆಯನ್ನು ನಡೆಸುವಂತಹ ಅತ್ಯುನ್ನತ ಜವಾಬ್ದಾರಿ ತಮಗೆ ಇವತ್ತು ಸಿಕ್ಕಿದೆ. ಹಿಂದೆ ಅನೇಕರು ಈ ಸ್ಥಾನವನ್ನು ಅಲಂಕರಿಸಿ ಒಂದು ಒಳ್ಳೆಯ ರೀತಿಯ ನಡವಳಿಕೆಯ ಮೂಲಕ ಇದಕ್ಕೆ ಸೂಕ್ತವಾದ ನ್ಯಾಯವನ್ನು ದೊರಕಿಸಿಕೊಟ್ಟಿದ್ದಾರೆ.

(ಮುಂದು)

(694) 14-08-2026 1-40 KH/RN (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್. ನವೀನ್ (ಮುಂದು):**

ಮಾನ್ಯ ಸಭಾಪತಿಯವರೇ, ತಾವು ಕೂಡ ಅದೇ ಪರಂಪರೆಯನ್ನು ಮುಂದುವರೆಸುತ್ತೀರಿ ಎನ್ನುವಂತಹ ನಂಬಿಕೆ ಇದೆ. ನಮ್ಮ ಆಡಳಿತ ಪಕ್ಷದ ಸದಸ್ಯರು ಮಾತನಾಡುತ್ತಾ ಸಂಖ್ಯಾಬಲದ ಹಿನ್ನೆಲೆ ಎಂದು ಹೇಳುತ್ತಿದ್ದರು. ಇದಕ್ಕೆ ನನ್ನದು ಬೇರೆ ರೀತಿಯಾದಂತಹ ವ್ಯಾಖ್ಯಾನ ಇದೆ. ಸಂಖ್ಯಾಬಲ ಮತ್ತು ಸಂಖ್ಯಾಬಲದ ಮೂಲಕ ಅಧಿಕಾರಕ್ಕೆ ಬರುವುದಕ್ಕೆ ಕೆಳಮನೆ ಇದೆ. ಕೆಳಮನೆ ಸಂಖ್ಯಾಬಲದ ಆಧಾರ ಮೇಲೆಯೇ ಇರುವುದು. ಯಾರು ರಾಜ್ಯದಲ್ಲಿ ಅಧಿಕಾರವನ್ನು ನಡೆಸುತ್ತಾರೆ, ಯಾರು ರಾಜ್ಯದಲ್ಲಿ ಮುಖ್ಯಮಂತ್ರಿಗಳು ಆಗುತ್ತಾರೆ ಎನ್ನುವಂತಹದ್ದಕ್ಕೆ ಸಂಖ್ಯಾಬಲದ ಅವಶ್ಯಕತೆ ಇದೆ. ಸಂಖ್ಯಾಬಲವನ್ನು ಸಾಧಿಸಿ ಅಲ್ಲಿ ಅಧಿಕಾರವನ್ನು ಪಡೆಯುವಂತಹದ್ದು ಇದೆ. ಮೇಲ್ಮನೆಯನ್ನು ಮೈಸೂರಿನ ಮಹಾರಾಜರು ಸ್ಥಾಪನೆ ಮಾಡಿದ ಉದ್ದೇಶವೇನೆಂದರೆ, ಇಡೀ ಮೇಲ್ಮನೆಯ ಇತಿಹಾಸವನ್ನು ನೋಡುತ್ತಾ ಬಂದರೆ, ಇಲ್ಲಿ ಸಂಖ್ಯಾಬಲದ ಮಹತ್ವಕ್ಕಿಂತ ಹೆಚ್ಚು ಅನುಭವ ಹಿನ್ನೆಲೆಯಲ್ಲಿ ಬಂದಂತಹ ಸದಸ್ಯರು ಈ ಸ್ಥಾನದ ಮೂಲಕ ಈ ರಾಜ್ಯದ ಆಡಳಿತಕ್ಕೆ ಸೂಕ್ತವಾದ ಕೊಡುಗೆಯನ್ನು ಕೊಡುತ್ತಾರೆ ಎನ್ನುವಂತಹ ಕಾರಣಕ್ಕೋಸ್ಕರ ಈ ಮೇಲ್ಮನೆಯನ್ನು ಮಾಡಿರುವಂತಹದ್ದು. ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರಿಗೆ ಆ ಸ್ಥಾನವನ್ನು ತ್ಯಜಿಸಿ ಅವಕಾಶ ಮಾಡಿಕೊಡಬೇಕೆಂದು ಕೇಳಿದರು. ಸಂಖ್ಯಾಬಲದ ಲೆಕ್ಕಾಚಾರದಲ್ಲಿ ಅದು ಸರಿಯಾಗಿರಬಹುದು. ಆದರೆ, ತಾತ್ವಿಕ ಲೆಕ್ಕಚಾರದಲ್ಲಿ ಆ ರೀತಿ ಅವರು ಕೇಳಿರುವಂತಹದ್ದೇ ಸರಿ

ಅಲ್ಲ. ಏಕೆಂದರೆ, ಈ ಮನೆಗೆ ಹಿರಿಯಣ್ಣ ರೀತಿಯಲ್ಲಿ ನಮ್ಮ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಇದ್ದರು. ಅವರು ಸರಿಯಾದ ರೀತಿಯಲ್ಲಿ ಸದನವನ್ನು ನಡೆಸುತ್ತಿದ್ದರು. ಅದಕ್ಕಿಂತ ಮಿಗಿಲಾದ ವಿಷಯವನ್ನು ಹೇಳಿ, ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ತಾವು ಚುನಾವಣೆಯಲ್ಲಿ ನಿಂತು ಗೆದ್ದಿದ್ದೀರಿ. ನಾವೆಲ್ಲರೂ ಈ ಸದನಕ್ಕೆ ಸದಸ್ಯರಾಗಿ ಬರುವಂತಹ ಸಂದರ್ಭದಲ್ಲಿ ನಾವು ಯಾರು ಸಿಂಬಲ್ ಮೇಲೆ ಆಯ್ಕೆ ಆಗಿ ಬಂದಿಲ್ಲ. ನಾವು ಒಂದು ಪಕ್ಷದ ಬೆಂಬಲಿತ ಅಭ್ಯರ್ಥಿಯಾಗಿ ಬಂದಿದ್ದೇವೆಯೇ ಹೊರತು, ನಮಗೆ ಸಿಂಬಲ್ ಇಟ್ಟು ಚುನಾವಣೆ ಮಾಡಿಲ್ಲ. ನಾಮ ನಿರ್ದೇಶನ ಆದವರು ಸಿಂಬಲ್ ಇಟ್ಟು ಚುನಾವಣೆ ಮಾಡಿಲ್ಲ. ವಿಧಾನಸಭೆಯಿಂದ ಆಯ್ಕೆ ಆದಾಗಲೂ ಸಿಂಬಲ್ ಇರಲಿಲ್ಲ. ಕಾಂಗ್ರೆಸ್ ಪಕ್ಷದ ಹೈಕಮಾಂಡ್ ತನ್ನ ಸಿಂಬಲ್ ಇರುವಂತಹ ಲೆಟರ್‌ಹೆಡ್ ನಲ್ಲಿ ಈ ಮನೆಯ ಸಭಾಪತಿಯವರ ಹೆಸರನ್ನು ಸೂಚಿಸಿ ಕಳುಹಿಸುವಂತಹದ್ದು ಈ ಸದನಕ್ಕೆ ಮಾಡಿರುವಂತಹ ಅಗೌರವ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಒಳ್ಳೆಯ ಪದ್ಧತಿಗೆ ನಾಂದಿ ಹಾಡುವಂತಹ ಕೆಲಸವನ್ನು ಮಾಡಿಲ್ಲ. ಸದನದಲ್ಲಿ ಪ್ರಸ್ತಾವನೆ ಇಟ್ಟು ಆಯ್ಕೆ ಮಾಡುವುದಕ್ಕೆ ನಮ್ಮ ವಿರೋಧ ಇರುತ್ತಿರಲಿಲ್ಲ. ಆದರೆ, ಪಕ್ಷದ ಸಿಂಬಲ್ ಇರುವ ಪತ್ರದ ಮೂಲಕ ಹೆಸರನ್ನು ಸೂಚಿಸಿ ಇಲ್ಲಿರುವಂತಹ 75 ಸದಸ್ಯರುಗಳಿಗೆ ಅಗೌರವ ತೋರಿಸಿದಂತಹ ಕೆಲಸವನ್ನು ಕಾಂಗ್ರೆಸ್ ಪಕ್ಷ ಮಾಡಿದೆ. ಮುಂದಿನ ದಿನಗಳಲ್ಲಿ ಈ ರೀತಿಯಾಗಬಾರದು. ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟಂತಹವರು ಯಾರು ತೀರ್ಮಾನವನ್ನು ಮಾಡುತ್ತಾರೆ, ಅವರು ಇದನ್ನು ಸರಿಯಾದ ರೀತಿಯಲ್ಲಿ ತೀರ್ಮಾನ ಮಾಡಬೇಕು. ಹಿಂದೆ ಏನು ನಡೆದಿತ್ತು. ಆ ರೀತಿಯಲ್ಲಿ ಈ ಮನೆಯನ್ನು ನಡೆಸುವಂತಹ ಪದ್ಧತಿಯನ್ನು ಸರಿ ದಾರಿಗೆ ತರುವಂತಹ ಕೆಲಸವನ್ನು ಮಾಡಬೇಕು. ನಮ್ಮ ಪಕ್ಷ ಎಂದು ನಮಗೂ ಹೆಮ್ಮೆ ಇದೆ. ನಿಮ್ಮ ಪಕ್ಷ ಎಂದು ನಿಮಗೂ ಹೆಮ್ಮೆ ಇದೆ. ಆದರೆ, ಸಭಾಪತಿಯವರ ಸ್ಥಾನಕ್ಕೆ ಹೆಸರನ್ನು ಕಳುಹಿಸುವಂತಹ ಕೆಲಸ ಒಂದು ಕಾಂಗ್ರೆಸ್ ಪಕ್ಷದ ಚಿಹ್ನೆ ಇರುವಂತಹ ಲೆಟರ್ ಹೆಡ್ ಮೂಲಕ ಬಂದಿರುವಂತಹದ್ದು ಸರಿಯಲ್ಲ ಎಂದು ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ. ಮತ್ತೊಮ್ಮೆ ತಮಗೆ ಅಭಿನಂದನೆಗಳು.

**ಸಭಾಪತಿಯವರು:-** ಇನ್ನು ಹಲವಾರು ಮಾನ್ಯ ಸದಸ್ಯರುಗಳು ಮಾತನಾಡಬೇಕಾಗಿತ್ತು. ಆದರೆ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಮಂತ್ರಿಗಳು ಅವರ ಜಿಲ್ಲೆಗೆ ಹೋಗಬೇಕು. ದಯವಿಟ್ಟು ಕ್ಷಮಿಸಿ. ಇನ್ನೊಂದು ದಿವಸ ಅವಕಾಶ ಮಾಡಿಕೊಡುತ್ತೇನೆ. ಕೊನೆಯದಾಗಿ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಮಾತನಾಡುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ತಾವು ಈ ಸದನದ ಸಭಾಪತಿಗಳಾಗಿ ಆಯ್ಕೆಯಾಗಿರುವುದರಿಂದ, ತಮಗೆ ತುಂಬು ಹೃದಯದ ಅಭಿನಂದನೆ ಮತ್ತು ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಮೊದಲು 1980ನೇ ಸಾಲಿನಲ್ಲಿ ವಿಧಾನ ಪರಿಷತ್ತಿಗೆ ಸದಸ್ಯನಾಗಿ ಬಂದಾಗ ಮಾನ್ಯ ಬಸವರಾಜೇಶ್ವರಿಯವರು ಸಭಾಪತಿಗಳಾಗಿದ್ದರು. ನಾನು ಅತ್ಯಂತ ಸಣ್ಣ ವಯಸ್ಸಿನಲ್ಲಿ ಸದಸ್ಯನಾಗಿ ಬಂದೆ. ಆಗ ನಾನು ಮಾತನಾಡುವುದಕ್ಕೆ ಹೆದರುತ್ತಿದ್ದೆ. ಮಾನ್ಯ ಬಸವರಾಜೇಶ್ವರಿಯವರು ಹೊಸದಾಗಿ ಬಂದಿರುವವರಲ್ಲಿ ಯಾರಾದರೊಬ್ಬರು ಮಾತನಾಡಿ ಎಂದು ಹೇಳಿದರು. ಆಗ ನಾನು ಮತ್ತು ಮಾನ್ಯ ಪಿ.ಹೆಚ್.ಪೂಜಾರ್ ರವರು ಇದ್ದೆವು. ಆಗ ಮಾತನಾಡಿದೆವು. ಅವರು ನನ್ನನ್ನು ಮನೆಗೆ ಕರೆದುಕೊಂಡು ಹೋಗಿ ಈ ರೀತಿ ಮಾತನಾಡಬೇಕು. ಈ ರೀತಿ ಮಾಡಬೇಕು ಎಂದು ಹೇಳಿಕೊಡುತ್ತಿದ್ದರು. ಅದನ್ನು ನಾನು ನನ್ನ ಜೀವನದಲ್ಲಿ ಅಳವಡಿಸಿಕೊಂಡಿದ್ದೇನೆ. ಇವತ್ತು ತಾವು ಸಭಾಪತಿಗಳಾಗಿ ಆರಿಸಿ ಬಂದಿರುವುದರಿಂದ, ನನಗೆ ತುಂಬಾ ಹೆಮ್ಮೆ ಮತ್ತು ಅಭಿಮಾನವೆನಿಸಿದೆ. ಏಕೆಂದರೆ, ಮಾನ್ಯ ಎಸ್.ವ್ಹಿ.ಸಂಕನೂರರವರು ಹೇಳಿದ ಹಾಗೆ ನಮ್ಮ ಜಿಲ್ಲೆಯನ್ನು ತಾವು represent ಮಾಡುತ್ತಿದ್ದೀರಿ. ನಾನು ಸಭಾಪತಿಗಳ ಸ್ಥಾನದಿಂದ ಕೆಳಗಡೆ ಇಳಿದಾಗ ಸ್ವಲ್ಪ ನೋವಾಗಿತ್ತು. ನೀವು ಬಂದ ಮೇಲೆ ನಮ್ಮ ಜಿಲ್ಲೆಯವರು ಬಂದಿದ್ದಾರೆ ಎಂದು ಸಮಧಾನವಾಯಿತು. ಇದಕ್ಕಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಾವು ತುಂಬಾ ಸಣ್ಣವರು ಎಂದು ನಾನು ತಿಳಿದುಕೊಂಡಿದ್ದೆ. ತಮಗೆ 62 ವರ್ಷ ಎಂದು ನನಗೆ ಗೊತ್ತೇ ಇರಲಿಲ್ಲ. ತಾವು ಹಿರಿಯ ನಾಗರೀಕರು ಎಂದು ಈಗ ಗೊತ್ತಾಯಿತು. ಈ ಸದನದಲ್ಲಿ ಮೊದಲಿನಿಂದ ಮಾನ್ಯ ಬಸವರಾಜೇಶ್ವರಿಯವರು, ಮಾನ್ಯ ಕೆ.ರೆಹಮಾನ್ ಖಾನ್‌ರವರು, ಮಾನ್ಯ ರಾಮಭಾವು ಪೋತೇದಾರ್‌ರವರು, ಮಾನ್ಯ ಡಿ.ಮಂಜುನಾಥ್‌ರವರು, ಮಾನ್ಯ ಡಿ.ಬಿ.ಕಲ್ಮಣಕರ್‌ರವರು, ಮಾನ್ಯ ಬಿ.ಎಲ್.ಶಂಕರ್ ರವರು, ಮಾನ್ಯ ವಿ.ಆರ್.ಸುದರ್ಶನ್‌ರವರು, ಮಾನ್ಯ ಬಿ.ಕೆ.ಚಂದ್ರಶೇಖರ್‌ರವರು, ಮಾನ್ಯ ಮತ್ತಿಕಟ್ಟಿ ವೀರಣ್ಣನವರು, ಮಾನ್ಯ ಡಿ.ಎಚ್.ಶಂಕರಮೂರ್ತಿಯವರು, ಮಾನ್ಯ ಪ್ರತಾಪ್ ಚಂದ್ರ ಶೆಟ್ಟಿಯವರು ಮತ್ತು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು. ಇಷ್ಟು ಮಂದಿಯೊಳಗೆ ತಾವು ಇವತ್ತು 13ನೇ ಸಭಾಪತಿ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಸಭಾಪತಿಯಾಗಿ ತಾವು ಮುಖ್ಯ ಸಚೇತಕರಾಗಿ ಅಲ್ಲಿ ಕುಳಿತಿದ್ದಾಗ. . . ಸಭಾಪತಿಯವರೇ ಸ್ವಲ್ಪ ಕೇಳಿ.

**ಸಭಾಪತಿಯವರು:-** ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ, ನಾನು ಮೈಕ್‌ನಲ್ಲಿ ಕೇಳುತ್ತಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನನ್ನ ಕಡೆ ನೋಡಿ. ನಾನು ಸಭಾಪತಿಯಾಗಿದಾಗ ಪ್ರತಿಯೊಂದಕ್ಕೂ ನಾನು ತಮ್ಮನ್ನು ಸನ್ನೆ ಮಾಡಿ, ಚೀಟಿ ಕಳುಹಿಸಿ, ಈ ರೀತಿ ಎಂದು ಕೇಳುತ್ತಿದ್ದೆ. ಅದು ನಮ್ಮ, ನಿಮ್ಮ ಸೌಜನ್ಯ. ಏಕೆಂದರೆ, ಮುಖ್ಯ ಸಚೇತಕರಾಗಿ ಇರುವಂತಹವರಿಗೆ ಜವಾಬ್ದಾರಿ ಜಾಸ್ತಿ

ಇರುತ್ತಿತ್ತು. ಅದಕ್ಕಿಂತ ಹೆಚ್ಚಿನ ಜವಾಬ್ದಾರಿ ಈಗ ಈ ಸ್ಥಾನಕ್ಕೆ ಬಂದಿದೆ. ಇದಕ್ಕೆ ನಾನು ತಮಗೆ ಸಂಪೂರ್ಣವಾಗಿ ನನ್ನ ಹೃದಯದಿಂದ ಅಭಿನಂದನೆಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರನ್ನು ಏನಾದರೂ ಬಂದರೆ ಇದನ್ನು ಹೇಗೆ ಮಾಡಬೇಕೆಂದು ಕೇಳುತ್ತಿದ್ದೆ. ಅದೇ ರೀತಿ ಬಹಳ ಮಂದಿಗೆ ಪತ್ರ ಕಳುಹಿಸಿ ಹೇಗೆ ಮಾಡಬೇಕು, ಏನು ಮಾಡಬೇಕೆಂದು ಕೇಳುತ್ತಿದ್ದೆ. ಅವರ ಭಾವನೆಗಳನ್ನು ತಿಳಿದುಕೊಳ್ಳುತ್ತಿದ್ದೆ. ಇವತ್ತು ತಾವು ಕೂಡ ನನ್ನ ಜೊತೆ ಅನೇಕ ವರ್ಷಗಳಿಂದ ಒಡನಾಡಿಗಳಾಗಿ ಬಂದಿದ್ದೀರಿ. ಈ ಹಿನ್ನೆಲೆಯಲ್ಲಿ ನಾನು ಹೃದಯ ತುಂಬಿದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಮಗೆ ದೇವರು ಆಯುರಾರೋಗ್ಯವನ್ನು ಕೊಡಲಿ. ಈ ಸದನವನ್ನು ಬಹಳ ಚೆನ್ನಾಗಿ ನಡೆಸುವಂತಹ ಶಕ್ತಿಯನ್ನು ಕೊಡಲಿ ಎನ್ನುವಂತಹ ಮಾತನ್ನು ಹೇಳುತ್ತಾ, ನನ್ನ ಎರಡು ಅನುಭವಗಳನ್ನು ಹೇಳುತ್ತೇನೆ.

ಮಾನ್ಯ ಎಸ್.ರವಿಯವರು ಈಗೀಗ ಸದನದ ಗುಣಮಟ್ಟ ಕಡಿಮೆಯಾಗುತ್ತಿದೆ ಎಂದು ಹೇಳಿದರು. ಇದನ್ನು ನಾನು ನೂರಕ್ಕೆ ನೂರರಷ್ಟು ಒಪ್ಪುತ್ತೇನೆ. ನಾನು ಬಹಳಷ್ಟು ಜನರಿಗೆ ಈ ಮಾತನ್ನು ಹೇಳಿದ್ದೇನೆ. ಇವತ್ತಿನ ದಿವಸ ಈ ಸದನದಲ್ಲಿ ಗುಣಮಟ್ಟ ಕಡಿಮೆಯಾಗುತ್ತಿದೆ ಎನ್ನುವುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಕಳೆದ ಅಧಿವೇಶನದಲ್ಲಿ ಯಾವುದೋ ಹನಿಟ್ರ್ಯಾಪ್ ವಿಷಯದ ಬಗ್ಗೆ 3 ದಿವಸಗಳ ಕಾಲ ಸಮಯವನ್ನು ಕಳೆದಿರುವಂತಹ ಕಹಿ ಅನುಭವ ಇದೆ. ಆ ರೀತಿ ಇನ್ನು ಮುಂದೆ ಆಗಬಾರದು. ನಾವೆಲ್ಲರೂ ತಮಗೆ ಸಹಕಾರವನ್ನು ಕೊಡುತ್ತೇವೆ. ಸದನವನ್ನು ಉತ್ತಮವಾದ ರೀತಿಯಲ್ಲಿ ನಡೆಸಿ. ಎಷ್ಟೇ ಸಮಯವಾದರೂ ಎಲ್ಲರಿಗೂ ಸಹ ತಾವು ಸಮಯವನ್ನು ಕೊಡುತ್ತೀರಿ, ಸದನವನ್ನು ಸರಿಯಾಗಿ ನಡೆಸುತ್ತೀರಿ ಎನ್ನುವಂತಹ ಸಂಪೂರ್ಣವಾದ ಭರವಸೆ ನನಗೆ ಇದೆ. ಈ ಹಿನ್ನೆಲೆಯಲ್ಲಿ ನಾನು ಸದನಕ್ಕೆ ಬಂದಾಗ ಕಾರ್ಮಿಕ ಮುಖಂಡರಾಗಿದ್ದ ವೆಂಕಟರಾಮನ್ ರವರು ಸುಮಾರು 3 ½ ತಾಸು ಭಾಷಣ ಮಾಡಿದರು. ಇಡೀ ಜಗತ್ತಿನ ಎಲ್ಲಾ ಲೇಬರ್ ಆಕ್ಟ್ ಅನ್ನು ಹೇಳುತ್ತಿದ್ದರು. ಆಮೇಲೆ ಮಾನ್ಯ ರಾಜಗೋಪಾಲ್ ಎನ್ನುವವರು ಕಪಾಲಿ ಟಾಕೀಸ್ ಮಾಲೀಕರಾದವರು ಜನರ ಬಗ್ಗೆ ಮಾತನಾಡುತ್ತಿದ್ದರು. ಮಾನ್ಯ ಹೆಚ್.ನರಸಿಂಹಯ್ಯನವರ ಬಗ್ಗೆ ಬಹಳಷ್ಟು ಇವೆ. ಇವರು ಶಿಕ್ಷಣದ ಬಗ್ಗೆ ಮಾತನಾಡುತ್ತಿದ್ದರು. ಜೋಕ್ ಹೇಳುತ್ತಿದ್ದರು. ಪದ್ಧತಿಯನ್ನು ಹೇಳುತ್ತಿದ್ದರು. ಬಹಳಷ್ಟು ಕಲಿತುಕೊಂಡಿದ್ದರು. ಅದೇ ರೀತಿ ಮಾನ್ಯ ಬಿ.ಎಲ್.ಶಂಕರ್‌ರವರಿಂದ ಬಹಳಷ್ಟು ಅನುಭವವನ್ನು ಅವರಿಂದ ತೆಗೆದುಕೊಂಡಿದ್ದೇವೆ. ಮಾನ್ಯ ಎ.ಕೆ.ಸುಬ್ಬಯ್ಯ ಮತ್ತು ಮಾನ್ಯ ಎಂ.ಸಿ.ನಾಣಯ್ಯ ನವರು ಇವೆರೆಲ್ಲಾ ಅತ್ಯಂತ ಗುಣಮಟ್ಟದ ರೀತಿಯಲ್ಲಿ ಸದನವನ್ನು ನಡೆಸುತ್ತಿದ್ದರು. ಅದೇ ರೀತಿಯ ಪರಂಪರೆಯನ್ನು ಹಾಕಿಕೊಂಡು ಬಂದಿದ್ದೇವೆ. ತಾವು ಕೂಡ ಇದೇ ರೀತಿಯ ಪರಂಪರೆಯನ್ನು ಹಾಕಿಕೊಂಡು ಹೋಗಬೇಕು. ಒಂದು ಬಾರಿ ಅಲ್ಲಿನ ಪರಿಸ್ಥಿತಿ ನನಗೆ ಬಹಳ ಅರ್ಥವಾಗಿದೆ. ಬೆಳಗಾವಿಯಲ್ಲಿ 19ನೇ ತಾರೀಖು ಕೊನೆಯ ದಿನ 11 ಗಂಟೆಯವರೆಗೂ ಕುಳಿತು ಸದನ ನಡೆಸಿದ್ದೇನೆ. Nature call ಗೆ ಹೋಗಬೇಕಾದರೆ

ಪ್ಯಾನಲ್‌ನಲ್ಲಿ ಇದ್ದವರಿಗೆ ಚೀಟಿ ಕಳುಹಿಸಿದೆ. ಅವರು "ಇಲ್ಲ ಸರ್, ನನಗೆ ಬಸ್ಸು ಇದೆ" ಎಂದು ಹೊರಟು ಹೋದರು. ನಾನು 11 ಗಂಟೆಯವರೆಗೂ ಕುಳಿತು ಸದನವನ್ನು ನಡೆಸಿದ್ದೇನೆ. ತಾವು ಕೂಡ ಅಂತಹ ಪ್ರಸಂಗ ಬಂದಾಗ ಯಾಕಪ್ಪ, ಇಲ್ಲಿ ಕುಳಿತಿದ್ದೇನೆ ಎನ್ನುವ ಭಾವನೆ ಬರುವುದರಲ್ಲಿ ಎರಡು ಮಾತಿಲ್ಲ. ತಮಗೂ ಅಂತಹ ಪ್ರಸಂಗ ಬರುತ್ತದೆ. ಆ ರೀತಿ ಪ್ರಸಂಗ ಬಂದಾಗ ಸಮಧಾನಪಟ್ಟುಕೊಂಡು ಮಾಡಬೇಕು ಎನ್ನುವಂತಹ ಮಾತನ್ನು ತಮ್ಮ ಮುಂದೆ ಹೇಳಿ, ನಾನು ಈ ಸದನಕ್ಕೆ ಬಂದಾಗ ಬಹಳ ಗಂಭೀರವಾಗಿ ಚರ್ಚೆ ನಡೆಯುತ್ತಿತ್ತು. ಇಬ್ಬರು ಮಂತ್ರಿಗಳಿಗೆ ರಾಜೀನಾಮೆ ಕೊಡಿಸಿದ್ದರು. ಒಬ್ಬ ಮಂತ್ರಿಯ ಬಗ್ಗೆ ಹೇಳುತ್ತೇನೆ. ನಾನು ಅವರ ಹೆಸರನ್ನು ಹೇಳುವುದಿಲ್ಲ. ಸಣ್ಣದೊಂದು ಚೀಟಿಯಲ್ಲಿ 'ಪಿ.ಎಸ್.ಐ., 5 ಸಾವಿರ ರೂಪಾಯಿ' ಎಂದು ಬರೆದಿದ್ದರು. 'ಪಿ.ಎಸ್.ಐ., 5 ಸಾವಿರ' ಎಂದು ಬರೆದಿದ್ದಾರೆ ಎಂದು ಮಾನ್ಯ ಎ.ಕೆ.ಸುಬ್ಬಯ್ಯನವರು ಪಿ.ಎಸ್.ಐ., ಸಲುವಾಗಿ 5 ಸಾವಿರ ರೂಪಾಯಿ ಲಂಚ ತೆಗೆದುಕೊಂಡಿದ್ದಾರೆ ಎಂದು ತಿಳಿದುಕೊಂಡು, ಇದರ ಬಗ್ಗೆ ಚರ್ಚೆಯಾಗಿ, ಮಾನ್ಯ ಆರ್.ಗುಂಡೂರಾವ್‌ರವರು ಕೈಮುಗಿದು ಎಷ್ಟೇ ಕೇಳಿದರೂ ಯಾರು ಕೂಡ ಕೇಳಲಿಲ್ಲ. ರಾಜೀನಾಮೆ ಕೊಡಿಸುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಇನ್ನೊಬ್ಬರಿಗೂ ಇದೇ ರೀತಿಯಾಗಿತ್ತು. ಯಾರನ್ನೋ ಹೊಡೆದಿದ್ದರು. ಇದ್ದರಿಂದ, ಇಬ್ಬರು ಮಂತ್ರಿಗಳನ್ನು ರಾಜೀನಾಮೆ ಕೊಡಿಸಿದಂತಹ ಸದನ. ಈ ಸದನ ಅಷ್ಟು ಉತ್ತಮವಾದ ರೀತಿಯಲ್ಲಿ ನಡೆದುಕೊಂಡು ಬಂದಂತಹ ಪರಿಸ್ಥಿತಿಯಾಗಿತ್ತು. ಇವತ್ತು ಕಾಲ ಬದಲಾಗಿದೆ. ಜನ ಬದಲಾಗಿದ್ದಾರೆ. ಈಗ ಹೊಸದಾಗಿ ಸದಸ್ಯರುಗಳು ಆರಿಸಿ ಬಂದಿದ್ದಾರೆ. ಇವರೆಲ್ಲಾ ಈ ಸದನದ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಬೇಕೆನ್ನುವಂತಹ ಮಾತನ್ನು ಹೇಳುತ್ತೇನೆ.

(ಮುಂದು)

**(695) 14.8.2026 1.50 ಪಿಕೆ:ಆರ್‌ಎನ್ (ಸಭಾಪತಿಗಳ ಉಪಸ್ಥಿತಿ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು):**

ಗುಣಮಟ್ಟದ ಚರ್ಚೆಗಳಾಗುವುದಕ್ಕೆ ತಾವು ಸ್ವಲ್ಪ ಹೆಚ್ಚು ಸಮಯವನ್ನು ಸದನಕ್ಕೆ ಕೊಡಬೇಕಾಗುತ್ತದೆ. ಆಗ ಸ್ವಲ್ಪ ತೊಂದರೆ ಆಗಬಹುದು, ಆದಾಗ್ಯೂ ಸದನದ ಘನತೆ-ಗೌರವವನ್ನು ಎತ್ತರಿಸುವ ಸಲುವಾಗಿ, ನಾವೆಲ್ಲರೂ ಕೆಲಸ ಮಾಡಬೇಕಾಗುತ್ತದೆ. ಮಾನ್ಯ ಬಸವರಾಜ ರಾಯರೆಡ್ಡಿಯವರು ಮಾತನಾಡುತ್ತಾ, "ಏಕೆ ಹಿಂಗ್ ಕುಳಿತುಕೊಂಡಿದ್ದೀರಿ" ಎಂದು ಹೇಳಿದರು. Distinction ನಲ್ಲಿ ಪಾಸ್ ಆಗುವ ಹುಡುಗ ಒಂದು ವಿಷಯದಲ್ಲಿ fail ಆಗಿ ಬಿಟ್ಟರೆ ಬಹಳ ನೋವು ಅನುಭವಿಸುತ್ತಾನೆ, ಆಗ ಆತ ಹಾಗೆಯೇ ಕುಳಿತುಕೊಳ್ಳುತ್ತಾನೆ. ನನ್ನ ಪರಿಸ್ಥಿತಿ ಹಾಗಾಗಿದೆ, ಬೇರೇನೂ ಇಲ್ಲ. ಇದು ಬರುತ್ತಾ, ಬರುತ್ತಾ ಸರಿಹೋಗುತ್ತದೆ.

**ಶ್ರೀ ಟಿ.ಎ.ಶರವಣ:-** ತಾವು fail ಆಗಿಲ್ಲ, you are always distinction.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ನಾನು ಒಂದು ಘಟನೆ ಹೇಳುತ್ತೇನೆ. 1964ರ ಒಲಂಪಿಕ್‌ನಲ್ಲಿ ಬಿಲ್ ಟಾಮಿ (Bill Toomey) ಎನ್ನುವವನು ತನ್ನ ಪಂದ್ಯದಲ್ಲಿ ಸೋಲುತ್ತಾನೆ. ಮಾರನೆಯ ದಿನ ಆತ ಮೈದಾನದಲ್ಲಿ ಅಭ್ಯಾಸ ಮಾಡುತ್ತಿರುತ್ತಾನೆ. ಆಗ ಜನ ನೋಡಿ "Bill Toomey, yesterday Olympic over" ಎಂದು ಜೋಕ್ ಮಾಡಿದಾಗ, ಆತ "I am practicing for 1968 Olympics" ಎಂದು ಹೇಳಿದ. ನಾನೂ ಸಹ, ಇದನ್ನು ಚಾಲೆಂಜ್ ಆಗಿ ತೆಗೆದುಕೊಂಡು, ಬರುವಂತಹ ದಿನಮಾನಗಳಲ್ಲಿ ಅತ್ಯಂತ ಶ್ರೇಷ್ಠ ರೀತಿಯಲ್ಲಿ, ಉನ್ನತ ಮಟ್ಟದಲ್ಲಿ ಚುನಾವಣೆ ಎದುರಿಸಿ ಆರಿಸಿ ಬರುತ್ತೇನೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎಲ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ಶ್ರೀ ಡಿ.ವಿ.ಗುಂಡಪ್ಪನವರ *"ದಿವಸದಿಂ ದಿವಸಕ್ಕೆ, ನಿಮಿಷದಿಂ ನಿಮಿಷಕ್ಕೆ ಭವಿಷಿಯವ ಚಿಂತಿಸದೆ ಬದುಕ ನೂಕುತಿರು॥ ವಿವರಗಳ ಜೋಡಿಸುವ ಯಜಮಾನ ಬೇರಿಹನು ಸವೆಸು ನೀಂ ಜನುಮವನು"* ಎನ್ನುವ ರಚನೆ ಈ ಸಂದರ್ಭದಲ್ಲಿ ನನಗೆ ನೆನಪಿಗೆ ಬರುತ್ತಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಗಳೆ, ಇವೆಲ್ಲವೂ ಸಹಜ. ಮಾನ್ಯ ಬಸವರಾಜ ರಾಯರೆಡ್ಡಿಯವರು ಉನ್ನತ ಶಿಕ್ಷಣ ಸಚಿವರಾಗಿದ್ದರು. ನಾವು ಕೊಪ್ಪಳದಿಂದ ಬರುವಾಗ ದಾರಿಯಲ್ಲಿ ಸರ್ಕಾರಿ ಕಾಲೇಜುಗಳನ್ನು ನೋಡಿದ್ದೇವೆ, ಅವುಗಳ ಸ್ಥಿತಿ ಉತ್ತಮವಾಗಿತ್ತು. ಅವರು ಅಷ್ಟೊಂದು ಕೆಲಸ ಮಾಡಿದರೂ ಜನ 2ನೇ ಬಾರಿ ಅವರನ್ನು ಸೋಲಿಸಿದರು. ಇವತ್ತಿನ ದಿನಮಾನಗಳಲ್ಲಿ ಕೆಲಸಕ್ಕೆ ಗೌರವ ಕೊಡುವುದು ಕಡಿಮೆಯಾಗಿದೆ. ಇದು ಎಲ್ಲಾ ಕ್ಷೇತ್ರಗಳಲ್ಲೂ ಆಗಿದೆ. ಅದಾಗಬಾರದು. ಈ ಸದನದಲ್ಲಿ ಎಲ್ಲಾ ಸಚಿವರು ಬಂದಿದ್ದು, ಒಳ್ಳೆಯ ಕೆಲಸ ಆಗಬೇಕು. ನಾವೆಲ್ಲರೂ ಕೂಡಿ ಈ ರಾಜ್ಯದ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡೋಣ ಎಂದು ಹೇಳಬಯಸುತ್ತೇನೆ. ಮಾನ್ಯ ಸಭಾಪತಿಗಳೆ, ನೀವು ಬಹಳ ಸಣ್ಣವರು ಎಂದು ಭಾವಿಸಿದ್ದೆ; ಆದರೆ ನೀವು ಸೀನಿಯರ್ ಸಿಟಿಜನ್ ಆಗಿದ್ದೀರಿ. ನಾವು-ನೀವು ಒಂದೇ ತಕ್ಕಡಿಯಲ್ಲಿದ್ದೇವೆ. ಸದಾ ನಿಮ್ಮ ಜೊತೆ ನಮ್ಮ ಸಹಕಾರ ಇರುತ್ತದೆ, ಬೆಂಬಲ ಇರುತ್ತದೆ, ಎಲ್ಲರೂ ಕೂಡಿ ಸದನವನ್ನು ಉತ್ತಮವಾದ ರೀತಿಯಲ್ಲಿ ನಡೆಸೋಣ ಎಂದು ಹೇಳಿ, ತಮಗೆ ದೇವರು ಆರೋಗ್ಯವನ್ನು ಕರುಣಿಸಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಇನ್ನೂ ಅನೇಕ ಸದಸ್ಯರು ಮಾತನಾಡುವವರಿದ್ದರು. ಅವರಿಗೆ ಇನ್ನೊಂದು ಸಲ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಗಳೆ, ನಿನ್ನೆ ಇಲ್ಲಿಗೆ ನಾನು ಬಂದು ನನ್ನ ಮಿತ್ರರಾಗಿದ್ದ ಮಾನ್ಯ ಸುಧಾಕರ್ ಅವರಿಗೆ ಮತ್ತು ಅನೇಕ ಹಿರಿಯರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಬೇಕಾಗಿತ್ತು. ಆದರೆ, ಕೆಳಮನೆ ಸ್ವಲ್ಪ ಹೆಚ್ಚು ಹೊತ್ತು ಸಭೆ ನಡೆಯಿತು ಮತ್ತು ಅಷ್ಟರ ಒಳಗೆ ಈ ಸದನ ಮುಕ್ತಾಯಗೊಂಡಿತ್ತು. ಇವತ್ತು ಒಂದು ಕಡೆ ನನಗೆ ದುಃಖವಾಗಿದೆ, ಇನ್ನೊಂದು ಕಡೆ ಸಂತೋಷವಾಗಿದೆ. ಮಾನ್ಯ ಬಸವರಾಜ ಶಿವಲಿಂಗಪ್ಪ

ಹೊರಟ್ಟಿಯವರು ಬಹಳ ಆತ್ಮೀಯವಾದ ರೀತಿಯಲ್ಲಿ ಸದನವನ್ನು ನಡೆಸುತ್ತಿದ್ದುದು ಒಂದು ಮಾದರಿಯಾಗಿದೆ ಎನ್ನಬಹುದು. ಎಷ್ಟೇ ನೋವಿದ್ದರೂ ಕೂಡ, ಆ ಸ್ಥಾನದಿಂದ ಕೃತಜ್ಞತೆಯನ್ನು ಸಲ್ಲಿಸಬೇಕು ಎನ್ನುವ ಇಚ್ಛೆ ಅವರಿಗಿತ್ತು. ಆದರೆ, ರಾಜಕೀಯ . . . ಮಾನ್ಯ ಹರಿಪ್ರಸಾದ್‌ರವರು ಆಡಿದ ಮಾತುಗಳ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಮತ್ತು ಅವರು ಒಂದು ಒಪ್ಪಂದಕ್ಕೆ ಬಂದಿದ್ದೆವು. ಆದರೆ, ಆ ಸಂದರ್ಭ, ಆ ಮಾತುಗಳು, ಅವರ ಪಕ್ಷದ ನಿರ್ಧಾರಗಳು ಹೀಗೆ ಎಲ್ಲದರಲ್ಲೂ ವ್ಯತ್ಯಾಸಗಳು ಬಂತು. Let us forget it. ನಾವು ಮುಂದಕ್ಕೆ ಹೋಗೋಣ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೂ ಕೂಡ ಈಗ ಅಂತಹ ಯಾವ ವಿಚಾರಗಳ ಬಗ್ಗೆಯೂ ಪ್ರಸ್ತಾಪ ಮಾಡಲಿಲ್ಲ. ನಾನು ಈ ರಾಜ್ಯದ ಜನತೆಯ ಆಶೀರ್ವಾದದಿಂದ ಈ ಸ್ಥಾನಕ್ಕೆ ಬಂದಿದ್ದೇನೆ. ಮಹಾತ್ಮ ಗಾಂಧಿಯವರು 100 ವರ್ಷಗಳ ಹಿಂದೆ ಕುಳಿತುಕೊಂಡಿದ್ದ ಸ್ಥಾನದಲ್ಲಿ ಇವತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕುಳಿತುಕೊಂಡಿದ್ದಾರೆ. ಶ್ರೀಮತಿ ಸೋನಿಯಾ ಗಾಂಧಿಯವರು, ಶ್ರೀ ರಾಹುಲ್ ಗಾಂಧಿಯವರು ಮತ್ತು ನಮ್ಮ 136 ಜನ ಶಾಸಕರು ಮತ್ತು ವಿಧಾನ ಪರಿಷತ್ತಿನ ಶಾಸಕರ, ರಾಜ್ಯದ ಜನತೆಯ ಆಶೀರ್ವಾದದಿಂದ ಮತ್ತು ನಾನು ನಂಬಿಕೊಂಡಂಥ ಗುರುಗಳು, ಶಕ್ತಿ, ಎಲ್ಲಾ ಧರ್ಮದ ಮಠಾಧಿಪತಿಗಳು ನನಗೆ ಆಶೀರ್ವಾದ ಮಾಡಿದ್ದಾರೆ. ನನಗೆ ಕಷ್ಟ ಬಂದಾಗ ರಾಜ್ಯದ ಉದ್ದಗಲಕ್ಕೂ ಜನ ಪಕ್ಷಭೇದ ಮರೆತು, ಹರಕೆ ಕಟ್ಟಿಕೊಂಡು, ಪ್ರಾರ್ಥನೆ ಮಾಡಿ, ನನ್ನ ಪರವಾಗಿ ನಿಂತುಕೊಂಡರು. ಕಷ್ಟ ಕಾಲದಲ್ಲಿ ಇವರೆಲ್ಲರೂ ಕೂಡ ನನ್ನ ಬೆನ್ನೆಲುಬಾಗಿ ನಿಂತಿದ್ದರು. ಇವತ್ತು ದೇವರು ನನಗೆ ಈ ಸ್ಥಾನದಲ್ಲಿ ಕೂರಿಸಿದ್ದಾನೆ. ಈ ಸ್ಥಾನ ಮಾನ್ಯ ಕೆ.ಸಿ.ರೆಡ್ಡಿಯವರಿಂದ ಪ್ರಾರಂಭವಾಯಿತು. ಮಾನ್ಯ ಕೆಂಗಲ್ ಹನುಮಂತಯ್ಯನವರು ವಿಧಾನಸೌಧವನ್ನು ಕಟ್ಟಿದರು. ಮಾನ್ಯ ಬಂಗಾರಪ್ಪನವರ ಸಚಿವ ಸಂಪುಟದಲ್ಲಿ ನಾನು ಜೈಲು ಮಂತ್ರಿಯಾಗಿದ್ದೆ. ವಿಧಾನಸೌಧವನ್ನು ಕಟ್ಟಬೇಕಾದರೆ ಜೈಲಿನಲ್ಲಿದ್ದ ಖೈದಿಗಳನ್ನು ಕರೆದುಕೊಂಡು ಬಂದು ಕೆಲಸ ಮಾಡಿಸಿದ್ದರು ಎಂದು ಒಂದು ಪುಸ್ತಕದಲ್ಲಿ ಓದಿ ತಿಳಿದುಕೊಂಡಿದ್ದೇನೆ. ಆಗ ಕ್ರೇನ್‌ಗಳು ಯಾವುದೂ ಇರಲಿಲ್ಲ. ದಪ್ಪ ಕಲ್ಲುಗಳು ಮತ್ತು ಪಿಲ್ಲರ್‌ಗಳನ್ನು ಎತ್ತಬೇಕಾಗಿತ್ತು. ಮಾನ್ಯ ಕೆಂಗಲ್ ಹನುಮಂತಯ್ಯನವರು, ಈ ಜಾಗದಲ್ಲಿ ಏನು ಕೆಲಸ ನಡೆಯುತ್ತಿದೆ ಎಂದು ತಾವು ವಾಕ್ ಮಾಡಿಕೊಂಡು ಬಂದು ನೋಡುತ್ತಿದ್ದರು. ಇಂತಹ ಮುಖ್ಯಮಂತ್ರಿಗೆ ಕೊನೆಗೆ ಕಾಲಲ್ಲಿದ್ದ ಚಪ್ಪಲಿಯಿಂದ ಹೊಡೆದದ್ದು ಇತಿಹಾಸದಲ್ಲಿ ದಾಖಲಾಗಿದೆ. ಇದೇ ಮುಖ್ಯಮಂತ್ರಿಯವರು ವಿಧಾನಸೌಧ ಕಟ್ಟಡದ ಮುಂದೆ "ಸರ್ಕಾರಿ ಕೆಲಸ ದೇವರ ಕೆಲಸ" ಎಂದೇನು ಬರೆಸಿದ್ದರೋ, ಅವರನ್ನೇ ಜನರು ಕುರ್ಚಿಯಲ್ಲಿ ಕುಳಿತುಕೊಳ್ಳುವುದಕ್ಕೆ ಬಿಡಲಿಲ್ಲ. That is the history. ಯಾರು ವಿಧಾನಸೌಧವನ್ನು ಕಟ್ಟಿದರೋ ಅವರಿಗೆ ಈ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕೆ ಆಗಲಿಲ್ಲ. ನಾನು ಮತ್ತು ಮಾನ್ಯ ಎಸ್.ಎಂ.ಕೃಷ್ಣರವರು ಮಾತನಾಡುವ ಸಂದರ್ಭದಲ್ಲಿ, ನೀವು ಒಂದು ಇತಿಹಾಸ ಬರೆಯಬೇಕು ಎಂದು ಅವರಿಗೆ ಹೇಳುತ್ತಿದ್ದೆ. ನನಗೂ ಅವರಿಗೂ ಸ್ನೇಹ-ಸಂಬಂಧಗಳು ಹೇಗಿತ್ತು ಎನ್ನುವುದು ಎಲ್ಲರಿಗೂ ಗೊತ್ತಿದೆ. ನೀವು ಏನಾದರೂ ಸಾಕ್ಷಿಗುಡ್ಡೆ ಮಾಡಬೇಕು ಎಂದು ನಾನು ಅವರಿಗೆ ಹೇಳುತ್ತಿದ್ದೆ. ಶ್ರೀ ಕೆಂಪೇಗೌಡರು ಬೆಂಗಳೂರನ್ನು ಕಟ್ಟಿದರು, ಶ್ರೀ ಕೆಂಗಲ್ ಹನುಮಂತಯ್ಯನವರು

ವಿಧಾನಸೌಧ ಕಟ್ಟಿದರು. ಅದೇ ತರಹ ನೀವು ಒಂದು ಕಾರ್ಯ ಮಾಡಬೇಕು ಎಂದು ಹೇಳಿದೆ. ಆಗ ಅವರು ವಿಕಾಸಸೌಧ ಕಟ್ಟಲಿಕ್ಕೆ ತೀರ್ಮಾನ ಮಾಡಿದರು.

**ಡಾ: ಕೆ.ಗೋವಿಂದರಾಜ್:-** ಅವರ ಜ್ಞಾಪಕಾರ್ಥ ವಿಕಾಸಸೌದಲ್ಲಿ ಪ್ರತಿಮೆಯನ್ನು ಸ್ಥಾಪನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ತಾವು ದಯವಿಟ್ಟು ಕುಳಿತುಕೊಳ್ಳಿ. ಇನ್ನೂ ಸಮಯ ಇದೆ. ಮಾನ್ಯ ಸಭಾಪತಿಗಳೆ, ಮಾನ್ಯ ಎಸ್.ಎಂ.ಕೃಷ್ಣಯವರು ವಿಕಾಸಸೌಧವನ್ನು ಕಟ್ಟಿದರು. ಅದರ ಉದ್ಘಾಟನೆಗೆಂದು ಹೋದ ಸಂದರ್ಭದಲ್ಲಿ ಪೂಜೆ ನಡೆಯುತ್ತಿತ್ತು. ಆಗ ಮಾನ್ಯ ಧರ್ಮಸಿಂಗ್‌ರವರು ಲೋಕೋಪಯೋಗಿ ಸಚಿವರಾಗಿದ್ದರು. ಅಲ್ಲಿ ಮುಖ್ಯಮಂತ್ರಿಗಳು ಕುಳಿತುಕೊಳ್ಳಬೇಕೆಂದು ಒಂದು ಕುರ್ಚಿ ಇಟ್ಟಿದ್ದರು. ಮಾನ್ಯ ಎಸ್.ಎಂ.ಕೃಷ್ಣರವರು, ಮಾನ್ಯ ಧರ್ಮ್‌ಸಿಂಗ್‌ರವರನ್ನು ಆ ಕುರ್ಚಿಯಲ್ಲಿ ಕೂರಿಸಿಬಿಟ್ಟರು. ಮುಂದೆ ಇದೇನಾಗುತ್ತದೆ ಎನ್ನುವ ಅರಿವು ನನಗೆ ಇತ್ತು. ನಂತರ ಆಗಿದ್ದು ಇತಿಹಾಸ. ಮಾನ್ಯ ಎಸ್.ಎಂ.ಕೃಷ್ಣ ಅವರ ನಂತರ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾದರು. ನಾವು ಮನಸ್ಸಿನಲ್ಲಿ ಏನೇ ಅಂದುಕೊಂಡಿದ್ದರೂ ಕೂಡ, ವಿಚಾರಗಳು, ಇತಿಹಾಸಗಳು ಬೇಕಾದಷ್ಟನ್ನು ಸೃಷ್ಟಿ ಮಾಡುತ್ತವೆ. ಈ ರಾಜ್ಯದಲ್ಲಿ ಮಾನ್ಯ ಕಡಿದಾಳ್ ಮಂಜಪ್ಪನವರು, ಮಾನ್ಯ ಜತ್ತಿಯವರು, ಮಾನ್ಯ ಕಂಠಿರವರುಗಳನ್ನು ನಾನು ನೋಡುವುದಕ್ಕೆ ಆಗಲಿಲ್ಲ. ಆದರೆ, ಮಾನ್ಯ ನಿಜಲಿಂಗಪ್ಪನವರನ್ನು ನಾನು ನೋಡಿದ್ದೇನೆ, ಭೇಟಿ ಮಾಡಿದ್ದೇನೆ, ಮಾತನಾಡಿದ್ದೇನೆ. ಅದಾದ ಮೇಲೆ ಮಾನ್ಯ ವೀರೇಂದ್ರ ಪಾಟೀಲರ ಆಡಳಿತ, ಮಾನ್ಯ ದೇವರಾಜ ಅರಸುರವರು ಹೊಸ ನಾಯಕರುಗಳನ್ನು ಸೃಷ್ಟಿ ಮಾಡುವ ವಿಚಾರಧಾರೆಗಳನ್ನು ನೋಡಿದ್ದೇವೆ. ಅವರು ದೊಡ್ಡ ಜಾತಿಯಲ್ಲಿ ಹುಟ್ಟಿದ್ದರೂ ಕೂಡ, ಅರಸು ಮನೆತನದಲ್ಲಿ ಹುಟ್ಟಿದ್ದರೂ ಕೂಡ ಹೊಸ ನಾಯಕರುಗಳನ್ನು ಬೆಳೆಸಬೇಕೆಂದು ಅನೇಕ ನಿರ್ಧಾರಗಳನ್ನು ತೆಗೆದುಕೊಂಡರು. ಎಲ್ಲಾ ವರ್ಗದ ಜನರ ಜೊತೆಯಲ್ಲಿ ಬೆರೆಯುತ್ತಿದ್ದರು. ಅವರನ್ನು ನಾವು ಹಿಂದುಳಿದ ವರ್ಗಗಳ ನಾಯಕ ಎಂದು ಜ್ಞಾಪಿಸಿಕೊಳ್ಳುತ್ತೇವೆ. ಅವರು ರಾಜ್ಯದ ಯುವಕರಿಗೆ ಕೊಟ್ಟಂಥ ಪ್ರೋತ್ಸಾಹವನ್ನು ಯಾರೂ ಮರೆಯುವುದಕ್ಕಾಗುವುದಿಲ್ಲ. ಆವತ್ತಿನ ಕಾಲದಲ್ಲಿ ಕೇಂದ್ರ ಉಳುವವನಿಗೆ ಭೂಮಿ ಕೊಡಬೇಕೆಂದು ತೀರ್ಮಾನ ಮಾಡಿತ್ತು. ನಮ್ಮ ರಾಜ್ಯದಲ್ಲಿ ಆ ಬಡ ಜನತೆಗೆ ಇವರು ಕೊಟ್ಟ ತೀರ್ಮಾನ ಏನಿದೆ, ಅದು ಒಂದು ಇತಿಹಾಸ. ನಾನು ವಿದ್ಯಾರ್ಥಿ ನಾಯಕನಾಗಿದ್ದಾಗ ಮಾನ್ಯ ಆರ್. ಗುಂಡೂರಾವ್‌ರವರ ಕಾಲವನ್ನು ಗಮನಿಸಿದ್ದೇನೆ. ನಾವೆಲ್ಲರೂ ಅವರನ್ನು ನೋಡಿದ್ದೇವೆ. ಅವರ ಆಡಳಿತವನ್ನು ನಾವು ಗಮನಿಸಿದ್ದೇವೆ.

(ಮುಂದು)

**(696) 14-8-2026 2.00 ಡಿಎಸ್-ವಿಕೆ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಡಿ.ಕೆ. ಶಿವಕುಮಾರ್ (ಮುಂದು):**

ದಿಟ್ಟವಾದಂತಹ ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದರು. ಶ್ರೀ ರಾಮಕೃಷ್ಣ ಹೆಗಡೆಯವರ ಪರಿಶುದ್ಧವಾದಂತಹ ಆಡಳಿತ. ಅವತ್ತು ನಾವು Parliament ಚುನಾವಣೆಯಲ್ಲಿ ಅಷ್ಟು ದೊಡ್ಡ ಮಟ್ಟದಲ್ಲಿ ಸೀಟುಗಳನ್ನು ಗೆದ್ದಿದ್ದೆವು. ಒಂದೇ ಒಂದು ಸೀಟ್ ಮಾತ್ರ ಹೋಯಿತು. ಅಷ್ಟು ಸೀಟ್ಗಳನ್ನು ಗೆದ್ದಿದ್ದರೂ ಕೂಡ, ಕೊನೆಗೆ ಅವರು ನನಗೆ ಆಡಳಿತ ಸಿಗಲಿಲ್ಲ, ಜನ ಆಶೀರ್ವಾದ ಮಾಡಲಿಲ್ಲ ಅಂತ ಹೇಳಿ, ಇಂದಿರಾ ಗಾಂಧಿಯವರು ತೀರಿಕೊಂಡ ಮೇಲೆ ತಕ್ಷಣ ವಿಧಾನ ಸಭೆಯನ್ನು ವಿಸರ್ಜಿಸಿಬಿಟ್ಟರು. ಶ್ರೀ ರಾಮಲಿಂಗಾರೆಡ್ಡಿಯವರಿಗೆ, ನಮಗೆಲ್ಲ ಅಸೆಂಬ್ಲಿಗೆ ಟಿಕೆಟ್ ಕೊಟ್ಟಿದ್ದರು. ತಮಗೂ ಕೂಡ ಗೊತ್ತಿತ್ತು. ತಾವು ಕೂಡ ಅದರಲ್ಲಿ, ಆ ಸಂದರ್ಭದಲ್ಲಿ ಇದ್ದಿರಿ. ಇಡೀ ದೇಶದಲ್ಲೇ ಕಾಂಗ್ರೆಸ್ ಪಕ್ಷದ ಅಲೆ ಇತ್ತು. ಆದರೆ ಕರ್ನಾಟಕ ರಾಜ್ಯ ಆ ಅಲೆಯನ್ನು ಒಪ್ಪದೇ, ಅವತ್ತು ರಾಮಕೃಷ್ಣ ಹೆಗಡೆಯವರನ್ನು ಈ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿ ಮಾಡಿದರು. ನಾವೆಲ್ಲ ಸೋತೆವು. ನಾವೆಲ್ಲ ಬಹಳ ಜನ ಯುವಕರಿಗೆ ಟಿಕೆಟ್ ಸಿಕ್ಕಿತ್ತು. ನಾನು 1985 ರಲ್ಲೇ ದೇವೇಗೌಡರ ಮೇಲೆ ಚುನಾವಣೆಗೆ ನಿಂತು ಸೋತೆನು. ನಾನು ನೀವೆಲ್ಲಾ ಜೊತೆಯಲ್ಲಿದ್ದೆವು. ನೀವು ಶೇಷಾದ್ರಿಪುರಂ ಕಾಲೇಜು, ನಾನು ಹೆಚ್.ಕೆ.ಇ.ಎಸ್. ಕಾಲೇಜಿನಲ್ಲಿ ಪಿ.ಯು.ಸಿ. ಓದಿದ್ದೇನೆ. ನಮ್ಮ ಶಶೀಲ್ ಜಿ.ನಮೋಶಿಯವರ ಸ್ಟೂಡೆಂಟ್ ನಾನು. ನಾನು ಅವರ ಕಾಲೇಜಿನಲ್ಲಿ ಪಿ.ಯು.ಸಿ. ಓದಿರುವಂಥದ್ದು. ಪಿ.ಯು.ಸಿ. ಆದ ಮೇಲೆ ಒಂದು ದಿನ ನನ್ನನ್ನು ಅವರ ಕಾಲೇಜಿಗೆ ಕರೆದು ಸನ್ಮಾನ ಕೂಡ ಮಾಡಿದರು. ಅದಾದ ಮೇಲೆ ರೇಣುಕಾಚಾರ್ಯ ಕಾಲೇಜಿನಲ್ಲಿದ್ದೆ, ಅಲ್ಲಿದ್ದಾಗ ಅಂತಿಮ ವರ್ಷದ ವಿದ್ಯಾರ್ಥಿ, ಶ್ರೀ ಹರಿಪ್ರಸಾದ್ ಸಾಹೇಬರು ನಮಗೆಲ್ಲ ಸೀನಿಯರ್ ಆಗಿದ್ದರು. ಅವರೂ ಕೂಡ ಒಂದೆರಡು ಮೂರು ವರ್ಷ ಮುಂದಕ್ಕೆ ಇದ್ದವರು. ನೀವು ಶೇಷಾದ್ರಿಪುರಂ ಕಾಲೇಜಿನಲ್ಲಿ ಇದ್ದಿರಿ, ನಾನು ಅಲ್ಲಿದ್ದೆ. ಸಭಾಪತಿಯವರಾದ ಶ್ರೀ ಸಲೀಂ ಅಹ್ಮದ್‌ರವರು ನನ್ನ ಕೆಳಗಡೆ ನೀವು Working President ಆಗಿ ಕೆಲಸ ಮಾಡಿದ್ದೀರಿ. ಈಗ ನೀವು ದೊಡ್ಡ ಸ್ಥಾನದಲ್ಲಿದ್ದೀರಿ. ನಿಮಗೆ ಏನು ಗೌರವ ಕೊಡಬೇಕು ಖಂಡಿತ ನಾವೆಲ್ಲ ಗೌರವವನ್ನು ಕೊಡ್ತೇವೆ. ಇದಲ್ಲದೇ ರಾಮಕೃಷ್ಣ ಹೆಗಡೆಯವರ ಪರಿಶುದ್ಧವಾದಂತಹ ಆಡಳಿತ ಇತ್ತಲ್ಲ, ಆ ಆಡಳಿತಕ್ಕೆ ಜನ ಯಾವ ರೀತಿ ಗೌರವ ಕೊಡುತ್ತಿದ್ದರು ಅನ್ನೋದು ಕೂಡ ನನಗೆ ಅರಿವಿದೆ. ಶ್ರೀ ಬೊಮ್ಮಾಯಿ ಸಾಹೇಬರು, ಅವರನ್ನು ಹೇಗೆ ತೆಗೆದರು ಅಂತ ನನ್ನ ಕಣ್ಣಲ್ಲೇ ನಾನು ನೋಡಿದ್ದೇನೆ. ಅದಾದ ಮೇಲೆ ಶ್ರೀ ಬಂಗಾರಪ್ಪನವರ ಸಂಪುಟದಲ್ಲಿ ನನಗೊಂದು ಚಿಕ್ಕ ಅವಕಾಶ ಅವತ್ತು ಮಾಡಿಕೊಟ್ಟರು, ಅದೊಂದು ದೊಡ್ಡ ಇತಿಹಾಸ ಇದೆ. ಯಾವುದಾದರೂ ಬೇರೆ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಆಗ ನಾವು ನೀರಾವರಿಗೆ, ರೈತರ ನೀರಾವರಿಗೆ ನಾವು ಫ್ರೀ ಕರೆಂಟ್ ಕೊಡಬೇಕೆಂದು ತೆಗೆದುಕೊಂಡಂತಹ ನಿರ್ಧಾರ ಇದೆಯಲ್ಲ, ಅವತ್ತು ಅದು ಕೇವಲ ಒಂದು 1,000 ಕೋಟಿಗೆ ಇತ್ತು. ಇವತ್ತು

22,000 ಕೋಟಿ ರೈತರಿಗೆ ಕೊಡುತ್ತಿದ್ದೇವೆ. ಅಂದರೆ ಆ ಕಾರ್ಯಕ್ರಮವನ್ನು ನಿಲ್ಲಿಸಲಿಕ್ಕೆ ಆಗಲಿಲ್ಲ. ಶ್ರೀ ಬಂಗಾರಪ್ಪನವರು ಇಲ್ಲ, ಆದರೆ ಅವರ ಹೆಸರು ಇನ್ನು ಉಳಿದಿದೆ. ಅವರ ಹೆಸರು ಕೂಡ ಇವತ್ತು ಉಳಿದಿದೆ. ನಮ್ಮ ಹಳ್ಳಿ ದೇವಸ್ಥಾನಗಳಿಗೆ ಬಂಗಾರಪ್ಪನವರು 'ಆಶ್ರಯ', 'ಆರಾಧನಾ', 'ಅಕ್ಷಯ' ಅಂತ ಹೇಳಿ, 'ವಿಶ್ವ' ಅಂತ ಹೇಳಿ ಕೆಲವು ಹೆಸರಿಟ್ಟರು, ಒಂದು ಅವರದೇ ಆದಂತಹ ಸಾಹಿತ್ಯ ಲೋಕದಲ್ಲಿ ಕಾರ್ಯಕ್ರಮವನ್ನು ಮಾಡಿಕೊಟ್ಟಿದ್ದನ್ನು ಕೂಡ ನಾವೆಲ್ಲ ನೋಡಿದ್ದೇವೆ. ಅದಾದ ಮೇಲೆ ಶ್ರೀ ವೀರಪ್ಪ ಮೊಯ್ಲಿ ಅವರು ಕೂಡ ಇಡೀ ಶಿಕ್ಷಣ ವ್ಯವಸ್ಥೆಯಲ್ಲಿ ಸಿ.ಇ.ಟಿ. ಎಂದು ಪ್ರಾರಂಭ ಮಾಡಿದರು. ನಮಗೆ ಇವತ್ತು ಇಡೀ ರಾಷ್ಟ್ರಕ್ಕೆ, ಇವತ್ತು ಏನಾದರೂ ದೊಡ್ಡ ದೊಡ್ಡ ಇಂಜಿನಿಯರ್ಸ್, ದೊಡ್ಡ ದೊಡ್ಡ ಡಾಕ್ಟರ್ಸ್ ಇದ್ದರೆ ಸಿ.ಇ.ಟಿ. ವ್ಯವಸ್ಥೆಯಿಂದಾಗಿ. ಒಡೆಯರ್ ಅವರ ಕಾಲದಿಂದ ಕೂಡ ಪ್ರಾರಂಭ ಮಾಡಲಾಗಿತ್ತು. ಆದರೆ ಆವತ್ತಿನ ಕಾಲದಲ್ಲಿ ಅವರು ಶ್ರೀ ವೀರಪ್ಪ ಮೊಯ್ಲಿ ಅವರು ಮತ್ತು ಶ್ರೀ ಎಸ್.ಎಂ.ಕೃಷ್ಣರವರು ಕೈಗಾರಿಕಾ ಸಚಿವರು ಆಗಿದ್ದಾಗ ಎಲೆಕ್ಟ್ರಾನಿಕ್ಸ್ ಸಿಟಿಯನ್ನು ಆವತ್ತು ಪ್ರಾರಂಭ ಮಾಡಿದರು. ನಾನು ಏಕೆ ಈ ಮಾತುಗಳನ್ನೆಲ್ಲ ಹೇಳ್ತಾ ಇದ್ದೀನಿ ಅಂದರೆ, ಇವರೆಲ್ಲ ಬಿಟ್ಟು ಹೋದಂತಹ ಸಾಕ್ಷಿ ಗುಡ್ಡೆಗಳು. ಒಬ್ಬ ಮುಖ್ಯಮಂತ್ರಿಗಳು ಬಿಟ್ಟು ಹೋದ ಪರಿಶುದ್ಧವಾದಂತಹ ಆಡಳಿತ, ಶ್ರೀ ವೀರೇಂದ್ರ ಪಾಟೀಲ್ ರವರು ಬೇಕಾದಂತಹ ಸಂದರ್ಭದಲ್ಲಿ ಯಾವುದಕ್ಕೂ ಕೂಡ yield ಆಗುತ್ತಿರಲಿಲ್ಲ. ಅವರು ಮುಖ್ಯಮಂತ್ರಿ ಇದ್ದಾಗಲೂ ಕೂಡ ನಾನು ಶಾಸಕನಾಗಿದ್ದೆ. ಬಹಳ ಚಿಕ್ಕ ವಯಸ್ಸಿನಲ್ಲೇ ಎಂಟನೇ ಬಾರಿ ಅಸೆಂಬ್ಲಿಗೆ ಬಂದಿದ್ದೇನೆ. ಹೇಗೆ ಮಾನ್ಯ ಬಸವರಾಜ ಹೊರಟ್ಟಿ ಸಾಹೇಬರು ಎಂಟನೇ ಬಾರಿ ಬಂದರೋ, ಹಾಗೆ ನಾನು ಎಂಟನೇ ಬಾರಿ ಈ ವಿಧಾನ ಸಭೆಗೆ ಬಂದಿದ್ದೇನೆ. ಹಾಗಾಗಿ ಶ್ರೀ ವೀರಪ್ಪ ಮೊಯ್ಲಿಯವರನ್ನು ನೋಡಿದ್ದೇನೆ. ಶ್ರೀ ಹೆಚ್.ಡಿ. ದೇವೇಗೌಡರು, ಅವರು ಕೂಡ ಅಪಾರವಾದಂತಹ ಹೋರಾಟ ಮಾಡಿಕೊಂಡು, ರೈತರ ಬಗ್ಗೆ ಅವರಿಗಿದ್ದಂತಹ ಒಂದು ಕಾಳಜಿ, ಮೊದಲ ಬಾರಿಗೆ ಮೈಸೂರು ರಸ್ತೆಯ ಫ್ಲೈಓವರ್ ಮಾಡಿದ್ದು ಅವರೇ. ಸದಸ್ಯರಿಗಿಂತ ಹೆಚ್ಚಿನ ಇತಿಹಾಸ ನನಗೆ ಗೊತ್ತಿದೆ. "I don't like reading or writing history. I believe in creating history, and that is my passion." ಸದಸ್ಯರು ತಾಳ್ಮೆಯಿಂದ ಕುಳಿತುಕೊಂಡರೆ ನಾನು ಎಲ್ಲವನ್ನು ಹೇಳುತ್ತೇನೆ. ಹಾಗೆ ನಾವೆಲ್ಲ ಕೆಲಸ ಮಾಡಿಕೊಂಡು ಬಂದಿದ್ದವರು. ಶ್ರೀ ಜೆ.ಹೆಚ್.ಪಟೇಲರನ್ನು ಕೂಡ ನೋಡಿದ್ದೇನೆ. ಇವತ್ತು ಶ್ರೀ ಜೆ.ಹೆಚ್. ಪಟೇಲರು ಇಲ್ಲದೆ ಇರಬಹುದು, ಕೆಲವರಿಗೆಲ್ಲ ಗೊತ್ತಿದೆ. ನಾನು ಶ್ರೀ ಎಸ್.ಎಂ.ಕೃಷ್ಣ ಅವರ ಹತ್ತಿರ ಕೆಲಸ ಮಾಡಿದ್ದೇನೆ, ಶ್ರೀ ಬಂಗಾರಪ್ಪನವರ ಹತ್ತಿರ ಕೆಲಸ ಮಾಡಿದ್ದೇನೆ, ಶ್ರೀ ಸಿದ್ದರಾಮಯ್ಯನವರ ಹತ್ತಿರ ಕೆಲಸ ಮಾಡಿದ್ದೇನೆ. ಇನ್ನು ಬೇಕಾದಷ್ಟು ಮುಖ್ಯಮಂತ್ರಿಗಳನ್ನು ಕೂಡ ನೋಡಿದ್ದೇನೆ, ಶ್ರೀ ಕುಮಾರಸ್ವಾಮಿಯವರನ್ನು ನೋಡಿದ್ದೇನೆ, ಶ್ರೀ

ಯಡಿಯೂರಪ್ಪನವರನ್ನು ನೋಡಿದ್ದೇನೆ. Such a large-hearted Chief Minister, ಆ ಹೃದಯ ಶ್ರೀಮಂತಿಕೆ ಇದ್ದಂತ ಮುಖ್ಯಮಂತ್ರಿ ಶ್ರೀ ಜೆ.ಹೆಚ್.ಪಟೇಲರು ಎಂದು ಹೇಳಲಿಕ್ಕೆ ನನಗೆ ಬಹಳ ಸಂತೋಷ ಆಗುತ್ತದೆ. Politically, we might have differences of opinion. ಎಲ್ಲದಕ್ಕೂ ಕೂಡ ಪಕ್ಷ ಎಂದು ನೋಡುತ್ತಿರಲಿಲ್ಲ. ರಾಜಕಾರಣ ಏನೇನಾದರೂ ಇದ್ದರೆ ನೀವು ಹೊರಗಡೆ ಫೀಲ್ಡ್ ಅಲ್ಲಿ ಮಾಡಿಕೊಳ್ಳಿ, ಈ ವಿಧಾನಸೌಧದಲ್ಲಿ ನಾನು ಮಾಡುವುದಿಲ್ಲ ಎಂದು ಹೇಳಿದರು. ಮಾನ್ಯ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಅವರ ಮೇಲೆ ಅವಿಶ್ವಾಸ ನಿರ್ಣಯ ಮಂಡನೆ ಮಾಡಿದರು. ಆಗ differences ಇತ್ತು. ಜೆ.ಡಿ.(ಎಸ್) ನಲ್ಲೇ ಎರಡು ಪಾರ್ಟಿ ಆಗಬೇಕೆಂದು ಇತ್ತು. ಅವರು ಮುಖ್ಯಮಂತ್ರಿಗಳನ್ನು ಇಳಿಸಿದರು. ಎಂಟುವರೆ ಗಂಟೆ ಕಾಲ ಮಾತನಾಡಿದರು. ಕೇವಲ 30 ನಿಮಿಷದಲ್ಲಿ ನೀವು ಎಲ್ಲ... You all should look into the history. ಅವರು ಏನು ಭಾಷಣ ಮಾಡಿದರು ಎಂದು ನೋಡಬೇಕು. 15-20 ನಿಮಿಷದಲ್ಲಿ ಎಲ್ಲರನ್ನೂ ನಗಿಸಿಬಿಟ್ಟು, "ಕರೆಂಟ್ ಇದೆಯಾ ಅಂದ ತಕ್ಷಣ ಹೋಗಿ ಆ ಕಂಬ ಹಿಡಿ" ಎಂದು ಅಂದರು. "ರೋಡ್ ಸರಿ ಇಲ್ಲ ಎಂದರೆ ಕುದುರೆ ಮೇಲೆ ಓಡಾಡು" ಎಂದರು. ಹೀಗೆ ಏನೇನೋ ಬಹಳ ಹೇಳಿ ನಗಿಸಿ ನಗಿಸಿ ಅವರ ಭಾಷಣವನ್ನು ಮುಕ್ತಾಯ ಮಾಡುತ್ತಿದ್ದರು. So, he was very large-hearted. ಬೇರೆ ಸಂದರ್ಭದಲ್ಲಿ ಯಾವುದಾದರೂ ಸಂದರ್ಭದಲ್ಲಿ ನಾನು ಮಾತನಾಡುತ್ತೇನೆ. ನಾನು being a Chief Minister, ಈ ಸ್ಥಾನದಲ್ಲಿ ನನಗೆ ಆಗಿರುವಂತಹ ಅನೇಕ ಅನುಭವಗಳ ಆಧಾರದ ಮೇಲೆ ನಾನು ಈ ವಿಚಾರವನ್ನು ಹೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್ ಅವರ ಕಾಲ ಕೂಡ ನಾವೆಲ್ಲ ಗಮನಿಸಿದ್ದೇವೆ. ಶ್ರೀ ಕುಮಾರಸ್ವಾಮಿಯವರ ಕಾಲದಲ್ಲಿ, politically yes, we may differ. ಆದರೆ ಶ್ರೀ ಕುಮಾರಸ್ವಾಮಿಯವರ ಯೋಜನೆ ಇವತ್ತು ನಾನು ಒಪ್ಪುತ್ತೇನೆ. ಇವತ್ತು ಏನು ಆವತ್ತಿನ ಕಾಲದಲ್ಲಿ ಪೆರಿಫರಲ್ ರಿಂಗ್ ರೋಡ್ ಆಗಬೇಕು, ಶ್ರೀ ಹೆಚ್.ಡಿ.ದೇವೇಗೌಡರು Prime Minister ಆಗಿದ್ದಂತಹ ಸಂದರ್ಭದಲ್ಲಿ ಇವತ್ತು ನೈಸ್ ರೋಡ್ ಯೋಜನೆ ಬಗ್ಗೆ ಟೀಕೆ ಮಾಡುತ್ತಿಬಹುದು, ನೈಸ್ ಆಡಳಿತ ಸರಿ ಇಲ್ಲದೆ ಇರಬಹುದು, ಆ ಯೋಜನೆಗೆ ಸಹಿ ಹಾಕಿ ಅವರು ಮಾಡಿ, ಆ ನೈಸ್ ರೋಡ್ ಆಗಬೇಕೆಂದು ಹೇಳಿ ಆವತ್ತು ಮಾಡಿದರಲ್ಲ, ಇವತ್ತು ನೈಸ್ ರೋಡ್ ಇಲ್ಲ ಅಂದಿದ್ದರೆ ಬೆಂಗಳೂರು ಏನಾಗ್ತಿತ್ತು ಎಂದು ತಾವು ಯೋಚನೆ ಮಾಡಿ. ಕಂಪನಿಯಲ್ಲಿ ಹೆಚ್ಚು ಕಮ್ಮಿ ಇದೆಯೋ ಅದನ್ನೆಲ್ಲ ನನಗೆ ಈಗ ಚರ್ಚೆ ಮಾಡೋದು ಬೇಡ. ಅದರಲ್ಲಿ ಏನೇನು ಇದೆ ಪರಿಸ್ಥಿತಿ, ಅಕ್ಕಪಕ್ಕ ಏನು ಜಮೀನಿದೆ, ಯಾರ ಜಮೀನಿದೆ, let us not discuss about it now. The planning that the Hon'ble H.D. Deve Gowda made

on that day was a great thing. ಆಮೇಲೆ ಕೃಷಿ, ನೀರಾವರಿ ಕ್ಷೇತ್ರದಲ್ಲಿ ಅವರು ಮಾಡಿದಂತ ಕೆಲವು ಚಿಂತನೆಗಳು ಇದೆಯಲ್ಲಾ, ಒಬ್ಬ ರೈತನ ಮಗ ಎಂದು ಹೇಳಿ ಹೆಸರು ಬರಬೇಕಾದರೆ ಸುಮ್ಮನೆ ಬರುವುದಿಲ್ಲ. ಆ commitment ಇದ್ದರೆ, ಆ ಭಾವನೆ ಇದ್ದರೆ ಮಾತ್ರ ಬರಲಿಕ್ಕೆ ಸಾಧ್ಯ. ಅವರು ಕೂಡ contribute ಮಾಡಿ, ಅವರು ಇನ್ನೊಂದಷ್ಟು ಐದಾರೂ ವರ್ಷ ಇಲ್ಲಿದಿದ್ದರೆ ಇನ್ನಷ್ಟು ಕೆಲಸಗಳಾಗುತ್ತಿತ್ತು. But fortunately, owing to his luck, ಅವರ ಅದೃಷ್ಟಕ್ಕೆ ಪ್ರಧಾನ ಮಂತ್ರಿಗಳಾಗಿ ಹೋದರು. ಅದನ್ನು ಬಿಡಿ, ಅದನ್ನು ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. He has also contributed in his own way for this Country. ಅದಾದ ಮೇಲೆ ಇವತ್ತು ಶ್ರೀ ಕುಮಾರಸ್ವಾಮಿಯವರು ಆಡಳಿತಕ್ಕೆ ಬಂದರು. ಶ್ರೀ ಕುಮಾರಸ್ವಾಮಿಯವರ vision was also very good. ಇವತ್ತು ಬಿಡದಿ ಮತ್ತೊಂದು ಬಗ್ಗೆ ಟೀಕೆ ಮಾಡುತ್ತಿದ್ದಾರೆ., ನಾನು ಅದನ್ನ ಚರ್ಚೆ ಮಾಡೋಕೆ ಹೋಗುವುದಿಲ್ಲ. ಬಿಡದಿ ವಿಚಾರ ಆಮೇಲೆ ನಿಧಾನವಾಗಿ ಮಾತನಾಡೋಣ. ನೀವು ಯಾವಾಗ ಬೇಕಾದರೂ ತೆಗೆದುಕೊಂಡು ಬನ್ನಿ, we will discuss about that. But, planning ಇದೆಯಲ್ಲ, that was very good. ಪೆರಿಫರಲ್ ರಿಂಗ್ ರೋಡ್ ಮಾಡಬೇಕೆಂದು ಏನು ಆವತ್ತಿನ ಕಾಲದಲ್ಲಿ ನೋಟಿಫಿಕೇಶನ್ ಆಗಿತ್ತು, ಪೆರಿಫರಲ್ ರೋಡ್-2 ಮಾಡಬೇಕೆಂದು ಇತ್ತಲ್ಲ, ಬಹುಶಃ ಆವತ್ತಿನ ಕಾಲದಲ್ಲೇ ಯೋಜನೆ ಮಾಡಿದರು. ಇಂಪ್ಲಿಮೆಂಟ್ ಮಾಡೋಕೆ ಏನೇನು ತೊಡಕು ಬಂತೋ ಇಲ್ಲ ಅವರಿಗೆ ಸಮಯ ಸಿಗಲಿಲ್ಲವೋ... Even the five townships... ಇವತ್ತು ನಾನು ಹೇಳುತ್ತಿದ್ದೇನೆ. ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಗುಜರಾತ್‌ನಲ್ಲಿ Gujarat International Finance Tech City ಎಂದು ಒಂದು ಸಿಟಿ ಮಾಡಿದ್ದಾರೆ. ಅಲ್ಲಿ ಹೋಗಿ ನೀವು ನೋಡಬೇಕು. ನಮ್ಮ ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಅವರೊಂದು ಹೊಸ ಸಿಟಿ ಮಾಡಬೇಕೆಂದು ಮಾಡಿದ್ದಾರೆ. ನಾನು ಪ್ರಧಾನ ಮಂತ್ರಿಗಳಿಗೆ, "ನಮಗೊಂದು ಗಿಫ್ಟ್ ಸಿಟಿ ಕೊಡಿ" ಎಂದು ಕೇಳಿದೆ. ಶ್ರೀ ಡಿ.ಕೆ.ಶಿವಕುಮಾರ್‌ರವರೇ, ಇಲ್ಲ, "ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಸಹ ಕೇಳಿದರು, ಕೊಡುವುದಕ್ಕಾಗುವುದಿಲ್ಲ. ಇದು ಇಡೀ ದೇಶಕ್ಕೆ ಒಂದೇ." ಎಂದರು. ಅಲ್ಲಿ ಬಹಳ ಚೆನ್ನಾಗಿ ಬೆಳೆಯುತ್ತಿದೆ. ಹೊಸ Manhattan ತರ ಆ ಗಿಫ್ಟ್ ಸಿಟಿ ಬೆಳೆಯುತ್ತಿದೆ. ಇನ್ನ ಟೈಮ್ ತೆಗೆದುಕೊಳ್ಳಬಹುದು, ನಡೆದುಕೊಂಡು ಬರುತ್ತಿದೆ.

ಈ ಮೊನ್ನೆ ನಾನು ಮಹಾರಾಷ್ಟ್ರದ, Davos ಗೆ ಹೋಗಿದ್ದೆ. ನಾನು, ನಮ್ಮ ಶ್ರೀ ಹ್ಯಾರಿಸ್ ಅವರು, ನಮ್ಮ ಶ್ರೀ ಎಂ.ಬಿ. ಪಾಟೀಲ್ ರವರು ನಾವೆಲ್ಲ ಹೋಗಿ ಬಂದೆವು. ಹೋಗಿ ಬರಬೇಕಾದರೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ನನಗೆ ಸಿಕ್ಕಿದರು. ಬಹಳ ಜನ ನನ್ನನ್ನು ಒಳಗಡೆ ಬಂದು ಭೇಟಿ ಮಾಡುತ್ತಿದ್ದರು. ಫಾರಿನರ್ಸ್ ಎಲ್ಲಾ ಬಂದು ನನ್ನ

ಹತ್ತಿರ ಮಾತನಾಡುತ್ತಿದ್ದರು. ಮಹಾರಾಷ್ಟ್ರ ಮುಖ್ಯಮಂತ್ರಿಗಳು, ಕೇಂದ್ರ ರೈಲ್ವೆ ಸಚಿವರು, ಕೇಂದ್ರ ಸಚಿವರು ಎಲ್ಲರೂ ನೋಡುತ್ತಿದ್ದರು. ನನಗೂ ಅರ್ಥ ಆಗಲಿಲ್ಲ. ಊಟಕ್ಕೆ ಹೋದಾಗ, ತಿಂಡಿಗೆ ಹೋದಾಗ ನನ್ನ ಹತ್ತಿರ ಬಂದು ಮಾತನಾಡ್ತಿದ್ದರು. ನನ್ನ ಹತ್ತಿರ ಬಂದು we want to sign some contracts with you ಎಂದರು. ನಾನು, ಶ್ರೀ ಎಂ.ಬಿ.ಪಾಟೀಲ್‌ರವರು ಇಲ್ಲಿ ನಾವು ಯಾವುದು ಜಾಸ್ತಿ ಸಹಿ ಮಾಡುವುದು ಬೇಡ, ಅವರೆಲ್ಲಾ ಬೆಂಗಳೂರಿಗೆ ಬರಲಿ ಎಂದು ಮಾತನಾಡಿಕೊಂಡೆವು. ಕೊನೆಗೆ ನಾನು ಊಟ ಮಾಡುವಾಗ ಏನು ಎಲ್ಲರೂ ಬಂದು ನನ್ನನ್ನು ಬೆನ್ನು ಹತ್ತಿದ್ದಾರಲ್ಲಾ ಎಂದು ಯಾರೋ ಒಬ್ಬರನ್ನು ನಾನು ಕೇಳಿದೆ, ಮಹಾರಾಷ್ಟ್ರ ಮುಖ್ಯಮಂತ್ರಿಯವರು ನನ್ನನ್ನು ನೋಡುತ್ತಿದ್ದರು. ಅದಕ್ಕೆ ಅವರು ಹೇಳಿದರು, Bengaluru is a knowledge center, a hub of human capital, and home to the best doctors. ಇವತ್ತೇನಾದರೂ ಬೆಂಗಳೂರಲ್ಲಿ ನಮ್ಮ ಜನ ಕೆಲಸ ಮಾಡಬೇಕು, ಉದ್ಯೋಗ ಸಿಗಬೇಕು ಎಂದರೆ within one dollar we can work. ಅದೇ ಮುಂಬೈಗೆ ಹೋಗಬೇಕಾದರೆ ಮೂರೂವರೆ ಡಾಲರ್ ಬೇಕು. ಅಂದರೆ, ಒಂದು ಅಡಿ ಭೂಮಿ ಅಲ್ಲಿ ನಾವೇನಾದರೂ ಬಾಡಿಗೆಗೆ ತೆಗೆದುಕೊಳ್ಳಬೇಕೆಂದರೆ 350 ರೂಪಾಯಿಗಳನ್ನು ಕೊಡಬೇಕು. ಅದೇ ಬೆಂಗಳೂರಿನಲ್ಲಿ 90 ರೂಪಾಯಿಗಳಿಗೆ ಕೆಲಸ ಮಾಡಬಹುದು.

(ಮುಂದು)

**(697) 14/08/2026 2:10 ಎಸ್‌ಪಿಆರ್/ವಿಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಡಿ.ಕೆ.ಶಿವಕುಮಾರ್ (ಮುಂದು):**

ಇವತ್ತಿನ ದಿವಸ ನಮಗೆ entire world ನಲ್ಲಿ ಬೆಂಗಳೂರಿನಲ್ಲಿರುವ knowledge, ವಿದ್ಯಾಸಂಸ್ಥೆ, culture, 13,940 ಡಾಕ್ಟರ್‌ಗಳು ಪ್ರತಿವರ್ಷ ಬೆಂಗಳೂರಿನಲ್ಲಿ ತಯಾರು ಆಗುತ್ತಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ 70 ಮೆಡಿಕಲ್ ಕಾಲೇಜುಗಳಿವೆ; 277 ಇಂಜನಿಯರಿಂಗ್ ಕಾಲೇಜುಗಳಿವೆ. ಮಹಾರಾಜರ ಕಾಲದಲ್ಲಿ ನಮ್ಮ ಭಾರತ ದೇಶದಲ್ಲಿಯೇ ಮೊದಲಿಗೆ ಸೈನ್ಸ್ ಶುರುವಾಗಿದ್ದು. ಶ್ರೀ ವಿವೇಕಾನಂದರ ಚಿಂತನೆ ಇದಕ್ಕೆ ಕಾರಣ. ಜಪಾನ್‌ಗೆ ಶಿಪ್‌ನಲ್ಲಿ ಹೋಗಬೇಕಾದ ಸಂದರ್ಭದಲ್ಲಿ ಶ್ರೀ ವಿವೇಕಾನಂದರು ಹಾಗೂ ಶ್ರೀ ಜೆಮ್‌ಶೆಡ್‌ಜಿ ಟಾಟಾ ಇವರುಗಳು ಏಕೆ ನಮ್ಮ ಭಾರತ ದೇಶವು poor ಆಯಿತು ಎನ್ನುವುದರ ಬಗ್ಗೆ ಮಾತನಾಡಿ, ಚರ್ಚಿಸಿ, ಕೊನೆಗೆ ಮಹಾರಾಜರಿಗೆ ಮನವಿಯನ್ನು ಮಾಡಿಕೊಳ್ಳುತ್ತಾರೆ. ಆಗ ಮಹಾರಾಜರು ತಾವು ಸಹಾಯ ಮಾಡುವುದಾಗಿ ತಿಳಿಸಿ, 300 ಎಕರೆಯಷ್ಟು ಜಮೀನನ್ನು Indian Institute of Science ಗೆ ಕೊಡುತ್ತಾರೆ. ಅವತ್ತಿನ ಕಾಲದಲ್ಲಿ ಸರ್ಕಾರವು 5 ಕೋಟಿ ರೂಪಾಯಿಗಳಷ್ಟು ಹಣವನ್ನು ನೀಡುತ್ತದೆ. That is how the Indian Institute of Science

came to be established in Bengaluru. ಇವತ್ತಿನ ದಿವಸ ಇಡಿಯಾದ ಪ್ರಪಂಚ ಮತ್ತು ನಮ್ಮ ದೇಶ ನಮ್ಮನ್ನು ನೋಡುತ್ತಿದೆ ಎಂದರೆ..., ಅವತ್ತಿನ ದಿವಸ ಮಹಾರಾಜರ ಕಾಲದಿಂದ ಸೈನ್ಸ್ ಪ್ರಾರಂಭವಾಗಿದೆ. I salute those Maharajas and ಶ್ರೀ ವಿವೇಕಾನಂದರ ಚಿಂತನೆ ಮತ್ತು ಶ್ರೀ ಟಾಟಾ ರವರ ದಿಸೆಯಿಂದ ಇವತ್ತಿನ ದಿವಸ ಬೆಂಗಳೂರಿನಲ್ಲಿ ಆಗಿದೆ. ಅದಕ್ಕಾಗಿ ಈ ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ಜವಾಹರ್‌ಲಾಲ್ ನೆಹರು ರವರು ಬೆಂಗಳೂರಿನ ಯುವಕರಲ್ಲಿ ಬುದ್ಧಿಶಕ್ತಿ ಹಾಗೂ ವಿದ್ಯಾವಂತಕೆ ಇದೆ ಎಂದು ಹೇಳಿದ್ದರು. ನಾನು ಯಾವ ಯಾವ ಮುಖ್ಯಮಂತ್ರಿಗಳ ಹೆಸರುಗಳನ್ನು ಹೇಳಿದ್ದೇನೆ ಅವರಿಗೆಲ್ಲರೂ ಸಹ ಸಹಾಯವನ್ನು ಮಾಡಿದರು. ನಮ್ಮಲ್ಲಿರುವ ಶಿಕ್ಷಣ ಅಂದರೆ, the quality of education, ಬೇರೆ ಎಲ್ಲಿಯೂ ಸಹ ಇಲ್ಲ. ಇದೇ ವಿಧಾನಸೌಧದ ಕೆಳಗಡೆ..., ನಾನು ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಸಾಹೇಬರ ಮುಂದೆ ಮೊನ್ನೆ ಮೈಸೂರಿನಲ್ಲಿ ಹೇಳಿದ್ದು, ತಾವುಗಳೆಲ್ಲರೂ ಕೇಳಿರಬಹುದು. ಏರ್‌ಪೋರ್ಟ್ ಇನ್ಯಾಗುರೇಷನ್ ಇತ್ತು. Bengaluru International Airport Limited (B.I.A.L.) ಗೆ ಶ್ರೀ ನಾರಾಯಣ ಮೂರ್ತಿಯವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಸದರಿ ಇನ್ಯಾಗುರೇಷನ್ ಕಾರ್ಯಕ್ರಮದ ಸಂದರ್ಭದಲ್ಲಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಸಾಹೇಬರು ಬಂದ್ದಿದರು. ಅವತ್ತಿನ ದಿವಸ within three months ನಾಲ್ಕು ದೇಶಗಳ ಅಂದರೆ ಜಪಾನ್, ಚೈನಾ, ಬ್ರಿಟನ್ ಮತ್ತು ಪೋಲ್ಯಾಂಡ್ ಪ್ರಧಾನ ಮಂತ್ರಿಗಳು ಬಂದಿದ್ದರು. ಆಗ ಶ್ರೀ ಎಸ್.ಎಂ.ಕೃಷ್ಣಾ ರವರ ಸರ್ಕಾರವಿತ್ತು. There was a time when World Leaders used to first come to Delhi, then they used to go to Kolkata, then to Mumbai, then to Chennai, and then they used to go to different parts of the World. But now the situation has changed and all those World Leaders are first coming to Bengaluru and then they are going to Delhi ಎಂಬುದಾಗಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ರವರು ಹೇಳಿದಂತಹ ಮಾತು ಇದು. ಅವರ ಕಾಲದಲ್ಲಿ ಏನಾದರೂ transformation ಆಗಿದೆ ಎಂದರೆ, Golden Quadrilateral ಎಂಬ ರಸ್ತೆಯನ್ನು ಏನಾದರೂ ಮಾಡಿಲ್ಲವೆಂದಾದರೆ..., ಇಡೀ ದೇಶದಲ್ಲಿ ಇಂತಹ ರಸ್ತೆಯ ವ್ಯವಸ್ಥೆ ಇರಲಿಲ್ಲ. The contribution of Sri Vajpayee.. He could not succeed, that is a different question. India is shining ಎಂಬುದಾಗಿ ಬಂತು. ಆದರೆ, ಅವರ ಕಾರ್ಯಕ್ರಮವನ್ನು ನಾವು ಯಾರೂ ಸಹ ಅಲ್ಲೆಗೆಳೆಯುವುದಕ್ಕೆ ಸಾಧ್ಯವಿಲ್ಲ. ಇವತ್ತಿನ ದಿವಸ ಬೆಂಗಳೂರಿನಿಂದ ಬೆಳಗಾವಿಗೆ ಹೋಗುವ ರಸ್ತೆಯು Sri Vajpayee's contribution. ಇದನ್ನು ಶ್ರೀ ಬಸವರಾಜ ಹೊರಟ್ಟಿಯವರು ಒಪ್ಪಿಕೊಳ್ಳುತ್ತಾರೆ ಎಂದು ಕಾಣುತ್ತದೆ. ಅವರು ಮಾಡಿದ ಅಂದರೆ, ಇದು Sri Vajpayee's contribution ಆಗಿದೆ. ಹೀಗೆ ಇದು ಮುಂದುವರೆದಿದೆ. ಇದಕ್ಕೆ ಪೂರಕವಾಗಿ ಈ ನಮ್ಮೆಲ್ಲಾ ನಾಯಕರುಗಳು..., ಅವತ್ತಿನ ದಿವಸ 5 ಟೌನ್‌ಶಿಪ್‌ಗಳನ್ನು ಮಾಡಬೇಕೆಂದು ಶ್ರೀ ಹೆಚ್.ಡಿ.ಕುಮಾರಸ್ವಾಮಿರವರು ತೀರ್ಮಾನ ಮಾಡಿದ್ದರು. ಅದನ್ನು ನಾನು ತೀರ್ಮಾನಿಸಿಲ್ಲ. ಈ ವಿಷಯದ

ಬಗ್ಗೆ ಬಿಡಿ; ಇದರ ಮಿಕ್ಕಿದ ವಿಷಯದ ಬಗ್ಗೆ ಆಮೇಲೆ ನಿಧಾನವಾಗಿ ಚರ್ಚಿಸೋಣ. ಅವರ ಕಲ್ಪನೆ ಹಾಗೂ vision ಗಳನ್ನು ನಾವು ಮುಂದುವರೆಸುತ್ತಿದ್ದೇವೆ. ಇದರ ತಪ್ಪು ನೆಪ್ಪುಗಳ ಬಗ್ಗೆ ಬೇರೆ ವಿಚಾರದಲ್ಲಿ ನಾವುಗಳೆಲ್ಲರೂ ಮಾತನಾಡೋಣ. ಶ್ರೀ ಬಿ.ಎಸ್.ಯಡಿಯೂರಪ್ಪನವರೂ ಸಹ ರೈತರ ಶಾಲನ್ನು ಹಾಕಿಕೊಂಡು, ರೈತರ ಬಗ್ಗೆ ಬದುಕಬೇಕು; ಇವರಿಗೆ ಒಳ್ಳೆಯದಾಗಬೇಕು ಎಂದು ಅವರದ್ದೇ ಆದ ಹೋರಾಟವನ್ನು ಮಾಡಿದರು. ಸೈಕಲ್‌ನಿಂದಲೂ ಸಹ ಹೋರಾಟ ಮಾಡಿದರು. ಅವರ ಜೊತೆಗೆ ಶ್ರೀ ರಾಮಚಂದ್ರಗೌಡರೂ ಸಹ ಇದ್ದರು. ಇವರ ಬಗ್ಗೆ ನಿನ್ನೆಯ ದಿನ ನಾನು ನೆನೆಸಿಕೊಳ್ಳುತ್ತಿದ್ದೆನು. ಇವರುಗಳೆಲ್ಲಾ ಎಷ್ಟು ಶ್ರಮಪಟ್ಟರು ಎನ್ನುವುದುರ ಬಗ್ಗೆ ನಮಗೆ ಅರಿವು ಇದೆ. ಮಧ್ಯ ಮಧ್ಯದಲ್ಲಿ ಏನೇನೋ issues ಗಳಾದವು. He could not get a full term. ಎರಡೂ ಕಡೆಯೂ ಸಹ ಫುಲ್ ಟರ್ಮ್ ಸಿಗಲಿಲ್ಲ. ಒಬ್ಬ ನಾಯಕರು ಹೋರಾಟದಿಂದ ಬಂದದ್ದು ಅಷ್ಟು ಸುಲಭವಲ್ಲ. ಒಬ್ಬ ವ್ಯಕ್ತಿ ಯಾವುದೇ ಪಾರ್ಟಿಯವನಾಗಿರಲಿ. ಹೋರಾಟ ಎನ್ನುವುದು ಅಷ್ಟು ಸುಲಭವಾದುದಲ್ಲ. ಟೀಕೆಗಳು ಬರುತ್ತವೆ. ಇವತ್ತಿನ ದಿವಸ ನನ್ನ ಮೇಲೂ ಸಹ ಬೇಕಾದಷ್ಟು ಟೀಕೆಗಳನ್ನು ಮಾಡಬಹುದು. ಅದೇ ರೀತಿಯಾಗಿ ನಾನೂ ಸಹ ಬೇರೆಯವರ ಮೇಲೆ ಟೀಕೆಯನ್ನು ಮಾಡಬಹುದು.

ಮೊನ್ನೆ ತುಂಗಭದ್ರಾ ವಿಚಾರಕ್ಕೆ ನಾನು ಮತ್ತು ನಮ್ಮ ಪಕ್ಷದ ಶ್ರೀ ಎನ್.ಎಸ್.ಬೋಸರಾಜು ರವರುಗಳು…, ನಾನು ಇವರನ್ನೇ ಪ್ರಧಾನ ಮಂತ್ರಿಗಳ ಹತ್ತಿರ ಕಳುಹಿಸಿದ್ದೆನು. ಇದಕ್ಕೆ ಸಭಾಪತಿಯವರೂ ಸಹ ಬಂದಿದ್ದರು. Do you know ಅಲ್ಲಿ ಎಷ್ಟು ಕಷ್ಟ ಇತ್ತು ಅಂತ. ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಲೈನ್‌ಗೆ ಬರುತ್ತಿರಲಿಲ್ಲ. 33 ಟಿ.ಎಂ.ಸಿ. ಪ್ರಮಾಣದಷ್ಟು ನೀರು ಹೋಗುತ್ತಿತ್ತು. ಅಲ್ಲಿ ಸಿಲ್ಟ್ ಬಂದು ಬಿಟ್ಟಿದೆ. ರೈತರನ್ನು ಉಳಿಸಬೇಕು. ರೈತರಿಗೆ ಯಾವುದೇ ರೀತಿಯ ಸಂಬಳ, ಪ್ರಮೋಷನ್, ಪೆನ್ಷನ್, ರಿಟೈರ್‌ಮೆಂಟ್ ಇವುಗಳು ಯಾವುದೂ ಸಹ ಇಲ್ಲ. ಬಳ್ಳಾರಿ, ಕೊಪ್ಪಳ, ರಾಯಚೂರು ಹಾಗೂ ಕಲಬುರಗಿ ಜಿಲ್ಲೆಯ ಕೆಲವು ಭಾಗಗಳು ಕಣಜವಾಗಿದ್ದು, ಅತೀ ಹೆಚ್ಚು ಪ್ಯಾಡಿ ಬೆಳೆಯುವ ಪ್ರದೇಶವಾಗಿವೆ. ಹೀಗಾಗಿ 33 ಟಿ.ಎಂ.ಸಿ. ಯಷ್ಟು ನೀರನ್ನು ಉಳಿಸುವುದು ಎಷ್ಟು ಕಷ್ಟ. ನಾವು ಈಗ ಒಂದೊಂದು ಟಿ.ಎಂ.ಸಿ. ನೀರಿಗೂ ಸಹ ಬಡದಾಡುತ್ತಿದ್ದೇವೆ. ಹೀಗಾಗಿ ಈ ವಿಚಾರದಲ್ಲಿ ಏನಾದರೂ ಮಾಡಬೇಕೆಂದು ಮೂರು ವರ್ಷಗಳಿಂದ ಏನೇನೋ ಮಾಡುತ್ತಿದ್ದೇವೆ. ಆದರೆ, ಏನೂ ಮಾಡಿದರೂ ಸಹ ಪ್ರಯೋಜನವಾಗಲಿಲ್ಲ. ಕೊನೆಗೆ I should salute that ಶ್ರೀ ಸಿ.ಆರ್.ಪಾಟೀಲ್ ಕೇಂದ್ರದ ಮಂತ್ರಿಗಳು ಬಿ.ಜೆ.ಪಿ.ಯ ಪರವಾಗಿದ್ದಾರೆ. ಇವರು ನನಗೆ ಸಹಕಾರ ನೀಡಿ, ಮೂರ್ನಾಲ್ಕು ಬಾರಿ ಸಭೆಯನ್ನು ಮಾಡಿದರು. But the meeting was postponed. ಒಂದು ಬಾರಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಹಾಗೂ ಮತ್ತೊಂದು ಬಾರಿ ಈ ಮುಖ್ಯಮಂತ್ರಿಗಳು ಅದನ್ನು ಪೋಸ್ಟ್‌ಪೋನ್ ಮಾಡಿದರು. ಆಮೇಲೆ ಕೊನೆಯದಾಗಿ ಇವರುಗಳು ಒಪ್ಪಿಕೊಂಡು, ಒಂದು ಗೇಟಿನ ಇನ್ಯಾಗುರೇಷನ್ ಸಂದರ್ಭದಲ್ಲಿ, first time in the history of this Country, ಮೂರು ರಾಜ್ಯದ ಮುಖ್ಯಮಂತ್ರಿಗಳು ಸೇರಿ ಬಂದು, ಕುಳಿತುಕೊಂಡು ಆ ಸಮಸ್ಯೆಯನ್ನು ಬಗೆಹರಿಸೋಣ ಎಂದು ಹೇಳಿ, ಮುಂದಕ್ಕೆ 33 ಟಿ.ಎಂ.ಸಿ. ನೀರನ್ನು ಹಾಳು ಮಾಡಿಕೊಳ್ಳುವುದು ಬೇಡ.

ಗೋದಾವರಿ ನದಿಯಿಂದ ಕಾವೇರಿ ನದಿಯವರೆಗೆ ಲಿಂಕಿಂಗ್ ಮಾಡುವುದಕ್ಕೆ ಕೂಡ ನಾನು ಒಪ್ಪಿಗೆಯನ್ನು ನೀಡಿ, ಒಪ್ಪಂದವನ್ನು ಮಾಡಿಕೊಂಡೆನು. ಆ 33 ಟಿ.ಎಂ.ಸಿ. ಯಷ್ಟು ನೀರನ್ನು ಹಾಳು ಮಾಡಿಕೊಳ್ಳುವುದು ಬೇಡವೆಂದು ಮೂರು ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಅವತ್ತಿನ ದಿವಸ ಸಭಾಪತಿಯವರೂ ಸಹ ಇದ್ದರು. ಇದರ ಜೊತೆಗೆ ಅನೇಕ ಶಾಸಕರುಗಳಿದ್ದರು. ನಾವುಗಳೆಲ್ಲರೂ ಸೇರಿ ತೀರ್ಮಾನ ಮಾಡಿ, ಒಪ್ಪಂದಕ್ಕೆ ಬಂದಿದ್ದು, ಈಗ ಈ ವಿಚಾರದಲ್ಲಿ ಸಮಿತಿಯು ರಚನೆಯಾಗುತ್ತಿದೆ. ಅದನ್ನು ಮಾಡಿದ್ದೇವೆ. ಈ ವಿಚಾರದಲ್ಲಿ ಮುಂದೆ ನೀರನ್ನು ಉಳಿಸಿಕೊಳ್ಳುವುದಕ್ಕೆ ಕ್ರಮ ಮಾಡುತ್ತಿದ್ದೇವೆ. ಏಕೆಂದರೆ, ಒಂದೊಂದು ತೊಟ್ಟು ನೀರೂ ಸಹ ಬಹಳ important ಆಗಿದೆ. ಇವತ್ತಿನ ದಿವಸ ಒಂದು ಬಾಟಲ್ ನೀರು 30 ರೂಪಾಯಿ ಆಗಿದ್ದು, ಹಾಲು 40 ರೂಪಾಯಿಗಳಾಗಿದೆ. ನೀರು ಮತ್ತು ಹಾಲಿಗೆ ಎಷ್ಟು ವ್ಯತ್ಯಾಸವಿದೆ? ಪಾಪ! ರೈತರ ಪರಿಸ್ಥಿತಿ ಏನು? ರೈತನು ಸೆಗಣಿ ಹೊತ್ತು, ಹಿಂಡಿ-ಬೂಸ, ಹುಲ್ಲುಗಳನ್ನು ಹಾಕಿ ಹಸುವನ್ನು ಕಟ್ಟಿಕೊಂಡು ಬದುಕುವವನಿಗೆ ಕೇವಲ 33-34 ರೂಪಾಯಿಗಳು ಮಾತ್ರವೇ ಸಿಗುತ್ತದೆ. ಆದರೆ, ನೀರಿನ ಬಾಟಲ್ ಅನ್ನು ಮಾರುವವನಿಗೆ 25-30 ರೂಪಾಯಿಗಳು ಸಿಗುತ್ತದೆ. ಇವತ್ತಿನ ದಿವಸ ನೀರು ಮತ್ತು ಹಾಲಿನ ದರಗಳು ಎರಡೂ ಒಂದೆಯಾಗಿವೆ. ರೈತರನ್ನು ನಾವು ಕಾಪಾಡಬೇಕು. ಶ್ರೀ ಬಿ.ಎಸ್.ಯಡಿಯೂರಪ್ಪನವರು ಅವರ ಕಾಲದಲ್ಲಿಯೂ ಸಹ ರೈತರನ್ನು ಕಾಪಾಡುವಂತಹ ಕೆಲಸವನ್ನು ಮಾಡಿದ್ದಾರೆ. I can't forget our D.V. Sadananda Gowda also, ಇವರಿಗೆ ಸಿಕ್ಕಿದಂತಹ ಕಡಿಮೆ ಅವಧಿಯಲ್ಲಿ ಇವರೂ ಸಹ ಕೆಲಸ ಮಾಡಿದ್ದಾರೆ. ಅದೇ ರೀತಿಯಾಗಿ ಶ್ರೀ ಜಗದೀಶ್ ಶೆಟ್ಟರ್ ರವರೂ ಸಹ ತಮ್ಮ ಅವಧಿಯಲ್ಲಿ ಶ್ರೀ ಕುಮಾರಸ್ವಾಮಿರವರು ಮಾಡಿದ ಆದೇಶವನ್ನು... ಇವರು ಮತ್ತು ಶ್ರೀ ಬಿ.ಎಸ್.ಯಡಿಯೂರಪ್ಪನವರು ತೆಗೆದುಕೊಂಡ ತೀರ್ಮಾನಗಳು ಏನಿತ್ತು, ಒಳ್ಳೆಯದಾಗಲಿ ಎಂದು ಅವುಗಳನ್ನು ಮುಂದುವರೆಸಿದರು. ಬಿಡದಿಯ 9,000 ಎಕರೆಯಲ್ಲಿ ಅವರು 1,000 ಎಕರೆ ಜಮೀನನ್ನು ತೆಗೆದುಕೊಂಡು ಅಲ್ಲಿ ಇಂಡಸ್ಟ್ರಿಗಳು ಆಗಬೇಕೆಂದು ಪ್ರಯತ್ನ ಮಾಡಿದರು. ಶ್ರೀ ಎಸ್.ಎಂ.ಕೃಷ್ಣ ರವರ ಕಾಲದಲ್ಲಿ ಐ.ಟಿ. ಮತ್ತು ಬಿ.ಟಿ.ಗಳು ಬಂದವು. ಇವುಗಳು ಬರಲಿಲ್ಲವೆಂದಾರೆ ಏನಾಯಿತು? ಸಭಾಪತಿಯವರು ಮತ್ತು ನಾನು ವಿದೇಶಗಳಿಗೆ ಹೋಗಿದ್ದೆವು. ನಾವಿಬ್ಬರೂ ಪಿಯಾಂಗ್‌ಯಾಂಗ್ ಗೆ ಹೋಗಿದ್ದೆವು. ಆಗ ಶ್ರೀ ಬಿ.ಕೆ.ಹರಿಪ್ರಸಾದ್ ರವರೂ ಸಹ ಬಂದಿದ್ದರು. ಆಗ ನಾವು 22 ದಿನಗಳ ಕಾಲ ಇದ್ದೆವು. ತಮಗೆ ಅವೆಲ್ಲಾ ನೆನಪು ಇದೆ. ಇವತ್ತಿನ ದಿವಸ ಐ.ಟಿ. ಮತ್ತು ಬಿ.ಟಿ.ಯ World Leaders ಇಲ್ಲಿಗೆ ಬರುತ್ತಿದ್ದಾರೆ. ಹೀಗಾಗಿ ಇವತ್ತಿನ ದಿವಸ ಇದು ಆಕರ್ಷಣೀಯವಾಗಿದೆ. ನಮ್ಮ ಟ್ಯಾಲೆಂಟ್ ಪೂಲ್ ಅಷ್ಟಿದೆ. ಇವತ್ತಿನ ದಿವಸ ಕ್ಯಾಲಿಫೋರ್ನಿಯಾದಲ್ಲಿ ಸುಮಾರು 13 ಲಕ್ಷ ಇಂಜಿನಿಯರ್‌ಗಳಿದ್ದು, ಐ.ಟಿ. ಪ್ರೋಫೆಷನಲ್‌ಗಳಾಗಿ ಕೆಲಸ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ 26 ಲಕ್ಷ ಐ.ಟಿ. ಪ್ರೋಫೆಷನಲ್‌ಗಳು ಕೆಲಸ ಮಾಡುತ್ತಿದ್ದಾರೆ. ಅಂದರೆ ಕ್ಯಾಲಿಫೋರ್ನಿಯಾದ ಶೇಕಡಾ 50 ರಷ್ಟು ಜನರು ನಮ್ಮ ಸಿಲಿಕಾನ್ ವ್ಯಾಲಿಯಲ್ಲಿ 26 ಲಕ್ಷ ಜನರು ಕೆಲಸ ಮಾಡುತ್ತಿದ್ದಾರೆ. ಅಂದರೆ ಇಷ್ಟು ದೊಡ್ಡ ಟ್ಯಾಲೆಂಟ್ ಪೂಲ್ ನಮ್ಮಲ್ಲಿದೆ. 2 ಲಕ್ಷ ವಿದೇಶಿ ಪಾಸ್‌ಪೋರ್ಟ್‌ಗಳು ಬೆಂಗಳೂರಿನಲ್ಲಿವೆ. ಇತ್ತೀಚೆಗೆ ಶ್ರೀ ಎನ್.ಎಸ್.ಬೋಸರಾಜು ರವರು ಒಂದು ಕಾರ್ಯಕ್ರಮವನ್ನು ಮಾಡಿದರು. ಅವರು ಮಂತ್ರಿಯಾಗಿ ಇರಲಿಲ್ಲ.

ಅದಕ್ಕೆ ನಾನು ಮತ್ತು ನಮ್ಮ ಶ್ರೀ ಪ್ರಿಯಾಂಕ್ ಖರ್ಗೆ ರವರು ಅಲ್ಲಿಗೆ ಹೋಗಿ ಭಾಗವಹಿಸಿದ್ದೆವು. ಅಲ್ಲಿಗೆ ಅಮೇರಿಕಾ ದೇಶದ ಅಂಬ್ಯಾಸಿಡರ್ ಬಂದಿದ್ದರು. ನಾನು ಅಲ್ಲಿಗೆ ಹೋಗಿ, ಅವರನ್ನು ಭೇಟಿ ಮಾಡಿದೆ. Entire World is looking at Bengaluru. Entire World wanted to see India through Bengaluru. ಇದನ್ನು ನಾನು ನಮ್ಮ ಪ್ರಧಾನ ಮಂತ್ರಿಗಳಿಗೆ ಹೇಳಿದೆ. ನಾನು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದಾಗ, Mr. D.K., the world is looking at you ಎಂಬುದಾಗಿ ಅವರು ಹೇಳಿದರು. All the Global Circles are coming at you ಎಂದು ಹೇಳಿದರು. ಆಗ ನಾನು Yes sir, I am ready to cooperate. We should be large hearted and you should help us ಎಂಬುದಾಗಿ ಹೇಳಿದೆ. ಆಗ ನಾನು ಏನು ಮಾತನಾಡಿದೆ ಎನ್ನುವುದರ ಬಗ್ಗೆ ಈಗ ಚರ್ಚೆ ಮಾಡುವುದಕ್ಕೆ ಹೋಗುವುದು ಬೇಡ ಹಾಗೂ ಅದರ ಬಗ್ಗೆ ಮಾತನಾಡುವುದೂ ಸಹ ಬೇಡ. ಆದರೆ, we are the second biggest State. ಕೃಷಿಯಲ್ಲಿ ಒಂದು ಕಡೆ ರಾಜಸ್ಥಾನ ರಾಜ್ಯವು ದೊಡ್ಡ ರಾಜ್ಯ. ಇದು ನಂಬರ್ ಎರಡು. ಇಲ್ಲಿ ಬರಡು ಭೂಮಿಯೂ ಸಹ ಇದೆ, ಹಾಗೆಯೇ ನೀರಾವರಿಯೂ ಸಹ ಇದೆ. ನಾನು ಮುಂದಿನ 25 ವರ್ಷಗಳಲ್ಲಿ ಈ ಸ್ಥಾನದಲ್ಲಿ ಕುಳಿತುಕೊಂಡು ನಿಮ್ಮೆಲ್ಲರ ಸಹಕಾರದಿಂದ ಎಷ್ಟು ನೀರಾವರಿ ಆಗಬೇಕೆಂದು ಹೇಳಿ ಒಂದು ಒಳ್ಳೆಯ ಪ್ಲ್ಯಾನ್ ಅನ್ನು ಮಾಡಬೇಕು. ಹಳ್ಳಿಗಳ ಜನರು ಬೆಂಗಳೂರಿಗೆ ಬರುತ್ತಿದ್ದಾರೆ. ಈ ಹಿಂದೆ ನಾನು ನಗರಾಭಿವೃದ್ಧಿ ಸಚಿವನಾಗಿದ್ದಾಗ ಇದ್ದ ಜನಸಂಖ್ಯೆಯ ಬಗ್ಗೆ ನಿನ್ನೆಯ ದಿನ ನಾನು ಮತ್ತು ಶ್ರೀ ಪ್ರಿಯಾಂಕ್ ಖರ್ಗೆ ರವರು ಮಾತನಾಡುತ್ತಿದ್ದೆವು. ಬೆಂಗಳೂರು ನಗರಕ್ಕೆ ಮೊದಲ ಕಮಿಷನರ್ ಅನ್ನು ಮಾಡಿದಾಗ, ಆಗ ಬೆಂಗಳೂರು ನಗರದಲ್ಲಿ ಕೇವಲ 10 ಲಕ್ಷ ಜನಸಂಖ್ಯೆ ಇತ್ತು. ಆದರೆ, ಇವತ್ತಿನ ದಿವಸ 1 ಕೋಟಿ 50 ಲಕ್ಷ ಜನರು ಬೆಂಗಳೂರು ನಗರದಲ್ಲಿದ್ದಾರೆ. 1 ಕೋಟಿ 40 ಲಕ್ಷ ವಾಹನಗಳಿವೆ. ಅದೇ ರಸ್ತೆಯು ಅಷ್ಟೊಂದು ವಾಹನಗಳನ್ನು ಹೇಗೆ ತಡೆದುಕೊಳ್ಳಲು ಸಾಧ್ಯ? ಇದಕ್ಕೆ ಏನು ಮಾಡಬೇಕು? What is the solution for this? ಇಲ್ಲಿಗೆ ಜನರು ಹೊರಗಡೆಯಿಂದ ಬರುತ್ತಾರೆ. ನಾನು ಬೆಂಗಳೂರು ನಗರಕ್ಕೆ ಬಂದೆ. ಅದೇ ರೀತಿಯಾಗಿ ಎಷ್ಟೋ ಜನರು ಬೆಂಗಳೂರು ನಗರಕ್ಕೆ ಬಂದಿದ್ದಾರೆ. ರಾಜಕಾರಣಕ್ಕೂ ಸಹ ಬಂದಿದ್ದಾರೆ. ಆದರೆ, ಇವರುಗಳು ಯಾರೂ ಸಹ ವಾಪಸ್ಸು ಹೋಗುತ್ತಿಲ್ಲ. ಎಲ್ಲರೂ ಇಲ್ಲಿಯೇ ಮನೆಯನ್ನು ಮಾಡಿಕೊಂಡು, ಇಲ್ಲಿಯೇ ಸೇರಿಕೊಂಡು ಬಿಟ್ಟಿದ್ದಾರೆ. ಹಾಗೆಯೇ ನಾನೂ ಸಹ ವಾಪಸ್ಸು ಹೋಗಲೇ ಇಲ್ಲ. ನನ್ನ ಅಪ್ಪ ಅಮ್ಮ ನನ್ನನ್ನು 6 ನೇ ವರ್ಷಕ್ಕೆ ಇಲ್ಲಿಗೆ ಕರೆದುಕೊಂಡು ಬಂದು ಎನ್.ಪಿ.ಎಸ್. ಗೆ ಸೇರಿಸಿದರು. ನಾನು ವಾಪಸ್ಸು ಹೋಗಲೇ ಇಲ್ಲ. ಕೇವಲ ಚುನಾವಣೆಗಾಗಿ ಮಾತ್ರವೇ ಕ್ಷೇತ್ರವೆಂದು ಹುಡುಕಿಕೊಂಡು ಹೋಗಿ, ರಾಜಕಾರಣವನ್ನು ಮಾಡಿಕೊಂಡು ಇಲ್ಲಿಗೆ ಬರುತ್ತಿದ್ದೇನೆ. ಹೀಗೆ ಬೇಕಾದಷ್ಟು ಜನರ ಉದಾಹರಣೆಗಳಿವೆ. ಶ್ರೀ ನರೇಂದ್ರ ಸ್ವಾಮಿಯವರೂ ಸಹ ಇಲ್ಲಿಯೇ ಮನೆ ಮಾಡಿಕೊಂಡು ಬಿಟ್ಟಿದ್ದಾರೆ.

(ಮುಂದು)

(698)14-08-2026/2-20/bkp-bns (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಕೆ. ಶಿವಕುಮಾರ್ (ಮುಂದು):**

ಶ್ರೀಯುತ ನರೇಂದ್ರ ಸ್ವಾಮಿಯವರು ಸಹ ಅವರ ಊರಿಗೆ ಹೋಗುತ್ತಿಲ್ಲ. ಅದೇ ರೀತಿಯಲ್ಲಿ ಪ್ರಿಯಾಂಕ್ ಖರ್ಗೆಯವರು ಹೋಗುತ್ತಿಲ್ಲ, ಶ್ರೀಮಾನ್ ಧರ್ಮಸಿಂಗ್‌ರವರ ಮಗ ಅವರು ಸಹ ಹೋಗುತ್ತಿಲ್ಲ, ಯಾರೂ ಸಹ ಹೋಗುತ್ತಿಲ್ಲ, ಎಲ್ಲರೂ ಸಹ ಇಲ್ಲಿಯೇ ಮನೆ ಮಾಡಿಕೊಂಡು ಸೆಟ್ಲ್ ಆಗಿದ್ದಾರೆ. ಓಟ್ ಅನ್ನು ಮಾತ್ರ ಅಲ್ಲಿ ಇಟ್ಟುಕೊಂಡಿರುತ್ತಾರೆ. ಶ್ರೀಯುತ ಹೆಚ್.ಸಿ. ಬಾಲಕೃಷ್ಣ ರವರು ಸಹ ಇಲ್ಲಿಯೇ ಇದ್ದಾರೆ. ಅವರು ನಗುತ್ತಿದ್ದಾರೆ ನೋಡಿ. All of them are residing here. ಎಲ್ಲರ ಪರಿಸ್ಥಿತಿಯೂ ಸಹ ಒಂದೇ ರೀತಿಯಲ್ಲಿ ಇದೆ. ನಿಮ್ಮದೂ ಸಹ ಹಾಗೆಯೇ ಇದೆ. ಎಲ್ಲರೂ ಸಹ ನಾವುಗಳು ರಾಜಕಾರಣಕ್ಕೋಸ್ಕರ ಇಲ್ಲಿದ್ದೇವೆ. ನ್ಯಾಯಾಧೀಶರುಗಳು ಸಹ ಇಲ್ಲಿಯೇ ಇರುತ್ತಾರೆ. ಒಬ್ಬರೂ ಸಹ ವಾಪಸ್ಸು ಹೋಗುತ್ತಿಲ್ಲ. ಇಲ್ಲಿಗೆ ಪ್ರಾಕ್ಟೀಸ್ ಮಾಡಲಿಕ್ಕೆಂದು ನ್ಯಾಯವಾದಿಗಳು ಬಂದು ಇಲ್ಲಿಯೇ ಇರುತ್ತಾರೆಯೇ ಹೊರತು ವಾಪಸ್ಸು ಹೋಗುವುದಿಲ್ಲ. ನಾವು ಗುಲ್ಬರ್ಗ ಮತ್ತು ಧಾರವಾಡದಲ್ಲಿ ಹೈಕೋರ್ಟ್‌ನ ಸಂಚಾರಿ ಪೀಠವನ್ನು ಮಾಡಿದ್ದೇವೆ. ಅಲ್ಲಿಗೆ ಯಾರೂ ಹೋಗಿರುವುದಿಲ್ಲ. ಎಲ್ಲರೂ ಸಹ ಇಲ್ಲಿಯೇ ಬಂದು ನೆಲೆಸುತ್ತಾರೆ. ಏಕೆಂದರೆ, ಇಲ್ಲಿನ ಹವಮಾನ, ಸಂಸ್ಕೃತಿ, ಗುಣಮಟ್ಟದ ಶಿಕ್ಷಣ ಕಾರಣವಾಗಿದೆ.

ಮಾನ್ಯ ಸಭಾಪತಿಯವರೆ, ಭಾರತದಲ್ಲಿ 130 ಇಂಟರ್ ನ್ಯಾಷನಲ್ ಶಾಲೆಗಳು ಇವೆ. ಕರ್ನಾಟಕದಲ್ಲಿ 38, ಇಂಟರ್ ನ್ಯಾಷನಲ್ ಶಾಲೆಗಳು ಇವೆ. ಅಂದರೆ, ಎಲ್ಲ foreign passport holders ಅವರ ಮಕ್ಕಳಿಗೆ ಇಂಟರ್ ನ್ಯಾಷನಲ್ ಶಾಲೆಗಳಲ್ಲಿ ವಿದ್ಯಾಭ್ಯಾಸ ಸಿಗಬೇಕೆನ್ನುವ ದೃಷ್ಟಿಯಿಂದ they are looking at Bengaluru. ಇದು ಎಂತಹ air conditioned city ಯಾಗಿದೆ. ಹಾಗಾಗಿ, ಇಲ್ಲಿ ಇರುವಂತಹ ಪ್ರಕೃತಿ ಏನಿದೆ, ಇಲ್ಲಿ ಇರುವಂತಹ managing power ಏನಿದೆ, ಇದನ್ನು ನಾನು ಮಾಡಿದೆ, ನಮ್ಮ ಸರ್ಕಾರ ಮಾಡಿದೆ ಎಂದು ಹೇಳಲಿಕ್ಕೆ ನಾನು ತಯಾರು ಇಲ್ಲ. ಮುಖ್ಯಮಂತ್ರಿಯಾಗಿ ಮಾನ್ಯ ಶ್ರೀ ಸಿದ್ದರಾಮಯ್ಯನವರು ಇದ್ದರು, ಮತ್ತೆ ಶ್ರೀಮಾನ್ ಬಸವರಾಜ್ ಬೊಮ್ಮಾಯಿಯವರು ಇದ್ದರು, ನೀರಾವರಿ ವಿಷಯದಲ್ಲಿ ಅವರ ಕಾಲದಲ್ಲಿ ತಮ್ಮ ಕೊಡುಗೆಯನ್ನು ಕೊಟ್ಟಿದ್ದಾರೆ. ಶ್ರೀಮಾನ್ ಜಗದೀಶ್ ಶೆಟ್ಟರ್‌ರವರು ಸಹ ಆಡಳಿತ ಮಾಡಿದ್ದಾರೆ, ಶ್ರೀಮಾನ್ ಸಿದ್ದರಾಮಯ್ಯನವರು ಸಹ ಪ್ರತಿಯೊಬ್ಬರು ಹೊಟ್ಟೆ ಹಸಿವಿನಿಂದ ಬಳಲಬಾರದು ಎಂದು ಹೇಳಿ ಬಸವಣ್ಣನವರ ಜಯಂತಿ ದಿವಸ ಅವರು ಅಧಿಕಾರ ತೆಗೆದುಕೊಂಡು, ಆ ದಿನವೇ ಎಲ್ಲರೂ ಕೂಡ ಹಸಿವಿನಿಂದ ಮುಕ್ತರಾಗಬೇಕೆಂದು ಹೇಳಿ, ಅವರು ವಿದ್ಯಾಭ್ಯಾಸ ಮಾಡುವಾಗ ಊಟ ಮಾಡಲಿಕ್ಕೆ ಅಕ್ಕಿ ಇರಲಿಲ್ಲವೆಂದು ಹೇಳಿ, ಅಂದು ಅವರದ್ದೇ ಆದಂತಹ ಅನುಭವದಲ್ಲಿ ತೀರ್ಮಾನ ಮಾಡಿ ಅನೇಕ ಭಾಗ್ಯಗಳನ್ನು ಕೊಟ್ಟರು. ನಾನು ಮತ್ತು ಅವರು ಸೇರಿದಂತೆ ಎಲ್ಲರೂ ಸೇರಿಕೊಂಡು ಅನೇಕ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. 5 ಗ್ಯಾರಂಟಿಗಳನ್ನು

ಕೊಟ್ಟಿರುವುದಕ್ಕೆ ಟೀಕೆ ಮಾಡಿದರು. ಪ್ರಧಾನ ಮಂತ್ರಿಗಳು ಸೇರಿದಂತೆ ಬೇರೆಯವರು ಸಹ ಟೀಕೆ ಮಾಡಿದರು. ಇದು ಸಾಧ್ಯವೇ ಎಂದು ಹೇಳಿದರು. ಶ್ರೀಮಾನ್ ಬಿ.ಎಸ್. ಯಡಿಯೂರಪ್ಪನವರು ಅವರ ಕಾಲದಲ್ಲಿ ನನಗೆ ಅನೇಕ ಸಲಹೆಗಳನ್ನು ಕೊಟ್ಟರು. ಇವುಗಳ ಸಂಬಂಧ ಡಿ.ಕೆ. ನೀನು ಇವುಗಳನ್ನು ಪ್ರತಿ ವರ್ಷ ಒಂದೊಂದರಂತೆ ಮಾಡುತ್ತೀಯಾ ಎಂದು ಹೇಳಿದರು. ಈ ರೀತಿಯಲ್ಲಿ ಕೆಲವರೆಲ್ಲರೂ ಟೀಕೆ ಮಾಡಿದರು. ಹಾಗಾದರೆ, ಇವತ್ತು ಏನಾಯಿತು? ಟೀಕೆಗಳೆಲ್ಲವೂ ಸತ್ತು ಹೋಯಿತು, ನಮ್ಮ ಕೆಲಸಗಳು ಮಾತ್ರ ಉಳಿಯಿತು. ಇವತ್ತು ಡ್ಯಾಮ್‌ಗಳನ್ನು ಏನು ಕಟ್ಟಿಕೊಂಡು ಬಂದಿದ್ದಾರೆ, ಇವುಗಳನ್ನು ನಾವು ಕಟ್ಟಿದ್ದೇವೆಯೇ? ಹಿರಿಯರೆಲ್ಲರೂ ಸೇರಿಕೊಂಡು ಕಟ್ಟಿದ್ದಾರೆ. ಈ ಎಲ್ಲಾ ಮುಖ್ಯಮಂತ್ರಿಗಳು ಸೇರಿ ಈ ಡ್ಯಾಮ್‌ಗಳನ್ನು ಕಟ್ಟಿದ್ದಾರೆ. ಎಲ್ಲಾ ಮುಖ್ಯಮಂತ್ರಿಗಳು ಸೇರಿಕೊಂಡು ಈ ಕಾರ್ಯಕ್ರಮವನ್ನು ಕೊಟ್ಟಿದ್ದಾರೆ.

ಶ್ರೀಮಾನ್ ಬಿ.ಎಸ್. ಯಡಿಯೂರಪ್ಪನವರ ಕನಸು ಸಹ ಬಹಳ ದೊಡ್ಡದು ಇತ್ತು. ರೈತರ ವಿಚಾರದಲ್ಲಿ, ಹೋರಾಟದ ಕೆಲಸ ಮಾಡಿದರು. ಅವರಿಗೂ ಕೂಡ ಕೆಲವು ರಾಜಕೀಯ ಒತ್ತಡದಿಂದ ಎರಡು-ಮೂರು ಕೆಲಸಗಳನ್ನು ಕಟ್ ಮಾಡಬೇಕಾದಂತಹ ಪರಿಸ್ಥಿತಿ ಬಂತು. ಈ ರೀತಿಯಲ್ಲಿ ಎಲ್ಲರ ಕೊಡುಗೆಯೂ ಸಹ ಇದೆ. I know that this city…., ನನ್ನ ಅಧಿಕಾರ ಶಾಶ್ವತವಲ್ಲ. I know that this power is not permanent for me. ಜಾಸ್ತಿ ದಿನ ಅಧಿಕಾರ ಇರುವುದಿಲ್ಲ ಎನ್ನುವುದು ಸಹ ನನಗೆ ಗೊತ್ತು. ಆದರೆ, ಇದ್ದಂತಹ ಸಂದರ್ಭದಲ್ಲಿ ನಾವು ಏನು ಮಾಡುತ್ತೇವೆ ಎನ್ನುವುದು ಬಹಳ ಮುಖ್ಯ ಅಲ್ಲವೇ? ನಾನು ಅದಕ್ಕೆ ಅನೇಕ ಸಂದರ್ಭದಲ್ಲಿ ಹೇಳುತ್ತಿರುತ್ತೇನೆ. ನನ್ನ ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ, ಜನನ ಉಚಿತ, ಮರಣ ಖಚಿತ. ಈ ಹುಟ್ಟು ಸಾವಿನ ಮಧ್ಯದಲ್ಲಿ ನಾವು ಏನು ಮಾಡುತ್ತೇವೆ ಎನ್ನುವುದು ಬಹಳ ಮುಖ್ಯ. ಅದಕ್ಕೆ ನಾನು ಪ್ರಾರಂಭದಲ್ಲೇ ಹೇಳಿದ್ದು, "I don't believe in reading history or writing history, I believe in creating history" ಎಂದು. ಹಾಗೆ, ಇವತ್ತು ನಾವು ಏನಾದರೂ ಈ ಸ್ಥಾನದಲ್ಲಿ ಕುಳಿತುಕೊಂಡು ಮಾಡಬೇಕೆಂದರೆ ಅವರ ಸಹಕಾರ ಬೇಕು. ನಾವು ಮತ್ತು ಅವರು ಒಂದೇ ಆಗಿರುತ್ತೇವೆ. Let us work as Team Karnataka. Let us do politics outside. ನನ್ನನ್ನು ಏನು ಬೇಕಾದರೂ ಕರೆಯಿರಿ. ಶ್ರೀಯುತ ಸಿ.ಟಿ. ರವಿಯವರು ನನಗೆ ಏನು ಬೇಕಾದರೂ ಬಿರುದನ್ನು ಕೊಡಲಿ, 1,2,3 ಬಿರುದು ಎಂದು ಹೇಳಿ ಸ್ಟಾರ್ ಕೊಡಲಿ, ಇನ್ನೊಂದನ್ನು ಬೇಕಾದರೂ ಹೇಳಲಿ, ಈಗಾಗಲೇ ಕೊಟ್ಟಿದ್ದಾರೆ. I welcome it. Criticism ಇರಬೇಕು, ತಪ್ಪೇನೂ ಇರುವುದಿಲ್ಲ. ವೈರಿಗಳು ಇದ್ದಲ್ಲಿ ಮಾತ್ರ ರಾಜಕಾರಣದಲ್ಲಿ ತಿದ್ದಿಕೊಳ್ಳಲಿಕ್ಕೆ ಸಾಧ್ಯ. ಮಾಧ್ಯಮದವರು ನಮ್ಮನ್ನು ಟೀಕೆ ಮಾಡಲಿಲ್ಲವೆಂದರೆ, ನಾವು ಎಚ್ಚರಿಕೆಯಿಂದ ಕೆಲಸ ಮಾಡಲಿಕ್ಕೆ ಸಾಧ್ಯವಿಲ್ಲ. ಅದಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಮತ್ತು ಪತ್ರಿಕಾ ರಂಗ ಇವೆ. These are the

four pillars of democracy. ನಾವು ಏನು ಮಾಡಬೇಕೆಂದು ತೀರ್ಮಾನ ಮಾಡುತ್ತೇವೆ, ಅದನ್ನು ಕಾರ್ಯಾಂಗದವರು ಚಾಲನೆ ಮಾಡಬೇಕಾಗುತ್ತದೆ. ನಾವುಗಳು ಏನಾದರೂ ತಪ್ಪು ಮಾಡಿದರೆ ಅವರು ಟೀಕೆ ಮಾಡಲೇಬೇಕು. ಮತ್ತೆ ಅವರು ಟೀಕೆ ಮಾಡಲಿಕ್ಕೆ ಪತ್ರಿಕಾರಂಗದವರು ಆಹಾರ ಕೊಡಬೇಕು. ಅವರು ಆಹಾರವನ್ನು ಕೊಡುವುದರ ಜೊತೆಗೆ, ಇನ್ನಿಬ್ಬರು ಸರಿ ಇಲ್ಲವೆಂದು ಹೇಳಿದರೆ, ಈ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ Judiciary ಮತ್ತು Legislature,ಗಳೆರಡೂ ಎರಡೂ ಒಂದಕ್ಕೊಂದು ಮುಖ ನೋಡುತ್ತಿದೆ. ಇಲ್ಲಿ ನಾವಿಬ್ಬರು ಏನಾದರೂ ಹೆಚ್ಚು ಕಡಿಮೆ ಮಾಡಿದರೆ, ಪತ್ರಿಕೆಯವರು ಬರೆದ ತಕ್ಷಣ , ಕೊನೆಗೆ ಅವರೇ suo moto case ಅನ್ನು ತೆಗೆದುಕೊಂಡು ಬಿಡುತ್ತಾರೆ. ಹಾಗೆಯೇ ಈ ಒಂದು ಜೈಲ್ ಅನ್ನು ನೋಡಿದ್ದೇವೆ, ಬೇಲ್ ಅನ್ನು ಸಹ ನೋಡಿದ್ದೇವೆ. ನನ್ನನ್ನು ಸಹ ಜೈಲಿಗೆ ಕಳುಹಿಸಿದರು. ನಾನು ಸಹ ಹೋದೆ. ನಾನು ಜೈಲಿನಿಂದ ಹೊರಗಡೆ ಬಂದ ತಕ್ಷಣ ಜನರು ಓಹೋ! ಏನೋ ದೊಡ್ಡ ಸಾಧನೆಯನ್ನು ಮಾಡಿಕೊಂಡು ಬಂದಿದ್ದಾನೆಂದು ಹೇಳಿ ಎಲ್ಲರೂ ಟೀಕೆ ಮಾಡಿದರು. ಪಾಪ, ಶ್ರೀಮಾನ್ ಯಡಿಯೂರಪ್ಪನವರನ್ನೂ ಸಹ ಜೈಲಿಗೆ ಕಳುಹಿಸಿದರು. ಅವರನ್ನು ಸಹ ಜನರು ಸ್ವೀಕಾರ ಮಾಡಿದರು. ನಾನು ಜೈಲಿನ ಒಳಗಡೆ ಹೋದ ತಕ್ಷಣ ಮುಗಿದೇ ಹೋಯಿತು ನನ್ನ ರಾಜಕಾರಣ ಎಂದು ಹೇಳಿದರು. ಏಯ್! ಅವನು ಬರಲಿಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಆಯಿತು, ಎಂದು ಹೇಳಿದೆ. ನಾನು ಏನಾದರೂ ತಪ್ಪು ಮಾಡಿದ್ದರೆ ನನ್ನನ್ನು ಅಲ್ಲಿಯೇ ಖಾಯಂ ಆಗಿ ಇಟ್ಟುಕೊಳ್ಳಿ ಎಂದು ಹೇಳಿದೆ. But, god was kind to me. ಈ ರಾಜ್ಯದ ಪ್ರತಿಯೊಬ್ಬ ಜನ, ಪ್ರತಿಯೊಬ್ಬ ತಾಯಂದಿರು, ಪಕ್ಷ-ಬೇಧವನ್ನು ಮರೆತು ನಿಮ್ಮಂತವರೆಲ್ಲರೂ ಸೇರಿ ಈ ಡಿ.ಕೆ. ಶಿವಕುಮಾರ್‌ರವರಿಗೆ ಅನ್ಯಾಯವಾಗಬಾರದು ಎಂದು ಹೇಳಿ ಏನು ಪ್ರಾರ್ಥನೆ ಮಾಡಿದರಲ್ಲಾ, ಆ ತಾಯಂದಿರೆಲ್ಲರೂ ಪ್ರಾರ್ಥನೆ ಮಾಡಿಕೊಂಡು ಏನು ಕೇಳಿಕೊಂಡರಲ್ಲಾ, ಇದರ ಜೊತೆಗೆ ಗುರು-ಹಿರಿಯರು, ಮಠಾಧೀಶರೆಲ್ಲರೂ ನನಗೆ ಆಶೀರ್ವಾದ ಮಾಡಿದ್ದರಿಂದ, ಇವತ್ತು ನಾನು ಹೊರಗಡೆ ಬಂದು, ಈ ಒಂದು ಸೇವೆ ಮಾಡಲಿಕ್ಕೆ ನನಗೆ ಭಗವಂತ ಅವಕಾಶ ಕೊಟ್ಟಿದ್ದಾನೆ. ಈ ಸೇವೆ, ಈ ಚೇರ್ ಅನ್ನು ದುರುಪಯೋಗ ಮಾಡಿಕೊಳ್ಳಲಿಕ್ಕೆ ಹೋಗುವುದಿಲ್ಲ, ದ್ವೇಷ ಮಾಡಲಿಕ್ಕೆ ಹೋಗುವುದಿಲ್ಲ. Power comes for two things; to make more friends and to make more enemies. I want to make more friends. I want to help everyone. Nothing is permanent in life. ದುಡ್ಡನ್ನು ನೋಡಿದ್ದೇವೆ, ಅಧಿಕಾರವನ್ನು ನೋಡಿದ್ದೇವೆ. ತಮಗೂ ಗೊತ್ತಿದೆ, ಕಾಲೇಜಿನಲ್ಲಿ ಇದ್ದಾಗಲೇ ನನಗೆ ಟಿಕೆಟ್ ಸಿಕ್ಕಿತು, ನಾನು ಮದುವೆ ಆಗುವುದಕ್ಕಿಂತ ಮುಂಚಿತವಾಗಿಯೇ ಚಿಕ್ಕ ವಯಸ್ಸಿನಲ್ಲಿಯೇ ಮಂತ್ರಿಯಾದವನು. I have seen money in my life. ಎಷ್ಟೋ ಜನರು ಇಷ್ಟೊಂದು ಹಣ ಆಸ್ತಿಯನ್ನು ಡಿಕ್ಲೇರ್ ಮಾಡಿಕೊಂಡಿದ್ದೀಯಾ ಎಂದು ಕೇಳಿದರು. ಹೌದು, ಇರುವಂತಹದ್ದನ್ನು ಡಿಕ್ಲೇರ್ ಮಾಡಿಕೊಳ್ಳುವುದಕ್ಕೆ ಏನು ಸಮಸ್ಯೆ? ಏತಕ್ಕೆ ಮುಚ್ಚಿಟ್ಟುಕೊಳ್ಳಬೇಕು? ಯಾರು ಏನು ಬೇಕಾದರೂ ಕೇಸ್

ಹಾಕಿಕೊಳ್ಳಲಿ. When my heart is clear, ನಾನು ಯಾರ ಒತ್ತಡಕ್ಕೂ ಮಣಿಯಬೇಕಾಗಿಲ್ಲ. I will go by my consciousness. Ultimately, ಆತ್ಮಸಾಕ್ಷಿ ಎನ್ನುವುದು ಒಂದು ಇರಬೇಕಲ್ಲವೇ? ಆ ಆತ್ಮಸಾಕ್ಷಿ ಪರವಾಗಿ ಇವತ್ತು ಕೆಲಸ ಮಾಡಬೇಕೆಂದು ಹೇಳಿ ನಾನು ಕುಳಿತುಕೊಂಡಿದ್ದೇನೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ನನಗೆ ಅನೇಕ ವಿಚಾರಗಳಿವೆ, ಕಲ್ಪನೆಗಳಿವೆ, I know that everything can't be done. ಅಂದು ನಾನು ಮಂತ್ರಿಯಾದ ದಿನವೇ ಶ್ರೀಮಾನ್ ಎಸ್. ಬಂಗಾರಪ್ಪನವರಿಗೆ ಹೇಳಿದೆ. ನಾನು ಮತ್ತು ಶ್ರೀಮಾನ್ ಧರ್ಮಸಿಂಗ್‌ರವರು ಅಂದು ಕುಳಿತುಕೊಂಡು portfolio ಬರೆದೆವು. ಅವತ್ತಿನ ಕಾಲದಲ್ಲಿ, I was blue eyed boy of Sri Bangarappa and Sri S.M. Krishna. ಅದು ಬೇರೆ ವಿಚಾರ. ನನ್ನನ್ನು ಎಷ್ಟು ದಿನ ಇರಿಸುತ್ತಿರೋ ಅಷ್ಟು ದಿನ ಇರುತ್ತೇನೆ ಎಂದು ನಾನು ಅಂದೇ ಹೇಳಿದೆ, I was so happy with whatever portfolio given to me. ನನಗೆ ಹುಲ್ಲು ಕಾಯುವ ಮಂತ್ರಿ ಸ್ಥಾನವನ್ನು ಕೊಡಿ ಎಂದು ಹೇಳಿದೆ. ಆಗ ನನಗೆ ಜೈಲು ಮಂತ್ರಿ ಸ್ಥಾನವನ್ನು ಕೊಟ್ಟರು. ಶ್ರೀಮಾನ್ ಧರ್ಮಸಿಂಗ್ ರವರು ಕೊನೆಯಲ್ಲಿ ಅವರ ಬಳಿ ಇದ್ದ ಖಾತೆಯನ್ನು ಆಮೇಲೆ ತೆಗೆದುಬಿಟ್ಟು ಜೈಲು ಮಂತ್ರಿ ಸ್ಥಾನವನ್ನು ನನಗೆ ಕೊಟ್ಟರು. ಆಗ ಧರ್ಮಸಿಂಗ್‌ರವರು, "ಡಿ.ಕೆ. ನಾನು ಸಹ ಜೈಲು ಮಂತ್ರಿಯಾಗಿದ್ದೆ. ನಾನು ಇವತ್ತು ಮುಖ್ಯಮಂತ್ರಿಯಾಗಿದ್ದೇನೆ, ನೀನು ಒಂದು ದಿವಸ ಮುಖ್ಯಮಂತ್ರಿಯಾಗಬೇಕು" ಎಂದು ಹೇಳಿದ್ದರು. ಶ್ರೀ ಬಂಗಾರಪ್ಪ ನವರ ಆಡಳಿತ. It is in history. ನನಗೆ ಏನು ಅವಮಾನ ಇಲ್ಲ. ಅವರ ಕಾಲದಲ್ಲಿ ಕೆಲಸ ಮಾಡಿಕೊಂಡು ಹೋಗಿದ್ದೇನೆ. I am so happy. ಜೈಲು ಮಂತ್ರಿ ಸ್ಥಾನ ಒಂದು ಚಿಕ್ಕ ಖಾತೆ ಎಂದು ನನಗೇನೂ ಅನ್ನಿಸಲಿಲ್ಲ. ಶ್ರೀಮಾನ್ ಡಿ. ದೇವರಾಜ ಅರಸು ಅಂತಹವರೆಲ್ಲರೂ, ಬೇರೆ ಬೇರೆ ಎಲ್ಲರೂ ಇದ್ದರು. ಶ್ರೀಮಾನ್ ಸೋಮಣ್ಣನವರು ಇದ್ದರು. ಈಗ ಸೋಮಣ್ಣನವರು ಕೇಂದ್ರ ಸಚಿವರಾಗಿಲ್ಲವೇ? ಅವರು ಸಹ ಜೈಲು ಮಂತ್ರಿಯಾಗಿದ್ದರು. ಹಾಗೆ, we are here to serve. ನಾವೆಲ್ಲರೂ ಇಲ್ಲಿಗೆ ಬಂದಿರುವುದು ಏತಕ್ಕೆ? ಅಧಿಕಾರ ಬರುತ್ತದೆ, ಅಧಿಕಾರ ಹೋಗುತ್ತದೆ. ನಾಳೆ, ಅವರು ಸಹ ಇಲ್ಲಿ ಬಂದು ಕುಳಿತುಕೊಳ್ಳಬಹುದು. ನಾವು ಸಹ ಅಲ್ಲಿ ಕುಳಿತುಕೊಳ್ಳಬಹುದು. ನಿಮ್ಮಲ್ಲಿ ಇರುವಂತಹ ಎಷ್ಟೋ ಜನರು, they can become Chief Ministers. Nothing is impossible. In politics, 49 becomes zero and 51 becomes 100. ರಾಜಕೀಯದಲ್ಲಿ ಏನು ಬೇಕಾದರೂ ಆಗಬಹುದು. ಯಾರು ಖಾಯಂ ಆಗಿ ಇರುತ್ತಾರೆ? ನಮ್ಮಲ್ಲಿ ಸುಮಾರು 50% ಜನರು ದಳದಿಂದ ಬಂದು ನಮ್ಮಲ್ಲಿ ಮಂತ್ರಿಗಳಾಗಿದ್ದಾರೆ. ಕಾಂಗ್ರೆಸ್‌ನಲ್ಲಿ ಇದ್ದವರೆಲ್ಲರೂ ಬಿ.ಜೆ.ಪಿ.ಯಲ್ಲಿ ಮಂತ್ರಿಗಳಾಗಿದ್ದಾರೆ. ಪಾಪ, ಬಿ.ಜೆ.ಪಿ.ಯಲ್ಲಿ ಕಷ್ಟಪಟ್ಟವರೆಲ್ಲರೂ ಬಾಹರ್ ಇದ್ದರು, ಕಾಂಗ್ರೆಸ್‌ನವರು ಅಂದರ್ ಆದರು. ಏನು ಮಾಡುವುದಕ್ಕಾಗುವುದಿಲ್ಲ. 3-4 ಜನರು ಬಿಟ್ಟು ಉಳಿದವರೆಲ್ಲರೂ ಸೋತು ಹೋದರು. ಹಿಂದಿನ ಚುನಾವಣೆಯಲ್ಲಿ ಶ್ರೀಮಾನ್ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಬೇಕಾದರೆ ಶ್ರೀಯುತ ನರೇಂದ್ರ ಸ್ವಾಮಿ ಸೇರಿದಂತೆ 3-4 ಜನರು ಸೇರಿಕೊಂಡೆ ಶ್ರೀಮಾನ್

ಬಿ.ಎಸ್. ಯಡಿಯೂರಪ್ಪನವರನ್ನು ಮುಖ್ಯಮಂತ್ರಿಯಾಗಿ ಮಾಡಿರುವುದಾಗಿದೆ. ಶ್ರೀಯುತ ಶಿವರಾಜ್ ತಂಗಡಿಯವರು ಸಹ ಇದರಲ್ಲಿ ಸೇರಿಕೊಂಡಿದ್ದರು. ಶ್ರೀಯುತ ಗೂಳಿಹಟ್ಟಿ ಶೇಖರ್ ರವರು, ಶ್ರೀಯುತ ಡಿ. ಸುಧಾಕರ್ ರವರು, ಶ್ರೀಮಾನ್ ವೆಂಕಟರಮಣಪ್ಪನವರು ಸೇರಿಕೊಂಡು ಮಾಡಿದರು. ಮೊನ್ನೆ ಶ್ರೀಮಾನ್ ಮಧು ಬಂಗಾರಪ್ಪನವರನ್ನು ಮಂತ್ರಿ ಮಾಡಿದವರು ಯಾರು? ಶ್ರೀಯುತ ಸುಧಾಕರ್ ರವರು, ಶ್ರೀ ಎಂ.ಟಿ.ಬಿ. ನಾಗರಾಜು ರವರು, ಶ್ರೀಯುತ ಬಿ. ಸೋಮಶೇಖರ್‌ರವರು, ಶ್ರೀಯುತ ಆನಂದ್‌ಸಿಂಗ್‌ರವರೆಲ್ಲರೂ ಸೇರಿಕೊಂಡು ಮಾಡಿದರು. ಇಸ್ಪೀಟ್ ಕಾರ್ಡ್‌ಗಳು shuffle ಆದಂತೆ ರಾಜಕೀಯದಲ್ಲಿ ಇದೆಲ್ಲವೂ ಆಗುತ್ತದೆ. ಈಗ ಅಲ್ಲಿ ಇರುವಂತಹ ವಿರೋಧ ಪಕ್ಷದ ನಾಯಕರು ಹಿಂದೆ ನಮ್ಮ ಕಾಂಗ್ರೆಸ್ ಪಕ್ಷದ ನಾಯಕರಾಗಿದ್ದರು. ಈಗ ಅವರು ಏನು ಬೈದರೂ ಸಹ ಬೈಯ್ಯಿಸಿಕೊಳ್ಳಬೇಕು. ಶ್ರೀಮಾನ್ ಬಸವರಾಜ ಹೊರಟ್ಟಿಯವರು ಪಕ್ಷೇತರರಾಗಿ ಬಂದರು, ನಂತರ ದಳವನ್ನು ನೋಡಿದರು, ಬಿ.ಜೆ.ಪಿ.ಯನ್ನು ನೋಡಿದರು. ಹೀಗೆ ಎಲ್ಲಾ ಪಕ್ಷಗಳನ್ನು ನೋಡಿದರು. So, nothing is permanent in life. Ultimately, it is humanity. ನಾನು ಒಕ್ಕಲಿಗನಾದರೂ ಕೂಡ ನನ್ನ ಗುರುಗಳು ರಂಭಾಪುರಿ ಶ್ರೀಗಳು. ಅವರು ಇಂದು ಇರುವುದಿಲ್ಲ. "ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ" ಎಂದು ಸಂದೇಶ ನೀಡಿದರು. I love humanity, human relationship. ನೀವು ಹೃದಯವನ್ನು ಗೆಲ್ಲಬೇಕು. ಗಾಂಧೀಜಿಯವರು, " Be bold hearted when you are defeated; be large hearted when you are victorious" ಎಂದು ಒಂದು ಕಡೆ ಹೇಳುತ್ತಾರೆ. If you want to control yourself, use your brain. If you want to control me, use your heart. My heart is there, you can control me. You can love me. I am ready to love you. Let us all work together. Ultimately, the State is important. ಈ ಕುರಿತು ಮತ್ತೊಂದು ದಿನ ಮಾತನಾಡೋಣ.

ಇವತ್ತು ನನ್ನ young friend, ಶೇಷಾದ್ರಿಪುರಂನ ಇವರ ಕಾಲೇಜಿನ ವಿದ್ಯಾರ್ಥಿ ಸಂಘದ ಚುನಾವಣೆಗೆ ನಾನು ಹೋಗಿದ್ದೆ. ಹೋದ ತಕ್ಷಣ ಇವರು (ಶ್ರೀ ಸಲೀಂ ಅಹ್ಮದ್) ಒಂದು ಕುದುರೆಯನ್ನಿಟ್ಟುಕೊಂಡಿದ್ದರು. ಕೈಯಲ್ಲಿ ಹೂವು ಹಿಡಿದುಕೊಂಡು ಬಂದ ಬಂದವರಿಗೆಲ್ಲರಿಗೂ ಹೂವು ಕೊಡುತ್ತಿದ್ದಾರೆ. ರೋಸ್ ಹೂವು ಕೊಡುತ್ತಿದ್ದಾರೆ. ಆಗ ನಾನು "ಹುಡುಗಿಯರಿಗೆ ರೋಸ್ ಕೊಡಬಹುದು, ಆದರೆ ನೀನು ಎಲ್ಲರಿಗೂ ರೋಸ್ ಕೊಡುತ್ತಿರುವೆಯಲ್ಲಾ?" ಎಂದು ಕೇಳಿದೆ. ನಂತರ ಅವರು ಚುನಾವಣೆಯಲ್ಲಿ ಗೆದ್ದರು. Today, I am so proud that he has become the Chairman of Legislative Council.

(ಮುಂದು)

**(699) 14.08.2026 02.30 ಎಸ್‌ವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಡಿ. ಕೆ. ಶಿವಕುಮಾರ್ (ಮುಂದು):**

ಛೇರ್ಮನ್ ಆಗಿದ್ದೀರಿ ಎಂದ ತಕ್ಷಣ ನಿಮ್ಮ ರಾಜಕೀಯ ಇಲ್ಲಿಗೇ ಮುಗಿಯಿತು ಎಂದಲ್ಲ. ದಿವಂಗತ ಎಸ್. ಎಂ. ಕೃಷ್ಣ ಅವರು ಇಲ್ಲಿಯೇ ಕುಳಿತಿದ್ದರು. ಮಾನ್ಯ ಜಗದೀಶ್ ಶೆಟ್ಟರ್ ಅವರೂ ಇಲ್ಲಿಯೇ ಕುಳಿತಿದ್ದರು. They both became the Chief Ministers. ಯಾರ ಹಣೆಬರಹವನ್ನೂ ನಾವು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸಭಾಪತಿಯವರು ಸಹ ಇಲ್ಲಿಗೇ ಮುಗಿಯಿತು ಎಂದು ತಿಳಿಯಬೇಡಿ. You are still a young man. ಅವರೇನೋ ನೀವು senior citizen ಎಂದು ಹೇಳುತ್ತಿದ್ದರು. ರಾಜಕೀಯದಲ್ಲಿ ತಾವು ನೋಡುತ್ತಿದ್ದೀರಿ ಅಲ್ಲವೆ? ಮಾಜಿ ಪ್ರಧಾನಿಗಳಾದ ಶ್ರೀ ಹೆಚ್. ಡಿ. ದೇವೇಗೌಡರು ಯಾವ ರೀತಿ ಹೋರಾಟ ಮಾಡುತ್ತಿದ್ದಾರೆ ಎಂದು ನೋಡುತ್ತಿದ್ದೀರಿ. ಛಲ ಇರಬೇಕು. I agree with ದೇವೇಗೌಡರ ಛಲ.

ನಾನು ವಿಧಾನ ಸಭೆಯಲ್ಲಿ ಹೇಳಿದ್ದೆನು. ಯಶಸ್ಸು ಕಾಣಬೇಕಾದರೆ ಧರ್ಮರಾಯನ ಧರ್ಮತ್ವ ಇರಬೇಕು, ದಾನಶೂರ ಕರ್ಣನ ದಾನತ್ವ ಇರಬೇಕು, ಅರ್ಜುನನ ಗುರಿಯಿರಬೇಕು, ಭೀಮನ ಬಲವಿರಬೇಕು, ವಿದುರನ ನೀತಿಯಿರಬೇಕು, ಕೃಷ್ಣನ ತಂತ್ರ ಕೂಡ ಇರಬೇಕು. ಆಗ ಮಾತ್ರ ಯಶಸ್ಸನ್ನು ಕಾಣಲಿಕ್ಕೆ ಸಾಧ್ಯ. ಇವೆಲ್ಲ ಕೂಡ ನಾವು ರಾಜಕಾರಣದಲ್ಲಿ ಅಳವಡಿಸಿಕೊಳ್ಳಬೇಕು.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ಹರ್ಷವನ್ನು ವ್ಯಕ್ತಪಡಿಸಿದರು)**

ಏಕೆ ನಗುತ್ತಿದ್ದೀರಿ? ನಿಮಗೆಲ್ಲರಿಗೂ ಇದನ್ನು ಅಳವಡಿಸಿಕೊಳ್ಳಿ ಎಂದು ಹೇಳುತ್ತಿದ್ದೇನೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಮುಖ್ಯಮಂತ್ರಿಗಳೆ, ಮಾನ್ಯ ಯತೀಂದ್ರ ಅವರಿಗೆ ಹೇಳಿದಿರಾ?

**ಶ್ರೀ ಡಿ. ಕೆ. ಶಿವಕುಮಾರ್:-** ಅವರು ನನ್ನ ಪಕ್ಕದಲ್ಲಿ ಕುಳಿತು ನೋಡುತ್ತಿದ್ದಾರೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಮುಖ್ಯಮಂತ್ರಿಯವರೆ, ಮಾನ್ಯ ಯತೀಂದ್ರ ಅವರಿಗೆ ಹೇಳಿದಿರೇನೋ ಎಂದು ಕೇಳಿದೆ.

**ಶ್ರೀ ಡಿ. ಕೆ. ಶಿವಕುಮಾರ್:-** ನಾನು ಅವರನ್ನು ತೋರಿಸಿ ಏನು ಹೇಳಿದೆನೆಂದರೆ "ವಿದುರನ ನೀತಿ" ಎಂದು ಹೇಳಿದೆ. ವಿದುರನ ನೀತಿಯು, it is very important in life.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಮುಖ್ಯಮಂತ್ರಿಯವರೆ, ನಿಮ್ಮದು ಯಾವ ನೀತಿ?

**ಶ್ರೀ ಡಿ. ಕೆ. ಶಿವಕುಮಾರ್:-** ನನ್ನದು ಧರ್ಮರಾಯನ ಧರ್ಮತ್ವ. ದಾನಶೂರ ಕರ್ಣನ ದಾನತ್ವ, ಅರ್ಜುನನ ಗುರಿ, ಭೀಮನ ಬಲ, ವಿದುರನ ನೀತಿ, ಕೃಷ್ಣನ ತಂತ್ರ ಇಷ್ಟೆಲ್ಲಾ ಇದ್ದರೆ ಮಾತ್ರ ಯಶಸ್ವಿಯಾಗುವುದಕ್ಕೆ ಸಾಧ್ಯ. ಮಾನ್ಯ ಪಿ.ಹೆಚ್.ಪೂಜಾರ್ ಅವರು ನನ್ನ friend, ಖುಷಿಯಾಗಿ ನಗುತ್ತಿದ್ದಾರೆ.

ಮಾನ್ಯ ಸಭಾಪತಿಯವರೆ, ಇವತ್ತು ವಿಧಾನ ಪರಿಷತ್ತಿನಲ್ಲಿ ನಾವೆಲ್ಲಾ ಇದ್ದೇವೆ. ತಾವೆಲ್ಲಾ ಇತಿಹಾಸದ ಬಗ್ಗೆ ಹೇಳಿದಿರಿ. Yes, I want cooperation of this House. I also want cooperation of Legislative Assembly. ನಮಗೆ ಕನಸುಗಳು ಇರಬೇಕು. ಈಗ ಎಷ್ಟೋ ಜನ ಇಲ್ಲ, ಆದರೆ ಅವರ

ಸಾಕ್ಷಿಗುಡ್ಡೆಗಳು ಉಳಿದುಕೊಂಡಿವೆಯಲ್ಲ. ಮಾನ್ಯ ದೇವೇಗೌಡರ ಸಾಕ್ಷಿಗುಡ್ಡೆಯನ್ನು ಯಾರಾದರೂ ಬದಲಾಯಿಸಲಿಕ್ಕಾಗುತ್ತದೆಯೇ? ದಿವಂಗತ ರಾಮಕೃಷ್ಣ ಹೆಗಡೆಯವರ ಆಡಳಿತವನ್ನು, ದಿವಂಗತ ವೀರೇಂದ್ರ ಪಾಟೀಲರ ಆಡಳಿತವನ್ನು ಯಾರೂ ಬದಲಾವಣೆ ಮಾಡಲಿಕ್ಕೆ ಸಾಧ್ಯವಿಲ್ಲ. It is impossible. ದಿವಂಗತ ಎಸ್. ನಿಜಲಿಂಗಪ್ಪನವರು ಬೇಕಾದಷ್ಟು ಟೀಕೆಗೆ ಗುರಿಯಾದರು. ದಿವಂಗತ ಕೆಂಗಲ್ ಹನುಮಂತಯ್ಯನವರು ತಾವು ಕಟ್ಟಿದ ಈ ಸೌಧವನ್ನು ಬಿಟ್ಟು ಹೋದರು. He could not sit in Vidhana Soudha built by him. The history tells about it. ದಿವಂಗತ ಎಸ್. ಎಂ. ಕೃಷ್ಣ ಅವರು ವಿಕಾಸ ಸೌಧವನ್ನು ಕಟ್ಟಿದರು. But, still he could not… ಮಾನ್ಯ ಸದಸ್ಯರೊಬ್ಬರು ವಿಕಾಸ ಸೌಧದಲ್ಲಿ ದಿವಂಗತ ಎಸ್. ಎಂ. ಕೃಷ್ಣ ಅವರ ಪ್ರತಿಮೆಯನ್ನು ಇಡಬೇಕು ಎಂದು ನನಗೆ ಈಗ ಒಂದು ಪತ್ರವನ್ನು ಕೊಟ್ಟರು. ನಾವು ಅದನ್ನು ಕಟ್ಟುವಾಗಲೇ ಅದಕ್ಕೆ ಜಾಗವನ್ನು ಮೀಸಲಿಟ್ಟಿದ್ದೇವೆ. ಅದು ತಮಗೆ ಗೊತ್ತಿಲ್ಲ. ಆ ಕಟ್ಟಡವನ್ನು ಕಟ್ಟುವಾಗಲೇ ಪ್ಲಾನ್ ಮಾಡಿ, ಯಾರು ಆ ಕಟ್ಟಡವನ್ನು ಕಟ್ಟುತ್ತಾರೆಯೋ ಅವರ ಪ್ರತಿಮೆ ಸ್ಥಾಪಿಸುವ ಉದ್ದೇಶವಿದ್ದು, ಮಾನ್ಯ ಸದಸ್ಯರು ಏನೋ ಹೇಳುತ್ತಿದ್ದಾರೆ. Don't mix it now, today. ಇವತ್ತು ನಾನು ಅವರ ಸಂಬಂಧಿ ಇರಬಹುದು. ನನಗೂ ಅವರಿಗೂ ಬೀಗತನ ಇರಬಹುದು. ಅವರ ಅನುಯಾಯಿಯಾಗಿ ನನಗೆ ತಿಳಿದಿದೆ. He was our Chief Minister. ನಮ್ಮ ಬೆಂಗಳೂರಿಗೆ ಐ.ಟಿ.- ಬಿ.ಟಿ., ಇಷ್ಟೆಲ್ಲಾ employment create ಮಾಡುವುದಕ್ಕೆ Sri S.M. Krishna has played a very important role. ಅದಕ್ಕೆ ನಾನು ಹೇಳುತ್ತಿದ್ದೇನೆ. ಮಾನ್ಯ ಕುಮಾರಸ್ವಾಮಿಯವರ ದೊಡ್ಡ ಯೋಜನೆ ಇತ್ತಲ್ಲ, ಬೆಂಗಳೂರಿಗೆ ರಿಂಗ್ ರೋಡ್ ತರಬೇಕು, ಗ್ರಾಮಗಳಲ್ಲಿ ರಾತ್ರಿ ವಾಸ್ತವ್ಯ ಮಾಡಬೇಕು, 5 ಸಿಟಿಗಳನ್ನು ಮಾಡಬೇಕು ಎನ್ನುವುದು, it is a great plan. ಪಾಪ.. ಏನೋ ಕೆಲವು ಒತ್ತಡಗಳ ಮೇಲೆ ಅವರು ರಾಜಕಾರಣ ಮಾತನಾಡುತ್ತಾರೆ, ಅದಕ್ಕೆ ನಾನು ಬೇಜಾರು ಮಾಡಿಕೊಳ್ಳುವುದಿಲ್ಲ. ಅವರು ಮಾಡಲಿ. ನಾವೇನಾದರೂ ತಪ್ಪು ಮಾಡಿದ್ದರೆ, definitely we will rectify it. There is nothing wrong in it. ಆದರೆ, employment ಎಲ್ಲಿಂದ ತರುತ್ತೀರಿ?

ಇವತ್ತು ಇಡೀ ವಿಶ್ವದ ಜನರು ಬೆಂಗಳೂರಿಗೆ ಬರುತ್ತಿದ್ದಾರೆ. ಎಲ್ಲರೂ ಬೆಂಗಳೂರಿಗೆ ಏಕೆ ಬರುತ್ತಿದ್ದಾರೆ? ಬೇರೆ ನಗರಗಳಿಗೆ ಏಕೆ ಹೋಗುತ್ತಿದ್ದಾರೆ? ಹಿಂದೆ, urban population was 32%, in the last 20 years it went upto 39%, now it has become 44%.

ಮಾನ್ಯ ಬಸವರಾಜ ಹೊರಟ್ಟಿಯವರೆ, ಮಾನ್ಯ ನಾರಾಯಣಸ್ವಾಮಿಯವರೆ, ಈ ಬೆಂಗಳೂರಿಗೆ ಅಸ್ಸಾಂ ರಾಜ್ಯದವರು, ಒಡಿಶಾ ರಾಜ್ಯದವರು ಹೀಗೆ ಎಲ್ಲರೂ ಬರುತ್ತಿದ್ದಾರೆ. ವಿಶ್ವದ ಬೇರೆ ಬೇರೆ ಕಡೆಗಳಿಂದ ವಿದೇಶೀಯರು ಬರುವುದು ಬೇರೆ. It is a talent pool. ಉದ್ಯೋಗವನ್ನು ಹುಡುಕಿಕೊಂಡು ಈಶಾನ್ಯ ರಾಜ್ಯಗಳಿಂದ ಸಾಕಷ್ಟು ಜನ ಬೆಂಗಳೂರಿಗೆ ಬರುತ್ತಾರೆ. ಯಾವ ಹೋಟೆಲ್‌ನಲ್ಲಿ ನೋಡಿದರೂ, ಯಾವ ಕಟಿಂಗ್ ಶಾಪ್‌ನಲ್ಲಿ ನೋಡಿದರೂ ಈಶಾನ್ಯ ರಾಜ್ಯಗಳವರೇ ಇದ್ದಾರೆ. ಕಂಬಿ ಕಟ್ಟುವವರು, ಕಾರ್ಪೆಂಟರ್‌ಗಳು ಎಲ್ಲಾ ಆ ಭಾಗದವರೇ ಇದ್ದಾರೆ.

Bengaluru is absorbing everyone. Bengaluru's population has become 1.5 Crore. ನಮ್ಮ ಸ್ಥಳೀಯ ಜನರು ಒಂದು ಮನೆಯಾಗಲೀ ಒಂದು ನಿವೇಶನವಾಗಲೀ ಕೊಳ್ಳುವುದಕ್ಕಾಗುತ್ತಿಲ್ಲ. ಅದನ್ನೇ ದಾವೋಸ್‌ನಲ್ಲಿ ಹೇಳಿದ್ದು. ಇವತ್ತು ಕೂಡ ಬೆಂಗಳೂರಿನಲ್ಲಿ ರೂ.80-90 ಕ್ಕೆ ಐ.ಟಿ. ಸ್ಪೇಸ್ ಬಾಡಿಗೆಗೆ ಸಿಗುತ್ತದೆ. ಅದೇ ಮುಂಬೈನಲ್ಲಿ ರೂ. 350 ಕೊಡಬೇಕು. ಅದಕ್ಕಾಗಿ, ಏರ್‌ಪೋರ್ಟ್ ಪಕ್ಕದಲ್ಲಿ 80,000 ಎಕರೆಗಳನ್ನು acquire ಮಾಡಿದ್ದೇವೆ. ಅಲ್ಲಿ ಕೊಡುವುದು 12 ರಿಂದ 20%. ನಾವು ಬೇರೆ ರೈತರಿಗೆ 50% offer ಮಾಡಿದ್ದೇವೆ. ಮಾನ್ಯ ಎಂ.ಬಿ.ಪಾಟೀಲ್ ಅವರೂ 50% offer ಮಾಡಿದ್ದಾರೆ. ಬಿಡದಿಯಲ್ಲಿ ನಾವು 50% offer ಮಾಡಿದ್ದೇವೆ. ನಮ್ಮ ರೈತರು ಬುದ್ಧಿವಂತರಾಗಿದ್ದರೆ ನಾವು ಕೊಡುವ 50% ಜಮೀನನ್ನು ಉಳಿಸಿಕೊಂಡರೆ ಸಾಕು. ಇವತ್ತು ಡಾ: ಶಿವರಾಮ ಕಾರಂತ ಬಡಾವಣೆಯಲ್ಲಿ 50% ಕೊಡುತ್ತಿರುವುದರಿಂದ, ಅದಕ್ಕೆ ಚದರ ಅಡಿಗೆ ರೂ.6,000/-ಗಳನ್ನು declare ಮಾಡಿದ್ದು, ಇನ್ನೊಂದು ವರ್ಷದಲ್ಲಿ ರೂ.10,000/- ಆಗುತ್ತದೆ. ಆ ರೈತರಿಗೆ ರೂ.6 ಕೋಟಿ ಸಿಕ್ಕಿದಂತಾಗುತ್ತದೆ. ಮುಂದೆ ಆ ರೈತರೇನಾದರೂ ಉಳಿಸಿಕೊಂಡರೆ ಅವರಿಗೂ ರೂ.5 ಕೋಟಿ ಸಿಕ್ಕಂತಾಗುತ್ತದೆ. ಅದೇನೋ ರಾಜಕಾರಣ, we will discuss on it next time.

ಬೆಂಗಳೂರಿಗೆ ಹೊರಗಡೆಯಿಂದ ಬರುತ್ತಿರುವವರಿಗೆ ನೀರು ಎಲ್ಲಿಂದ ತಂದುಕೊಡುತ್ತೀರಿ, ರಸ್ತೆ ಹೇಗೆ ಮಾಡುತ್ತೀರಿ, ಉದ್ಯೋಗ ಎಲ್ಲಿ ಕೊಡುತ್ತೀರಿ, how to do it? ಹೇಳಿ. ಪಿ.ಜಿ.ಆರ್. ಸಿಂಧ್ಯಾ ಅವರ ಕಾಲದಲ್ಲಿ ಹಾರೋಹಳ್ಳಿ ಇಂಡಸ್ಟ್ರಿಯಲ್ ಎಸ್ಟೇಟ್ ಆಯಿತು. ದೇವೇಗೌಡರ ಕಾಲದಲ್ಲಿ ಬಿಡದಿ ಇಂಡಸ್ಟ್ರಿಯಲ್ ಎಸ್ಟೇಟ್ ಆಯಿತು. ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಆಯಿತು. ವೀರಪ್ಪ ಮೊಯಿಲಿ, ಎಸ್. ಎಂ. ಕೃಷ್ಣ ಅವರ ಕಾಲದಲ್ಲಿ ಎಲೆಕ್ಟ್ರಾನಿಕ್ ಸಿಟಿ ಆಯಿತು. ಕೃಷ್ಣ ಅವರ ಕಾಲದಲ್ಲಿ ಐ.ಟಿ.ಪಿ.ಎಲ್. ಆಯಿತು. ಇವೆಲ್ಲಾ ಆಗಲಿಲ್ಲವೆಂದರೆ ಎಲ್ಲಿ industries create ಮಾಡಲಿಕ್ಕೆ ಸಾಧ್ಯ? ಹೊರಗಡೆಯಿಂದ ಬರುವವರನ್ನು ತಳ್ಳುವುದಕ್ಕೆ ಸಾಧ್ಯವೇ? ಇವರಿಗೆ ಜಾಗ create ಮಾಡಬೇಕು, planning ಆಗಬೇಕು, outer ring road ಬೇಕು. ಇವತ್ತು ಅನೇಕ ಇಂಡಸ್ಟ್ರಿಯಲ್ ಎಸ್ಟೇಟ್‌ಗಳಿವೆ. ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಅನ್ನು ವೀರೇಂದ್ರ ಪಾಟೀಲರು ಮಾಡಿದ್ದು. ವೀರೇಂದ್ರ ಪಾಟೀಲರಿಗೆ ಬುದ್ಧಿ ಇರಲಿಲ್ಲವೆ? ಎಲೆಕ್ಟ್ರಾನಿಕ್ ಸಿಟಿಯನ್ನು ದೇವೇಗೌಡರು-ಜೆ.ಹೆಚ್.ಪಟೇಲರು ತೀರ್ಮಾನ ಮಾಡಿದ್ದರು. ಅದು ಹಾಗೆಯೇ ಮುಂದುವರೆಯಿತು. ದಾಬಸ್‌ಪೇಟೆಯಲ್ಲಿ ಹಾರ್ಡ್‌ವೇರ್ ಪಾರ್ಕ್, ಏರೋಸ್ಪೇಸ್ ಎಲ್ಲಾ ಕುಮಾರಸ್ವಾಮಿಯವರ ಕಾಲದಲ್ಲಿ ಆಗಿದ್ದು. ಯಡಿಯೂರಪ್ಪನವರ ಕಾಲದಲ್ಲಿ ಹೈಟೆಕ್ ಡಿಫೆನ್ಸ್, ದಾಬಸ್‌ಪೇಟೆ, ಹಾರೋಹಳ್ಳಿಯಲ್ಲಿ ಎಲ್ಲವೂ ಯಡಿಯೂರಪ್ಪನವರ ಕಾಲದಲ್ಲಿ ಆಯಿತು. ಅವರೆಲ್ಲಾ ಮುಖ್ಯಮಂತ್ರಿಗಳಾಗಿ ಮಾಡಿದ್ದಕ್ಕೆ ಆಯಿತು. ಈಗ ಒಂದಷ್ಟು ಹೊರಗಡೆಗೆ ಶಿಫ್ಟ್ ಆಗುತ್ತಿವೆ. ಜನ ಎಲ್ಲಿರಬೇಕು?

ಇವತ್ತು ಏನಾಗಿದೆಯೆಂದರೆ ಸಂಬಳಗಳು ಸ್ವಲ್ಪ ಜಾಸ್ತಿಯಾಗುತ್ತಿವೆ. But, employment ಇಲ್ಲ. ಬೆಲೆಗಳೆಲ್ಲಾ ಗಗನಕ್ಕೆ ಹೋಗುತ್ತಿವೆ. ಆದಾಯ ಎಲ್ಲಾ ಪಾತಾಳಕ್ಕೆ ಹೋಗುತ್ತಿವೆ. ಯುದ್ಧ ಆದ ನಂತರ ಪೆಟ್ರೋಲ್ ಬೆಲೆ ಏರಿಕೆಯಾಗಿದೆ. ಮಾನ್ಯ ಪ್ರಧಾನಿಗಳು ಕೂಡ ಮನವಿ ಮಾಡಿಕೊಂಡರು. ಕರೆಂಟ್ ಕಡಿಮೆ ಮಾಡಿ, ಚಿನ್ನ

ತೆಗೆದುಕೊಳ್ಳಬೇಡಿ ಎಂದು ಹೇಳಿದರು. ಅದನ್ನು ನಾನು ತಪ್ಪೆಂದು ಹೇಳುವುದಿಲ್ಲ. ದೇಶದ ಎಕಾನಮಿ ದೃಷ್ಟಿಯಿಂದ ಹೇಳಿದ್ದಾರೆ. ಒಂದು ಕಾಲದಲ್ಲಿ ಚಿನ್ನವನ್ನು ಅಡ ಇಡುವಂಥ ಪರಿಸ್ಥಿತಿ ಬಂದುಬಿಟ್ಟಿತ್ತು.

ಹಾಗಾಗಿ, ಇವತ್ತು, World is looking at Bengaluru, World is looking at Karnataka. Largest State after Rajasthan is Karnataka. ನೀರಾವರಿ ಭೂಮಿಯನ್ನು ಉಳಿಸಬೇಕು. ಬೆಂಗಳೂರು ಸುತ್ತಮುತ್ತಲಿರುವ ಒಂದೈದು ಕೆರೆಗಳನ್ನು ಅಂದರೆ ಹೊಸಕೋಟೆ ಕೆರೆ, ತಿಪ್ಪಗೊಂಡನಹಳ್ಳಿ ಕೆರೆ, ಹೆಸರಘಟ್ಟ ಕೆರೆ, ದಕ್ಷಿಣದಲ್ಲಿ ಒಂದೈದಾರು ಕೆರೆಗಳನ್ನು deepen ಮಾಡಿ ನೀರನ್ನು ಸಂಗ್ರಹಿಸಬೇಕು. ಅಂತರ್ಜಲ ಹೆಚ್ಚಿಸಲೇಬೇಕು. ಬೆಂಗಳೂರಿಗೆ ಕುಡಿಯುವ ನೀರು ಬೇಕೇಬೇಕು. ಮೇಕೆದಾಟು ಯೋಜನೆಯಿಂದ ನಮಗೇನೂ ಪ್ರಯೋಜನವಿಲ್ಲ. ಅದರಿಂದ ಪ್ರಯೋಜನವಾಗುವುದು ತಮಿಳುನಾಡಿಗೆ. ನಮ್ಮ ರೈತರನ್ನು ನಾವು ಕಂಟ್ರೋಲ್ ಮಾಡಬಹುದು. ಅವರಿಗೆ 177 ಟಿ.ಎಂ.ಸಿ. ಕೊಡಲೇಬೇಕು. We don't have any option. ಇಲ್ಲವಾದರೆ ಬೀಗವನ್ನು ಸೆಂಟ್ರಲ್ ಗವರ್ನಮೆಂಟ್ ಅವರು ಇಟ್ಟುಕೊಳ್ಳುತ್ತಾರೆ. ಅಥಾರಿಟಿಯವರು ಇಟ್ಟುಕೊಳ್ಳುತ್ತಾರೆ. I am so happy. ಹಿಂದೆ ಅನಂತಕುಮಾರ್ ಅವರ ಕಾಲದಲ್ಲಿ ಬೇಕಾದಷ್ಟು ಸಹಾಯವನ್ನು ಮಾಡಿದ್ದಾರೆ. ಈಗ ಮಾನ್ಯ ಪ್ರಹ್ಲಾದ್ ಜೋಷಿಯವರು ಮತ್ತು ಎಂ.ಪಿ.,ಯವರೆಲ್ಲಾ ಹೋಗಿ ಮೀಟ್ ಮಾಡಿ, ಅವರೂ ಕೂಡ ನಮಗೆ ಸಹಾಯ ಮಾಡಿದ್ದಾರೆ.

ಎಲ್ಲಾ ಎಂ.ಪಿ.ಗಳ ಸಭೆ ಕರೆದಿದ್ದೆನು. ಎಲ್ಲರೂ ಒಟ್ಟಾಗಿ ಬಂದಿದ್ದರು, ಸರ್ವ ಪಕ್ಷ ಸಭೆಗೆ ತಾವು ಬಂದಿದ್ದಿರಿ. ನೀವೆಲ್ಲರೂ ಸಹಕಾರ ಕೊಡುವಿರೆಂದರೆ, let us all work together. I am not permanent here. ಜನ ಕೆಲವರು ಲೈಕ್ ಮಾಡಬಹುದು. ಈಗ ಕೆಲಸ ಮಾಡಿದವರೆಲ್ಲಾ ಅಧಿಕಾರಕ್ಕೆ ಬಂದುಬಿಡುತ್ತಾರೆಯೇ? ಎಷ್ಟು ಕೆಲಸ ಮಾಡಿದವರೇ ಎಷ್ಟೆಷ್ಟೋ ಸೋತುಹೋಗಿದ್ದಾರೆ. ಡೆಮಾಕ್ರಸಿಯಲ್ಲಿ ತೀರ್ಮಾನ ಎಂತೆಂಥದ್ದೋ. ಈಗ ಇಂದಿರಾ ಗಾಂಧಿ ಸೋತುಹೋಗಲಿಲ್ಲವೆ? ದೇವೇಗೌಡರು ಸೋತುಹೋಗಲಿಲ್ಲವೇ? ಎಲ್ಲರೂ ಸೋತಿರುವವರೇ. ಈಗ ಕುಮಾರಸ್ವಾಮಿಯವರು ಬಂದರು, ನನ್ನ ವಿರುದ್ಧ ಸೋತುಹೋದರು. ನನ್ನ ತಮ್ಮ ಅವರ ಹೆಂಡತಿಯ ಮೇಲೆ ಗೆದ್ದನು. ಅವರ ಭಾವಮೈದುನನ ಮೇಲೆ ನನ್ನ ತಮ್ಮ ಸೋತನು. ಹೌದಲ್ಲವೆ? ಹಾಗೆ ರಾಜಕೀಯದಲ್ಲಿ ಯಾರು ಗೆಲ್ಲುತ್ತಾರೆ, ಯಾರು ಸೋಲುತ್ತಾರೆನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. Decision ಬೇರೆ. ಈಗ ಸಿ.ಪಿ.ಯೋಗೀಶ್ವರ್ ಅವರು ನಿನ್ನೆ ನಿಮ್ಮ ಜೊತೆಯಲ್ಲಿ ಕುಳಿತಿದ್ದರು, ಬೆಳಗಿನ ಜಾವ ನನ್ನ ಜೊತೆಗೆ ಬಂದನು. This is public life.

ರಾಜಕೀಯದ ಚದುರಂಗದಾಟದಲ್ಲಿ ಏನೇನೋ ನಡೆಯುತ್ತವೆ. So, nothing is permanent. But, human relationship should be there. I am here as a Chief Minister. I am not Chief Minister for the Members of this House. I am the Chief Minister for the entire State. ನಾನು ಒಂದು ಜಾತಿಯಲ್ಲಿ ಹುಟ್ಟಿರಬಹುದು. ಹುಟ್ಟುವಾಗ ಯಾರೂ ಅರ್ಜಿ ಹಾಕಿಕೊಂಡು

ಹುಟ್ಟುವುದಿಲ್ಲ. ನನ್ನ ಧರ್ಮವೆಲ್ಲಾ ನನ್ನ ಖಾಸಗಿ ಬದುಕಿಗೆ ಸಂಬಂಧಪಟ್ಟಿದೆ. ನನ್ನ ಧರ್ಮ, ನನ್ನ ಜಾತಿ ಮತ್ತೊಂದೆಲ್ಲಾ ನನ್ನ ಖಾಸಗಿ ಬದುಕು. ಆದರೆ ಇಲ್ಲಿ ಈ ಸಂವಿಧಾನವನ್ನು ಬಿಡುವುದಕ್ಕಾಗುವುದಿಲ್ಲ. "ಇತಿಹಾಸವನ್ನು ಮರೆತವನು ಇತಿಹಾಸವನ್ನು ಸೃಷ್ಟಿಸುವುದಕ್ಕೆ ಸಾಧ್ಯವಾಗುವುದಿಲ್ಲ" ಎಂದು ಬಾಬಾಸಾಹೇಬ್ ಅಂಬೇಡ್ಕರ್ ಅವರು ಹೇಳಿದ್ದು, ಅವರು ನಮಗೆ ಕೊಟ್ಟಿರುವ ಸಂವಿಧಾನವನ್ನು ನಾವು ಇಲ್ಲಿ ಓದುತ್ತೇವೆ. ನೆಹರು ಅವರು ಹೆಚ್.ಎ.ಎಲ್., ಹೆಚ್.ಎಂ.ಟಿ., ಐ.ಟಿ.ಐ. ಮುಂತಾದ ಎಲ್ಲಾ ಕಾರ್ಖಾನೆಗಳನ್ನು ಪ್ರಾರಂಭ ಮಾಡಿದರು.

(ಮುಂದು)

(700) 14-08-2026 (2.40) ಕೆಜಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಕೆ.ಶಿವಕುಮಾರ್ (ಮುಂದು):**

ಅವರು ಏಕೆ ಮಾಡಿದರು? ಇಲ್ಲಿ knowledge ಇದೆ. ಮಹಾರಾಜರು ಮಾಡಿದರು. Indian Institute of Science (I.I.Sc.) ಇದೆ ಎಂದು ಮಾಡಿದರು. ಈಗ lawyers' ಗಳು ಇದ್ದಾರೆ. ದೆಹಲಿಯಲ್ಲಿ ಅಷ್ಟು ದೊಡ್ಡ ಲಾಯರ್‌ಗಳು ಇದ್ದಾರೆ ಅಲ್ಲವೇ ಅಲ್ಲಿಯೇ National Law School of India University ಮಾಡಬಹುದಿತ್ತು ಅಲ್ಲವೇ? why National Law School is being set up in Bengaluru? ಬೆಂಗಳೂರಿನಲ್ಲಿ ಏಕೆ National Law School of India ಮಾಡಿದರು? ನಮ್ಮ ಮಕ್ಕಳ ತಲೆ sharp ಇದೆ. ನಮ್ಮ ಜನ ವಿದ್ಯಾವಂತರು ಇದ್ದಾರೆ. Bengaluru is a human capital and a knowledge center. ನೀವು ಯಾವುದೇ ಪಾಲಿಸಿಯನ್ನು ತೆಗೆದುಕೊಳ್ಳಿ. ನೀವು I.T.(Information Technology)/B.T.(Biotechnology) policy ತೆಗೆದುಕೊಳ್ಳಿ. Start-up policy ತೆಗೆದುಕೊಳ್ಳಿ. ಒಂದು ನೂರು ಪಾಲಿಸಿ ಇದೆ. ನಾವೇ ಎಲ್ಲವನ್ನು ಮಾಡಿದ್ದು. ನಮ್ಮಿಂದ ತಾನೇ ಮಾಡಿದ್ದು ಶ್ರೀ ಪ್ರಿಯಾಂಕ್ ಖರ್ಗೆರವರೇ, ಶ್ರೀ ಎಂ.ಬಿ.ಪಾಟೀಲ್‌ರವರೇ., We are the foundation for all of these policies. ಆ ರೀತಿ technology ನಮ್ಮಲ್ಲಿ ಬೆಳೆದಿದೆ. ಮೊನ್ನೆ ದಿವಸ quantum technology ಯದ್ದು ಸಹ ನಾವೆಲ್ಲರೂ ಮಾಡಿದೇವು. ಇವತ್ತು ಅನೇಕ ವಿಚಾರಗಳು ಇವೆ. ಅವುಗಳ ಬಗ್ಗೆ ಬೇರೆ ಬೇರೆ ಸಂದರ್ಭದಲ್ಲಿ ಮಾತನಾಡುತ್ತೇನೆ. ಆದರೆ, ಇವತ್ತು, as the Chief Minister, I am here. ಈ ಸ್ಥಾನದಲ್ಲಿ ಕುಳಿತ್ತಿದ್ದೇನೆ. ಎಲ್ಲಾ ವರ್ಗದ ಜನರು, ಅದರಲ್ಲೂ ರೈತರು, ಯುವಕರು, ನಾವು ಬೆಂಗಳೂರಿಗೆ ವಲಸೆ ಬರುವಂತಹ ಜನರನ್ನು ತಪ್ಪಿಸಬೇಕು. ನಮ್ಮ ಜನ ಹಳ್ಳಿಯಿಂದ ಬೇರೆ ಕಡೆಗೆ ಊಟಕ್ಕೆ ಹೋಗುವುದನ್ನು ತಪ್ಪಿಸಬೇಕು.

ಮಾನ್ಯ ಸಭಾಪತಿಯವರೇ, ಅದಕ್ಕೆ, I have brought one scheme. ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರಿಗೆ ಹೇಳುತ್ತೇನೆ. ಇಲ್ಲಿ ಕೆಲವರೆಲ್ಲಾ educationists' ಇದ್ದೀರಿ. ನಮ್ಮಲ್ಲಿ 8,000 ಕೋಟಿ ರೂಪಾಯಿಗಳ C.S.R. (Corporate Social Responsibility) funds ಇದೆ. ಅದನ್ನು ಎಲ್ಲೋ ಎಲ್ಲೋ misuse ಮಾಡುತ್ತಿದ್ದಾರೆ. ಅದನ್ನು ಯಾರ ಯಾರಿಗೋ ಕೊಡುತ್ತಿದ್ದಾರೆ. 50% ಕೊಟ್ಟು cash ನ್ನು ವಾಪಸ್ಸು ತೆಗೆದುಕೊಳ್ಳುತ್ತಿದ್ದಾರೆ. ಅದಕ್ಕೆ ಒಂದು ಹೊಸ ಪಾಲಿಸಿಯನ್ನು ತೆಗೆದುಕೊಂಡು ಬಂದಿದ್ದೇನೆ. ನೀವೆಲ್ಲಾ ನಮ್ಮ ಬರಿ Panchayat Level, not the Town Level, ಈಗ ಕನಕಪುರ ಟೌನ್‌ಗೆ ಬೇಡ. ಇಲ್ಲವೆಂದರೆ, ದೇವನಹಳ್ಳಿ ಟೌನ್‌ಗೆ ಬೇಡ. ಇಲ್ಲವೆಂದರೆ, ಹುಬ್ಬಳ್ಳಿಗೆ ಬೇಡ. ಬೆಳಗಾವಿಗೆ ಬೇಡ. ಬರೀ Panchayat Headquarters ನಲ್ಲಿ ಮೂರು –ಮೂರು ಶಾಲೆಗಳನ್ನು ಸೇರಿಸಿ ನೀವು 10 ರಿಂದ 15 ಕೋಟಿ ರೂಪಾಯಿಗಳನ್ನು investment ಮಾಡಿ ನೀವೇ ಬಂಡವಾಳ ಹಾಕಿಕೊಂಡು ನಿಮ್ಮ ಹೆಸರೆ ಇಟ್ಟುಕೊಂಡು ನೀವು ಕಟ್ಟಬೇಕೆಂದು ಅವರಿಗೆ ಹೇಳುತ್ತೇನೆ. ನಮಗೆ ದುಡ್ಡು ಬೇಡ. We do not want the money. ನಾವು ಜಾಗ ಕೊಡುತ್ತೇವೆ. 3 ಎಕರೆ, 5 ಎಕರೆ ಜಾಗ ಕೊಡುತ್ತೇವೆ. ಒಂದು ಪ್ಲಾನ್ ಕೊಡುತ್ತೇವೆ. ನೀವು ಕಟ್ಟಿ. ನಾವು ಬೇರೆ ಶಾಲೆಗಳಿಗೆ ಎಲ್ಲಾ ಸಹಾಯ ಮಾಡಿದ್ದೇವೆ. ಕೆಲವರು ಲಕ್ಷ charge ಮಾಡುತ್ತಿದ್ದರು. ಒಂದೂವರೆ ಲಕ್ಷ ರೂಪಾಯಿ charge ಮಾಡುತ್ತಿದ್ದರು. ಎರಡು ಲಕ್ಷ charge ಮಾಡುತ್ತಿದ್ದರು. ಅಂತಹ ಶಾಲೆಗಳು ಇವತ್ತು ಬೇಕಾದಷ್ಟು ಇವೆ. ಒಂದೊಂದು ಶಾಲೆಯನ್ನು ಒಬ್ಬರು adopt ಮಾಡಿ ಎಂದು ನಾವು ಅವರಿಗೆ ಮನವಿ ಮಾಡಿದ್ದೇವೆ. ಇವತ್ತಿನ ದಿವಸ 50.000 ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಆದರೆ, ಹಳ್ಳಿಯಲ್ಲಿರುವ ಶಿಕ್ಷಕರಿಗೆ ಕೇವಲ 15,000 ಮಾತ್ರ ಕೊಡುತ್ತಿದ್ದೇವೆ. ಇವತ್ತು ಆ ಮಕ್ಕಳಿಗೆ ಏಕೆಂದರೆ, until we stop children... ಮಕ್ಕಳು ಬರುವುದು ಏತಕ್ಕೆ? ನಿಮ್ಮ ಚಾಲಕನ ಮಗನಿಗೂ ಒಳ್ಳೆಯ ಶಿಕ್ಷಣ ಬೇಕು, ಒಂದು ಒಳ್ಳೆಯ ಉದ್ಯೋಗ ಬೇಕೆಂಬ ಆಸೆ ಇದೆ. ನಾವು ಇವತ್ತು ಮೊದಲು ಅದನ್ನು stop ಮಾಡಬೇಕು. ಅದಕ್ಕೆ ನಾನು ಇವತ್ತು ಹೊಸ C.S.R. policy ತಂದು ಈಗಾಗಲೇ ನನ್ನ ಕ್ಷೇತ್ರದಲ್ಲಿ, ನನ್ನ ಜಿಲ್ಲೆಯಲ್ಲಿ 20 ಕಡೆ ಇಂತಹ ಶಾಲೆಗಳನ್ನು Toyota ಅವರು-ಇವರು ಹತ್ತಿರ ಎಲ್ಲಾ ಮನವಿ ಮಾಡಿಕೊಂಡು ಪ್ರಾರಂಭ ಮಾಡಿದ್ದೇನೆ. ಆ ಪಾಲಿಸಿ ಬಂದಿದ್ದರೆ, 2000 ಶಾಲೆಗಳು ನೀವು ಎಲ್ಲಿ ಹೇಳುತ್ತೀರೋ, ನಿಮಗೆ ಪಟ್ಟಿ ಕೊಡುತ್ತೇನೆ, ಅವರಿಗೆ ಪಟ್ಟಿ ಕೊಡುತ್ತೇನೆ. Let them select. Ultimately, ನಮ್ಮ ಮಕ್ಕಳಿಗೆ, ಮೊನ್ನೆ ದಿವಸ ಬಿಜಾಪುರ ಮಕ್ಕಳು ಇಲ್ಲವೆಂದರೆ, ಬಾಗಲಕೋಟೆ ಮಗು first rank score ಮಾಡಿತ್ತು. ಅವರು ಹಳ್ಳಿ ಮಕ್ಕಳು. Competition ಬಹಳ ಇದೆ. ಮೊದಲಾದರೂ ಟೀಚರ್ ಏನು ಹೇಳುತ್ತಾರೋ ಅದನ್ನು ಮಕ್ಕಳು ಕೇಳುತ್ತಿದ್ದರು. ಈಗ ಮಕ್ಕಳೇ

ಟೀಚರ್‌ಗೆ ಪಾಠ ಹೇಳಿಕೊಡುವಂತಹ ಕಾಲ ಬಂದಿದೆ. ಈಗಿನ ಮಕ್ಕಳು ಫೋನ್‌ನಲ್ಲಿಯೇ ಎಲ್ಲಾವನ್ನು ಪೂರ್ತಿ ಹೇಳುತ್ತಾರೆ. ನಾನು ಮೊನ್ನೆ ಒಂದು ದಿವಸ ಎಲ್ಲಿಗೋ ಒಂದು ಕಾರ್ಯಕ್ರಮಕ್ಕೆ ಹೋಗಬೇಕು, ಅಲ್ಲಿ ಒಂದು ಭಾಷಣ ಮಾಡಬೇಕು, ಅದಕ್ಕೆ ವಿಷಯ ಕೊಡು ಎಂದು ನಮ್ಮ ಪಿ.ಎ., ಗೆ ಮತ್ತು ಪ್ರೆಸ್‌ರವರಿಗೆ ಹೇಳುತ್ತಿದ್ದೆ. ಆಗ ನನ್ನ ಮಗಳು ಏನಪ್ಪಾ ನೀನು ಇನ್ನು ಎಲ್ಲಿದ್ದೀಯಾ ChatGPT ಗೆ ಹಾಕು ಎಂದು ಹೇಳಿದಳು. ಆಗ ChatGPT ಹಾಕಿದರೆ ನಮ್ಮ ಪಿ.ಎ., ಹೇಳುವುದಕ್ಕಿಂತ ಒಂದು ಒಳ್ಳೆಯ ಭಾಷಣ ChatGPT ನಿಂದ ಆಚೆಗೆ ಬರುತ್ತಿದೆ. ನಾವು ಇವತ್ತು ಆ ಒಂದು technology ಯಲ್ಲಿ ಇದ್ದೇವೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಅದು ತುಂಬಾ ಚೆನ್ನಾಗಿ ಬಂದಿದೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, That is the… ಈಗ ಏನು ಬೇಕಾದರೂ ಮಾಹಿತಿ ಸಿಗುತ್ತದೆ. ಈಗ ಶ್ರೀ ಟಿ.ಎ.ಶರವಣರವರು ಏನಾದರೂ ಚಿನ್ನದ ಬಗ್ಗೆ ಮಾಹಿತಿ ಕೇಳಿದರೆ, ಚಿನ್ನ ಯಾವತ್ತಿನ ದಿವಸ ಏನು ಬೆಲೆ ಇತ್ತು, ಏನಾಯಿತು ಎಂದು ಎಲ್ಲಾ ಮಾಹಿತಿ ಈಚೆಗೆ ಬಂದು ಬಿಡುತ್ತದೆ. Gold prices ಎಲ್ಲವೂ ಬಂದು ಬಿಡುತ್ತದೆ. ಈಗ ಹೊಸ ಹೊಸ ವಿಚಾರಗಳು ಎಲ್ಲಾ ಬಂದಿದೆ. ಇದು ಯಾವ ರೀತಿ, ಈ ಕಲ್ಲು ಏನಿದು ಎಂದೆಲ್ಲಾ ಹೇಳುವಂತಹ ಮಾಹಿತಿ ಬಂದಿದೆ. ಈಗ lab grown diamonds ಎಂದು ಬಂದಿದೆ. ಈ natural diamonds ಕ್ಕಿಂತ ಆ lab grown diamonds ಬಹಳ ಆಕರ್ಷಣೆಯವಾಗಿ ಕಾಣುತ್ತಿವೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, duplicate ಗೆ ಆಕರ್ಷಣೆ ಹೆಚ್ಚಿಗೆ ಇರುತ್ತದೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಅದಕ್ಕೆ ಏನು ಮಾಡುವುದಕ್ಕೆ ಆಗುವುದಿಲ್ಲ. Lab grown diamonds ಎಂದು ಬಂದಿದೆ. ಈ ರೀತಿ ಬೇಕಾದಷ್ಟು ವಿಚಾರಗಳು ಇವೆ. ತಾವು ಈ ಪೀಠದಲ್ಲಿ ಕುಳಿತ್ತಿದ್ದೀರಿ. ಅವರು ಏನು ಕೇಳಿದ್ದಾರೆ, ಅದು ನನಗೂ ಗೊತ್ತಿದೆ. ತಾವು ನ್ಯಾಯಬದ್ಧವಾಗಿ, you should hear the voice of Opposition Members. ಅವರು ನಮಗೆ ಹೇಳಿಕೊಟ್ಟು ನಮ್ಮನ್ನು ತಿದ್ದಿದರೆ, ನಾವು ಸ್ವಲ್ಪ ಎಚ್ಚರಿಕೆಯಿಂದ ಇರುತ್ತೇವೆ. ಅವರು ನಮ್ಮನ್ನು ತಿದ್ದಬೇಕು. ಅವರು criticize ಮಾಡಬೇಕು. ಅವರು ನಮ್ಮ ತಪ್ಪನ್ನು ಕಂಡುಹಿಡಿಯಬೇಕು, that is their duty and they have to do it. ನನಗೆ ಏನು ಬೇಜಾರು ಇಲ್ಲ. ನನಗೂ ಸಹ, ನಾನು ಏನೇ ತಪ್ಪು ಮಾಡಲಿ, ಏನು ಬೇಕಾದರೂ investigation ಮಾಡಲಿ ಸ್ವಾಮಿ, I am telling you. ಶೆಟ್ಟರ್‌ರವರೇ, ಏನು ಬೇಕಾದರೂ ಎಲ್ಲಾ scan ಮಾಡಿಬಿಡಲಿ. ನನ್ನ ಜೀವನದಲ್ಲಿ ಏನೇನು ಬೇಕೋ ಎಲ್ಲವನ್ನು ನೋಡಿದ್ದೇನೆ ಅಲ್ಲವೇ: but, I will not misuse this Chair. ಹಾಗಾಂತ, ಈ

ಹೃದಯ ಶ್ರೀಮಂತಿಕೆ ಇದೆ ಎಂದು ನನ್ನನ್ನು ಬೆಳಗ್ಗೆ – ಸಂಜೆ target ಮಾಡಿದರೆ? ನನ್ನ ಭಾವನೆ, ನನ್ನ ಹೃದಯ ಶ್ರೀಮಂತಿಕೆಯನ್ನು ಉಪಯೋಗಿಸಿಕೊಳ್ಳಿ. ಈಗ ತಾವೇ ನಿಮ್ಮ ಲೀಡರ್‌ರವರ ತಾಯಿಯವರ ಬಗ್ಗೆ ಹೋಗಳಿದ್ದೀರಿ. ನನಗೆ ಗೊತ್ತಿದೆ. ನಾನು ಮಂತ್ರಿಯಾಗಿ ಮಾಡಬೇಕಾದರೆ, See, we should be large-hearted, what is there in it ? It is not like the Prime Minister's wife ಅಲ್ಲ. Prime Minister's ತಾಯಿಯವರಿಗೆ ಗೌರವ ಸಿಗಲಿಲ್ಲ. Prime Minister is wife ಗೆ ಈ ರಾಜ್ಯದಲ್ಲಿ ಗೌರವ ಸಿಕ್ಕಿತ್ತು. But, I should show my magnanimity on it. ಒಬ್ಬ ತಾಯಿಯಾಗಿ.,

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಆ ವಿಚಾರದಲ್ಲಿ ಅವರಿಗೆ ತುಂಬಾ ಧನ್ಯವಾದಗಳನ್ನು ಹೇಳುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಶ್ರೀ ಟಿ.ಎ.ಶರವಣರವರೇ ನನಗೆ ಫೋನ್ ಮಾಡಿದ್ದರು. ಆಗ ನಮ್ಮ ಮಕ್ಕಳು ಎಲ್ಲರೂ ಅವರ ಫೋನ್‌ನಿಂದಲೇ ಮಾತನಾಡಿದರು. It is my duty, and she is a mother. ಏಕೆಂದರೆ, ಒಂದು ರಾಜಕಾರಣದ ಮನೆಯಲ್ಲಿ ಒಂದು ಹೆಣ್ಣು ಮಕ್ಕಳು ಯಾವ ರೀತಿ ನಡೆದುಕೊಳ್ಳಬೇಕು ಎನ್ನುವುದಕ್ಕೆ ಇವತ್ತು ಶ್ರೀಮತಿ ಚೆನ್ನಮ್ಮನವರು ಒಂದು ದೊಡ್ಡ ಸಾಕ್ಷಿಯಾಗಿದ್ದಾರೆ. ಅವರು ಒಂದು ಸಾಕ್ಷಿ ಗುಡ್ಡೆಯಾಗಿದ್ದಾರೆ. ಅವರು ಯಾವ ರಾಜಕೀಯಕ್ಕೂ interfere ಆಗದೆ ಎಲ್ಲರನ್ನು ಸಂಭಾವಿಸಿ ಅವರ ಮಕ್ಕಳಲ್ಲಿಯೂ ಸಹ ಒಳ್ಳೆ ಒಳ್ಳೆಯ ರಾಜಕಾರಣಿಗಳನ್ನು ಬೆಳೆಸಿದ್ದಾರೆ. We do not have any... ಏನು ಸುಮ್ಮನೆ ಬಂದು ನಾನು ಆಯಿತು ಕೊಡುವುದಕ್ಕೆ ಆಗುವುದಿಲ್ಲ, she is not eligible ಎಂದು ಹೇಳಿಬಿಡಬಹುದಾಗಿತ್ತು. But, that is not humanity. ನಾನು ಕಲಿತಿರುವುದೆನ್ನಲ್ಲಾ, ನಾನು 48 ವಯಸ್ಸಿಗೆ ದೊಡ್ಡ Graduate ಆಗಿದ್ದೇನೆ.

ಮಾನ್ಯ ಸಭಾಪತಿವರೇ, ಅವತ್ತಿನ ದಿವಸ Vice-Chancellor ನನ್ನನ್ನು stage ಗೆ ಕರೆದುಕೊಂಡು ಬಂದು Convocation Certificate ಕೊಡಬೇಕೆಂದು ಇದ್ದರು. ಆಗ ಶ್ರೀ ಡಿ.ಹೆಚ್. ಶಂಕರಮೂರ್ತಿಯವರು Education Minister ಆಗಿದ್ದರು. ಆಗ ಅವರು Vice-Chancellor ರವರಿಗೆ, No, no ಅವನನ್ನು ಕರೆಯಬೇಡ. ಅವನು ಕಾಂಗ್ರೆಸ್‌ನವನು ಕರೆಯಬೇಡ ಎಂದು ಹೇಳಿದರು. ಆಗ ಕೆಳಗಡೆ ಬಂದು ನನಗೆ Convocation Certificate ಅನ್ನು ಕೊಟ್ಟರು. At 48 years old, I became a graduate. ಇದು Convocation ಗೆ ಹೋದಾಗ ಮೈಸೂರಿನಲ್ಲಿ ನಡೆದಿದ್ದು. ಅಂದು ಪೇಪರ್‌ನಲ್ಲಿ stage ನ ಫೋಟೋ

ಬರಲಿಲ್ಲ, ನನ್ನ ಫೋಟೋ ಬಂತು. Ultimately ಏನಿದೆ, today I am the Chief Minister ಹಾಗೂ ನನ್ನ ಕೈಕೆಳಗಡೆ ನೂರಾರು University ಗಳು ಬರುತ್ತಿವೆ. It is the destiny.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಶ್ರೀ ಡಿ.ಹೆಚ್.ಶಂಕರಮೂರ್ತಿಯವರ ಮಗ ಇಲ್ಲಿಯೇ ಇದ್ದಾರೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, I know, he is my friend. ನಾನು ಮೊನ್ನೆ ದಿವಸ ಅವರನ್ನು ಕೇಳದೆ ಹೋಗಿ vote ಹಾಕಿದೆ. (ಗೊಂದಲ) ಅವರು ನನ್ನನ್ನು ಕೇಳಿರಲಿಲ್ಲ. ಹಾಗೆಯೇ ಹೋಗಿ vote ಹಾಕಿದೆ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಈ ಪೀಠದಿಂದ ತ್ಯಾಗ ಮಾಡಿದ್ದಾರೆ. ಅವರಿಗೆ ನೋವು ಇರುತ್ತದೆ. It is life. ಗೊತ್ತಿದ್ದೋ ಅಥವಾ ಗೊತ್ತಿಲ್ಲದೆಯೋ ತಪ್ಪುಗಳನ್ನು ಅವರೂ ಮಾಡಿಕೊಳ್ಳುತ್ತಾರೆ, ನಾವೂ ಮಾಡಿಕೊಳ್ಳುತ್ತೇವೆ. ಅವರು ಅನೇಕ ಸರ್ಕಾರಗಳನ್ನು ನೋಡಿದ್ದಾರೆ. ಅವರು ಸುಮಾರು ತಲೆಮಾರುಗಳನ್ನು ನೋಡಿದ್ದಾರೆ. ಅವರು ಶಿಕ್ಷಣ ಕ್ಷೇತ್ರದಿಂದ ಬಂದಿದ್ದಾರೆ. ಈ ಜವಾಬ್ದಾರಿಯನ್ನು ನಾನು ಈ ರಾಜ್ಯದ ಮುಖ್ಯಮಂತ್ರಿಯಾಗಿ ಹೇಳುತ್ತಿದ್ದೇನೆ. ನಾನು ಒಂದು ಪಕ್ಷದ ನಾಯಕನಾಗಿ ಹೇಳುತ್ತಿಲ್ಲ. ಅವರು ಆ ಸ್ಥಾನಕ್ಕೆ ಎಷ್ಟು ಗೌರವ ಕೊಡಬೇಕೋ ಅಷ್ಟು ಬಹಳ ಗೌರವದಿಂದ ನಡೆದುಕೊಂಡಿದ್ದಾರೆ. ಅವರ ಅನುಭವದಿಂದ you have created a history in Indian Politics. ಇಷ್ಟು ವರ್ಷಗಳ ಕಾಲ ಒಂದು ಈ ದೊಡ್ಡ ಸದನದಲ್ಲಿ 8 ಬಾರಿ ಗೆದ್ದು, for about 48 years, you have been the Member of this Council and still you create the record. Your age is there, your health is there, your vision is there and your direction is there. ಅದು ಈ ರಾಜ್ಯಕ್ಕೆ ಒಳ್ಳೆಯದು ಆಗಲಿ. ಅವರು ಶಿಕ್ಷಣ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಎಲ್ಲರೂ ಈ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವರಿಗೆ ಇನ್ನು ದೊಡ್ಡ ಸ್ಥಾನ ದೊರೆಯುವಂತಹ ಶಕ್ತಿ ಆ ಭಗವಂತ ಆಶೀರ್ವಾದ ಮಾಡಲಿ ಎಂದು ಹಾಗೂ ಅವರಿಗೆ ಆರೋಗ್ಯ ಸಿಗಲಿ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ದೇವರು ವರವನ್ನು ಕೊಡುತ್ತಾನೆ. ಅದೇರೀತಿ ಶಾಪವನ್ನು ಕೊಡುತ್ತಾನೆ. ದೇವರು ವರವನ್ನು ಕೊಡುವುದಿಲ್ಲ. ಅದೇರೀತಿ ಶಾಪವನ್ನು ಕೊಡುವುದಿಲ್ಲ. ದೇವರು ಅವಕಾಶವನ್ನು ಮಾತ್ರ ಕೊಡುತ್ತಾನೆಂದು ಹೇಳಿದ್ದೇನೆ. ಅವರಿಗೆ ಅವಕಾಶಗಳು ಖಂಡಿತ ಸಿಕ್ಕೆ ಸಿಗುತ್ತವೆ. ನಾವು ರಾಜ್ಯದ ಅನೇಕ

ಸಮಸ್ಯೆಗಳನ್ನು ಬಗೆಹರಿಸೋಣ. Let us all work together as a unit. ಈ ರಾಜ್ಯದಲ್ಲಿ 25 ವರ್ಷ ಮುಂದಕ್ಕೆ ನೀರಾವರಿಯನ್ನು ಯಾವ ರೀತಿ ತರಬೇಕು, ಇದಕ್ಕೆ ಹಣವನ್ನು ಯಾವ ರೀತಿ ತರಬೇಕು. ಯಾವುದು ಸೋರಿಕೆ ಮಾಡಬೇಕು, ಪರಿಶುದ್ಧವಾದಂತಹ ಆಡಳಿತವನ್ನು ಯಾವ ರೀತಿ ಮಾಡಬೇಕು, corruption ಅನ್ನು ಯಾವ ರೀತಿ ಕಡಿಮೆ ಮಾಡಬೇಕೆಂದು ಹೇಳಿ. Yes, I am ready to cooperate with you. ದೇವರು ನನಗೆ ಯಾವ ದುಡ್ಡಿನ ಅವಶ್ಯಕತೆ ಇಲ್ಲ. ನಮ್ಮ ತಂದೆ-ತಾಯಿಯವರು ಸಂಪಾದನೆ ಮಾಡಿರುವುದು, ನಾನು ಸಂಪಾದನೆ ಮಾಡಿರುವುದೇ 2-3 generation ಗೆ ಆಗುತ್ತದೆ. ನನಗೆ ಏನು ಅವಶ್ಯಕತೆ ಇಲ್ಲ. I want to create a history ಎಂದು ಹೇಳಿದ್ದೇನೆ ಅಲ್ಲವೇ; ಈ ರಾಜ್ಯಕ್ಕೆ ಏನಾದರೊಂದು ಕೊಡುಗೆಯನ್ನು ಕೊಡಬೇಕು. ದೇವರು ನನಗೆ ಎಷ್ಟು ದಿವಸ ಅವಕಾಶ ಕೊಡುತ್ತಾನೆಯೋ, ನಿಮ್ಮೆಲ್ಲರ ಸಹಕಾರದಿಂದ... I cannot do it alone. I want an army and everyone has to work. ಈ ಪ್ರಜಾಪ್ರಭುತ್ವದ ಕಣ ಉಳಿಯಬೇಕು. ಪ್ರಜಾಪ್ರಭುತ್ವ ಬಂದಿದೆ. ಈಗ ಪಂಚಾಯಿತಿಯಿಂದ Parliament ವರೆಗೂ ಲೀಡರ್ಸ್ ಬೇಕು ಅಲ್ಲವೇ? ಪಂಚಾಯಿತಿಯಲ್ಲಿಯೂ ನಾಯಕರು ಬೇಕು, ತಾಲ್ಲೂಕು ಪಂಚಾಯಿತಿಗೆ ಬೇಕು, ಜಿಲ್ಲಾ ಪಂಚಾಯಿತಿಗೆ ಬೇಕು. ಈಗ ಹೆಣ್ಣು ಮಕ್ಕಳಿಗೆ 30% ಕೊಡುತ್ತೇವೆಂದು ನಾವು ಎರಡೂ ಪಕ್ಷದವರು ಒಪ್ಪಿಕೊಂಡಿದ್ದೇವೆ. ಅದಕ್ಕೆ ಹೆಣ್ಣು ಮಕ್ಕಳನ್ನು ತಯಾರು ಮಾಡಬೇಕು. ಅವರಿಗೆ ಶಕ್ತಿ ಕೊಡಬೇಕು. Don't worry, ಹೆಣ್ಣು ಮಕ್ಕಳು ಬರುತ್ತಾರೆ. ಇಲ್ಲಿ ಒಂದು ಹೆಣ್ಣು ಮಗಳು ಇರಲಿಲ್ಲವೆಂದು ಅವರಿಗೆ ನೋವಿದೆ. Definitely, she will come. ಒಬ್ಬ ಹೆಣ್ಣು ಮಗಳು ಇಲ್ಲಿಗೆ ಬಂದೇ ಬರುತ್ತಾರೆ. ಇಡೀ ದೇಶ ನಮ್ಮನ್ನು ನೋಡುತ್ತಿದೆ. ಬೇಕಾದಷ್ಟು ಮಾಡುತ್ತಿದ್ದೇವೆ. ಇಲ್ಲಿ the Upper House, it should be a second thought. ಪ್ರತಿ ಸಂದರ್ಭದಲ್ಲಿಯೂ.,

ಮಾನ್ಯ ಸಭಾಪತಿಯವರೇ, ಇಲ್ಲಿ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಹಾಗೂ ಬೇರೆ ಯಾರೋ ಇನ್ನಿಬ್ಬರು ಇದ್ದರು. I am telling that, we should salute Sri M.C. Nanaiah. ಶ್ರೀ ಎಸ್.ಎಂ.ಕೃಷ್ಣರವರು ಈ ಛೇರ್‌ನಲ್ಲಿ ಕುಳಿತ್ತಿದ್ದರು. ಆಗ ಲಿಕ್ಕರ್ ವಿಷಯ ಚರ್ಚೆಗೆ ಬಂತು. Seconds and thirds supply ವಿಚಾರ ಬಂತು. ಅವರ friends, ಶ್ರೀ ದಾಸಪ್ಪನವರ friends ಅವರಿಗೆ ಬೇರೆಯವರೆಲ್ಲಾ friends, ಶ್ರೀ ಆದಿಕೇಶವಲು friends. ಶ್ರೀ ವಿಜಯ ಮಲ್ಯ ಅವರ ಬೀಗರಾಗಿದ್ದರು ಆ ಸಂದರ್ಭದಲ್ಲಿ ಇಲ್ಲಿ ಬರೀ ಶ್ರೀ ಎಂ.ಸಿ.ನಾಣಯ್ಯನವರ ಭಾಷಣ ಅವರ ಮನಸ್ಸನ್ನು change ಮಾಡಿ Karnataka State Beverages Corporation Limited (K.S.B.C.L.) ಮಾಡಬೇಕಾದಂತಹ ಒಂದು ವಿಚಾರ ಇಲ್ಲಿ ನಡೆಯಿತು.

(ಮುಂದು)

(701) 14.08.2026/2.50/ಎಂವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಕೆ. ಶಿವಕುಮಾರ್ (ಮುಂದು):**

ಶ್ರೀ ಬಿ. ಬಸವಲಿಂಗಪ್ಪನವರು ಮತ್ತು ಶ್ರೀ ಎಸ್. ಬಂಗಾರಪ್ಪನವರ ನಡುವೆ ಒಂದು ವಿಷಯದ ಕುರಿತು ಚರ್ಚೆ ನಡೆದಿತ್ತು. ಶ್ರೀ ಎ.ಕೆ. ಸುಬ್ಬಯ್ಯನವರು ಇಡೀ Council ಅನ್ನೇ ಗಡಗಡ ಅನ್ನಿಸುತ್ತಿದ್ದರು. ಶ್ರೀ ಎಂ.ಸಿ. ನಾಣಯ್ಯನವರು ಇದ್ದಾಗ ಮತ್ತು ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಯಾವುದೋ ಒಂದು ಸಂದರ್ಭದಲ್ಲಿ ನಾನು ಹೋಗಿದ್ದೆ. ಅದೇ ರೀತಿ ಎಸ್.ಎಂ. ಕೃಷ್ಣರವರು ಬಂದಾಗ ಹೋಗಿದ್ದೆ. ಆಗ ಶ್ರೀ ಎ.ಕೆ.ಸುಬ್ಬಯ್ಯನವರ ಕಾಟ ಜಾಸ್ತಿಯಾಗಿದೆ, ಏನಾದರೂ ಮಾಡಿ ಅಲ್ಲಿಗೆ ಕರೆದುಕೊಂಡು ಬಿಡಿ ಎಂದು ಜಡ್ಜ್ ರವರು ಕರೆದು ಹೇಳಿದರು. ಆ ಸಮಯದಲ್ಲಿ ಶ್ರೀ ಸಂತೋಷ್ ಹೆಗಡೆಯವರು Advocate General ಅಗಿದ್ದರು. ಆ ರೀತಿ ಇಲ್ಲಿ ದೊಡ್ಡ ದೊಡ್ಡ ನಾಯಕರುಗಳಿದ್ದರು. ಈಗ healthy debate ಕಡಿಮೆಯಾಗುತ್ತದೆ. ಆ ರೀತಿಯ healthy debate ಆಗಬೇಕು. ಅಲ್ಲಿ ಎಂತಂತಹವರು ಇದ್ದರು ಎಂದರೆ, ಶ್ರೀ ಕೆ.ಹೆಚ್. ರಂಗನಾಥ್, ಶ್ರೀ ನಂಜೇಗೌಡರು, ಶ್ರೀ ಜೀವರಾಜ ಆಳ್ವ ಅವರೆಲ್ಲರೂ ಸಹ ಇದ್ದು, how much they used to speak including Sri Vatal Nagaraj. He was a great orator. ಶ್ರೀ ಮಾಧುಸ್ವಾಮಿ ಮತ್ತು ಶ್ರೀ ಶ್ರೀರಾಮ ರೆಡ್ಡಿ ಈ ರೀತಿ ದೊಡ್ಡ ದೊಡ್ಡ ನಾಯಕರಲ್ಲಿ ವಿದ್ವತ್ ಇತ್ತು. ಶ್ರೀ ಕಾಗೋಡು ತಿಮ್ಮಪ್ಪ, ಶ್ರೀ ಕೋಣಂದೂರು ಲಿಂಗಪ್ಪ ಮತ್ತು ಶ್ರೀ ಎಸ್. ಬಂಗಾರಪ್ಪನವರನ್ನು ನೋಡಿದ್ದೇನೆ. ಅವರ ಕಡೆಯಿಂದ ಎಂತಹ ಮಾತು ಮತ್ತು ವಿಚಾರಗಳಿದ್ದವು? ಶ್ರೀ ರಾಮಕೃಷ್ಣ ಹೆಗಡೆ ಮತ್ತು ಶ್ರೀ ವೀರೇಂದ್ರ ಪಾಟೀಲ್ ರವರಿಗೂ telephone tapping ಗೆ ಸಂಬಂಧಪಟ್ಟಂತೆ ಚರ್ಚೆ ನಡೆಯುತ್ತಿತ್ತು. You should go to the history of those books. ಆ telephone tapping ಬಗ್ಗೆ ನಡೆದಂತಹ ಮಾತುಕತೆಗಳನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಇವತ್ತು ನನಗೆ ಮುಖ್ಯಮಂತ್ರಿ ಸ್ಥಾನ ಸಿಕ್ಕಿದೆ. I am the Chief Minister of the State for all sections of this Society. ಎಲ್ಲಾ ಜಾತಿ ಮತ್ತು ಧರ್ಮದ ಜನರು ನನಗೆ ಒಂದೇ. ಈಗ ಮಾನವೀಯತೆ ಬಗ್ಗೆ ಹೇಳುವುದಾದರೆ, ನಾನು ಕೇವಲ ಒಕ್ಕಲಿಗ ಎಂದುಕೊಳ್ಳುವುದಕ್ಕೆ ಆಗುವುದಿಲ್ಲ. I might have been born as a Vokkaliga. ನಾನು ಆ ಜಾತಿಯಲ್ಲಿ ಹುಟ್ಟಿರಬಹುದು, but ultimately, ಕೇವಲ ಒಬ್ಬರನ್ನೇ ಕಟ್ಟಿಕೊಂಡು ಕೆಲಸ ಮಾಡುವುದಕ್ಕೆ

ಆಗುವುದಿಲ್ಲ. It is not possible. I do not believe in it. I believe in humanity. ಅದಕ್ಕೆ ನಿಮ್ಮ ವಿಶ್ವಾಸ ಮತ್ತು ಸಹಕಾರ ಬೇಕು. ನಾನು ತಪ್ಪು ಮಾಡಿದರೆ ನನ್ನ ತಪ್ಪಿಗೆ ಟೀಕೆ ಮಾಡಿ. ಅವರಿಗೆ ಎಲ್ಲಾ ರೀತಿಯ ಹಕ್ಕಿದೆ. ಇವತ್ತು ನನ್ನನ್ನು ಬೈದಿದ್ದಾರೆಂದು ಮತ್ತು ಮಾಧ್ಯಮದವರು ನನ್ನ ವಿರುದ್ಧ ಬರೆಯುತ್ತಿದ್ದಾರೆಂದು ಖಂಡಿತ ನಾನು ಬೇಜಾರು ಮಾಡಿಕೊಳ್ಳುವುದಿಲ್ಲ. ಅವರು ಏನೋ ಒಳ್ಳೆಯದಕ್ಕೆ ಬರೆಯುತ್ತಾರೆ. ನಾನು ಅವರಿಗೆ ಸುಮ್ಮನೆ ಯಾರೋ ಹೇಳಿದ್ದನ್ನು ಕೇಳಿಕೊಂಡು ಹೋಗುವುದು ಬೇಡವೆಂದು ಹೇಳುತ್ತಿದ್ದೆ.

ಈಗ ಶ್ರೀ ಎಸ್.ಎಂ. ಕೃಷ್ಣ ರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದ ಬಗ್ಗೆ ಹೇಳುತ್ತೇನೆ. ಈಗ ಅಕ್ಬರ್ ಮತ್ತು ಬೀರ್‌ಬಲ್ ಬಗ್ಗೆ ಒಂದು ಸಣ್ಣ ವಿಚಾರವನ್ನು ಹೇಳುತ್ತೇನೆ. ಅಂದರೆ, ಅಕ್ಬರ್ ಮತ್ತು ಬೀರ್‌ಬಲ್ ಚರ್ಚೆಯಲ್ಲಿ ಅಕ್ಬರ್ ಸುಳ್ಳಿಗೂ ಮತ್ತು ಸತ್ಯಕ್ಕೂ ಎಷ್ಟು ಅಂತರವೆಂದು ಕೇಳುತ್ತಾನೆ. ಅದಕ್ಕೆ ಬೀರ್‌ಬಲ್ ನಾಲ್ಕೇ ನಾಲ್ಕು ಬೆರಳುಗಳ ಅಂತರ ಎಂದು ಹೇಳುತ್ತಾನೆ. ಆಗ ಅಕ್ಬರ್ ಅದು ಹೇಗೆ ಸ್ವಾಮಿ ಎಂದು ಕೇಳುತ್ತಾನೆ. ಅದಕ್ಕೆ ಬೀರ್‌ಬಿಲ್ ನೋಡಿ ಸ್ವಾಮಿ ಕಣ್ಣಿನಲ್ಲಿ ನೋಡುವುದೆಲ್ಲಾ ಸತ್ಯ. ಕಿವಿಯಲ್ಲಿ ಕೇಳುವುದು ಸುಳ್ಳು. ಇವೆರಡರ ಮಧ್ಯೆ ನಾಲ್ಕೇ ನಾಲ್ಕು ಬೆರಳು ಎಂದು ಹೇಳಿದ. ಅದಕ್ಕೆ ಕಿವಿಯಲ್ಲಿ ಕೇಳುವುದನ್ನು ಬಿಟ್ಟು, ಕೇವಲ ಕಣ್ಣನ್ನು ಮಾತ್ರ ನಂಬಬೇಕು. ಈಗ ಕೆಲವರಿಗೆ ಏನಾಗಿದೆ ಎಂದರೆ, ಶ್ರೀ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಮದ್ದೂರಿನಲ್ಲಿ ಒಂದು ಅಭಿನಂದನಾ ಸಮಾರಂಭವಿತ್ತು. ಅದಕ್ಕೆ ನಾನು ಮತ್ತು ಶ್ರೀಮತಿ ರಾಣಿ ಸತೀಶ್‌ರವರು ಹೋಗಿದ್ದೆವು. ಆಗ ಶ್ರೀ ಎಸ್.ಎಂ. ಕೃಷ್ಣರವರು ಎಲ್ಲದಕ್ಕೂ ನನ್ನನ್ನೇ ಕರೆಯುತ್ತಿದ್ದರು. ಆಗ ನನ್ನ colleagues, ನನ್ನ ವಿರುದ್ಧ ಚಾಡಿ ಹೇಳಿಬಿಡುತ್ತಿದ್ದರು. ಆಗ ನಾನು ಅಲ್ಲೊಂದು ಭಾಷಣ ಮಾಡಿದೆ. ಅಕ್ಬರ್ ಆಸ್ಥಾನಿಕರಿಗೆ ಕೇಳುತ್ತಾನೆ, ಆಯಿತಪ್ಪ ಬೀರ್‌ಬಲ್ ಸರಿಯಿಲ್ಲ, ನೀವುಗಳೆಲ್ಲಾ ನನ್ನ ಮಂತ್ರಿಮಂಡಲದಲ್ಲಿ ಇದ್ದೀರಿ ತಾವುಗಳು ಹೇಳಿ ಎಂದು ಹೇಳುತ್ತಾನೆ. ಅದಕ್ಕೆ ಅವರು 'ಏನು' ಎಂದು ಕೇಳುತ್ತಾರೆ. ಆಯಿತಪ್ಪ, ನಾನು ಒಂದು ಪ್ರಶ್ನೆ ಕೇಳುತ್ತೇನೆ. ಅದಕ್ಕೆ ತಾವು ಉತ್ತರ ನೀಡಿ ಎಂದು ಕೇಳುತ್ತಾನೆ. ಆಯಿತಪ್ಪ, ಬೀರ್‌ಬಲ್ ಸರಿಯಿಲ್ಲ ನನ್ನದೊಂದು ಪ್ರಶ್ನೆ ಇದೆ. ಈಗ ಅಂಗೈಯಲ್ಲಿ ಏಕೆ ಕೂದಲು ಇಲ್ಲವೆಂದು ಕೇಳುತ್ತಾನೆ. ಅದಕ್ಕೆ ಯಾರೂ ಉತ್ತರ ಹೇಳದಿದ್ದಾಗ, ಬೀರ್‌ಬಲ್‌ನು ತಾವು ಮಹಾದಾನಿಗಳು, ತಾವು ದಾನ ಕೊಟ್ಟು ಕೊಟ್ಟು ತಮ್ಮ ಅಂಗೈನ ಕೂದಲು ಉದುರಿ ಹೋಗಿದೆ ಎಂದು ಹೇಳುತ್ತಾರೆ. ಆಯಿತು, ನಾನು ದಾನ ಕೊಟ್ಟು ಕೊಟ್ಟು ಕೂದಲು ಉದುರಿ ಹೋಗಿದೆ, ಹಾಗಾದರೆ ನಿನ್ನ ಅಂಗೈಯಲ್ಲಿ ಏಕೆ ಕೂದಲು ಇಲ್ಲವೆಂದು ಕೇಳುತ್ತಾನೆ. ಆಗ ನಾನು ತಮ್ಮ ಕಡೆಯಿಂದ ದಾನ ತೆಗೆದುಕೊಂಡು ತೆಗೆದುಕೊಂಡು ಅಂಗೈಯಲ್ಲಿ ಕೂದಲು ಉದುರಿ ಹೋಗಿದೆ ಸ್ವಾಮಿ ಎಂದು ಹೇಳುತ್ತಾನೆ. ಆಯಿತು ನಾನು ದಾನ

ಕೊಟ್ಟಿದ್ದೇನೆ ನನ್ನ ಅಂಗೈಯಲ್ಲಿ ಕೂದಲು ಉದುರಿ ಹೋಗಿದೆ. ನೀನು ದಾನ ತೆಗೆದುಕೊಂಡಿದ್ದೀಯಾ ನಿನ್ನ ಅಂಗೈಯಲ್ಲಿ ಕೂದಲು ಉದುರಿ ಹೋಗಿದೆ. ಹಾಗಾದರೆ, ಸಭಿಕರಿಗೆಲ್ಲಾ ಏಕೆ ಅಂಗೈಯಲ್ಲಿ ಕೂದಲು ಇಲ್ಲವೆಂದು ಕೇಳುತ್ತಾನೆ. ಅದಕ್ಕೆ ಅವರು ನನಗೆ ಸಿಗಲಿಲ್ಲವಲ್ಲ, ನನಗೆ ಸಿಗಲಿಲ್ಲವಲ್ಲ ಎಂದು ತಮ್ಮ ಕೈಯನ್ನು ಒಸುಕಿಕೊಂಡು ಅವರ ಅಂಗೈಯಲ್ಲಿ ಕೂದಲು ಉದುರಿ ಹೋಗಿದೆ ಎಂದು ಹೇಳುತ್ತಾನೆ. ಆ ರೀತಿ ಕೆಲವರಿಗೆ ಅಧಿಕಾರ ನನಗೆ ಸಿಗಲಿಲ್ಲ, ನನಗೆ ಸಿಗಲಿಲ್ಲವೆಂದು ಒಸುಕಿಕೊಂಡು ಏನೇನೋ ಮಾತನಾಡುತ್ತಾರೆ. ಆದರೂ ನನಗೆ ಏನೂ ಬೇಜಾರು ಇಲ್ಲ. I request you…

ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ನಾನು ಹೇಳುವುದೇನೆಂದರೆ, ನಾವು ಮತ್ತು ತಾವು ಆತ್ಮೀಯರು. ತಾವು ನನ್ನ ಜೊತೆಯಲ್ಲಿ ಕೆಲಸ ಮಾಡಿದ್ದೀರಿ. ಈಗ ತಾವು ನಮ್ಮ ಮೇಲೆ ಪೀಠದಲ್ಲಿ ಕುಳಿತುಕೊಂಡಿದ್ದೀರಿ. ನಾವು ತಮ್ಮ ಸ್ಥಾನಕ್ಕೆ ಗೌರವ ಕೊಡುತ್ತೇವೆ. ತಾವು ವಿರೋಧ ಪಕ್ಷದವರಿಗೂ ನ್ಯಾಯ ಒದಗಿಸಿ, ಆಡಳಿತ ಪಕ್ಷದವರಿಗೂ ನ್ಯಾಯ ಒದಗಿಸಿ. ತಾವು ರಾಜ್ಯಕ್ಕೆ ಒಂದು ಒಳ್ಳೆಯ ಮಾರ್ಗದರ್ಶನ ನೀಡಿ. Let us all work together. I always say that, joining together is a beginning, discussing together is Progress and Working together is Success. ಜೊತೆಗೂಡುವುದು ಆರಂಭ, ಜೊತೆಗೂಡಿ ಚರ್ಚಿಸುವುದು ಪ್ರಗತಿ, ಜೊತೆಗೂಡಿ ಕೆಲಸ ಮಾಡುವುದು ಯಶಸ್ಸು. ಆ ಯಶಸ್ಸಿಗೆ ನಾನು ನಿಮ್ಮೆಲ್ಲರ ಸಹಕಾರವನ್ನು ಬೇಡುತ್ತೇನೆ. ಇವತ್ತು ನನಗೆ ಸಭಾಪತಿ ಸ್ಥಾನಕ್ಕೆ ಅಭಿನಂದನೆ ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. ಇವತ್ತು ಸದನಕ್ಕೆ ನನ್ನ ಸ್ನೇಹಿತರುಗಳಾದ ಸಚಿವರು ಸದನಕ್ಕೆ ಬಂದಿದ್ದಾರೆ. ತಮಗೆ ಅವರ ಪರಿಚಯ ಮಾಡಿಕೊಡುತ್ತೇನೆ.

## 6. ನೂತನ ಸಚಿವರ ಪರಿಚಯ

**ಶ್ರೀ ಡಿ.ಕೆ. ಶಿವಕುಮಾರ್ (ಮುಖ್ಯಮಂತ್ರಿಗಳು):** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಮತ್ತು ಕ್ರೀಡಾ ಸಚಿವರ ಬಗ್ಗೆ ತಮಗೆ ಗೊತ್ತಿದೆ. ಆದರೆ, ಅವರು ಈಗ ಸದನದಲ್ಲಿ ಉಪಸ್ಥಿತರಿಲ್ಲ. ಅವರು ಕೆಳಮನೆಯಲ್ಲಿ ಇದ್ದಾರೆ

ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಶ್ರೀ ಕೆ.ಹೆಚ್. ಮುನಿಯಪ್ಪನವರು ಸಹ ಸದನದಲ್ಲಿ ಉಪಸ್ಥಿತರಿಲ್ಲ.

ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿಯವರು ಸಹ ಸದನದಲ್ಲಿ ಉಪಸ್ಥಿತರಿಲ್ಲ.

ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರಾದ ಶ್ರೀ ಎಂ.ಬಿ.ಪಾಟೀಲ್ ರವರು ಇದ್ದಾರೆ. He is a senior leader and you all know him.

ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಶ್ರೀ ಬಸವರಾಜ್ ರಾಯರೆಡ್ಡಿ ಸಾಹೇಬರು ಬಹಳ ಹಿರಿಯ ನಾಯಕರು, ಅವರು 1983ರ model. ಅವರನ್ನು ಶ್ರೀ ರಾಮಕೃಷ್ಣ ಹೆಗಡೆಯವರು ಆಯ್ಕೆ ಮಾಡಿಸಿಕೊಂಡು ಬಂದಿದ್ದರು.

ಮಾನ್ಯ ಇಂಧನ ಮತ್ತು ಪ್ರವಾಸೋದ್ಯಮ ಸಚಿವರಾದ ಶ್ರೀ ಕೆ.ಜೆ. ಜಾರ್ಜ್ ರವರು ಸಹ ಸದನದಲ್ಲಿ ಉಪಸ್ಥಿತರಿಲ್ಲ.

ಮಾನ್ಯ ಸಹಕಾರ ಸಚಿವರಾದ ಶ್ರೀ ಲಕ್ಷ್ಮಣ ಸಂಗಪ್ಪ ಸವದಿ ರವರು ಸಹ ಸದನದಲ್ಲಿ ಇಲ್ಲ. ಆದರೆ, ಅವರು ನನ್ನ ಅನುಮತಿಯನ್ನು ತೆಗೆದುಕೊಂಡು ಹೋಗಿದ್ದಾರೆ.

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವರಾದ ಶ್ರೀ ಯು.ಟಿ. ಖಾದರ್ ರವರು ಮೇಲ್ಮನೆಯಲ್ಲಿ ಮೇಸ್ತ್ರಿ ಕೆಲಸ ಮಾಡಿಕೊಂಡು ಇಲ್ಲಿಗೆ ಬಂದಿದ್ದಾರೆ. ಈಗ ಅವರು student ಆಗಿದ್ದಾರೆ. ಅವರು ಹೇಗೆ ಮಾಡುತ್ತಾರೆಂದು ನೋಡೋಣ.

ಮಾನ್ಯ ವಸತಿ ಸಚಿವರಾದ ಶ್ರೀ ಬಿ.ಝೆಡ್. ಜಮೀರ್ ಅಹಮದ್ ಖಾನ್ ರವರು ಸದನದಲ್ಲಿ ಉಪಸ್ಥಿತರಿಲ್ಲ.

ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಾದ ಶ್ರೀ ಎನ್. ಚಲುವರಾಯಸ್ವಾಮಿಯವರು ಬಂದಿದ್ದಾರೆ.

ಮಾನ್ಯ ಪೌರಾಡಳಿತ ಸಚಿವರಾದ ಶ್ರೀ ಹೆಚ್.ಸಿ. ಬಾಲಕೃಷ್ಣ ರವರು ಹೊಸದಾಗಿ ಮಂತ್ರಿಯಾಗಿ ಬಂದಿದ್ದಾರೆ. ಅವರು ಒಬ್ಬ ಡಾಕ್ಟರ್. ಅವರು ಜನತಾದಳ (ಎಸ್), ಬಿ.ಜೆ.ಪಿ ಮತ್ತು ಈಗ ಕಾಂಗ್ರೆಸ್ ಪಕ್ಷದಲ್ಲಿದ್ದಾರೆ. ಅವರು ಸರ್ವ ಪಕ್ಷದವರಾಗಿದ್ದಾರೆ.

ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರಾದ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ ರವರು ಬಂದಿದ್ದಾರೆ.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಈಶ್ವರ ಖಂಡ್ರೆ ಸಾಹೇಬರು ಮೊದಲು ಅರಣ್ಯ ಸಚಿವರಾಗಿದ್ದರು. ಆದರೆ ಈಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆಯನ್ನು ನೋಡಿಕೊಳ್ಳುತ್ತಿದ್ದಾರೆ.

ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರಾದ ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ರವರು ಉಪಸ್ಥಿತರಿಲ್ಲ.

ಮಾನ್ಯ ಕಾರ್ಮಿಕ ಮತ್ತು ಉದ್ಯೋಗ ಸಚಿವರಾದ ಶ್ರೀ ಸಂತೋಷ್ ಎಸ್. ಲಾಡ್ ರವರು ಇದ್ದಾರೆ.

ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರಾದ ಶ್ರೀ ಬಿ. ನಾಗೇಂದ್ರ ರವರು ಇದ್ದಾರೆ. ಅವರು ಬಾಣ-ಬಿರುಸುಗಳನ್ನು ಸಿದ್ಧ ಮಾಡಿಕೊಳ್ಳಲಿ.

ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರಾದ ಶ್ರೀ ಸಿ. ಪುಟ್ಟರಂಗಶೆಟ್ಟಿರವರು ಇದ್ದಾರೆ. ಅವರಿಗೆ ಮೊದಲು ಟಿಕೆಟ್ ನೀಡಿದಾಗ ನಾನು ಹೋಗಿದ್ದೆ. ಆ ಸಮಯದಲ್ಲಿ ಶ್ರೀ ಗುಲಾಂ ನಬಿ ಆಜಾದ್ ರವರು ಡಿ.ಕೆ. ಶಿವಕುಮಾರ್‌ರವರೆ, one-time crop ನಂತೆ ಕಾಣುತ್ತಾರೆ. ಇವರು ಒಂದೇ ಬಾರಿ ಗೆಲ್ಲುವುದು, ಅವರು ಮುಂದಕ್ಕೆ ಗೆಲ್ಲುವುದಿಲ್ಲವೆಂದು ಹೇಳುತ್ತಿದ್ದರು. ಏಕೆಂದರೆ, ಅವರ ವಿರುದ್ಧ ಶ್ರೀ ವಾಟಾಳ್ ನಾಗರಾಜ್ ರವರು ನಿಂತುಕೊಂಡಿದ್ದರು. ಆಮೇಲೆ ಮೂರು ಬಾರಿ ಗೆದ್ದಿದ್ದಾರೆ.

**ಶ್ರೀ ಸಿ. ಪುಟ್ಟರಂಗಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ನಾಲ್ಕು ಬಾರಿ ಗೆದ್ದಿದ್ದೇನೆ.

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಹೌದು ಅವರು ನಾಲ್ಕು ಬಾರಿ ಗೆದ್ದಿದ್ದಾರೆ. Sorry, thank you.

ಮಾನ್ಯ ಸಭಾಪತಿಯವರೇ, ಮಾನ್ಯ ಅಬಕಾರಿ ಸಚಿವರಾದ ಶ್ರೀ ಕೆ.ಎಂ. ಶಿವಲಿಂಗೇಗೌಡರು ಹಾಸನದವರು, ಅವರು ಸಹ ಇದ್ದಾರೆ.

ಮಾನ್ಯ ಸಕ್ಕರೆ ಮತ್ತು ಜವಳಿ ಸಚಿವರಾದ ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ ರವರು ಸಹ ಇದ್ದಾರೆ.

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ತಂಗಡಗಿ ಶಿವರಾಜ್ ಸಂಗಪ್ಪನವರು ಎಲ್ಲಿಗೋ ಹೋಗಬೇಕೆಂದು ಹೋಗಿದ್ದಾರೆ.

ಮಾನ್ಯ ಸಣ್ಣ ನೀರಾವರಿ, ವಿಜ್ಞಾನ, ತಂತ್ರಜ್ಞಾನ ಸಚಿವರಾದ ಶ್ರೀ ಅಜಯ್ ಸಿಂಗ್‌ರವರು ಸಹ ಇದ್ದಾರೆ.

ಮಾನ್ಯ ಗೃಹ ಮತ್ತು ಐಟಿ-ಬಿಟಿ ಸಚಿವರಾದ ಶ್ರೀ ಪ್ರಿಯಾಂಕ್ ಖರ್ಗೆಯವರು ಎರಡನೆ ಬಾರಿಗೆ ಸಚಿವರಾಗಿ ಬಂದಿದ್ದಾರೆ.

ಮಾನ್ಯ ಪರಿಶಿಷ್ಟ ಪಂಗಡ ಕಲ್ಯಾಣ ಸಚಿವರಾದ ಶ್ರೀ ಟಿ. ರಘುಮೂರ್ತಿ ಯವರು, he is an engineer ಅವರು ಸಹ ಬಂದಿದ್ದಾರೆ.

ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರಾದ ಶ್ರೀ ರಿಜ್ವಾನ್ ಅರ್ಷದ್‌ರವರು ಈ ಕ್ಷೇತ್ರದ ಶಾಸಕರು ಅವರು ಸಹ ಬಂದಿದ್ದಾರೆ.

ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಾದ ಶ್ರೀ ಮಧು ಬಂಗಾರಪ್ಪರವರು ಈಗ ಹೊರಟು ಹೋಗಿದ್ದಾರೆ.

ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ಯಮ ಸಚಿವರಾದ ಶ್ರೀ ವಿಜಯಾನಂದ ಕಾಶಪ್ಪನವರ್‌ರವರು ಸಹ ಬಂದಿದ್ದಾರೆ. ನಾನು ಅವರ ತಂದೆಯವರ ಜೊತೆಯಲ್ಲಿ ಎಂ.ಎಲ್.ಎ., ಆಗಿದ್ದೆ. ಅದೇ ರೀತಿ ಅವರ ತಾಯಿಯವರಾದ ಶ್ರೀಮತಿ ಗೌರಮ್ಮ ಕಾಶಪ್ಪನವರ್ ನವರ ಜೊತೆಯಲ್ಲಿ ಎಂ.ಎಲ್.ಎ., ಆಗಿದ್ದೆ. ಈಗ ಅವರ ಮಗನ ಜೊತೆಯಲ್ಲಿ ಎಂ.ಎಲ್.ಎ., ಆಗಿದ್ದೇನೆ. ಅವರ ತಂದೆ ಮತ್ತು ನಾನು ಇಬ್ಬರೂ ಕೂಡ ಮಂತ್ರಿಗಳಾಗಿದ್ದೆವು.

ಮಾನ್ಯ ನಗರಾಭಿವೃದ್ಧಿ ಸಚಿವರು ಮತ್ತು ಸಭಾನಾಯಕರಾದ ಡಾ: ಯತೀಂದ್ರ ಸಿದ್ದರಾಮಯ್ಯ ನವರು new hero, ಮತ್ತೆ ನಿಮ್ಮ leader.

ಮಾನ್ಯ ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಸಚಿವರಾದ ಶ್ರೀ ಕೆ.ಎಸ್. ಬಸವಂತಪ್ಪನವರು ಬಂದಿದ್ದಾರೆ.

ಮಾನ್ಯ ಲೋಕೋಪಯೋಗಿ ಸಚಿವರಾದ ಶ್ರೀ ಸತೀಶ್ ಜಾರಕಿಹೊಳಿರವರು ಹಿರಿಯ ನಾಯಕರು ಅವರು ಸಹ ಬಂದಿದ್ದಾರೆ.

ಮಾನ್ಯ ಕೃಷಿ ಸಚಿವರಾದ ಪಿ.ಎಂ. ನರೇಂದ್ರಸ್ವಾಮಿರವರು ಬಂದಿದ್ದಾರೆ. ಅವರು independent ಆಗಿ ಇದ್ದರು. ಅವರು ಬಿ.ಜೆ.ಪಿ. ಸರ್ಕಾರದಲ್ಲಿ ಇದ್ದರು. ಈಗ ಅವರು ನಮ್ಮ leader. ಅವರು ನಮ್ಮೆಲ್ಲಾ ರೈತರನ್ನು ರಕ್ಷಣೆ ಮಾಡುತ್ತಾರೆ.

ಇದು ನಮ್ಮ ತಂಡ. ಎಲ್ಲರ ಬಗ್ಗೆ ಪರಿಚಯವಾಗಿದೆ. ಇವರೆಲ್ಲರೂ ತಮಗೆ ಸಹಕಾರ ನೀಡುತ್ತಾರೆ. ನಾನು ಈ ತಂಡವನ್ನು ತಮಗೆ, ಸದನಕ್ಕೆ, ಮಾಧ್ಯಮದವರಿಗೆ ಮತ್ತು ಅಧಿಕಾರಿಗಳಿಗೆ ಪರಿಚಯ ಮಾಡಿಕೊಡುತ್ತಿದ್ದೇನೆ. We will all work as a team, in unity and strength. ಏನೇ ಇದ್ದರೂ ಸಹ ಕಲ್ಮಶ ಮತ್ತು ಯಾರ ಮೇಲೂ ಸಹ ವೈರತ್ವವಿಲ್ಲ. I am telling all of you. ಶ್ರೀ ಟಿ.ಎ. ಶರವಣ ರವರೆ, I am telling you. ಶ್ರೀ ಎಸ್.ಎಲ್. ಭೋಜೇಗೌಡರೆ, ನನಗೆ ಯಾರಾ ಮೇಲೂ ವೈರತ್ವವಿಲ್ಲ.

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಇವತ್ತು ಭಾಷಣ ಮಾಡುತ್ತಿದ್ದಾರೆಂದು ನಮಗೆ ಹೊಟ್ಟೆ ಹಸಿವು ಇದ್ದರೂ ಕೂಡ ನಾವು ಹೊರಗೆ ಹೋಗಿಲ್ಲ. ನಾವು ಕುಳಿತುಕೊಂಡು ಎಲ್ಲವನ್ನು ಸಹ ಕೇಳಿಸಿಕೊಳ್ಳುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ, ದಯಮಾಡಿ ಅದೆಲ್ಲವನ್ನು ಸಹ implement ಮಾಡಲಿ.

**ಶ್ರೀ ಡಿ.ಕೆ. ಶಿವಕುಮಾರ್:–** ಮಾನ್ಯ ಸಭಾಪತಿಯವರೇ, ನಾನು ಮಾಡುತ್ತೇನೆ. ಅವರು ಅದೇ ರೀತಿ ಇರಲಿ ಎಂದು ಕೇಳಿಕೊಳ್ಳುತ್ತೇನೆ. Thank you. ಎಲ್ಲರಿಗೂ ನಮಸ್ಕಾರ.

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾನು 14ನೇ ತಾರೀಖಿನಂದು ಎಲ್ಲಾ ಮಾನ್ಯ ಸದಸ್ಯರಿಗೆ ಕೃತಜ್ಞತೆ ಹೇಳಬೇಕೆಂದು ಇದ್ದೆ. ನಾನು ಎರಡು ನಿಮಿಷದಲ್ಲಿ ಓದಿ ಹೇಳಿಬಿಡುತ್ತೇನೆ.

**ಸಭಾಪತಿಯವರು:–** ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ರವರೆ, ನಾನು ಮೊದಲು ಸದನಕ್ಕೆ thanks ಹೇಳಿಬಿಡುತ್ತೇನೆ. ಆಮೇಲೆ ತಾವು ಕೊನೆಗೆ ಹೇಳಿ. ಈಗ ತಾವು ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ನಾನು ಒಂದೇ ಒಂದು ನಿಮಿಷ ಮಾತನಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಒಂದು ನಿಮಿಷ ಕುಳಿತುಕೊಳ್ಳಿ. Let me thank everyone.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಾವು ಅವರೆಲ್ಲರನ್ನು ಕುಳಿತುಕೊಳ್ಳುವುದಕ್ಕೆ ಹೇಳಿ. ಇಲ್ಲವಾದರೆ ಅವರೆಲ್ಲರೂ ಹೊರಟು ಹೋಗುತ್ತಾರೆ.

**7. ಅಭಿನಂದನೆ ಸ್ವೀಕರಿಸಿದ ನೂತನ ಸಭಾಪತಿಯವರಿಂದ ಧನ್ಯವಾದ ಸಮರ್ಪಣೆ**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ಅವರು ಕುಳಿತುಕೊಳ್ಳುತ್ತಾರೆ. ನಾನು ತಮಗೆ ಹೇಳುತ್ತೇನೆ. ತಾವು ಆಮೇಲೆ ಮಾತನಾಡಿ. ಗೌರವಾನ್ವಿತ ಮುಖ್ಯಮಂತ್ರಿಗಳೆ, ಮಾನ್ಯ ಸಭಾನಾಯಕರೆ, ಮಾನ್ಯ ಸಚಿವರೆ, ಮಾನ್ಯ ವಿರೋಧ ಪಕ್ಷದ ನಾಯಕರೆ ಹಾಗೂ ವಿಧಾನ ಪರಿಷತ್ತಿನ ಸದಸ್ಯರೆ, ತಮ್ಮೆಲ್ಲರಿಗೂ ಧನ್ಯವಾದಗಳನ್ನು ಅರ್ಪಣೆ ಮಾಡುತ್ತಾ, ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳು ನನ್ನ ಬಗ್ಗೆ ಎಲ್ಲಾ ವಿಚಾರಗಳನ್ನು ಸಹ ಹೇಳಿದ್ದಾರೆ. ಅವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದಾಗ ನಾನು ಅವರ ಜೊತೆ ನಾಲ್ಕು ವರ್ಷ ಕೆಲಸ ಮಾಡಿದ್ದೇನೆ. ನಾನು ಅದಕ್ಕಿಂತ ಮುಂಚೆ ವಿದ್ಯಾರ್ಥಿ ಸಂಘಟನೆಯಲ್ಲಿ ಅದು ಎನ್.ಎಸ್.ಯು.ಐ. (National Students' Union of India) ಮತ್ತು Indian Youth Congress ಇರಬಹುದು. ನಾನು ಇವತ್ತು ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಅದೇ ರೀತಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹಾಗೂ ವಿಶೇಷವಾಗಿ ಸನ್ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಇವತ್ತು ಬಹಳ ಒಳ್ಳೆಯದಾಗಿ ಮಾತನಾಡಿದ್ದಾರೆ. ನಿಜವಾಗಿಯೂ ಅವರಿಗೆ ಧನ್ಯವಾದಗಳನ್ನು ಅರ್ಪಣೆ ಮಾಡುತ್ತೇನೆ. ಇಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಈ ಗೌರವಾನ್ವಿತ ಸ್ಥಾನದಲ್ಲಿ ನಿಮ್ಮ ಮುಂದೆ ಇರುವ ಈ ಕ್ಷಣ ಸಾರ್ವಜನಿಕ ಜೀವನದ ಅತ್ಯಂತ ಮಹತ್ವದ ದಿನವಾಗಿದೆ.

(ಮುಂದು)

**(702) 14.08.2026 ವೈಎಲ್-ಎಂಡಿ 3.00** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಘನವಾದ ವಿಚಾರವನ್ನು, ನೋವಿನ ಸಂಗತಿಯನ್ನು ಹೇಳಬೇಕಾಗಿದ್ದು, ಮಾನ್ಯ ವಿಜಯಾನಂದ್ ಕಾಶಪ್ಪನವರ ಬಗ್ಗೆಯೇ ಮಾತನಾಡಬೇಕಾಗಿದ್ದು, ಅವರು ಸದನದಿಂದ ಎದ್ದು ಹೊರಡುತ್ತಿದ್ದಾರೆ. ದಯವಿಟ್ಟು ಅವರನ್ನು ಸದನಕ್ಕೆ ಕರೆಯಿಸಿ.

**ಸಭಾಪತಿಯವರು:-** ನಾನು ಮಾತನ್ನು ಪ್ರಾರಂಭ ಮಾಡಿರುವುದರಿಂದ ಆಮೇಲೆ ಅವರನ್ನು ಕರೆಸುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ. ನನ್ನನ್ನು ಸಭಾಪತಿ ಸ್ಥಾನಕ್ಕೆ ಅಭ್ಯರ್ಥಿಯನ್ನಾಗಿ ಮಾಡಿದಂತಹ ಎ.ಐ.ಸಿ.ಸಿ. ಅಧ್ಯಕ್ಷರು ಹಾಗೂ ರಾಜ್ಯಸಭಾ ವಿರೋಧ ಪಕ್ಷದ ನಾಯಕರಾಗಿರುವ ಶ್ರೀ ಮಲ್ಲಿಕಾರ್ಜುನ ಖರ್ಗೆಯವರಿಗೆ, ನಮ್ಮ ಅಧಿನಾಯಕಿ

ಶ್ರೀಮತಿ ಸೋನಿಯಾ ಗಾಂಧಿಯವರಿಗೆ, ನಮ್ಮ ನಾಯಕರು ಹಾಗೂ ಲೋಕಸಭಾ ವಿರೋಧ ಪಕ್ಷದ ನಾಯಕರಾಗಿರುವ ಶ್ರೀ ರಾಹುಲ್ ಗಾಂಧಿಯವರಿಗೆ, ಎ.ಐ.ಸಿ.ಸಿ. ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಕೆ.ಸಿ.ವೇಣುಗೋಪಾಲ್ ಮತ್ತು ಶ್ರೀ ರಣದೀಪ್‌ಸಿಂಗ್ ಸುರ್ಜೇವಾಲಾರವರಿಗೆ ಹಾಗೂ ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರಿಗೆ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯರವರಿಗೆ ಹಾಗೂ ಕೆ.ಪಿ.ಸಿ.ಸಿ. ಅಧ್ಯಕ್ಷರಾದ ಶ್ರೀ ಬಿ.ಕೆ.ಹರಿಪ್ರಸಾದ್‌ರವರಿಗೆ ನಾನು ಧನ್ಯವಾದಗಳನ್ನು ಅರ್ಪಣೆ ಮಾಡುತ್ತಿದ್ದೇನೆ.

ಅದೇ ರೀತಿ ಮಾಜಿ ಕೇಂದ್ರ ಸಚಿವರಾದ ಮಾನ್ಯ ಶ್ರೀ ಜನಾರ್ದನ ಪೂಜಾರಿರವರು, ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಶ್ರೀ ವೀರೇಂದ್ರ ಪಾಟೀಲರು, ಹಾಗೂ ದಿವಂಗತ ಆಸ್ಕರ್ ಫರ್ನಾಂಡಿಸ್‌ರವರಂತಹ ಹಿರಿಯ ನಾಯಕರು ಸ್ಫೂರ್ತಿ-ಮಾರ್ಗದರ್ಶನ ನನ್ನ ರಾಜಕೀಯ ಬದುಕಿಗೆ ಸದಾ ದಾರಿದೀಪವಾಗಿದೆ.

ನನ್ನ ಸಾರ್ವಜನಿಕ ಜೀವನದ ಮೊದಲ ಪ್ರೇರಣೆಯನ್ನು ನಾನು ವಿದ್ಯಾರ್ಥಿ ಜೀವನದಲ್ಲಿಯೇ ಪಡೆದುಕೊಂಡೆ. ಸ್ವಾತಂತ್ರ್ಯ ಹೋರಾಟಗಾರರಾದ ನನ್ನ ತಾತ ಮುಸ್ತಫಾ ಅಹ್ಮದ್‌ರವರ ವ್ಯಕ್ತಿತ್ವ ನನ್ನ ಮೇಲೆ ಆಳವಾದ ಪ್ರಭಾವ ಬೀರಿತು. ಅದೇ ಸಂದರ್ಭದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರ ನಾಯಕತ್ವ ನನ್ನಂತಹ ಅನೇಕ ಯುವಕರಿಗೆ ಪ್ರೇರಣೆಯಾಯಿತು. ಬಡವರು, ದುರ್ಬಲರು ಹಾಗೂ ಸಾಮಾನ್ಯ ಜನರ ಪರವಾಗಿ ನಿಲ್ಲುವ ರಾಜಕಾರಣದ ಮಹತ್ವವನ್ನು ಅವರ ನಾಯಕತ್ವ ನಮಗೆ ತಿಳಿಸಿತು. ಅವರ ಧೈರ್ಯ ಮತ್ತು ದೇಶದ ಏಕತೆ ಹಾಗೂ ಅಖಂಡತೆಗಾಗಿ ಅವರು ಮಾಡಿದ ಸೇವೆ ನನ್ನ ರಾಜಕೀಯ ಚಿಂತನೆಯ ಮೇಲೆ ಗಾಢವಾದ ಪ್ರಭಾವ ಬೀರಿತು.

ನನ್ನ ವಿದ್ಯಾರ್ಥಿ ಜೀವನದ ಕಾಲಘಟ್ಟದಲ್ಲಿ ಶೇಷಾದ್ರಿಪುರಂ ಕಾಲೇಜಿನ ವಿದ್ಯಾರ್ಥಿ ನಾಯಕನಾಗಿದ್ದ ನಾನು ಎನ್.ಎಸ್.ಯು.ಐ. ಸೇರಲು ಪ್ರಮುಖ ಕಾರಣ ಪ್ರಸ್ತುತ ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿರುವ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು.

ತದನಂತರ ಮಾಜಿ ಪ್ರಧಾನಿಗಳಾದ ದಿವಂಗತ ಶ್ರೀ ರಾಜೀವ್ ಗಾಂಧಿಯವರ ನಾಯಕತ್ವ ನನ್ನ ರಾಜಕೀಯ ಪಯಣಕ್ಕೆ ಹೊಸ ದಿಕ್ಕನ್ನು ನೀಡಿತು. ಆಧುನಿಕ ಭಾರತ ನಿರ್ಮಾಣದ ಅವರ ಕನಸು, ಯುವಕರಿಗೆ ರಾಜಕೀಯದಲ್ಲಿ ಅವಕಾಶ ನೀಡಬೇಕೆಂಬ ಅವರ ಚಿಂತನೆ ಹಾಗೂ ವಿಜ್ಞಾನ-ತಂತ್ರಜ್ಞಾನ ಮತ್ತು ಅಭಿವೃದ್ಧಿಯ ಮೂಲಕ ಭಾರತವನ್ನು ಮುನ್ನಡೆಸಬೇಕೆಂಬ ಅವರ ದೂರದೃಷ್ಟಿ ನನ್ನಂತಹ ಯುವಕರಲ್ಲಿ ಹೊಸ ಭರವಸೆಯನ್ನು ಮೂಡಿಸಿತು.

ನನ್ನ ರಾಜಕೀಯ ಪಯಣದಲ್ಲಿ 1987 ರಲ್ಲಿ ರಾಜ್ಯ ಎನ್‌ಎಸ್‌ಯುಐ ಅಧ್ಯಕ್ಷನಾಗಿ ನನ್ನನ್ನು ನೇಮಕ ಮಾಡಿದ್ದು, ಅಂದಿನ ಪ್ರಧಾನಿಗಳು ಮತ್ತು ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ದಿವಂಗತ ರಾಜೀವ್ ಗಾಂಧಿಯವರು. ಹಾಗೆಯೇ 1996 ರಲ್ಲಿ ಮೊದಲ ಬಾರಿಗೆ ವಿಧಾನ ಪರಿಷತ್ತಿನ ಸದಸ್ಯನಾಗಲು ಅವಕಾಶ ನೀಡಿದವರು ಮಾಜಿ ಪ್ರಧಾನಿಗಳಾದ, ಅಂದಿನ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ದಿವಂಗತ ಪಿ.ವಿ.ನರಸಿಂಹ ರಾವ್ ಅವರು. ಈ ಎರಡು ಅವಕಾಶಗಳು ನನ್ನ ಸಾರ್ವಜನಿಕ ಜೀವನದಲ್ಲಿ ಅತ್ಯಂತ ಮಹತ್ವದ ಮೈಲುಗಲ್ಲುಗಳಾಗಿವೆ.

ದಿವಂಗತ ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ತಮ್ಮ ಸಚಿವ ಸಂಪುಟದಲ್ಲಿ ನನಗೆ ಸಚಿವ ಸ್ಥಾನ ನೀಡಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಪರಿಷತ್ತಿನ ಅತ್ಯಂತ ಕಿರಿಯ ಸದಸ್ಯನಾಗಿದ್ದ ನನ್ನ ಮೇಲೆ ವಿಶ್ವಾಸವಿಟ್ಟು ಹಿರಿಯರ ಸದನಕ್ಕೆ ನನ್ನನ್ನು ಸರ್ಕಾರಿ ಮುಖ್ಯ ಸಚೇತಕನಂತಹ ಮಹತ್ವದ ಜವಾಬ್ದಾರಿಯನ್ನು ನೀಡಿ ನೇಮಿಸಿದರು. ಈ ಜವಾಬ್ದಾರಿ ನೀಡುವಲ್ಲಿ ಪ್ರಸ್ತುತ ನಾಡಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರ ಪಾತ್ರ ಬಹಳ ಮಹತ್ವವಾಗಿತ್ತು. ನನ್ನನ್ನು ಸರ್ಕಾರದ ಮುಖ್ಯ ಸಚೇತಕನಾಗಿ ನೇಮಕ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರು ಮಾನ್ಯ ಎಸ್.ಎಂ.ಕೃಷ್ಣರವರಿಗೆ ಹೇಳಿ ನನ್ನನ್ನು ಸರ್ಕಾರದ ಮುಖ್ಯಸಚೇತಕನ್ನಾಗಿ ನೇಮಕ ಮಾಡಿಸಿದರು.

ನಂತರದಲ್ಲಿ ದಿವಂಗತ ಧರ್ಮಸಿಂಗ್ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಎರಡನೇ ಬಾರಿ ವಿಧಾನ ಪರಿಷತ್ತಿನ ಸದಸ್ಯನಾಗಿ ಆಯ್ಕೆಯಾಗಲು ನನಗೆ ಅವಕಾಶ ಕಲ್ಪಿಸಿದರು. ಅವರ ಸರಳತೆ, ಸೌಜನ್ಯ ಮತ್ತು ಪ್ರಜಾಪ್ರಭುತ್ವದ ಮೇಲಿನ ಬದ್ಧತೆಯನ್ನು ನಾನು ಸದಾ ಗೌರವದಿಂದ ಸ್ಮರಿಸುತ್ತೇನೆ.

ದಿವಂಗತ ಮಾಜಿ ಪ್ರಧಾನಿ ಡಾ॥ ಮನಮೋಹನ್ ಸಿಂಗ್ ಅವರು ಹಾಗೂ ಯು.ಪಿ.ಎ. ಅಧ್ಯಕ್ಷರಾಗಿದ್ದ ಶ್ರೀಮತಿ ಸೋನಿಯಾ ಗಾಂಧಿಯವರು, ವಿಶ್ವದಲ್ಲೇ ಅತಿ ದೊಡ್ಡ ಯುವ ಸಂಘಟನೆಗಳಲ್ಲಿ ಒಂದಾದ ನೆಹರು ಯುವ ಕೇಂದ್ರ ಸಂಘಟನೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಲು ನನಗೆ ಅವಕಾಶ ನೀಡಿದರು. ಆ ಜವಾಬ್ದಾರಿ ದೇಶದ ವಿವಿಧ ಭಾಗಗಳ ಯುವಕರೊಂದಿಗೆ ಕೆಲಸ ಮಾಡುವ ಅವಕಾಶವನ್ನು ನೀಡಿತು. ಜೊತೆಗೆ ಕಾಂಗ್ರೆಸ್ ಪಕ್ಷದ ಜಾತ್ಯತೀತ, ಪ್ರಜಾಸತಾತ್ಮಕ ಹಾಗೂ ಜನಪರ ರಾಜಕಾರಣವನ್ನು ಇನ್ನಷ್ಟು ಹತ್ತಿರದಿಂದ ಅರ್ಥಮಾಡಿಕೊಳ್ಳಲು ನನಗೆ ಅವಕಾಶ ದೊರೆಯಿತು.

ಇಂದು ನಾನು ಈ ಗೌರವಾನ್ವಿತ ಸ್ಥಾನದಲ್ಲಿ ಕುಳಿತಿದ್ದರೆ, ಅದು ಕೇವಲ ನನ್ನ ವೈಯಕ್ತಿಕ ಸಾಧನೆಯಲ್ಲ. ಇದು ನನ್ನನ್ನು ಬೆಳೆಸಿದ ಕಾಂಗ್ರೆಸ್ ಪಕ್ಷದ ತತ್ವ-ಸಿದ್ಧಾಂತಗಳ ಫಲ. ನನ್ನ ಮೇಲೆ ನಂಬಿಕೆಯಿಟ್ಟ ಹಿರಿಯ ನಾಯಕರ ಆಶೀರ್ವಾದದ ಫಲ ಮತ್ತು ಬಹುಮುಖ್ಯವಾಗಿ ಕಳೆದ ನಾಲ್ಕು ದಶಕಗಳಿಂದ ನನ್ನೊಂದಿಗೆ ನಿಂತಿರುವ ಕಾಂಗ್ರೆಸ್ ಪಕ್ಷದ ಲಕ್ಷಾಂತರ ಕಾರ್ಯಕರ್ತರ ಅಪಾರ ಪ್ರೀತಿ ಮತ್ತು ವಿಶ್ವಾಸದ ಫಲ.

ನನ್ನನ್ನು ಪ್ರೋತ್ಸಾಹಿಸಿದವರು, ಟೀಕಿಸಿ ತಿದ್ದಿದವರು, ಅವಕಾಶ ನೀಡಿದವರು, ಕಷ್ಟದ ಸಂದರ್ಭದಲ್ಲಿ ನನ್ನ ಬೆನ್ನಿಗೆ ನಿಂತ ಪ್ರತಿಯೊಬ್ಬರೂ ನನ್ನ 45 ವರ್ಷಗಳ ಸಾರ್ವಜನಿಕ ಜೀವನದ ಅವಿಭಾಜ್ಯ ಅಂಗವಾಗಿದ್ದು, ಪ್ರತಿಯೊಬ್ಬರಿಗೂ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನನಗೆ ಜನ್ಮ ನೀಡಿದ ತಾಯಿ ಹಾಗೂ ತಂದೆ ಅವರನ್ನು ಸ್ಮರಿಸುತ್ತಾ, ಕಳೆದ 35 ವರ್ಷಗಳ ನನ್ನ ರಾಜಕೀಯ ಜೀವನದಲ್ಲಿ ಬೆಂಬಲವಾಗಿ ನಿಂತ ನನ್ನ ಧರ್ಮ ಪತ್ನಿ ಶ್ರೀಮತಿ ಅಸ್ಮ ಸಲೀಂ ಅಹ್ಮದ್‌ರವರಿಗೆ ಧನ್ಯವಾದಗಳನ್ನು ಹೇಳಲು ಬಯಸುತ್ತೇನೆ.

ಸಭಾಪತಿಯ ಸ್ಥಾನವು ಯಾವುದೇ ಒಂದು ಪಕ್ಷಕ್ಕೆ ಸೇರಿದ ಸ್ಥಾನವಲ್ಲ, ಇದು ಇಡೀ ಸದನದ ಸ್ಥಾನ. ಈ ಸದನದ ಪ್ರತಿಯೊಬ್ಬ ಸದಸ್ಯರೂ ನನಗೆ ಸಮಾನರು. ಆಡಳಿತ ಪಕ್ಷವಾಗಲಿ, ವಿರೋಧ ಪಕ್ಷವಾಗಲಿ, ಪ್ರತಿಯೊಬ್ಬ

ಸದಸ್ಯರಿಗೂ ಸಮಾನ ಗೌರವ ಮತ್ತು ಸಮಾನ ಅವಕಾಶ ನೀಡುವುದು ನನ್ನ ಕರ್ತವ್ಯ. ತಾವೆಲ್ಲರೂ ನನ್ನನ್ನು ಸರ್ವಾನುಮತದಿಂದ ಆಯ್ಕೆ ಮಾಡುತ್ತೀರಿ ಎಂದು ಭಾವಿಸಿದ್ದು, ಆ ರೀತಿಯಾಗಲಿಲ್ಲ ಎಂದು ಬಹಳ ದುಃಖದಿಂದ ಹೇಳುತ್ತೇನೆ. ಆ ನೋವು ನನಗೆ ಇದೆ. ಆದಾಗ್ಯೂ ಕೂಡ ವಿರೋಧ ಪಕ್ಷದವರಿಗೆ ವಿಚಾರಗಳ ಬಗ್ಗೆ ಚರ್ಚಿಸಲು ಹೆಚ್ಚಿನ ಅವಕಾಶ ಕೊಡುತ್ತೇನೆ ಎಂದು ಹೇಳಬಯಸುತ್ತೇನೆ. ನನಗೆ ನೋವಾಗಿರಬಹುದು. ಆದರೆ, ಈ ಪೀಠದಲ್ಲಿ ಕುಳಿತ ಮೇಲೆ ಭಾವನೆಗಳಿಗೆ ಅವಕಾಶ ಇರುವುದಿಲ್ಲ, ನಾವು ಮಾಡಬೇಕಾದ ಕರ್ತವ್ಯ ನಮ್ಮ ಮುಂದೆ ಇದೆ. ಆ ಕರ್ತವ್ಯಕ್ಕೆ ಪ್ರಾಮಾಣಿಕವಾಗಿ ನಿಭಾಯಿಸುತ್ತೇನೆ ಎಂದು ಹೇಳಬಯಸುತ್ತೇನೆ.

ಸದನದಲ್ಲಿ ಒಬ್ಬರ ಮಾತನ್ನು ಮತ್ತೊಬ್ಬರು ಕೇಳಬೇಕು. ಜನರ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕು. ಸರ್ಕಾರವನ್ನು ಪ್ರಶ್ನಿಸಬೇಕು. ಅಗತ್ಯವಿದ್ದಾಗ ಸರ್ಕಾರದ ಉತ್ತಮ ಕಾರ್ಯಗಳನ್ನು ಮೆಚ್ಚಬೇಕು. ರಚನಾತ್ಮಕ ವಿರೋಧವೂ ಪ್ರಜಾಪ್ರಭುತ್ವದ ಅವಿಭಾಜ್ಯ ಅಂಗವಾಗಿದೆ.

ಸಭಾಪತಿಯಾಗಿ ನನ್ನ ಮುಂದೆ ಇರುವ ಅತ್ಯಂತ ದೊಡ್ಡ ಜವಾಬ್ದಾರಿ ಈ ಸದನದ ಘನತೆಯನ್ನು ಕಾಪಾಡುವುದು. ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು. ಆದರೆ, ಅದೇ ಸಂದರ್ಭದಲ್ಲಿ ಪ್ರತಿಯೊಬ್ಬ ಸದಸ್ಯರ ಹಕ್ಕು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೂ ಗೌರವ ನೀಡುವುದು.

ಈ ಸದನದ ಗೌರವವನ್ನು ಕಾಪಾಡಲು, ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಲು, ಪ್ರಜಾಪ್ರಭುತ್ವದ ಮೌಲ್ಯಗಳನ್ನು ರಕ್ಷಿಸಲು ಕರ್ನಾಟಕದ ಜನರ ಆಶೋತ್ತರಗಳಿಗೆ ಈ ಸದನವನ್ನು ಇನ್ನಷ್ಟು ಪರಿಣಾಮಕಾರಿ ವೇದಿಕೆಯನ್ನಾಗಿ ಮಾಡುವ ನಿಟ್ಟಿನಲ್ಲಿ ಪ್ರತಿಯೊಬ್ಬ ಸದಸ್ಯರ ಸಹಕಾರವನ್ನು ಕೋರುತ್ತೇನೆ. ತಾವೆಲ್ಲರೂ ಹೇಳಿದ ಮಾತನ್ನು ನಾನು ಆಲಿಸಿದ್ದೇನೆ. ಈಗಾಗಲೇ ನಾನು ಹೇಳಿದ ಹಾಗೆ ಅಭಿನಂದನೆ ಮೇಲೆ ಮಾತನಾಡಲು ಪ್ರಾರಂಭಿಸಿ ಸುಮಾರು 3 ಗಂಟೆಗಳಾಗಿದ್ದು, ಅದರಲ್ಲಿ ಸುಮಾರು 2 ಗಂಟೆಗಳಷ್ಟು ಸಮಯಾವಕಾಶವನ್ನು ವಿರೋಧ ಪಕ್ಷದವರು ಮಾತನಾಡಿರುವುದನ್ನೇ ನೋಡುತ್ತಿದ್ದೆನು. ಹಾಗೆಯೇ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರು ಸಹ ವಿರೋಧ ಪಕ್ಷದವರಿಗೆ ಮಾತನಾಡಲು ಹೆಚ್ಚು ಅವಕಾಶ ಕೊಡಿ ಎಂದು ಹೇಳಿದ್ದಾರೆ. ಆ ವಿಚಾರವಾಗಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ. ಇಲ್ಲಿ ನಮ್ಮ ಭಾವನೆಗಳಿಗೆ ಬೆಲೆ ಇಲ್ಲ, ಕರ್ತವ್ಯಕ್ಕೆ ಬೆಲೆ ಕೊಡಬೇಕಾಗಿದ್ದು, ಆ ಕರ್ತವ್ಯವನ್ನು ನಾವು ಮಾಡುತ್ತೇನೆ ಎಂದು ಹೇಳುತ್ತಿದ್ದೇನೆ..

**"ಇವನಾರವ, ಇವನಾರವ,**
**ಇವನಾರವನೆಂದೆನಿಸದಿರಯ್ಯಾ,**
**ಇವ ನಮ್ಮವ, ಇವ ನಮ್ಮವ,**
**ಇವ ನಮ್ಮವನೆಂದೆನಿಸಯ್ಯಾ,**
**ಕೂಡಲಸಂಗಮದೇವಾ**
**ನಿಮ್ಮ ಮನೆಯ ಮಗನೆಂದೆನಿಸಯ್ಯಾ."**

ಎಂಬ ಜಗಜ್ಯೋತಿ ಬಸವಣ್ಣನವರು ನುಡಿದಂತೆ, ತಾವೆಲ್ಲರೂ ತಮ್ಮ ಮನೆಯ ಮಗನಂತೆ, ಅಣ್ಣ-ತಮ್ಮನಂತೆ ಭಾವಿಸಿ, ಈ ಸದನವನ್ನು ಸುಗಮವಾಗಿ ನಡೆಸಲು ಸಂಪೂರ್ಣ ಬೆಂಬಲವನ್ನು ನೀಡುತ್ತೀರಿ ಎಂದು ಹೇಳುತ್ತೇನೆ.

ಬಸವಣ್ಣನವರ ಇನ್ನೊಂದು ಮಾತು ಏನೆಂದರೆ, 'ನುಡಿದರೆ ಮುತ್ತಿನ ಹಾರದಂತೆ ಇರಬೇಕು' ಎಂದು ಹೇಳಿದ್ದಾರೆ. ನಾವೆಲ್ಲರೂ ಸೇರಿ ಚರ್ಚೆ ಮಾಡೋಣ. ರಾಜ್ಯದ ಹಿತದೃಷ್ಟಿಯಿಂದ ಕೆಲಸ ಮಾಡೋಣ. ನಾನು ಕಾಂಗ್ರೆಸ್ ಪಕ್ಷದಲ್ಲಿರಬಹುದು. ಆದರೆ, ಸಭಾಪತಿಯಾಗಿ ಆಯ್ಕೆಯಾದ ಮೇಲೆ ಯಾವುದೇ ಪಕ್ಷದವನಾಗಿಲ್ಲ. ಈಗಾಗಲೇ ರಾಜೀನಾಮೆ ಕೊಟ್ಟಿದ್ದೇನೆ. ಹಾಗಾಗಿ, ನಾವೆಲ್ಲರೂ ಒಟ್ಟಾಗಿ ಸೇರಿ ರಾಜ್ಯದ ಹಿತದೃಷ್ಟಿಯಿಂದ ಕೆಲಸ ಮಾಡೋಣ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸುಮಾರು ಎರಡೂವರೆ ಗಂಟೆಗಳ ಕಾಲ ಸದನದಲ್ಲಿ ಕುಳಿತುಕೊಂಡು ಕೇಳಿಸಿಕೊಂಡಿದ್ದಾರೆ. ನಾನು ಅವರಿಗೆ ತಾವು ಮಾತನಾಡಿ ಎಂದು ಹೇಳಿದಾಗ, ಮಾನ್ಯ ವಿರೋಧ ಪಕ್ಷದವರು ಮಾತನಾಡಲಿ, ನಂತರ ನಾನು ಮಾತನಾಡುತ್ತೇನೆ ಎಂದು ಹೇಳಿದರು. ಹಾಗೆಯೇ ಅವರು ಹಲವಾರು ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ನಾವೆಲ್ಲರೂ ಸೇರಿ ಈ ರಾಜ್ಯವನ್ನು ಕಟ್ಟೋಣ. ಪಕ್ಷದ ರಾಜಕಾರಣ ಬೇರೆ. ಆದರೆ, ಈ ಸದನದೊಳಗೆ ಬರುವಾಗ ಅದೆಲ್ಲವನ್ನೂ ಮರೆತು ರಾಜ್ಯದ ಅಭಿವೃದ್ಧಿಗೆ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡೋಣ ಎಂದು ಹೇಳುತ್ತೇನೆ. ಹಾಗೆಯೇ ಎಲ್ಲರಿಗೂ ನನ್ನ ಮನವಿಯೇನೆಂದರೆ, ಮಾತನಾಡುವಾಗ ನಮ್ಮನ್ನು ನಾವೇ ನಿಯಂತ್ರಣ ಮಾಡಿಕೊಳ್ಳಬೇಕು. ಯಾರಾದರೂ ಮಾತನಾಡುವಾಗ ನಾನು ಏನಾದರೂ ಬೆಲ್ ಹೊಡೆದರೆ, ದಯವಿಟ್ಟು ತಮ್ಮ ಮಾತನ್ನು ಮುಕ್ತಾಯಗೊಳಿಸಬೇಕೆಂಬ ಮಾತನ್ನು ಹೇಳುತ್ತಾ, ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಸಹ ಮಾಡುವುದೇನೆಂದರೆ, ಕೆಲವು ಸಂದರ್ಭದಲ್ಲಿ ಸಚಿವರ ಹಾಜರಾತಿ ಕಡಿಮೆ ಇರುತ್ತದೆ, ಅಧಿಕಾರಿಗಳು ಸಹ ಸದನದೊಳಗೆ ಕುಳಿತುಕೊಳ್ಳುವುದಿಲ್ಲ, ಅವರೆಲ್ಲರಿಗೂ ರೋಸ್ಟರ್ ಡ್ಯೂಟಿ ಪಾಲಿಸಬೇಕೆಂದು ಸಂಬಂಧಪಟ್ಟ ಸಚಿವರು ಸೂಚನೆ ನೀಡಿದ್ದೀರಿ ಎಂದು ಭಾವಿಸಿದ್ದೇನೆ. ಇಷ್ಟು ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟ ತಮ್ಮೆಲ್ಲರಿಗೂ ವಂದಿಸುತ್ತಾ, ಸಾಕಷ್ಟು ವಿಚಾರಗಳ ಬಗ್ಗೆ ಹಲವಾರು ಸದಸ್ಯರು ಮಾತನಾಡಬೇಕೆಂದು ಇದ್ದರು. ಶ್ರೀಮತಿ ಬಲ್ಕೀಸ್ ಬಾನು, ಶ್ರೀ ಎ.ವಸಂತಕುಮಾರ್, ಶ್ರೀ ಡಿ.ಟಿ.ಶ್ರೀನಿವಾಸ್ ಹಾಗೂ ವಿರೋಧ ಪಕ್ಷದ ಹಲವಾರು ಮುಖಂಡರು ಮಾತನಾಡಬೇಕೆಂದು ಇದ್ದು, ಸಮಯದ ಅಭಾವದಿಂದಾಗಿ ಮಾತನಾಡಲು ಅವಕಾಶ ಕೊಡಲು ಸಾಧ್ಯವಾಗಲಿಲ್ಲ. ಅದಕ್ಕೆ ಕ್ಷಮೆ ಕೋರುತ್ತೇನೆ. ಒಂದು ದಿವಸ ಕ್ಷೇತ್ರದ ಸಮಸ್ಯೆಗಳ ಬಗ್ಗೆ, ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡೋಣ ಎಂದು ಹೇಳುತ್ತಾ, ನನ್ನ ಮಾತನ್ನು ಮುಗಿಸುತ್ತಿದ್ದೇನೆ.

(ಮುಂದು)

(703) 14.08.2026/3.10/ಎಸ್‌ಕೆ-ಎಂಡಿ (ಸಭಾಪತಿಯವರ ಉಪಸ್ಥಿತಿ)

### 8. ನಿಕಟಪೂರ್ವ ಸಭಾಪತಿಯವರಿಂದ ಧನ್ಯವಾದ ಸಮರ್ಪಣೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯುವರೇ, ನಾನು ಧನ್ಯವಾದಗಳನ್ನು ತಿಳಸಬೇಕಾಗಿದೆ. ನಾನು ಅದರ ಬಗ್ಗೆ ಹೇಳುತ್ತೇನೆ.

ಗೌರವಾನ್ವಿತ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರೇ, ಸಭಾನಾಯಕರೇ, ವಿರೋಧ ಪಕ್ಷದ ನಾಯಕರೇ, ಸಚಿವರೇ ಹಾಗೂ ನನ್ನ ಪ್ರೀತಿಯ ಮೇಲ್ಮನೆಯ ಎಲ್ಲ ಶಾಸಕರೇ,

ಸುದೀರ್ಘ ಕಾಲದ ನನ್ನ ರಾಜಕೀಯ ಜೀವನದಲ್ಲಿ ಈ ಉನ್ನತ ಸದನ ನನಗೆ ತಾಯಿಯಂತೆ ಆಶ್ರಯ ನೀಡಿದೆ. ಸಭಾಪತಿ ಪೀಠದಿಂದ ನಿರ್ಗಮಿಸಿದ ನಂತರ, ನನ್ನ ಹೃದಯದಾಳದ ಕೃತಜ್ಞತೆಗಳನ್ನು ಸಲ್ಲಿಸುವುದು ನನ್ನ ಕರ್ತವ್ಯವಾಗಿತ್ತು. ನನ್ನ ಸುದೀರ್ಘ ಸಾರ್ವಜನಿಕ ಜೀವನದಲ್ಲಿ ನಾನು ಎಂದಿಗೂ ಅಧಿಕಾರಕ್ಕಾಗಲಿ ಅಥವಾ ಈ ಸಭಾಪತಿ ಪೀಠಕ್ಕಾಗಲಿ ಅಂಟಿಕೊಂಡು ಕುಳಿತವನಲ್ಲ. ನನಗೆ ಸ್ಥಾನಕ್ಕಿಂತಲೂ ನೈತಿಕತೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳೇ ಮುಖ್ಯ.

ಇದೇ ದಿನ ಅಂದರೆ ಆಗಸ್ಟ್ 14 ರಂದು ನಾನು ಸಭಾಪತಿ ಪೀಠದಿಂದ ತಮ್ಮೆಲ್ಲರನ್ನು ನೇರವಾಗಿ ಉದ್ದೇಶಿಸಿ ಧನ್ಯವಾದಗಳನ್ನು ಹೇಳಬೇಕು ಎಂಬ ಬಲವಾದ ಇಚ್ಛೆ ನನ್ನದಾಗಿತ್ತು. ಈ ನನ್ನ ಮನದ ಆಶಯವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ, ಕೆ.ಪಿ.ಸಿ.ಸಿ., ಅಧ್ಯಕ್ಷರು ಹಾಗೂ ಮೇಲ್ಮನೆಯ ಹಿರಿಯ ಶಾಸಕರು ಆದ ಶ್ರೀ ಬಿ. ಕೆ. ಹರಿಪ್ರಸಾದ್ ಅವರಿಗೂ ಅತ್ಯಂತ ವಿನಮ್ರವಾಗಿ ವಿನಂತಿಸಿ, ಮನವಿ ಮಾಡಿಕೊಂಡಿದ್ದೆ. ಆದರೆ, ನನ್ನ ಆಸೆ ಈಡೇರಲಿಲ್ಲ. ರಾಜಕಾರಣದ ಒಳಸುಳಿಗಳು ಬೇರೆಯೇ ಇರುತ್ತವೆ. ಏನೇ ಇರಲಿ, ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಕೆ.ಪಿ.ಸಿ.ಸಿ., ಅಧ್ಯಕ್ಷರು ಹಾಗೂ ಸಭಾನಾಯಕರು ನೀವು ನನಗೆ ನೀಡಿದ ಗೌರವ ಮತ್ತು ಸಹಕಾರ ಅಪ್ರತಿಮವಾದದ್ದು. ನೀವು ತೋರಿದ ಪ್ರೀತಿಗೆ ನಾನು ಕೃತಜ್ಞನಾಗಿದ್ದೇನೆ.

ಪ್ರಜಾಪ್ರಭುತ್ವದ ಜೀವನಾಡಿಯಾಗಿ ಕಾರ್ಯನಿರ್ವಹಿಸಿದ ವಿರೋಧ ಪಕ್ಷದ ನಾಯಕರಿಗೆ ನನ್ನ ಧನ್ಯವಾದಗಳು. ಸದನದ ಶಿಸ್ತು ಮತ್ತು ಕಲಾಪಗಳು ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುವಲ್ಲಿ ಆಡಳಿತ ಪಕ್ಷದ ಮುಖ್ಯ ಸಚೇತಕರು ಮತ್ತು ವಿರೋಧ ಪಕ್ಷಗಳ ಸಚೇತಕರು ಹಾಗೂ ಪೀಠಾಸಿನಾಧಿಕಾರಿಗಳು ಅತ್ಯಂತ ಜವಾಬ್ದಾರಿಯುತ ಪಾತ್ರ ವಹಿಸಿದ್ದೀರಿ. ನಾನು ಹೃದಯಪೂರ್ವಕ ಧನ್ಯವಾದಗಳನ್ನು ಹೇಳಬಯಸುತ್ತೇನೆ. ನನ್ನ ಸುದೀರ್ಘ ಪಯಣದಲ್ಲಿ ಅವರು ನೀಡಿದ ಬೆಂಬಲ, ವಿಶ್ವಾಸ ಮತ್ತು ಸಹಕಾರವನ್ನು ನಾನು ಸದಾ ಗೌರವಿಸುತ್ತೇನೆ. ನಿಮ್ಮ ಈ ಸಹಕಾರವನ್ನು ನಾನು ಎಂದಿಗೂ ಮರೆಯಲು ಸಾಧ್ಯವಿಲ್ಲ.

ಆಡಳಿತ ಪಕ್ಷ, ವಿರೋಧ ಪಕ್ಷ ಎನ್ನದೇ ಪ್ರತಿಯೊಬ್ಬ ಸದಸ್ಯರೂ ಸಭಾಪತಿ ಪೀಠಕ್ಕೆ ಮತ್ತು ನನ್ನ ವೈಯಕ್ತಿಕ ಅನುಭವಕ್ಕೆ ಸದಾ ಗೌರವ ನೀಡಿದ್ದೀರಿ. ಕಲಾಪಗಳ ಮಧ್ಯೆ ಎಷ್ಟೇ ಬಿಸಿಬಿಸಿ ಚರ್ಚೆಗಳು ನಡೆದರೂ, ಸಭಾಪತಿಯಾಗಿ ಕಾರ್ಯನಿರ್ವಹಿಸಲು ನನಗೆ ಪ್ರತಿಯೊಬ್ಬರೂ ಸಂಪೂರ್ಣ ಸಹಕಾರ ಮಾಡಿಕೊಟ್ಟಿದ್ದೀರಿ. ನಿಮ್ಮ ಈ ಪ್ರೀತಿಯ ಬೆಂಬಲವೇ ನನ್ನ ಬದುಕಿನ ದೊಡ್ಡ ಆಸ್ತಿ.

ಪರಿಷತ್ತಿನ ಪ್ರತಿಯೊಬ್ಬ ಶಾಸಕರು ನನಗೆ ನೀಡಿದ ಗೌರವ ಅಪ್ರತಿಮವಾದದ್ದು. ಸದನದಲ್ಲಿ ಎಷ್ಟೇ ಭಿನ್ನಾಭಿಪ್ರಾಯಗಳು, ವಾಗ್ವಾದಗಳು ನಡೆದರೂ, ಸಭಾಪತಿಯ ಪೀಠಕ್ಕೆ ನೀವು ಎಂದಿಗೂ ಚ್ಯುತಿ ಬರಲು ಬಿಡಲಿಲ್ಲ. ಉತ್ತರ ಕರ್ನಾಟಕ ಸಮಸ್ಯೆಗಳು ಹಾಗೂ ರಾಜ್ಯದ ಅಭಿವೃದ್ಧಿ ವಿಚಾರದಲ್ಲಿ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡಿದ್ದು ನನ್ನ ಜೀವನದ ಸಾರ್ಥಕ ಕ್ಷಣಗಳು. ವಿಧಾನ ಪರಿಷತ್ತಿನ ಕಾರ್ಯಕಲಾಪಗಳು ಸುಗಮವಾಗಿ ನಡೆಯಲು ಹಗಲಿರುಳು ಶ್ರಮಿಸಿದ ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿಗಳು, ಮಾರ್ಷಲ್‌ಗಳು ಮತ್ತು ಪ್ರತಿಯೊಬ್ಬ ಸಿಬ್ಬಂದಿಗೆ ನನ್ನ ವಿಶೇಷ ಧನ್ಯವಾದಗಳು. ನಿಮ್ಮ ನಿರಂತರ ಶ್ರಮವಿಲ್ಲದೆ ನಾನು ಪೀಠದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಸಾಧ್ಯವಿರಲಿಲ್ಲ.

ನಾನು ಮೂಲತಃ ಒಬ್ಬ ಸಾಮಾನ್ಯ ಶಿಕ್ಷಕ. ನನ್ನನ್ನು ಗುರುತಿಸಿ, ಪ್ರೋತ್ಸಾಹಿಸಿ, ಸಚಿವನಾಗಿ, ಈ ರಾಜ್ಯದ ಅತ್ಯುನ್ನತ ಸಂವಿಧಾನಾತ್ಮಕ ಹುದ್ದೆಯಾದ ಸಭಾಪತಿ ಪೀಠದವರೆಗೆ ತಂದು ಕೂರಿಸಿದ ಶಕ್ತಿ ನನ್ನ ಹೆಮ್ಮೆಯ ಪಶ್ಚಿಮ ಶಿಕ್ಷಕ ಕ್ಷೇತ್ರದ ಶಿಕ್ಷಕ ಬಂಧುಗಳು. ಶಿಕ್ಷಕರ ಆಶೀರ್ವಾದ ಇಲ್ಲದಿದ್ದರೆ ಬಸವರಾಜ್ ಹೊರಟ್ಟಿ ಇಂದು ಈ ಮಟ್ಟಕ್ಕೆ ಬೆಳೆಯುತ್ತಿರಲಿಲ್ಲ. ನನ್ನನ್ನು ಈ ಸ್ಥಾನಕ್ಕೆ ತಂದ ಪ್ರತಿಯೊಬ್ಬ ಶಿಕ್ಷಕ ಬಂಧುಗಳಿಗೆ ಈ ಸದನದಿಂದ ನನ್ನ ನಮನಗಳನ್ನು ಅರ್ಪಿಸುತ್ತೇನೆ.

ನಾನು ಶಿಕ್ಷಕನಾಗಿ, ಸಚಿವನಾಗಿ, ಸಭಾಪತಿಯಾಗಿ ಕೆಲಸ ಮಾಡಿರಬಹುದು. ಆದರೆ ನನ್ನ ಮೂಲ ಗುರುತು "ಶಿಕ್ಷಕ".

ಸಭಾಪತಿ ಪೀಠದಿಂದ ನಾನು ನಿರ್ಗಮಿಸಿರಬಹುದು, ಆದರೆ ಶಿಕ್ಷಕರ ಪರವಾದ ನನ್ನ ಹೋರಾಟ ನಿಲ್ಲುವುದಿಲ್ಲ. ನನ್ನ ದೇಹದಲ್ಲಿ ಕೊನೆಯ ಉಸಿರು ಇರುವವರೆಗೂ ಶಿಕ್ಷಕರ ಹಿತರಕ್ಷಣೆಗಾಗಿ ಹೋರಾಡುವುದು ನನ್ನ ಪರಮ ಕರ್ತವ್ಯ ಮತ್ತು ನನ್ನ ಜೀವನದ ದೀಕ್ಷೆಯಾಗಿದೆ. ಶಿಕ್ಷಕರ ಧ್ವನಿಯಾಗಿ ನಾನು ಸದಾ ಇರುತ್ತೇನೆ.

ಸ್ಥಾನಗಳು ಬರುತ್ತವೆ, ಹೋಗುತ್ತವೆ. ಆದರೆ ನಾವು ನಡೆದುಕೊಂಡ ಹಾದಿ ಮುಖ್ಯವಾಗುತ್ತದೆ. ಸಭಾಪತಿಯಾಗಿ ಕಾರ್ಯನಿರ್ವಹಿಸುವಾಗ ಸದನದ ಶಿಸ್ತಿಗಾಗಿ ಕೆಲವೊಮ್ಮೆ ಕಠಿಣವಾಗಿ ನಡೆದುಕೊಂಡಿದ್ದರೆ, ಅದನ್ನು ಕೇವಲ ಕರ್ತವ್ಯ ಭಾವನೆ ಎಂದು ಭಾವಿಸಿ ಕ್ಷಮಿಸಬೇಕು ಎಂದು ಕೋರುತ್ತೇನೆ. ನನಗೆ ಸಹಕರಿಸಿದ ಪ್ರತಿಯೊಬ್ಬರಿಗೂ ಮತ್ತೊಮ್ಮೆ ಧನ್ಯವಾದಗಳು.

ಅಧಿಕಾರ ಮತ್ತು ಸ್ಥಾನಗಳು ಶಾಶ್ವತವಲ್ಲ, ಆದರೆ ನಾವು ಉಳಿಸಿ ಹೋಗುವ ಸಂಪ್ರದಾಯ ಮತ್ತು ಗೌರವ ಮಾತ್ರ ಶಾಶ್ವತ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯಲು ಈ ಸದನ ಮುಂದೆಯೂ ಚಿಂತಕರ ಚಾವಡಿಯಾಗಿ

ಹೆಸರಿನೊಂದಿಗೆ ದಾರಿದೀಪವಾಗಲಿದೆ ಎಂಬ ನಂಬಿಕೆ ನನಗಿದೆ. ಸಭಾಪತಿಯಾಗಿ ಕಾರ್ಯನಿರ್ವಹಿಸುವಾಗ ನನ್ನಿಂದ ಯಾರಿಗಾದರೂ ನೋವಾಗಿದ್ದರೆ, ಅದು ಕೇವಲ ಸದನದ ಶಿಸ್ತಿಗಾಗಿ ಮಾತ್ರ ಎಂಬುದನ್ನು ಭಾವಿಸಬೇಕು ಎಂದು ಕೋರುತ್ತೇನೆ. ನನ್ನ ಮೇಲೆ ಪ್ರೀತಿ, ವಿಶ್ವಾಸ ತೋರಿದ ಪ್ರತಿಯೊಬ್ಬರಿಗೂ ಮತ್ತೊಮ್ಮೆ .ಧನ್ಯವಾದಗಳು.

**ಸಭಾಪತಿಯವರು:-** ಈಗ ಸದನವನ್ನು ಸೋಮವಾರ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಅಪರಾಹ್ನ 3 ಗಂಟೆ 14 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 17ನೇ ಆಗಸ್ಟ್ ಮಾಹೆ 2026ರ ಸೋಮವಾರ ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

**[XXX ]ಈ ಚಿಹ್ನೆಯು ಮಾನ್ಯ ಸಭಾಪತಿಯವರು ಕಡತದಿಂದ ತೆಗೆದುಹಾಕಲಾಗಿರುವ ಪದಗಳು ಎಂಬುದನ್ನು ಸೂಚಿಸುತ್ತದೆ.**